ಸದನಕ್ಕೆ ಸಂಬಂಧಿಸಿದಂತೆ ರೂಢಿಗತವಾಗಿ ನಡೆದುಕೊಂಡು ಬಂದಿರುವ ವಿಷಯಗಳ ಬಗ್ಗೆ ಮಾಹಿತಿ ಪಡೆದಿರಬೇಕೆಂದೂ ಸಹಾ ಕೋರುತ್ತೇನೆ. ಇದರಿಂದ ಸದನದ ಅಮೂಲ್ಯ ವೇಳೆಯು ಅಪವ್ಯಯವಾಗುವುದಿಲ್ಲ ಮತ್ತು ನಿಯಮಗಳಿಗನುಸಾರವಾಗಿ ಸದನದ ಕಲಾಪಗಳನ್ನು ನಡೆಸಲು ಸಹಾಯಕವಾಗುತ್ತದೆ ಮತ್ತು ಈ ಗೌರವಾನ್ವಿತ ಸದನದ ಘನತೆ ಮತ್ತು ಔಚಿತ್ಯವನ್ನೂ ಸಹಾ ಕಾಪಾಡಿದಂತಾಗುತ್ತದೆ.

(3) ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

† ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು):- ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ವಿಧಾನ ಮಂಡಲದಲ್ಲಿ ಮಾಡಿದಂತಹ ಭಾಷಣದ ವಿಚಾರದ ಬಗ್ಗೆ, ಅದರಲ್ಲಿರುವಂತಹ ಹಲವಾರು ಲೋಪದೋಷಗಳ ಬಗ್ಗೆ ನಾನು ಈ ಸದನದ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತಿದ್ದೇನೆ. ಇವತ್ತು ಆಡಳಿತಪಕ್ಷ ಮತ್ತು ಪ್ರತಿಪಕ್ಷ ಜನತಂತ್ರ ವ್ಯವಸ್ಥೆಯಲ್ಲಿ ಈ ಎರಡೂ ಕೂಡ ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿದೆ. ಒಂದೇ ಗಾಡಿಯ ಎರಡು ಚಕ್ರದ ರೀತಿಯಲ್ಲಿ ನಡೆಯಬೇಕಾದಂತಹ ಒಂದು ಸಂಗತಿ ಇದಾಗಿದೆ. ಆಡಳಿದವರಿಗೆ ಆಡಳಿತ ಮಾಡುವ ಜವಾಬ್ದಾರಿ ಇದ್ದರೆ, ಪ್ರತಿಪಕ್ಷದವರಿಗೆ ಆಡಳಿತದ ನ್ಯೂನತೆಗಳನ್ನು ತಿದ್ದಿ, ಸಮಾಜದ ಬೇರೆ ಬೇರೆ ವರ್ಗದವರ ವಿಚಾರಗಳನ್ನು ಅವರ ಗಮನಕ್ಕೆ ತರುವುದರ ಮೂಲಕ ಸಮಾಜದ ಎಲ್ಲಾ ಸಮಸ್ಯೆಗಳಿಗೆ ಸ್ಪಂದನ ಮಾಡುವಂತಹ, ಒಂದು ರಾಜಕಾರಣ ಮಾಡುವಂತಹ ವ್ಯವಸ್ಥೆ ಮಾಡಲಿಕ್ಕೆ ಇವತ್ತು ಆಡಳಿತ ಮತ್ತು ಪ್ರತಿ ಪಕ್ಷ ಎಂಬುದು ಇದೆ. ನಮಗೆ ಗೊತ್ತಿದೆ, ಸಾಧಾರಣವಾಗಿ ಎಮ್ಮೆಲ್ಲೆ (ಎಂ.ಎಲ್.ಎ) ಆಗುವಂತಹ ಸಂದರ್ಭದಲ್ಲಿ ಓಟು ಕೇಳಲಿಕ್ಕೆ ನಾವು ಹೋಗುತ್ತಿದ್ದೇವೆ. ನನ್ನ ಮಿತ್ರರೊಬ್ಬರು ನಾನು ಓಟು ಕೇಳಲಿಕ್ಕೆ ಹೋದಾಗ ಬಹಳ ಚೆನ್ನಾಗಿ ಒಂದು ಮಾತನ್ನು ಹೇಳಿದರು. ನೀವು ನಾಳೆಯ ಚುನಾವಣೆಯಲ್ಲಿ ಗೆದ್ದಾಗ ಏನು ಆಗುತ್ತೀರಿ? ಎಂದು ಅವರು ನನ್ನನ್ನು ಕೇಳಿದರು. ಅದಕ್ಕೆ ಅವರೇ ಚೆನ್ನಾಗಿರುವಂತಹ ಉತ್ತರವನ್ನೂ ಕೂಡ ಹೇಳಿದರು. ಗೆದ್ದರೆ ನೀವು ಎಮ್ಮೆಲ್ಲೆ, ಇಲ್ಲದಿದ್ದರೆ ನೀವು ನಮ್ಮಲ್ಲೇ ಎಂದು ಅವರು ಹೇಳಿದರು. ಈ ಮಾತು ಎಷ್ಟು ಸ್ವಾರಸ್ಯವಾಗಿದೆ ಎಂದರೆ, ಗೆದ್ದರೆ ನಾನು ಎಮ್ಮೆಲ್ಲೆ ಆಗುತ್ತೇನೆ, ಮತ್ತೆ ನಿಮಗೆ ಸಿಗುವುದಿಲ್ಲ, ಗೆಲ್ಲದಿದ್ದರೆ ನಾನು ಯಾವಾಗಲೂ ನಿಮ್ಮ ಜೊತೆಯಲ್ಲೇ ಇರುತ್ತೇನೆ ಎನ್ನುವಂತಹ ಧಾಟಿಯಲ್ಲಿ ಬಹಳ ಮಾರ್ಮಿಕವಾಗಿ ಅವರು ಆ ಮಾತನ್ನು ಹೇಹಳಿದ್ದರು. ಆ ಕೆಲಸಗಳು ಈ ಹೊಸ ಸರ್ಕಾರದಲ್ಲಿ ಆಗಬಾರದು ಎಂದು ಹೇಳುವಂತಹ ಒಂದು ಸ್ಪಷ್ಟ ವಿಚಾರವನ್ನು ನಾನು ಇಲ್ಲಿ ಉಲ್ಲೇಖ ಮಾಡಲಿಕ್ಕೆ ಇಚ್ಛಿಪಡುತ್ತಿದ್ದೇನೆ. ಇಲ್ಲಿಯ ಸಂಪ್ರದಾಯಗಳನ್ನು ಎತ್ತಿ ಹಿಡಿಯುವಂಥಾದ್ದು ಬಹಳ ಮುಖ್ಯ. ಈಗಾಗಲೇ ಮಾನ್ಯ ಸಿಂಧ್ಯಾರವರು ಮಾತನಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕಳೆದ 3-4 ದಿನಗಳಿಂದ ಸದನದಲ್ಲೇ ಇರುವುದನ್ನು ನಾನು ನೋಡುತ್ತಿದ್ದೇನೆ. ಬಾಕಿ ಸದಸ್ಯರೂ ಕೂಡ ಮುಂದೆ ಬಂದು ತಮ್ಮ ತಮ್ಮ ಪೀಠವನ್ನು ಅಲಂಕರಿಸುವುದರ ಮೂಲಕ ನಿಜವಾದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕೆಂಬುದನ್ನು ಅವರು ತೋರಿಸಿ ಕೊಟ್ಟಿದ್ದಾರೆ.ಅದಕ್ಕಾಗಿ ನಾನು ನಿಜವಾಗಿಯೂ ಅವರನ್ನು ಶ್ಲಾಘನೆ ಮಾಡುತ್ತೇನೆ.ಆದರೆ ಅದಕ್ಕೆ ತದ್ವಿರುದ್ಧವಾಗಿ ಅವರ ಸಹೋದ್ಯೋಗಿಗಳು ನಡೆದುಕೊಳ್ಳುತ್ತಿರುವಂತಾದ್ದು, ಬಹುಶ: ಈ ಶೋಭೆ ತರುವಂತಹ ಕೆಲಸವಲ್ಲ ಎಂದು ನನಗನಿಸುತ್ತದೆ.

ಇವತ್ತೇ ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಕಡಿವಾಣ ಹಾಕಿ ತಮ್ಮ ಆಡಳಿತದಲ್ಲಿ ತನ್ನ ಸಹೋದ್ಯೋಗಿಗಳನ್ನು ನಿಖರವಾಗಿ ತಮ್ಮ ಕೆಲಸಗಳನ್ನು ಈ ರೀತಿ ಮಾಡಬೇಕು, ಸದನಕ್ಕೆ ಗೌರವ ಕೊಡುವಂತಹ ವ್ಯವಸ್ಥೆಯಲ್ಲಿ ತಾವು ಇರಬೇಕು ಎಂದು ಹೇಳುವುದರ ಮೂಲಕ ಅವರಿಗೆಲ್ಲಾ ಕಟ್ಟಾಜ್ಞೆಯನ್ನು ಮಾಡಿದರೆ ಮಾತ್ರ ಮುಂದೆ ಇದು ಸುಲಲಿತವಾಗಿ ನಡೆಯಲಿಕ್ಕೆ ಸಾಧ್ಯ. ಇಲ್ಲದಿದ್ದರೆ ಇವರ ಸಹೋದ್ಯೋಗಿಗಳ ದಾರಿ ಬೇರೆ, ಮಾನ್ಯ ಮುಖ್ಯಮಂತ್ರಿಗಳ ದಾರಿ ಬೇರೆಯಾಗಿ, ಬಹುಶ: ಈ ರಾಜಕಾರಣಕ್ಕೆ ಹೊಸ ತಿರುವನ್ನು ಕೊಡುವಂತಹ ಸಾಧ್ಯತೆ ಇದೆ ಎಂದು ಹೇಳುವಂತಹ ಅನಿಸಿಕೆ ನನ್ನದಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ದಯವಿಟ್ಟು ನಾಳೆಯಿಂದ ಮುಂದಿನ ಯಾವುದೇ ಅಧಿವೇಶನದ ಸಂದರ್ಭದಲ್ಲಿ, ಮೇಲ್ಮನೆ ಇದ್ದಾಗ ಮೇಲ್ಮನೆಗೆ ಹೋಗುವಂತಹ ಮಂತ್ರಿಗಳು ಹೋಗಲೇಬೇಕಾಗುತ್ತದೆ, ಉಳಿದ ಕಾಲದಲ್ಲಿ ಬಾಕಿ ಮಂತ್ರಿಗಳು ಇಲ್ಲಿ ಉಪಸ್ಥಿತರಿರುವಂತೆ ತಾವು ಅವರಿಗೆ ಸೂಚನೆಗಳನ್ನು ಕೊಡಬೇಕು. ಒಳ್ಳೆಯ ರೀತಿಯ ಈ ಒಂದು ಅಭ್ಯಾಸವನ್ನು ನಡೆಸಿಕೊಂಡು ಹೋಗಬೇಕು.

ಪ್ರಾರಂಭಿಕ ಹಂತದಲ್ಲಿ ಮಾನ್ಯ ಸಿಂಧ್ಯರವರ ಸರ್ಕಾರ ಇದ್ದಾಗ ಬಹಳ ಚೆನ್ನಾಗಿ ಮಾಡುತ್ತಿದ್ದರು. ಆದರೆ ಅದು ಸ್ವಲ್ಪ ಸಮಯ ಮಾತ್ರ ಉಳಿಯಿತು, ಹೆಚ್ಚಿನ ಸಮಯ ಉಳಿಯಲಿಲ್ಲ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ದಿನನಿತ್ಯ ಅಂತಹವರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಪ್ರತಿನಿತ್ಯದ ಅವರ ಪ್ರಥಮ ವಾಕ್ಯ ಏನು ಇದು ಕುರ್ಚಿ ಕಾಲಿ, ಯಾರಿಗಾಗಿ, ನಾವು ಭಾಷಣ ಮಾಡುವುದು ಎಂದು ಕೇಳುವಂತಹ ಮಾತನ್ನು ಸನ್ಮಾನ್ಯ ಮಲ್ಲಿಕಾರ್ಜುನಖರ್ಗೆಯವರು ಪ್ರತಿನಿತ್ಯ ಹೇಳುವ ವ್ಯವಸ್ಥೆ ಆಗುತ್ತಿತ್ತು. ಮತ್ತೆ ಅದು ಆಗಬಾರದು. ಮಾನ್ಯ ಅಧ್ಯಕ್ಷರೆ ತಾವೂ ಕೂಡ ಈಗಾಗಲೇ ಸೂಚನೆ ಕೊಟ್ಟಿದ್ದೀರಿ, ಇದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಸದನ ನಡೆಯುವಂತಹ ಸಂದರ್ಭದಲ್ಲಿ ಸಾಧಾರಣವಾಗಿ ಸದನದ ಕಲಾಪದಲ್ಲಿ ಎಲ್ಲ ನಮ್ಮ ಸದಸ್ಯರುಗಳು ನಡೆದುಕೊಳ್ಳುವ ರೀತಿಗಳು, ಸಣ್ಣ ಪುಟ್ಟ ವಿಚಾರಕ್ಕೆ ಗೊಂದಲ ಉಂಟು ಮಾಡುವುದು, ಆಕ್ರೋಶ ವ್ಯಕ್ತ ಮಾಡುವುದು, ದಾರಿ ತಪ್ಪಿದ ಹಾದಿಯಲ್ಲಿ ಕೇವಲ ಪ್ರಚಾರಕ್ಕಾಗಿ ಹಲವಾರು ಮಾತುಗಳನ್ನು ಆಡುವುದು, ಇದೆಲ್ಲಾ ನಾವು ಕೇಳಿದ್ದೇವೆ. ಈ ಸದನದ ಕಾಲ ಅಪವ್ಯಯ ಆದಕಾರಣದಿಂದ ಸ್ವಾತಂತ್ರ್ಯ ಸಿಕ್ಕಿದ 50 ವರ್ಷಗಳ ನಂತರವೂ ಕೂಡ ಇವತ್ತಿಗೂ ಸಾಮಾನ್ಯ ಸಂಗತಿಗಳ ಬಗ್ಗೆ ನಾವು ಮಾತನಾಡುವುದೇ ಆಗಿದೆ; ಹೊಸ ಸಂಗತಿಗಳ ಬಗ್ಗೆ ಮಾತನಾಡುವುದಿಲ್ಲ. ಮಾನ್ಯ ರಾಜ್ಯಪಾಲರ ಭಾಷಣ ಕೂಡ ಹಾಗೆ ಆಗಿದೆ. ಕಳೆದ ವರ್ಷಗಳಲ್ಲಿ ಹೇಗೆ ನಡೆದುಕೊಂಡು ಬಂದಿತ್ತು, ಅದೇ ರೀತಿ ಸ್ವಲ್ಪ ಮುಂದುವರಿದಿದೆ. ಇದಕ್ಕೆ ದೊಡ್ಡ ತಿರುವು ಕೊಡುವಂತಹ ಜವಾಬ್ದಾರಿಯುತ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡುತ್ತಾರೆಂದು ಹೇಳುವ ಭಾವನೆ ನಮ್ಮಲ್ಲಿ ಹೆಚ್ಚಿಗೆ ಇದೆ. ನಾನು ತುಂಬ ವಿಷಾದದಿಂದ ಹೇಳುತ್ತಿದ್ದೇನೆ; ಇದು ಹಿಂದಿನ ದಾರಿಯಲ್ಲಿಯೇ ನಡೆದಿದೆ, ಇದರಲ್ಲಿ ಯಾವುದೂ ಹೊಸತಲ್ಲ. ಸಾಧಾರಣವಾಗಿ ನಾವು ಕಳೆದ ನಾಲ್ಕೈದು ವರ್ಷಗಳ ಮಾನ್ಯ ರಾಜ್ಯಪಾಲರ ಭಾಷಣ ನೋಡಿದರೆ ಅದೇ ಪ್ರಕಾರ. ಅಲ್ಲಲ್ಲಿ ಕೆಲವು ಶಬ್ದಗಳು ಮಾತ್ರ ಬದಲಾವಣೆ ಆಗಿವೆ. ಹೊಸ ತಂತ್ರಜ್ಞಾನದ ಬಗ್ಗೆ ಉಲ್ಲೇಖ ಮಾಡುವುದು ಒಂದನ್ನು ಹೊರತುಪಡಿಸಿದರೆ ಬೇರೆ ಯಾವುದೇ ಹೊಸ ರೀತಿಯ ಹೊಸ ವಿಚಾರಗಳು ಈ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇರಲಿಲ್ಲ ಎಂದು ನಾನು ತುಂಬ ಬೇಸರದಿಂದ ಹೇಳುವುದಕ್ಕೆ

ಇಷ್ಟಪಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣ ಅತ್ಯಂತ ಮಹತ್ತರವಾದ ವಿಚಾರ. ಹೊಸ ಸರ್ಕಾರಗಳಿಗೆ ಮುಂದಿನ ಐದು ವರ್ಷಗಳ ಕಾಲ ನಾವು ನಡೆಯುವ ರೀತಿ ನೀತಿಗಳು, ನಮ್ಮ ದಾರಿಗಳು ಇದರ ಬಗ್ಗೆ ಬಹುಶಃ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆ ಮತ್ತು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಅಜಗಜಾಂತರ ವ್ಯತ್ಯಾಸ ಇದೆ. ಇದನ್ನು ದಯವಿಟ್ಟು ಅವರು ತಿಳಿದುಕೊಳ್ಳಬೇಕು. ಜನರಿಗೆ ಕೊಟ್ಟ ಭರವಸೆಯನ್ನು ಈಡೇರಿಸುವಂತೆ ದಾರಿಯಲ್ಲಿ ನಡೆಯುವಂತಹ ಧಾಟಿ ಅದು ಹೇಗಿರಬೇಕೆಂದು ನಾವು ನೋಡಬೇಕು. ಹಾಗೆ ನೋಡುವಂತಹ ವಿಚಾರ ಅದರಲ್ಲಿ ಆಗಲಿಲ್ಲ. ಯಾವುದೇ ಹೊಸ ಆವಿಷ್ಕಾರಕ್ಕೆ ಅದರಲ್ಲಿ ವ್ಯವಸ್ಥೆ ಆಗಲಿಲ್ಲ. "Old Wine in a new bottle" ಎನ್ನುವ ರೀತಿ ಇಷ್ಟೇ ಆಗಿದೆಯೇ ಹೊರತು ಇದರಲ್ಲಿ ಬೇರೆ ಯಾವುದೂ ಇಲ್ಲ. ಆದಕಾರಣ ಇದನ್ನು ಹೆಚ್ಚು ಪ್ರಖರವಾಗಿ ಮಾಡುವ ಕೆಲಸ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಲ್ಲದಿದ್ದರೂ ಕೂಡ ಅದರಲ್ಲಿ ಇದನ್ನು ಸೇರಿಸಿಕೊಳ್ಳುವ ಜವಾಬ್ದಾರಿ ಇವರಿಗೆ ಇದೆ. ನಾವು ಸಾಧಾರಣವಾಗಿ ಹಿಂದಿನ ಸುಮಾರು 50 ವರ್ಷಗಳ ಹಿಂದೆ ಸರಿಯಾದ ಮಾರ್ಗಗಳಿರಲಿಲ್ಲ, ಕಾಲೂ ದಾರಿಗಳು ಇದ್ದವು, ಗುಡ್ಡ ಬೆಟ್ಟಗಳು ಇದ್ದವು, ಅಲ್ಲೆಲ್ಲ ಹೋಗುತ್ತಿದ್ದೆವು. ಬರುತ್ತಾ ಬರುತ್ತಾ ಮಣ್ಣಿನ ರಸ್ತೆಗಳು ರಚನೆಯಾದವು, ಅನಂತರ ಅದಕ್ಕೆ ಬೋಲ್ಡರ್ಸ್ ಹಾಕುವ ಕೆಲಸವಾಯಿತು, ನಂತರ ಡಾಂಬರೀಕರಣವಾಯಿತು. ಡಾಂಬರ್ ರಸ್ತೆಯಲ್ಲಿ ಹೋಗಬೇಕೆಂದು ಹೇಳತಕ್ಕಂತಹ ವ್ಯವಸ್ಥೆ ಜನರ ಮನಸ್ಸಿನಲ್ಲಿದೆ. ಆದರೆ ನಾವು ಅದೇ ಹಳೆಯ ದಾರಿಯಲ್ಲಿ ಹೋಗಬೇಕೆಂದು ಹೇಳುವ ವ್ಯವಸ್ಥೆಯಾದರೆ ಇದು ಉತ್ತಮ ಸಂಗತಿಯಲ್ಲವೆಂದು ನಾನು ಭಾವಿಸುತ್ತೇನೆ. ಕೆಲವು ಪ್ರಮುಖ ವಿಚಾರಗಳು ಕೂಡ ಇದರಲ್ಲಿ ಉಲ್ಲೇಖ ಆಗಲಿಲ್ಲ. ರಾಜ್ಯದ ಆಡಳಿತದ ಜೊತೆ ಕೇಂದ್ರ ಸಾರ್ಕಾರದ ಆಡಳಿತ ಕೂಡ ಸರಿ ಪಾಲಿನಲ್ಲಿ ಹೋಗುತ್ತಿದೆ. ಬೇರೆ ಬೇರೆ ವಿಚಾರಗಳಲ್ಲಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಕೊಡುವಂತಹ ಆ ಎಲ್ಲ ಸಹಾಯ ಸಹಾಕಾರಗಳು ಬಹುಶ: ಅತ್ಯಂತ ಸುಲಲಿತವಾಗಿ ರಾಜ್ಯ ಸರ್ಕಾರಗಳು ನಡೆಯವುದಕ್ಕೆ ಸಾಧ್ಯವಾಗುತ್ತದೆ ಒಂದು ಹೇಳುತ್ತೇನೆ. ಆದರೆ ಕೇಂದ್ರ ಸಾರ್ಕರದ ಬಗ್ಗೆ, ಅಥವಾ ಕೇಂದ್ರ ಸರ್ಕಾರದ ಇವತ್ತಿನ ಗೌರವದ ಬಗ್ಗೆ ಎಂದು ಚಕಾರ ಕೂಡ ಎತ್ತಲಿಲ್ಲ. ಇದು ಮನಸ್ಸಿಗೆ ತುಂಬಾ ನೋವಾಗುವ ಸಂಗತಿ. ಸ್ವಾತಂತ್ರ್ಯ ಸಿಕ್ಕಿದ ನಂತರ 50 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಜಗತ್ತಿನಲ್ಲಿ ಭಾರತ ದೇಶವನ್ನು ಅತ್ಯಂತ ಮೇಲ್ಮಟ್ಟದ ದೇಶ ಎಂದು ರಾಜ ತಾಂತ್ರಿಕವಾಗಿ ಕೊಂಡು ಹೋದ ಕೀರ್ತಿ ಕೇಂದ್ರ ಸರ್ಕಾರಕ್ಕೆ ಇದೆ. ಕಳೆದ ಬಾರಿ ಕೇಂದ್ರ ಸರ್ಕಾರ ಇದ್ದುದನ್ನು ನಾವು ಗಂಭೀರವಾಗಿ ಪರಿಗಣನೆ ಮಾಡಬೇಕು. ಆದರೆ ಅದರ ಬಗ್ಗೆ ಯಾವುದೇ ಉಲ್ಲೇಖ ಇಲ್ಲ. ಅದರ ಬಗ್ಗೆ ಉಲ್ಲೇಖ ಮಾಡಬೇಕಾಗಿತ್ತು. ಇವತ್ತು ಜಗತ್ತಿನ ಅತ್ಯಂತ ಪ್ರಬಲ ರಾಷ್ಟ್ರಗಳೂ ಕೂಡ ದೇಶವನ್ನು ಉತ್ತಮ ಸ್ಥಿತಿಗೆ ತರುವುದನ್ನು ನಾವು ನೋಡುತ್ತಿದ್ದೇವೆ. ಪರದೇಶದಲ್ಲಿರುವಂತಹ ಭಾರತೀಯನು ಸ್ವಾಭಿಮಾನದಿಂದ ನಾನು ಭಾರತೀಯ ಎಂದು ಹೇಳಿಕೊಳ್ಳುವ ಕೆಲಸ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಆಗುತ್ತಿದೆ. ಇದರ ಬಗ್ಗೆ ಕೂಡ ಉಲ್ಲೇಖ ಮಾಡಲಿಲ್ಲ. ಉಲ್ಲೇಖ ಮಾಡಿದ್ದರೆ ಹೆಚ್ಚಿನ ಗೌರವ ಬರುವಂತಹ ವ್ಯವಸ್ಥೆ ಆಗುತ್ತಿತ್ತು. ಮೊನ್ನೆ ನಡೆದಂತಹ ಚುನಾವಣೆಯಲ್ಲಿ ಗೆದ್ದ ಬಗ್ಗೆ ಉಲ್ಲೇಖ ಇದೆ, ದೇಶದ ಇತಿಹಾಸದಲ್ಲಿ ಕೇಂದ್ರ ಸರ್ಕಾರದ ಗೃಹ ಇಲಾಖೆ ಅತ್ಯಂತ ಯಶಸ್ವಿಯಾಗಿ ಪ್ಯಾರಾ-ಮಿಲಿಟರಿ ಫೋರ್ಸಸ್ ಮತ್ತು ಇತರೆ ಫೋರ್ಸ್‌ಗಳನ್ನು ಉಪಯೋಗ ಮಾಡಿಕೊಂಡು ಅತ್ಯಂತ ಪ್ರಬುದ್ಧವಾಗಿ ಜಮ್ಮು ಕಾಶ್ಮೀರ

ದಂತಹ ರಾಜ್ಯಗಳಿಗೂ ಕೂಡ ಚುನಾವಣೆ ನಡೆಸಿದ್ದನ್ನು ನಾವು ನೋಡುತ್ತಿದ್ದೇವೆ. ಅದರ ಬಗ್ಗೆ ಉಲ್ಲೇಖ ಮಾಡಬೇಕಾಗಿತ್ತು. ಏಕೆಂದರೆ, ಇಡೀ ರಾಜ್ಯದ ಜನತೆಗೆ ನಮ್ಮ ವಿಚಾರದ ಜೊತೆಯಲ್ಲಿ ಒಳ್ಳೆಯ ಕೆಲಸ ಮಾಡಿದ್ದರೆ ಇನ್ನೊಬ್ಬರ ವಿಚಾರಕ್ಕೆ ಕೂಡ ಹೋದಾಗ ಜನ ಅದನ್ನು ಒಳ್ಳೆಯ ರೀತಿಯಿಂದ ಸ್ವೀಕಾರ ಮಾಡುತ್ತಾರೆಂದು ನಾನು ಭಾವಿಸುತ್ತೇನೆ. ಇನ್ನು ಕೆಲವು ವಿಚಾರಗಳನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಪಾರದರ್ಶಕ ಸ್ವಜನ ಪಕ್ಷಪಾತರಹಿತವಾದ, ಸಮದರ್ಶಿತ್ವದ ಭ್ರಷ್ಟಾಚಾರ ರಹಿತವಾದ ಆಡಳಿತ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಆ ಆಡಳಿತ ಕೊಡಬೇಕಾದರೆ ನಮ್ಮ ಕಾರ್ಯ ವೈಖರಿ ಹೇಗಿರಬೇಕು, ನಾವು ಎಷ್ಟು ನಿಷ್ಠುರವಾಗಿ ಮತ್ತು ಪ್ರಾಮಾಣಿಕವಾಗಿ ಹಲವಾರು ವಿಚಾರಗಳನ್ನು ಅನುಷ್ಠಾನ ಮಾಡುತ್ತೇವೆ, ಅದರ ಆಧಾರದ ಮೇಲೆ ರಾಜಕಾರಣ ನಡೆಯುತ್ತದೆ. ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯ ಇದೆ. ಸಾಧಾರಣವಾಗಿ ಜನ ಹೇಗೆ ನೋಡುತ್ತಾರೆಂದರೆ, ಚುನಾವಣೆ ಸಂದರ್ಭದಲ್ಲಿ ನನ್ನ ಹಿಂದೆ ಬಂದವರು ಅವರ ಸ್ವಾರ್ಥಕ್ಕಾಗಿ ಏನು ಕೆಲಸ ಹೇಳುತ್ತಾರೆ ಅದನ್ನೇ ಒತ್ತಿ ಹೇಳುವಂತಹ ಪ್ರಯತ್ನ ಮಾಡುತ್ತೇವೆಯೋ ಹೊರತು, ನಿಜವಾಗಿ ಪ್ರಾಮಾಣಿಕವಾಗಿ ರಾಜ್ಯದ ಚಿಂತನೆಯನ್ನು ಮಾಡುವ ಕೆಲಸಗಳು ಈ ಹಿಂದಿನ ಸರ್ಕಾರಗಳಿಂದ ಆಗಲಿಲ್ಲ. ಆ ಕೆಲಸಗಳಾಗಬೇಕೆಂದು ನಾನು ಇಚ್ಛೆ ಪಡುತ್ತೇನೆ. ಇವತ್ತು ಹಲವಾರು ಸಂದರ್ಭಗಳಲ್ಲಿ ನಿಷ್ಠುರವಾದ ಧೋರಣೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಮೇಲೆ ವಿರೋಧಗಳು ಹೆಚ್ಚು ಇವೆ. ಕೇಂದ್ರ ಸರ್ಕಾರದವರು ಡೀಸಲ್ ಬೆಲೆ ಏರಿಸಿದರು ಏಕೆ ಏರಿಸಿದರು? ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಬೇಕಾದರೆ ಅನಿವಾರ್ಯವಾಗಿ ಪೆಟ್ರೋಲ್ ಮತ್ತು ಡೀಸಲ್‌ದರ ಏರಿಸಬೇಕಾಯಿತು. ಈ ದೇಶ ಸ್ವಾಭಿಮಾನದಿಂದ ಕೂಡಿದ ರಾಷ್ಟ್ರವಾಗಿ ಬದುಕಬೇಕಾದರೆ ಈ ದೇಶದಲ್ಲಿರುವಂತಹ ಯುವ ಜನರು ಸ್ವಾವಲಂಬಿಗಳಾಗಿರಬೇಕು. ಅದಕ್ಕಾಗಿ ಈ ದೇಶ ಸಾಲಗಾರ ದೇಶವಾಗಿಬಾರದು ಎಂದು ನಿಷ್ಠುರವಾದ ವಿಚಾರದಲ್ಲಿ ಡೀಸಲ್ ಬೆಲೆ ಏರಿಸಿದರು. ಇದಕ್ಕೆ ಭಾರೀ ವಿರೋಧ ಮತ್ತು ಪ್ರತಿಭಟನೆ ವ್ಯಕ್ತವಾಯಿತು. ಆದರೆ ಕೇವಲ ಒಂದು ರಾಜಕೀಯ ಉದ್ದೇಶದಿಂದ ಕೇಂದ್ರ ಸರ್ಕಾರ ಅದನ್ನು ಕೊಟ್ಟಿರಲಿಲ್ಲ. ನಿಜವಾಗಿ ಈ ದೇಶದ ಆರ್ಥಿಕ ಭವಿಷ್ಯದ ಚಿಂತನೆ ಮಾಡಿ ರಾಜಕೀಯ ಪಕ್ಷವಾದ ತನಗೆ ಏನು ಹೆಚ್ಚು ಕಡಿಮೆಯಾದರೂ ಚಿಂತೆ ಇಲ್ಲ, ಆದರೆ ದೇಶದ ಆರ್ಥಿಕ ಸ್ಥಿತಿ ಮುಂದಕ್ಕೆ ತೆಗೆದುಕೊಂಡು ಹೋಗುವ ಜವಾಬ್ದಾರಿ ಈ ದೇಶದ ಜನ ನನಗೆ ಕೊಟ್ಟಿದ್ದಾರೆಂದು ಹೇಳುವ ದೃಷ್ಟಿಕೋನದಿಂದ ಮಾನ್ಯ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರು ಆ ರೀತಿ ಮಾಡಿದರು.

ಶ್ರೀ ಜೆ.ಟಿ. ಪಾಟೀಲ್: ಕಳೆದ 40 ವರ್ಷಗಳಿಂದ ಪ್ರತಿ ಸಾರಿ ಬಿಜೆಪಿ ಸರ್ಕಾರ ಒಂದು ಬಿಟ್ಟು ಯಾವುದೇ ಸರ್ಕಾರ ಬೆಲೆಗಳನ್ನು ಏರಿಸುವಾಗ ತಮ್ಮ ಬಿಜೆಪಿ ಕಾರ್ಯಕರ್ತರು ಸ್ಟ್ರೈಕ್, ಬೀದಿ ಮೆರವಣಿಗೆ ಮಾಡುತ್ತಾ ಬರುತ್ತಿದ್ದರು. ಈ ಸಾರಿ ಬೀದಿ ಮೆರವಣಿಗೆ ಮಾಡುವುದನ್ನು ಬಿಟ್ಟು ಸಪೋರ್ಟ್ ಮಾಡುತ್ತಿದ್ದೀರಿ.

ಅಧ್ಯಕ್ಷರು: ಈ ತರಹ ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡಿದರೆ ಸಮಯದ ಅಪವ್ಯಯವಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ: ಸ್ವತಂತ್ರ ಭಾರತದ ಇತಿಹಾಸದಲ್ಲಿ ಯಾವುದೇ ಬೆಲೆ ಏರಿಕೆ ಮಾಡಿದ ನಂತರ ಅದು ನಿಜವಾಗಿ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾದ ವ್ಯವಸ್ಥೆ ಎಂದು ಗೊತ್ತಾದ

ಮೇಲೆ ವಿವಿಧ ಒತ್ತಡಗಳು ಬಂದಾಗ ಕೂಡ ಅದಕ್ಕೆ ಮಣಿಯದೆ ನಮಗೆ ಬೆಂಬಲ ಕೊಟ್ಟ ಪಕ್ಷದವರು ಕೂಡ ಒತ್ತಾಯ ಮಾಡಿದ್ದಾರೆ. ಆಗಲೂ ಕೂಡ ಅದಕ್ಕೆ ಮಣಿಯಲಿಲ್ಲ. ಆದರೂ ಕೂಡ ನ್ಯಾಯ ನಿಷ್ಟುರವಾಗಿರಬೇಕು. ಸನ್ಮಾನ್ಯ ಎಸ್.ಎಂ. ಕೃಷ್ಣರವರು ಹಿರಿಯರಿದ್ದಾರೆ. ಬಹಳ ಹೆಚ್ಚು ಆತ್ಮೀಯತೆ ಇಲ್ಲದಿದ್ದರೂ ಕೂಡ ಅವರು ನಡೆದುಕೊಂಡು ಬಂದ ದಾರಿಯಲ್ಲಿ ನನಗನ್ನಿಸುತ್ತದೆ, ಈ ರೀತಿ ನಿಷ್ಟುರವಾದ ಧೋರಣೆಗಳನ್ನು ನಾವು ಹಲವಾರು ಸಂದರ್ಭಗಳಲ್ಲಿ ಮಾಡಬೇಕಾಗುತ್ತದೆ. ಆ ನಿಷ್ಟುರವಾದ ಧೋರಣೆಗಳನ್ನು ಮಾಡುವುದರ ಮೂಲಕ ರಾಜ್ಯದ ಸಮಗ್ರ ಜನತೆಯ ಚಿಂತನೆ ಮೇಲೆ ಹೊಸ ಭವಿಷ್ಯ ನಿರೂಪಣೆ ಮಾಡುವುದಕ್ಕೆ ಸಾಧ್ಯವಿದೆ ಎಂದು ನನ್ನ ಭಾವನೆ. ರಾಜಕೀಯ ತೀರ್ಮಾನಗಳು ಆಗಬೇಕು, ಕೇವಲ ಪ್ರಚಾರದ ವಿಚಾರದಲ್ಲಿ ರಾಜಕೀಯ ತೀರ್ಮಾನಗಳಾಗಬಾರದು. ಕೆಲವರಂತೂ ಹೋದಲ್ಲೆಲ್ಲಾ ಕೋಟಿಗಟ್ಟಲೆ ವಿಚಾರ ಹೇಳುತ್ತಾರೆ. ಭಾಷಣಕ್ಕೆ ಹತ್ತಿದರೆ ಸಾಕು ಊರಿಗೆ ಬೇಕಾದ್ದಕ್ಕೆಲ್ಲಾ ಕೋಟಿಗಟ್ಟಲೆ ಕೊಡುವುದಾಗಿ ಬರೀ ಭಾಷಣದಲ್ಲಿ ಹೇಳುವುದು, ನಮ್ಮಲ್ಲಿ ಕೆಲವು ಆಶ್ವಾಸನೆಗಳ ಸರದಾರರು ಮುಖ್ಯ ಮಂತ್ರಿಗಳಾಗಿದ್ದರು. ಇದು ಆಗಬಾರದು. ಹೊಸ ರಾಜಕೀಯ ನೀತಿ ಈ ವಿಧಾನಸಭೆಯಿಂದ ಹೊರಗೆ ಬರಬೇಕು. ಬರೀ ಆಶ್ವಾಸನೆಗಳು ಕೊಡುವುದು ಅಲ್ಲ. ನಿಜವಾಗಿ ಮಾಡುವುದಕ್ಕೆ ಆಗುವಂತಹ ಕೆಲಸಗಳ ಮಟ್ಟಿಗೆ ಮತ್ತು ಆರ್ಥಿಕ ರೀತಿ ನೀತಿಗಳನ್ನು ಹೊಂದಿಕೊಂಡು ನಾವು ಆ ಕೆಲಸ ಮಾಡಿದರೆ ಸ್ಪಷ್ಟ ನಿಲುವಿನ ರಾಜಕಾರಿಣಿಗಳಾಗಿ ಮುಂದೆ ಹೋಗಬಹುದು. ಕೇವಲ ಚಪ್ಪಾಳೆಗಳನ್ನು ತಟ್ಟಿಸುವುದಕ್ಕೆ ಮಾಡಿದಂತಹ ಘೋಷಣೆ ಈ ಸಂದರ್ಭದಲ್ಲಿ ಆಗಬಾರದು. ಕೇವಲ ಮುಖ್ಯಮಂತ್ರಿ ಮತ್ತು ಮಂತ್ರಿಗಳಿಗೆ ಮಾತ್ರ ಈ ಮಾತು ಅನ್ವಯಿಸುವುದಿಲ್ಲ, ಈ ಸದನದಲ್ಲಿರುವಂತಹ ಎಲ್ಲಾ 224 ಜನ ಸದಸ್ಯರಿಗೂ ಕೂಡ ಇದು ಅನ್ವಯವಾಗುತ್ತದೆ. ರಾಜ ನೀತಿ ಬಗ್ಗೆ ನಾವೆಲ್ಲಾ ಮುಕ್ತವಾಗಿ ಹೇಳುವಂತಹ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಎಲ್ಲಾ ಹಂತದಲ್ಲಿ ಭ್ರಷ್ಟಾಚಾರ ಇದೆ ಎಂದು ಹೇಳುವಾಗ it is a worldwide phenomenon ಎಂದು ಹೇಳಿದ್ದಾರೆ. ಆದರೂ ಕೂಡ ಭ್ರಷ್ಟಾಚಾರವನ್ನು ನಿಲ್ಲಿಸತಕ್ಕಂಥದ್ದು ಏನಿದೆ ಅದನ್ನು ಗ್ರಾಮ ಸಹಾಯಕನಿಂದ ಪ್ರಾರಂಭ ಮಾಡುವುದಲ್ಲ, ವಿಧಾನಸೌಧದ ಮೂರನೆ ಮಹಡಿಯಿಂದ ಭ್ರಷ್ಟಾಚಾರ ನಿಲ್ಲಬೇಕು. ಕಳೆದ ಬಾರಿ ನಾನು ವಿಧಾನಸಭೆಯಲ್ಲಿ ಸನ್ಮಾನ್ಯರು ಜೆ.ಹೆ.ಚ್. ಪಟೇಲರು ಇದಾಗ ಉಲ್ಲೇಖ ಮಾಡಿದ್ದೆ. ವರ್ಗಾವಣೆ ಸಂದರ್ಭದಲ್ಲಿ ನಮ್ಮ ಶಾಸಕರ ಭವನದ ಸುತ್ತಮುತ್ತ ಏಜೆಂಟರ ಹಾವಳಿ ಜಾಸ್ತಿಯಾಗಿದೆ. ಏಜೆಂಟರು ಒಂದೊಂದು ಆಡಳಿತಪಕ್ಷದ ಶಾಸಕರ ಕಛೇರಿಯಿಂದ ಅಕ್ಕಪಕ್ಕದಲ್ಲಿ ಈ ಹಾವಳಿ ಇದೆ. ರೇಟ್ ಲಿಸ್ಟ್ ಬೇರೆ ಬೇರೆ ತರಹ ಇರುತ್ತದೆ. ಎಸ್‌ಐ ಟ್ರಾನ್ಸ್‌ಫರ್‌ಗೆ ಇಷ್ಟು, ಸರ್ಕಲ್ ಇನ್‌ಸ್ಪೆಕ್ಟರ್‌ಗೆ ಇಷ್ಟು, ಡಿಎಸ್‌ಎಫ್‌ಗೆ ಇಷ್ಟು, ಎಎಸ್‌ಎಫ್‌ಗೆ ಇಷ್ಟು, ಇವೆಲ್ಲಾ ನಾವು ಕಂಡು ಕೇಳಿದ ಸಂಗತಿಗಳು. ಇದು ನಿಲ್ಲಬೇಕಾದರೆ ಮೂರನೇ ಮಹಡಿಯಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಕೆಲಸಗಳನ್ನು ಮಾಡಿದರೆ ಆ ಎಲ್ಲಾ ಕೆಲಸಗಳು ಕೆಳಗಿನ ಆಡಳಿತದವರೆಗೆ ಹೋಗುವುದಕ್ಕೆ ಸಾಧ್ಯ ಇದೆ. ಸ್ನಾನ ಮಾಡುವಾಗ ತಲೆಗೆ ಹಾಕಿಕೊಂಡ ನೀರು ಕಾಲಿಗೆ ಹೋಗುತ್ತದೆ, ಕಾಲಿನಿಂದ ಮತ್ತೆ ತಲೆಗೆ ಬರುವುದಿಲ್ಲ. ಆರೀತಿ ವಿಧಾನಸೌಧದ ಮೂರನೇ ಮಹಡಿಯಿಂದ ಭ್ರಷ್ಟಾಚಾರದ ನಿವಾರಣೆಯಾಗಬೇಕು. ಆ ಕೆಲಸ ಮಾಡುವ ಒಂದು ಛಲ ಪೊಲಿಟಿಕಲ್ ವಿಲ್ ನಿಮ್ಮಲ್ಲಿ ಬಂದಾಗ ಮಾತ್ರ ಆ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯ ಇದೆ. ಆ ರೀತಿ ಕೆಲಸಗಳು ಈ ಬಾರಿ

ಆಗಬೇಕು. ಕೇವಲ ಭ್ರಷ್ಟಾಚಾರದ ನಿರ್ಮೂಲನ ಎಂಬ ಮಾತುಗಳನ್ನು ಮಾತ್ರ ಮಾತನಾಡಿದರೆ ಖಂಡಿತ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಎಲ್ಲಾಕಡೆ ಅವ್ಯವಹಾರ ಸಾಕಷ್ಟು ಇದೆ ಎಂದು ಇದರ ಬಗ್ಗೆ ಉಲ್ಲೇಖ ಇದೆ. ಸನ್ಮಾನ್ಯ ಖರ್ಗೆಯವರು ದಿನನಿತ್ಯ ಯಾವುದಾದರೂ ಒಂದು ನಿಲುವಳಿ ಮೂಲಕ ಅವ್ಯವಹಾರ ಬಯಲಿಗೆಳೆಯುವ ಪ್ರಯತ್ನವನ್ನು ಕಳೆದ ವಿಧಾನಸಭೆಯಲ್ಲಿ ಮಾಡುತ್ತಿದ್ದರು. ಆದರೆ ಇಲ್ಲಿಯವರೆಗೆ ಅವುಗಳ ಬಗ್ಗೆ ತನಿಖೆಯಾಗಿ ವರದಿಗಳ ಕಾರ್ಯಗತವಾದದ್ದನ್ನು ನಾನಂತೂ ಕಾಣಲೇ ಇಲ್ಲ. ಕಳೆದ ನಾಲ್ಕೂವರೆ ವರ್ಷಗಳಿಂದಲೂ ನಾನು ಶಾಸಕನಾಗಿ ಈ ಸದನದಲ್ಲಿ ಕಾರ್ಯ ನಿರ್ವಹಿಸಿದ್ದೇನೆ. ಈ ಅವಧಿಯಲ್ಲಿ ಬಹಳಷ್ಟು ಅವ್ಯವಹಾರಗಳ ಬಗ್ಗೆ ಚುರುಕಾಗಿ ಚರ್ಚೆಯೇನೋ ಸದನದಲ್ಲಿ ಆಗಿದೆ. ಪತ್ರಿಕೆಗಳಲ್ಲೂ ಅವುಗಳ ಬಗ್ಗೆ ಪ್ರಕಟವಾಗಿದೆ. ಸಿ.ಒ.ಡಿ. ಮತ್ತು ಸಿ.ಬಿ.ಐ. ತನಿಖೆಯತನಕ ಕೂಡ ಹೋಗಿದೆ. ಆದರೆ ಆ ತನಿಖೆಗಳು ಅಲ್ಲಿಯೇ ಉಳಿದಿವೆ. ಕೊನೆಯ ಹಂತದಲ್ಲಿ ಸತ್ಯ ಸಂಗತಿಗಳು ಬರುವುದೇ ಇಲ್ಲ. ಕೇವಲ ತಾತ್ಕಾಲಿಕವಾಗಿ ಜನಗಳಿಗೆ ಸಮಾಧಾನವಾಗುತ್ತದೆ ಅಷ್ಟೆ. ಆ ಬಗ್ಗೆ ಸದನದಲ್ಲಿ ಚರ್ಚೆಯಾದಾಗ ಏನೋ ದೊಡ್ಡ ಗಲಾಟೆಯಂತೆ, ಅವ್ಯವಹಾರದ ಬಗ್ಗೆ ತನಿಖೆಯಾಗುತ್ತದಂತೆ ಎಂದು ಮಾತ್ರ ಜನರು ತಿಳಿದುಕೊಳ್ಳುತ್ತಾರಷ್ಟೆ. ಬಹುಶ: ಆ ರೀತಿಯ ತನಿಖೆಯಾಗುತ್ತದೆ ಎಂದು ಹೇಳಿದಾಗಲೇ ಅಧಿಕಾರಿಗಳಿಗೆ ರಕ್ಷಣೆ ಸಿಕ್ಕಿದ ಹಾಗೆ ಆಗುತ್ತದೆ. ಏಕೆಂದರೆ ಇದರಿಂದಾಗಿಯೇ ಸ್ವಲ್ಪ ದಿನ ಮುಂದಕ್ಕೆ ಹೋಗುತ್ತದೆ. ಇಷ್ಟರೊಳಗೇ ಮಂತ್ರಿಮಂಡಲದಲ್ಲಿ ಬದಲಾವಣೆ ಆಗುವುದು, ಹೊಸ ಸರ್ಕಾರ ಬರುವುದು, ಹೊಸ ಸರ್ಕಾರದ ಜೊತೆ ಶಾಮೀಲು ಆಗುವುದು, ಆ ಮೂಲಕ ಸಂಬಂಧಪಟ್ಟ ಕಡತಗಳನ್ನು ಮುಚ್ಚಿಹಾಕುವ ಕೆಲಸಗಳು ನಡೆಯುವುದಕ್ಕೆ ಅವಕಾಶವಾಗುತ್ತಿದೆ. ಈ ರೀತಿಯಾದರೆ ಅವ್ಯವಹಾರಗಳಿಗೆ ಮತ್ತು ಭ್ರಷ್ಟಾಚಾರಕ್ಕೆ ದೊಡ್ಡ ಪ್ರೋತ್ಸಾಹವನ್ನೇ ಕೊಟ್ಟಂತಾಗುತ್ತದೆ. ಆದುದರಿಂದ ಯಾವುದೇ ಅವ್ಯವಹಾರದ ತನಿಖೆಗಳ ವರದಿಗಳು ನಿರ್ದಿಷ್ಟ ಸಮಯದೊಳಗೆ ಬರುವ ಹಾಗೆ ವ್ಯವಸ್ಥೆ ಮಾಡಬೇಕು. ಆ ವರದಿಗಳು ಬೇಗ ಸದನದಲ್ಲಿ ಮಂಡನೆಯಾಗಿ ಆ ವರದಿಯ ಅಂಶಗಳು ಅನುಷ್ಠಾನವಾದಾಗ ಮಾತ್ರ ಸಮಾಜದಲ್ಲಿ ಅವ್ಯವಹಾರಗಳಿಗೆ ಹಾಗೂ ಭ್ರಷ್ಟಾಚಾರಕ್ಕೆ ಇತಿಶ್ರೀ ಹಾಡಲು ಸಾಧ್ಯ. ಆ ರೀತಿಯ ಕೆಲಸಗಳನ್ನು ಇನ್ನು ಮುಂದಾದರೂ ತಾವು ಮಾಡಬೇಕೆನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳಬಯಸುತ್ತೇನೆ. II ಇನ್ನು ಆಯೋಗಗಳ ನೇಮಕದ ಬಗ್ಗೆ ಹೇಳಬೇಕೆಂದರೆ ಹಿಂದೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಆಯೋಗಗಳನ್ನು ನೇಮಕ ಮಾಡಲಾಗಿತ್ತು. ಆದರೆ ಅದರಿಂದ ಏನು ಪ್ರಯೋಜನವಾಯಿತ? ಇವೊತ್ತಿನವರೆಗೆ ಈ ಆಯೋಗಗಳಿಂದ ಯಾವುದೇ ವಿಚಾರವನ್ನು ಹೊರಗೆ ತರುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಜಗನ್ನಾಥ್‌ಶೆಟ್ಟರ ಆಯೋಗದ ಬಗ್ಗೆ ಹೇಳಬಯಸುತ್ತೇನೆ. ಭಟ್ಕಳದಲ್ಲಿ ಕೋಮು ಗಲಬೆಯಾದಾಗ ಇಡೀ ರಾಜ್ಯಕ್ಕೆ ಮಾದರಿಯಾಗುವ ರೀತಿಯಲ್ಲಿ ಒಂದು ಕಮಿಶನ್ ಆಫ್ ಎನ್‌ಕ್ವೈರಿ ಆಯಿತು. ಆದರೆ ಅದರ ವರದಿ ಸದನದಲ್ಲಿ ಮಂಡನೆಯಾಗಲೇ ಇಲ್ಲ. ಕಳೆದ ಸದನದ ಸಭೆಗಳಲ್ಲಿ ನಿರಂತರವಾಗಿ ಆ ವರದಿ ಮಂಡನೆಯಾಗಬೇಕೆಂದು ನಾವು ನಿರಂತರವಾಗಿ ಹೇಳುತ್ತಲೇ ಬಂದೆವು. ಬಹುಶ: ನಿಮ್ಮ ಸರ್ಕಾರವಿದ್ದಾಗ ಆ ಆಯೋಗವನ್ನು ನೇಮಕ ಮಾಡಿದಿರಿ. ಈ ಆಯೋಗ ಸುಮಾರು ಮೂರುವರೆ ವರ್ಷಗಳ ಕಾಲ ಸತತವಾಗಿ ಚಿಂತನೆ ಮಾಡಿ ಇಡೀ ರಾಜ್ಯಕ್ಕೆ ಮಾದರಿಯಾಗಿ ಕೋಮು ಗಲಭೆಗಳನ್ನು ಹತ್ತಿಕ್ಕುವ ಸಲುವಾಗಿ ಯಾವ ವ್ಯವಸ್ಥೆಯನ್ನು ಮಾಡಬೇಕು ಎಂಬುದರ ಬಗ್ಗೆ

10.30 ಎ.ಎಂ.

ಅಂಶಗಳನ್ನೊಳಗೊಂಡ ವಾಸ್ತವ ವಿಚಾರಗಳು ಅದರಲ್ಲಿ ಅಡಕವಾಗಿದೆ ಎಂಬುದನ್ನು ನಾವು ಕೇಳಿದ್ದೇವೆ. ಆದರೆ ಇಲ್ಲಿಯವರೆಗೂ ಆ ವರದಿ ಮಂಡನೆಯೇ ಆಗಲಿಲ್ಲ. ಇವೊತ್ತು ಇಂದಿನ ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ಬಗ್ಗೆ ಆಗ್ರ ಹಪಡಿಸುತ್ತಿದ್ದೇನೆ; ಏಕೆಂದರೆ ಅವರು ನಿಷ್ಪಕ್ಷಪಾತವಾದ ಧೋರಣೆಯನ್ನು ಅನುಸರಿಸುವವರು ಮತ್ತು ಈ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುತ್ತೇನೆ ಎಂದು ಹೇಳುವವರಾಗಿದ್ದಾರೆ. ಇವರು ಈ ಹಿಂದೆ ಆಯೋಗಗಳ ವರದಿಗಳು ಸದನದಲ್ಲಿ ಮಂಡನೆಯಾಗಬೇಕು ಎಂದು ಹೇಳಿದ ಮೇರು ವ್ಯಕ್ತಿತ್ವವನ್ನು ಹೊಂದಿದವರಾಗಿದ್ದಾರೆ. ಆದುದರಿಂದ ಮುಂದಿನ ಅಧಿವೇಶನದಲ್ಲಾದರೂ ಈ ಆಯೋಗದ ವರದಿಗಳು ಸದನದಲ್ಲಿ ಮಂಡನೆಯಾಗುವಂತೆ ಅವರು ನೋಡಿಕೊಳ್ಳಬೇಕು. ವರದಿಯ ವಿಚಾರಗಳಾದರೂ ಸದನದಲ್ಲಿ ಮಂಡನೆಯಾಗಲೀ, ತೀರ್ಮಾನಗಳೇನು ಎಂಬುದರ ಬಗ್ಗೆ ಸದನದಲ್ಲಿ ಚರ್ಚೆಯಾಗಲಿ. ನಾವು ಅದರ ಬಗ್ಗೆ ಚಿಂತನೆ ಮಾಡುವುದಿಲ್ಲ. ಆದರೆ ಸತ್ಯಾಸತ್ಯತೆಗಳು ಜನರಿಗೆ ತಿಳಿಯಬೇಕು. ಏಕೆಂದರೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ನೇಮಕ ಮಾಡಿದ ಆಯೋಗಗಳ ವರದಿಗಳು ಕೇವಲ ಕಡತಗಳಾಗಿ ಮೂಲೆಗೆ ಬೀಳುವುದು ಸರಿಯಲ್ಲ. ಸಾರ್ವಜನಿಕರ ವಿಚಾರವನ್ನು ಸಣ್ಣ ವಿಚಾರವನ್ನಾಗಿ ಪರಿಗಣನೆ ಮಾಡಬಾರದು. ಈ ಆಯೋಗದ ಬಗ್ಗೆ ಪತ್ರಿಕೆಯ ವರದಿಗಾರರೊಬ್ಬರು ಹೇಳಿದ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ;

> "The report of communal pattern which arises during elections was advised to be controlled by the Commission. At page No......The suggestion is made for controlling smuggling of the amunitions of illegal....RDX etc. The report of economical measures are suggested and the Commission has noticed that the economic conditions of the fishermen, labour-classes......."

ಶ್ರೀ ಆರ್.ರೋಶನ್‌ಬೇಗ್:- ಯಾವ ಪೇಪರ್‌ನಲ್ಲಿ ಆ ವರದಿ ಬಂದಿರುವುದು ಮತ್ತು ಯಾವಾಗ ಬಂದಿರುವುದು ಎಂಬುದನ್ನು ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ:- ನಾನು ಆ ವರದಿಯ ಪತ್ರಿಕೆಯನ್ನು ನಿಮಗೆ ಕೊಡುತ್ತೇನೆ. ನಾನೇನು ಮುಚ್ಚಿಡುವುದಕ್ಕೆ ಹೋಗುವುದಿಲ್ಲ. ಅದನ್ನು ನಿಮಗೆ ಕೊಡುವುದಕ್ಕೆ ತಯಾರಿದ್ದೇನೆ. ಆಯೋಗದ ವರದಿಯ ಬಗ್ಗೆ ಒಂದು ರೀತಿಯಲ್ಲಿ ಸಸ್‌ಪೀಶಿಯ ಆಗಿ ಬರುವುದು ಸರಿಯಲ್ಲ. ಮಾನ್ಯ ಜಗನ್ನಾಥ್‌ಶೆಟ್ಟರ ಆಯೋಗ ವರದಿಯನ್ನು ಮಂಡನೆ ಮಾಡುತ್ತಿರುವಂತೆ ಆ ಸಂದರ್ಭದಲ್ಲಿಯೇ ಡಾ:ಚಿತ್ತರಂಜನ್‌ರವರ ಕೊಲೆಯಾದುದು, ಇದರ ಬಗ್ಗೆ ತನಿಖೆಯಾಗಿ, ಆ ತನಿಖೆಯ ವರದಿ ಇನ್ನು ಕೂಡ ಹೊರಗೆ ಬರದೇ ಆರೋಪಿಗಳು ಇನ್ನು ಪತ್ತೆಯೇ ಆಗಿಲ್ಲ

ಶ್ರೀ ಆರ್.ರೋಶನ್‌ಬೇಗ್:- ಅದು ಸಿ.ಬಿ.ಐ. ತನಿಖೆಗೆ ಹೋಗಿದೆ.

ಶ್ರೀ ಡಿ.ವಿ.ಸದಾನಂದಗೌಡ:- ಅದು ಸಿ.ಬಿ.ಐ. ತನಿಖೆಗೆ ಹೋಗಿದ್ದು ನನಗೆ ಗೊತ್ತಿದೆ. ನಾವು ಸಿ.ಬಿ.ಐ. ತನಿಖೆಗೆ ಅದು ಹೋಗಬೇಕೆಂದು ಒತ್ತಾಯ ಮಾಡಿದಾಗಲೀ ಸಿ.ಬಿ.ಐ. ತನಿಖೆಗೆ ಹೋಗಿರುವುದು. ಆದರೂ ಕೂಡ ಸಮಾಜದಲ್ಲಿ ಜನ ಏನು ತಿಳಿದುಕೊಳ್ಳುತ್ತಾರೆ.

ಇಂದು ಸಮಾಜದಲ್ಲಿ ಈ ರೀತಿಯ ವಿಚಾರಗಳಲ್ಲಿ ಜನರ ಮನಸ್ಸಿನಲ್ಲಿ ನೆಮ್ಮದಿ ನೆಲಿಸುವಂತೆ ಮತ್ತು ಅವರ ಮನಸ್ಸಿಗೆ ಮುದ ಕೊಡುವಂತೆ ಕೆಲಸ ಮಾಡದಿದ್ದರೆ ಬಹುಶ: ಸಮಾಜ ನಮ್ಮನ್ನು ದೂರದಿಂದ ನೋಡುವಂತೆ ಮತ್ತು ಸಂಶಯ ದೃಷ್ಟಿಯಿಂದ ನೋಡುವಂತೆ ಆಗುತ್ತದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಈ ರೀತಿಯಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತಿವೆ. ಉತ್ತರಹಳ್ಳಿಯಲ್ಲಿ 14 ಸಾವಿರ ಸೈಟ್‌ಗಳು ಆಯಿತು. ಇದರಲ್ಲಿ 12 ಸಾವಿರ ಬೋಗಸ್ ಸೈಟುಗಳು ಆಯಿತು. ಈ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕೆಂದು ಗಲಾಟೆಯಾಯಿತು; ಆದರೆ ಏನಾಯಿತು? ಜನರಿಗೆ ವಿಶ್ವಾಸ ಬರುವ ಧಾಟಿಯಲ್ಲಿ ಇಂದು ಕೆಲಸಗಳಾಗಬೇಕಿದೆ. ಆಶ್ರಯ ಯೋಜನೆಯಲ್ಲಿ ಅವ್ಯವಹಾರಗಳಾಯಿತು. ಇದರ ಬಗ್ಗೆ ದಿನಗಟ್ಟಲೇ ಸದನದಲ್ಲಿ ಚರ್ಚೆಯನ್ನು ಮಾಡಿದೆವು. ಸಿ.ಬಿ.ಐ. ತನಿಖೆಯಾಗಬೇಕೆಂದು ಹೇಳಿದೆವು. ಆದರೆ ಏನಾಯಿತು? ನಾನೇಕೆ ಇದನ್ನು ಹೇಳುತ್ತಿದ್ದೇನೆಂದರೆ, ಅವ್ಯವಹಾರಗಳನ್ನು ಮತ್ತು ಭ್ರಷ್ಟಾಚಾರವನ್ನು ನಿಲ್ಲಿಸಬೇಕೆಂದರೆ ಪ್ರಾಯಶ: ನಾವೇನು ಆಯೋಗಗಳ ಮೂಲಕ ಹಾಗೂ ಇನ್ನಿತರ ತನಿಖೆಗಳಾಗುತ್ತವೆ ಅಂಥ ತನಿಖೆಗಳಿಗೆ ಗೌರವ ಬರುವ ಹಾಗೆ ಮತ್ತು ನಿಷ್ಪಕ್ಷಪಾತವಾದ ವಿಚಾರವನ್ನು ನಾವು ತೆಗೆದುಕೊಳ್ಳುವಂಥ ಕೆಲಸಗಳನ್ನು ಸದನದಲ್ಲಿ ಮಾಡಿದರೆ ಮಾತ್ರ ಅದು ಸರಿಯೆನಿಸುತ್ತದೆ. ಆದುದರಿಂದ ನೀವು ಆಡಳಿತದಲ್ಲಿ ಪಾರದರ್ಶಕತೆಯನ್ನು ತೋರಿಸುವಂಥ ಕೆಲಸಗಳಲ್ಲಿ ಮಾಡಬೇಕು. ಆದರೆ ಇದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವಿಶೇಷ ಕಾರ್ಯಕ್ರಮಗಳು ಇಲ್ಲ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುತ್ತೇವೆಂದು ಮಾತ್ರ ಹೇಳಿದ್ದಾರೆಯೇ ಹೊರತು ಯಾವ ದಾರಿಯ ಮೂಲಕ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುತ್ತೇವೆ ಎಂಬ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಯೇ ಇಲ್ಲ. ಆದಕಾರಣ ಅದರ ಬಗ್ಗೆ ಹೆಚ್ಚಿನ ಒತ್ತನ್ನು ನೀಡಬೇಕು. ಇಂಥ ವಿಚಾರಗಳಿಗೆ ತಮ್ಮಲ್ಲಿ ಬದ್ಧತೆ ಇದೆ ಎನ್ನುವುದಾದರೆ ತಕ್ಷಣ ಮುಂದಿನ ಸದನದಲ್ಲಿ ವರದಿಯನ್ನು ಮಂಡನೆ ಮಾಡಬೇಕು ಮತ್ತು ಅದರ ಮೇಲೆ ಚರ್ಚೆಯಾಗಬೇಕು ಮತ್ತು ಅದಕ್ಕೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ತೀರ್ಮಾನ ತೆಗೆದುಕೊಳ್ಳುವ ಸಲುವಾಗಿ ಸದನದಲ್ಲಿ ಚರ್ಚೆಯಾಬೇಕು ಎಂದು ಆಗ್ರಹಪಡಿಸುತ್ತಿದ್ದೇನೆ. II ಇನ್ನು ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಹೇಳಬೇಕೆಂದರೆ ಇಂದು ಮನೆಯ ಮಹಿಳೆ ಒಂದು ಆಭರಣವನ್ನು ಬೀದಿಯಲ್ಲಿ ಹಾಕಿಕೊಳ್ಳುವ ಹಾಗೆಯೇ ಇಲ್ಲವಾಗಿದೆ. ಮನೆಯಲ್ಲಿ ಆರಾಮವಾಗಿ ನಿದ್ರೆ ಮಾಡುವ ಪರಿಸ್ಥಿತಿ ಇಲ್ಲವಾಗಿದೆ. ಏಕೆಂದರೆ ರಾತ್ರಿ ಹೊತ್ತು ದರೋಡೆಗಳಾಗುತ್ತಿವೆ. ಮಹಿಳೆ ಆಭರಣಗಳನ್ನು ಹಾಕಿಕೊಂಡು ಹೊರಗೆ ಹೋದರೆ ಅಲ್ಲಿ ಸುಲಿಗೆಯಾಗುತ್ತದೆ. ಇಂದು ಭೂಗತ ದೊರೆಗಳ ಚಟುವಟಿಕೆಗಳು ವ್ಯಾಪಕವಾಗಿ ನಡೆಯುತ್ತಲೇ ಇದೆ. ಜೈಲಿನಿಂದ ಖೈದಿಗಳು ಪರಾರಿಗಳಾಗುತ್ತಿದ್ದಾರೆ. ಐ.ಎಸ್.ಐ. ಚಟುವಟಿಕೆಗಳು ನಡೆಯುತ್ತಿವೆ ಎಂದಾಗ ಅದನ್ನು ಕಳೆದ ಸದನದಲ್ಲಿ ಒಪ್ಪಿಕೊಂಡಿದ್ದಾರೆ. ದಿನ ಪತ್ರಿಕೆಗಳಲ್ಲಿ ಈ ವಿಚಾರಗಳು ಬಂದಿರುವುದನ್ನು ನಾವು ನೋಡಿದ್ದೇವೆ. ಆದುದರಿಂದ ಕಾನೂನು ಸುವ್ಯವಸ್ಥೆಯ ಬಗ್ಗೆ ಹೆಚ್ಚು ಒತ್ತು ಕೊಡಬೇಕಾದ ಅವಶ್ಯಕತೆ ಇದೆ. ಆದರೆ ಕಾನೂನು ಸುವ್ಯವಸ್ಥೆಯ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖವನ್ನೇ ಮಾಡದಿರುವುದರಿಂದ ನನಗೆ ಸಂಶಯವಾಗುತ್ತಿದೆ. ಯಾರು ಭೂಗತ ದೊರೆಗಳಿದ್ದಾರೆ, ಯಾರು ಅಪರಾಧಿಗಳಾಗಿದ್ದಾರೆ ಅವರೆಲ್ಲಾ ಆಡಳಿತದ ಜೊತೆಯಲ್ಲಿ ಶಾಮೀಲು ಆಗುತ್ತಿದ್ದಾರೇನೋ ಎನ್ನುವ ಸಂಶಯ ಬರುವ ಹಾಗೆ ಇವೊತ್ತು ವ್ಯವಸ್ಥೆ ಇದೆ ಎಂದು ನನಗನ್ನಿಸುತ್ತಿದೆ. ಆದುದರಿಂದ

ಇದನ್ನು ಗಂಭೀರವಾಗಿ ಪರಿಗಣನೆ ಮಾಡಬೇಕು. ಏಕೆಂದರೆ ಇಂದು ಸಾಮಾನ್ಯ ಜನರ ಬದುಕಿಗೆ ರಕ್ಷಣೆ ಕೊಡುವ ವ್ಯವಸ್ಥೆಯಾಗಬೇಕು. ಮನೆಯಿಂದ ಹೋದ ಹುಡುಗ ಮತ್ತೆ ಮನೆಗೆ ಬರುತ್ತಾನೆ ಎಂಬ ಧೈರ್ಯ ಮನೆಯವರಿಗಿರುವ ಹಾಗೆ ಇರಬೇಕು. ಮನೆಯಿಂದ ಬೀಡಿ ತರಲು ಹೋದ ಮಹಿಳೆ ಮರ್ಯಾದೆಯಿಂದ ಮತ್ತೆ ಮನೆಗೆ ಹೋಗುತ್ತೇನೆ ಎನ್ನುವ ಧೈರ್ಯ ಆ ಮಹಿಳೆಗೆ ಬರುವ ಹಾಗೆ ಆಗಬೇಕು. ಆ ರೀತಿಯ ಕಾನೂನುಗಳು ಸಮಾಜದಲ್ಲಿ ಬಂದರೆ ಮಾತ್ರ ಒಳ್ಳೆಯ ಸುಧಾರಣೆಗಳು ಆಗುವುದಕ್ಕೆ ಸಾಧ್ಯವಿದೆ. ಇಂಥ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಂದು ಇದೆ. ಒಂದು ಸಣ್ಣ ವಿಚಾರವನ್ನು ಇಲ್ಲಿ ಉಲ್ಲೇಖ ಮಾಡುವುದಕ್ಕೆ ಈಗ ಪ್ರಸ್ತುತವಲ್ಲದಿದ್ದರೂ ನನ್ನ ಮನಸ್ಸಿಗೆ ಅದನ್ನು ಹೇಳಬೇಕು ಎಂದೆನಿಸುತ್ತಿರುವುದರಿಂದ ಅದನ್ನು ಈಗ ಹೇಳಬಯಸುತ್ತೇನೆ. ಬಹುಶಃ ಮೊನ್ನೆ ಬಾಬಾಬುಡನ್‌ಗಿರಿಯಲ್ಲಿ ಡಿಸ್‌ಪ್ಯೂಟೆಡ್ ಪ್ಲೇಸ್‌ನಲ್ಲಿ ಶವ ಹೂಳುವುದಕ್ಕೆ ಪೋಲೀಸ್ ರಕ್ಷಣೆಯನ್ನು ಕೊಟ್ಟು ಶವವನ್ನು ಹೂಳಿಸಲಾಯಿತು. ಏಕೆ ಇದನ್ನು ಮಾಡಲಾಯಿತು?

ಶ್ರೀ ಕಾಗೋಡು ತಿಮ್ಮಪ್ಪ:- ಎಲ್ಲಿದೆ ಡಿಸ್‌ಪ್ಯೂಟೆಡ್? ಯಾರು ಡಿಸ್‌ಪ್ಯೂಟೆಡ್ ಎಂದು ರೈಸ್ ಮಾಡುತ್ತಿರುವುದು?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ಉಪನಾಯಕರು ಈಗ ಮಾತನಾಡುತ್ತಾ ವಿವಾದದ ಜಮೀನಿನ ಬಗ್ಗೆ ವಿಚಾರವನ್ನು ಹೇಳುತ್ತಿದ್ದಾರೆ. ಅವರು ಹೇಳತಕ್ಕಂಥ ವಿಚಾರದ ಬಗ್ಗೆ ನಮ್ಮ ಬದ್ಧತೆ ಏನೂ ಇಲ್ಲ. ಈ ರೀತಿಯಲ್ಲಿ ಮಾತನಾಡುವಾಗ ಸಾಮಾನ್ಯವಾಗಿ ಆಡಳಿತ ಪಕ್ಷದ ಶಾಸಕರುಗಳು ಎದ್ದು ನಿಂತು ಮಾತನಾಡುವುದನ್ನು ನಾವು ನೋಡಿದ್ದೇವೆ. ಆದರೆ ನನ್ನಂತೆ ದಢೂತಿಯಂತಿರುವ ಮಾನ್ಯ ರಮಾನಾಥರೈಯವರ ಜೊತೆ ಮೂರ್ನಾಲ್ಕು ಜನ ಮಂತ್ರಿಗಳೂ ಸಹಿತ ಸೇರಿಕೊಂಡು ಮೋರ್ ಲಾಯಲ್ ದೆನ್ ದಿ ಕಿಂಗ್ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳಿಗೆ ತೋರಿಸುತ್ತಿದ್ದಾರೇನೋ ಎಂಬುದು ನನಗೆ ಗೊತ್ತಿಲ್ಲ. ಆದುದರಿಂದ ಮೊದಲು ಉಪನಾಯಕರು ಮಾತನಾಡಲಿ. ಅವರು ಮಾತನಾಡಿದ ನಂತರ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಅಥವಾ ಮಾನ್ಯ ಸಭಾನಾಯಕರು ಮಾತನಾಡಲಿ. ಅದನ್ನು ಬಿಟ್ಟು ಮೂರ್ನಾಲ್ಕು ಜನ ಮಂತ್ರಿಗಳು ಒಟ್ಟಿಗೆ ನಿಂತು ಮಾತನಾಡಿದರೆ ಹೇಗೆ?

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು):- ಈ ಹಿಂದೆ ಇದ್ದ ಮುಖ್ಯಮಂತ್ರಿಗಳಿಗೆ ಆ ರೀತಿಯ ಪ್ರದರ್ಶನ ಮಾಡಿಸಿಕೊಳ್ಳಬೇಕಿತ್ತೇನೋ ಅದು ನನಗೆ ಗೊತ್ತಿಲ್ಲ. ಆದರೆ ಈ ಮುಖ್ಯಮಂತ್ರಿಗೆ ಆ ರೀತಿಯ ಪ್ರದರ್ಶನ ಮಾಡಬೇಕಾಗಿಲ್ಲ. ಆದುದರಿಂದ ನನ್ನ ಮಂತ್ರಿ ಸಹೋದ್ಯೋಗಿಗಳು ಆ ರೀತಿಯಲ್ಲಿ ಪ್ರದರ್ಶನ ಮಾಡಬೇಕಾಗಿಲ್ಲ.

ಶ್ರೀ ಡಿ.ವಿ.ಸದಾನಂದಗೌಡ:- ಆಯಿತು ಈ ಬಾಬಾಬುಡನ್‌ಗಿರಿಯ ವಿಷಯವನ್ನು ಬಿಟ್ಟುಬಿಡೋಣ. ಈ ವಿಷಯದ ಬಗ್ಗೆ ಮಾತನಾಡಿದಾಗ ನಮ್ಮ ಮಾನ್ಯ ಕಾಗೋಡು ತಿಮ್ಮಪ್ಪನವರು ಎದ್ದುಬಿಟ್ಟರು. ಬಹುಶಃ ಮಾನ್ಯ ಕಾಗೋಡು ತಿಮ್ಮಪ್ಪನವರ ಸಂತೋಷಕ್ಕಾಗಿ ಆ ವಿಚಾರವನ್ನು ಈಗ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುವುದಿಲ್ಲ. ಅದರ ಬಗ್ಗೆ ಇಲ್ಲಿ ವ್ಯವಹಾರಗಳನ್ನು ಮಾಡಬೇಕೋ ಅಲ್ಲಿ ವ್ಯವಹಾರಗಳನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಈಗ

ಇನ್ನೊಂದು ಪ್ರಕರಣದ ಬಗ್ಗೆ ಹೇಳುತ್ತೇನೆ. ಶಿವಮೊಗ್ಗದಲ್ಲಿ ಕಾಡುಗಳ್ಳರು ಎಂದು ಹೇಳಿ ಮೂರು ಜನರಿಗೆ ಗುಂಡು ಹಾಕಿ ಕೊಂದಿರಲ್ಲ; ಇವೊತ್ತು ನಿಜವಾಗಿ ಕಾಡುಗಳ್ಳರನ್ನು ಓಡಿಸಲು ಏನು ಪ್ರಯತ್ನಗಳನ್ನು ಮಾಡಬೇಕೋ ಅದನ್ನು ಮಾಡುವ ಬದಲು ಡಕಾಯಿತರ ಹಾಗೆ, ಕೊಲೆಗಾರರ ಹಾಗೆ ಅವರನ್ನು ನೇರವಾಗಿ ಕೊಲೆ ಮಾಡುವಂಥ ಕೆಲಸಗಳು ಅಲ್ಲಿ ನಡೆದುಹೋಯಿತು.

ಇದನ್ನು ಇಲ್ಲಿ ನಾನು ಏಕೆ ಉಲ್ಲೇಖ ಮಾಡುತ್ತಿದ್ದೇನೆಂದರೆ ಯಾರು ಕಾನೂನು ರಕ್ಷಕರಿದ್ದಾರೆ. ಅವರು ಕಾನೂನು ಭಕ್ಷಕರು ಆಗಬಾರದು. ಕಾನೂನು ರಕ್ಷಕರು ಕಾನೂನು ರಕ್ಷಣೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತಹ ಇಲಾಖೆ ಸಮರ್ಪಕವಾಗಿ ಕೆಲಸವನ್ನು ನಿರ್ವಹಣೆ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇವರು ಕೈಯಲ್ಲಿ ಅಧಿಕಾರವನ್ನು ಕೊಟ್ಟಿದ್ದಾರೆಂದು, ಕೈಯಲ್ಲಿ ಕೋವಿಯನ್ನು ಕೊಟ್ಟಿದ್ದಾರೆಂದು ಯಾರೋ ನಿರಪರಾಧಿಗಳ ಮೇಲೆ ಸವಾರಿ ಮಾಡುವಂಥಾದ್ದು ಮತ್ತು ದೊಡ್ಡ ಭೂಗತ ದೊರೆಗಳಿಗೆ ರಕ್ಷಣೆ ಕೊಡುವಂಥಾದ್ದು ಈ ಸರ್ಕಾರದಲ್ಲಿ ಆಗಬಾರದು. ಇದು ನನ್ನ ಬೇಡಿಕೆಯಾಗಿದೆ, ಅದಕ್ಕಾಗಿ ನಾನು ಈ ವಿಚಾರವನ್ನು ಉಲ್ಲೇಖ ಮಾಡುತ್ತಿದ್ದೇನೆಯೇ ಹೊರತು, ಬೇರೆ ಯಾವುದೇ ವಿಚಾರಕ್ಕೂ ಅಲ್ಲ. ಇಲ್ಲಿ ಯಾವುದೇ ರೀತಿಯಲ್ಲಿ ಕೋಮು ಭಾವನೆಗಳನ್ನು ಕೆರಳಿಸಬೇಕು ಅಥವಾ ಯಾವುದೇ ರೀತಿಯ ಅಪಹಾಸ್ಯದ ಮಾತನ್ನು ಸದನದಲ್ಲಿ ಉಲ್ಲೇಖ ಮಾಡಬೇಕೆಂದು ಅಲ್ಲ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಮೊನ್ನೆ ಮಂಗಳೂರು ಕ್ಷೇತ್ರದ ಸುರತ್ಕಲ್ ಭಾಗದಲ್ಲಿ ಲಾರಿ ಡ್ರೈವರ್‌ಗಳು ಲಾರಿ ಯೂನಿಯನ್ ಅಸೋಸಿಯೇಶನ್‌ರವರು ಬರುತ್ತಿರುವಾಗ ಅಲ್ಲಿಯ ಎಸ್.ಐ.ಯವರು ಏಕಾಏಕಿಯಾಗಿ ಅವರನ್ನು ಹಿಡಿದು ಹೊಡೆದಿದ್ದಾರೆ. ಈ ರೀತಿಯಾಗಿ ಅಪರಾಧಿಗಳನ್ನು ಸಹ ಹೊಡೆಯವುದಿಲ್ಲ; ಆ ರೀತಿಯಲ್ಲಿ ಇವರನ್ನು ಹೊಡೆದಿದ್ದಾರೆ. ನಾನು ಇದನ್ನು ಸದನದ ಗಮನಕ್ಕೆ ಏಕೆ ತರುತ್ತಿದ್ದೇನೆಂದರೆ, ಇವರನ್ನು ಈ ರೀತಿಯಾಗಿ ಹೊಡೆದು ನಂತರ ಇದನ್ನು ದರೋಡೆ ಕೇಸ್ ಎಂದು ಹಾಕಿದ್ದಾರೆ. ಇಲ್ಲಿ ಅಪರಾಧಿಗಳ ಬಗ್ಗೆ ತಾವು ತಿಳಿದುಕೊಳ್ಳುವಂತಹ ದೃಷ್ಟಿಕೋನ ಏನಿದೆ, ಇದು ಯೂನಿಯನ್ ಲೀಡರ್‌ಗಳನ್ನು ದರೋಡೆಕೋರರನ್ನಾಗಿ ಮಾಡುವಂತಹ ಒಂದು ಪರಿಪಾಠ ಈ ಸರ್ಕಾರಕ್ಕೆ ಸಲ್ಲದು ಎಂದು ಹೇಳುತ್ತೇನೆ.

ಅಧ್ಯಕ್ಷರು:- ತಾವು ಮಾತನಾಡುವಂತಹ ಸಂದರ್ಭದಲ್ಲಿ ಹೇಳಬೇಕೆಂದಿರುವ ವಿಚಾರಗಳನ್ನು ಹೇಳಿ, ಈಗ ಮಧ್ಯೆ ಈ ರೀತಿಯಾಗಿ ಮಾತನಾಡಿದರೆ ಕಾಲವಕಾಶ ಕಡಿಮೆಯಾಗುತ್ತದೆ.

ಶ್ರೀ ಎನ್.ಯೋಗೀಶ್‌ಭಟ್: ನನಗೆ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆಯೋ ಇಲ್ಲವೋ, ಗೊತ್ತಿಲ್ಲ: ಆದುದರಿಂದ ನಾನು ಈಗ ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ರಮಾನಾಥ ರೈರವರು ಈ ವಿಚಾರವನ್ನು ನಿನ್ನೆ ನೋಟೀಸ್ ಮುಖಾಂತರ ಗಮನಕ್ಕೆ ತಂದರು. ಕೆಲವು ಬಾರಿ ಮಾಲೀಕರನ್ನು ರಾಬರಿ ಮಾಡಿದ್ದಾರೆಂದು ಹೇಳಿದರು. ಅದಕ್ಕಾಗಿ ನಾನು ವರದಿಯನ್ನು ಅಲ್ಲಿಂದ ತರಿಸುತ್ತಿದ್ದೇನೆ. ಈ ವರದಿ ಬಂದ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ಈ ರೀತಿಯಾಗಿ ಸಾಮಾನ್ಯ ಜನರ ಬದುಕಿನಲ್ಲಿ

ಚೆಲ್ಲಾಟವಾಡುವಂತಹ ಪ್ರವೃತ್ತಿ ಅದು ಅಧಿಕಾರಿಗಳಾಗಲಿ, ರಾಜಕಾರಣಿಗಳಿಂದಾಗಲಿ ಈ ಸಮಾಜದಲ್ಲಿ ಆಗುವಂಥಾದ್ದು ನಿಲ್ಲಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯರು ಶಿವಮೊಗ್ಗದಲ್ಲಿ ನಡೆದಂತಹ ಘಟನೆಯ ಬಗ್ಗೆ ಹೇಳಿದ್ದಾರೆ: ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಸಾವಿರ ಜನರು ಟೀಕ್ ಪ್ಲಾಂಟೇಷನ್‌ನಲ್ಲಿ ಮರಗಳನ್ನು ಕಡಿಯುವುದಕ್ಕೆಂದು ನುಗ್ಗುತ್ತಾರಲ್ಲಾ, ಅದನ್ನು ತಪ್ಪಿಸಬೇಕೋ, ಬೇಡವೊ? ಎಂಬುದನ್ನು ತಾವು ಹೇಳಿ.

ಶ್ರೀ ಡಿ.ವಿ.ಸದಾನಂದಗೌಡ: ತಮ್ಮ ಕಳಕಳಿಯನ್ನು ನಾನು ಒಪ್ಪುತ್ತೇನೆ. ಆದರೆ ಕಾನೂನು ಇರುವಂಥಾದ್ದು ಅವರಿಗೆ ಗುಂಡು ಹಾಕುವುದಕ್ಕಲ್ಲ. ಅವರು ಅಪರಾಧಿಗಳೆಂದು ಪತ್ತೆ, ಹಚ್ಚಿ ಅವರಿಗೆ ಶಿಕ್ಷೆ ನೀಡಲು ಕೋರ್ಟ್ ಕಚೇರಿಗಳು ಇವೆ, ಅದನ್ನು ಬಿಟ್ಟು ಕಾನೂನನ್ನು ಕೈಗೆತ್ತಿಕೊಂಡು ಗುಂಡು ಹಾರಿಸುವಂತಹ ಕೆಲಸವನ್ನು ಮಾಡಿದರೆ ಹೇಗೆ? ಈ ರೀತಿಯಾದರೆ ಕೋರ್ಟ್ ಇರುವಂಥಾದ್ದು ಏಕೆ? ಅಪರಾಧಿಗಳನ್ನು ಹಿಡಿಯಬೇಕು, ಅವರನ್ನು ಜೀವಂತವಾಗಿ ಬದುಕುವುದಕ್ಕೆ ಬಿಟ್ಟು ಅವರು ಅಪರಾಧಿಗಳು ಎಂದು ಸಾಬೀತು ಮಾಡಿ, ಶಿಕ್ಷೆಯನ್ನು ಕೊಡಬೇಕು. ಈ ರೀತಿಯಾಗಿ ಮಾಡಿದಾಗ ಇದು ಬೇರೆಯವರಿಗೂ ಗೊತ್ತಾಗಬೇಕು. ಈ ರೀತಿಯಾಗಿ ಸಮಾಜದಲ್ಲಿ ಸಮಾಜಘಾತಕ ಶಕ್ತಿಗಳನ್ನು ನಿಗ್ರಹಿಸಬೇಕು. ಅದರಲ್ಲಿ ನನ್ನ ಎರಡು ಮಾತು ಇಲ್ಲ. ನಿಮಗೆ ನನ್ನ ಬೆಂಬಲವಿದೆ, ಮತ್ತೆ ತಾವು ಹೇಳುವುದರಲ್ಲಿ ಪ್ರಾಮಾಣಿಕತೆಯೂ ಇದೆ. ಕೆಲವು ಅಧಿಕಾರಿಗಳಿಗೆ ಬೆದರಿಕೆಯೊಡ್ಡಿ, ಅವರನ್ನು ಹಿಡಿದು ಅವರ ಜೀವಕ್ಕೆ ಬೆದರಿಕೆಯೊಡ್ಡುವಂತಹ ಕೆಲಸಗಳು ನಡೆಯುತ್ತಿವೆ. ಈ ರೀತಿಯಾಗುತ್ತಿರುವುದನ್ನು, ನಾವು ವೀರಪ್ಪನ್ ಘಟನೆಯಲ್ಲಿ ಆಗಿರುವುದನ್ನು ನಾವು ಪುನ: ಹೇಳಬೇಕಾಗಿಲ್ಲ. ಇಲ್ಲಿ ಅಧಿಕಾರಿಗಳನ್ನು ಮರಕ್ಕೆ ಕಟ್ಟಿ ಅವರು ಮರಗಳನ್ನು ಕಡಿದು ತೆಗೆದುಕೊಂಡು ಹೋಗುವಂಥಾದ್ದು ನಡೆಯುತ್ತಿದೆ. ನಾನು ಇದನ್ನು ಇಲ್ಲವೆಂದು ಹೇಳುವುದಿಲ್ಲ. ಆದರೆ ಬೇರೆ ಬೇರೆ ಕಾನೂನು ಚೌಕಟ್ಟು, ಬೇರೆ ಬೇರೆ ದಾರಿಗಳು ಇದೆ, ಆ ಕಾನೂನಿನ ಚೌಕಟ್ಟನ್ನು ಮೀರಿ ಆಡಳಿತ ಯಂತ್ರವನ್ನು ನಡೆಸುವಂಥಾದ್ದು ಈ ಸಮಾಜಕ್ಕೆ ಶೋಭೆ ತರುವಂಥದ್ದು ಅಲ್ಲ. ತಾವು ಅದನ್ನು ಮರೆಯಬಾರದೆಂದು ಹೇಳುತ್ತೇನೆ. II ಇನ್ನು ಐ.ಎಸ್.ಐ. ಚಟುವಟಿಕೆಗಳ ಬಗ್ಗೆ ಹಿಂದಿನ ಸರ್ಕಾರ ಕೋಸ್ಟಲ್ ಗಾರ್ಡ್ಸ್ ಅನ್ನು ಸಪರೇಟ್ ಮಾಡುವಂತಹ ಪ್ರಸ್ತಾಪವನ್ನು ಮುಂದಿಟ್ಟಿತ್ತು. ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನೆಂಬುದು ಗೊತ್ತಿಲ್ಲ. ಇಡೀ ನಮ್ಮ ರಾಜ್ಯದ, ದೇಶದ ಇಂಟರ್ ಸೆಕ್ಯೂರಿಟಿಯ ಬಗ್ಗೆ, ರಕ್ಷಣೆಯ ಬಗ್ಗೆ ನಮ್ಮ ಸರ್ಕಾರದ ಜವಾಬ್ದಾರಿ ಏನು? ನಮ್ಮ ಕರ್ನಾಟಕದಲ್ಲಿ 400ಮೀಟರ್ ಉದ್ದದ ಕರಾವಳಿ ಇದೆ. ಈ ಭಾಗದಲ್ಲಿ ಅವರ ಚಟುವಟಿಕೆಗಳು ಜಾಸ್ತಿಯಾಗಿದೆ. ಇದನ್ನು ಸರ್ಕಾರವೂ ಒಪ್ಪಿಕೊಂಡಿದೆ. ಮತ್ತೆ ಪತ್ರಿಕೆಗಳಲ್ಲಾ ಬಂದಿದೆ. ಅದರ ಬಗ್ಗೆ ಏನನ್ನು ತಾವು ಪ್ರಸ್ತಾಪ ಮಾಡಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ಇದರ ಬಗ್ಗೆ ನಿಗಾ ಜೊತೆಗೆ ದೊಡ್ಡ ವ್ಯವಸ್ಥೆಯನ್ನು ರೂಪಿಸಬೇಕು. ಇಡೀ ರಾಜ್ಯದಲ್ಲಿ ಯಾವುದೇ ಬಾಹ್ಯ ವ್ಯಕ್ತಿಗಳಿಂದ ಈ ಚಟುವಟಿಕೆಗಳು ನಡೆಯದ ರೀತಿಯಲ್ಲಿ ಹೆಚ್ಚಿನ ಮುತುವರ್ಜಿ ವಹಿಸಬೇಕೆಂದು ನಾನು ಹೇಳಿಲಿಚ್ಛಿಸುತ್ತೇನೆ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ರಮಾನಾಥ ರೈರವರು, ಹಾಗೂ ನಮ್ಮ ಮಿತ್ರರು, ಮತ್ತೆ ದೊಡ್ಡ ಮನುಷ್ಯರು ನಮ್ಮ ಜೊತೆಗಿದ್ದಾರೆಂದು ಈ ಕರಾವಳಿಯನ್ನು ಮರೆತುಬಟ್ಟಿದ್ದೀರಿ: ಇಲ್ಲ

ಅವರೇ ಅಡ್ಡವಾಗಿದ್ದಾರೋ ಏನೋ ಅದು ನನಗೆ ಗೊತ್ತಿಲ್ಲ. ಈ ವಿಷಯವಾಗಿ ಒಂದು ಶಬ್ದ ಕೂಡ ಪ್ರಸ್ತಾಪವಾಗಿಲ್ಲ. ನಮ್ಮ ಕರ್ನಾಟಕ ರಾಜ್ಯದ ಈ 400ಮೀಟರ್ ಉದ್ದದ ಅತ್ಯಂತ ದೊಡ್ಡ ಕರಾವಳಿಯ ವಿಷಯವನ್ನು ಪ್ರಸ್ತಾಪ ಮಾಡದಿರುವ ಬಗ್ಗೆ ನನಗೆ ಬೇಸರವಾಯಿತು. ಕಳೆದ ಅಧಿವೇಶಗಳಲ್ಲಿ ಸನ್ಮಾನ್ಯ ಯು.ಆರ್.ಸಭಾಪತಿಯವರ ಆರ್ಭಟವೇನೆಂದರೆ, ಅವರು ಸಭೆಯಲ್ಲಿ ಎದ್ದು ನಿಂತರೆ ಬರೀ ಮೀನುಗಾರರ ಬಗ್ಗೆ ಮಾತನಾಡುತ್ತಿದ್ದರು. ಈ ಸಾರಿ ಓಟನ್ನು ತೆಗೆದುಕೊಂಡು ಗೆದ್ದಿದ್ದಾರೆ, ಇಲ್ಲಿ ಒಂದು ಸಣ್ಣ ತಪ್ಪಾಗಿದೆ, ಎಂದು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುವಂತಹ ಸೌಜನ್ಯ ಕೂಡ ಇಲ್ಲ. ನಾನು ಹೇಳುವಂಥಾದ್ದು ಏನೆಂದರೆ ಇವತ್ತು ಕರಾವಳಿಯಲ್ಲಿರುವಂತಹ ಮೀನುಗಾರರು ಈ ಪಕ್ಷ ಅಧಿಕಾರಕ್ಕೆ ಬಂದಿದೆ. ಕೊಸ್ಟಲ್-ಬೆಲ್ಟ್ ಉಳ್ಳಾಲದಿಂದ ಹಿಡಿದು ಕಾರವಾರದವರೆಗೂ ಇದ್ದು, ತಾವು ಇಲ್ಲಿ ಹೆಚ್ಚಿನ ಮತಗಳನ್ನು ಇಲ್ಲಿಂದ ಪಡೆದುಕೊಂಡು ಅಧಿಕಾರಕ್ಕೆ ಬಂದಿರುವಂತಹ ಪಕ್ಷ ನಿಮ್ಮದಾಗಿದೆ. ನಿಮಗೆ ಯಾರು ಓಟು ಕೊಟ್ಟಿದ್ದಾರೋ ಅವರನ್ನು ಇಷ್ಟು ಬೇಗ ಮರೆಯುವಂತಹ ಕೆಲಸವಾಗಬಾರದು. ಈ ಕರಾವಳಯ ಬಗ್ಗೆ ಚಿಂತನೆಯಾಗುವಂತಹದ್ದು ಆಗಬೇಕು.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ, ನಾನು ಮಾತನಾಡಬೇಕು.

ಶ್ರೀ ಡಿ.ವಿ.ಸದಾನಂದಗೌಡ: ಮೀನುಗಾರರ ಬಗ್ಗೆ ಮುತುವರ್ಜಿ ವಹಿಸಬೇಕು.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಹೆಸರನ್ನು ಹೇಳಿದ ಮೇಲೆ ನಾನು ಉತ್ತರವನ್ನು ಕೊಡಬೇಕಾಗುತ್ತದೆ. ಅದನ್ನು ಅವರು ಕೇಳುವಂತಹ ಸೌಜನ್ಯವಿರಬೇಕು. ನಾವು ಮಾತಿನಲ್ಲಿ ಹೇಳುವುದಿಲ್ಲ, ಕೃತಿಯಲ್ಲಿ ಮಾಡಿ ತೋರಿಸುತ್ತೇವೆಂದು ಹೇಳುತ್ತೇನೆ. ನೀವು ಬಹಳಷ್ಟು ಮಾತಿನಲ್ಲಿ ಸಾಧಿಸುತ್ತಿದ್ದೀರಿ, ನೀವು ಕೃತಿಯಲ್ಲಿ ಎಷ್ಟು ಮಾಡಿದ್ದೀರೆಂಬುದು ನಮಗೆ ಗೊತ್ತಿದೆ. ಕೇಂದ್ರಸರ್ಕಾರದಲ್ಲಿ ಒಂದು ವರ್ಷದಲ್ಲಿ ಕೃತಿಯಲ್ಲಿ ಎಷ್ಟು ಸಾಧನೆ ಮಾಡಿದ್ದೀರೆಂಬುದು ಫಲಿತಾಂಶದಿಂದ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ನಾವು ಹೊಸದಾಗಿ ಹನ್ನೊಂದನೇ ವಿಧಾನಸಭೆಯನ್ನು ಪ್ರಾರಂಭ ಮಾಡಿದ್ದೇವೆ. ತಾವು ಅಧ್ಯಕ್ಷರಾಗಿ ಮೊನ್ನೆಯಿಂದ ನೋಡುತ್ತಿದ್ದೀರಿ. ಮಾನ್ಯ ವಿರೋಧಪಕ್ಷದ ಮುಖಂಡರು, ಸದಸ್ಯರು ಮಾತನಾಡುವಾಗ ಅವರಿಗೆ ಸರ್ಕಾರದ ಬಗ್ಗೆ ಟೀಕೆ ಮಾಡುವಂತಹ ಹಕ್ಕು ಇದೆ, ಟೀಕೆ ಮಾಡುತ್ತಾರೆ. ಇವತ್ತು ವಿರೋಧ ಪಕ್ಷದ ಮಾನ್ಯ ಸದಸ್ಯರು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತಿದ್ದಾರೆ. ಅವರು ಹೇಳುವಂತಹ ವಿಚಾರಗಳಿಗೆ ಮಾನ್ಯ ಮುಖ್ಯಮಂತ್ರಿಯವರು ನಾಳೆ ಉತ್ತರವನ್ನು ಕೊಡುತ್ತಾರೆ. ನಾವು ಹೇಳುವಂತಹ ವಿಚಾರಗಳ ಬಗ್ಗೆ ಭಿನ್ನಾಭಿಪ್ರಾರಾಯಗಳು ಇರಬಹುದು. ಅಥವಾ ಸ್ಪಷ್ಟಿಕರಣವಿರಬಹುದು. ಈ ಎಲ್ಲಾ ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಯವರ ಮುಖಾಂತರ ಸದನದಲ್ಲಿ ಉತ್ತರವನ್ನು ಕೊಡಬೇಕಾಗುತ್ತದೆ. ಆದರೆ ಹೇಳುವಂಥಾದ್ದಕ್ಕೆ ಮೊಟಕು ಮಾಡಿ ಹೇಳುವಂಥಾದ್ದು...........

ಶ್ರೀ ಯು.ಆರ್.ಸಭಾಪತಿ: ಮಾನ್ಯ ಸೋಮಶೇಖರ್‌ರವರೆ, ಅವರು ಸರ್ಕಾರದ ಬಗ್ಗೆ ಮಾತನಾಡಿದರೆ ಪರವಾಗಿಲ್ಲ. ಆದರೆ ಮಾನ್ಯ ಸದಸ್ಯರು ವೈಯಕ್ತಿಕವಾಗಿ ನನ್ನ ಹೆಸರನ್ನು ಪ್ರಸ್ತಾಪ ಮಾಡಿರುವುದಕ್ಕೆ ನಾನು ಎದ್ದು ನಿಂತದ್ದು. ನಮಗೆ ನಿಮ್ಮಿಂದ ಉಪದೇಶ ಬೇಕಾಗಿಲ್ಲ; ನಮಗೆ ಬೇಕಾದಷ್ಟು, ನೀವು ಸರ್ಕಾರದ ಬಗ್ಗೆ ಹೇಳಿ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಸದಸ್ಯರುಗಳು ಮಾತನಾಡುವಾಗ ಅನ್-ಕಾನ್‌ಸ್ಟಿಟ್ಯೂಷನಲ್, ಆಗಿ ಏನಾದರೂ ಹೇಳಿದರೆ, ಅನ್-ಪಾರ್ಲಿಮೆಂಟರಿ ಶಬ್ದಗಳನ್ನು ಏನಾದರೂ ಬಳಸಿದರೆ ಆಗ ಪಾಯಿಂಟ್ ಆಫ್ ಆರ್ಡರ್ ಮೂಲಕ ತಾವು ಗಮನಕ್ಕೆ ತರಬಹುದು. ಅದನ್ನು ಬಿಟ್ಟು ಮಾನ್ಯ ಸದಸ್ಯರುಗಳು ಮಾತನಾಡುವಾಗ ಮಧ್ಯೆ ಮಧ್ಯೆ ಪ್ರವೇಶ ಮಾಡುವಂಥಾದ್ದು ಸರಿಯಲ್ಲ. ಇಲ್ಲಿ ಏನು ನಡೆಯುತ್ತದೆಂಬುದನ್ನು ದೂರದರ್ಶನದ ಮೂಲಕ ಜನರು ನೋಡುತ್ತಿದ್ದಾರೆ. ಈ ರೀತಿಯಾಗಿ ಮಧ್ಯೆ ಮಧ್ಯೆ ಎದ್ದು ಹೇಳುವಂಥಾದ್ದು ಈ ಒಂದು ಸಂಪ್ರದಾಯವೇನು ಇದೆ ಇದು ಸರಿಯಲ್ಲ. ಇಲ್ಲಿ ಹೊಸದಾಗಿ ಏನು 80ಜನರು ಸದಸ್ಯರಾಗಿ ಆರಿಸಿ ಬಂದಿದ್ದಾರೆ ಅವರು ಈ ರೀತಿ ಮಾಡಿದರೆ ಪರವಾಗಿಲ್ಲ. ಆದರೆ ಎರಡು ಮೂರು ಸಾರಿ ಇಲ್ಲಿಗೆ ಆರಿಸಿ ಬಂದಿರುವವರು ಈ ರೀತಿಯಾಗಿ ಮಧ್ಯೆ ಎದ್ದು ನಿಂತು ಅಡಚಣೆ ಮಾಡಿದರೆ ತಪ್ಪಾಗುತ್ತದೆ. ತಾವು ಅವರಿಗೆ ಸರಿಯಾಗಿ ಮಾರ್ಗದರ್ಶನ ನೀಡಬೇಕು.

ಶ್ರೀ ಡಿ.ವಿ.ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಕರಾವಳಿಯಲ್ಲಿ ದೊಡ್ಡ ಅಗ್ನಿ ದುರಂತವಾಗಿದೆ. ಇದರಿಂದ ಸಾವಿರಾರು ಮೀನುಗಾರರು ನಿರ್ಗತಿಕರಾಗಿದ್ದಾರೆ; ಕಡಲ ಕೊರೆತ ಅತ್ಯಂತ ಭೀಕರವಾಗಿದೆ; ಉಳ್ಳಾಲದಿಂದ ಹಿಡಿದು ಕಾರವಾರದವರೆಗೂ ಸಾವಿರಾರು ಮನೆಗಳು ನಾಶವಾಗಿದೆ. ಅಲ್ಲಿನ ಮೀನುಗಾರರು ಬೀದಿಗೆ ಬಂದಿದ್ದಾರೆ. ಅವರ ಬದುಕು ಅತ್ಯಂತ ಕಷ್ಟಕರವಾಗಿದೆ. ಇವರು ಬೆಳಿಗ್ಗೆ ಎದ್ದು ಸಮುದ್ರಕ್ಕೆ ಹೋದರೆ ಅಲ್ಲಿಂದ ಬರುತ್ತಾರೋ? ಇಲ್ಲವೋ ಗೊತ್ತಿಲ್ಲ; ಬರುತ್ತಾರೆ ಎನ್ನುವ ಧೈರ್ಯವಿಲ್ಲ. ನಾವು ಇಲ್ಲಿ ಒಳ್ಳೆಯ ಮೀನು ಊಟ ಮಾಡಿ ಸಂತೋಷ ಪಡುತ್ತೇವೆ. ನಾವು ಅವರ ಬಾಳಿನಲ್ಲಿ ಎಷ್ಟು ಕಹಿ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ; ಆ ಒಂದು ಸೌಜನ್ಯ ನಮ್ಮಲ್ಲಿ ಇರಬೇಕಾಗುತ್ತದೆ. ಆ ಭಾಗಕ್ಕೆ ಹೆಚ್ಚಿನ ಒತ್ತನ್ನು ಕೊಡುವಂತಹ ಅವಶ್ಯಕತೆ ಇದೆ; ಮತ್ತೆ ಕೆಲಸವನ್ನು ಮಾಡುವಂಥಾದ್ದಕ್ಕೆ ಒತ್ತನ್ನು ಕೊಡಬೇಕು. ಕಳೆದ ಬಾರಿ ಶ್ರೀ ಜಯಪ್ರಕಾಶ್ ಹೆಗ್ಡೆಯವರು ಮಂತ್ರಿಗಳಾಗಿ ಮೀನುಗಾರಿಕೆಗೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. ಅವರು ಇದಕ್ಕೆ ಹೆಚ್ಚಿನ ಒತ್ತು ಕೊಟ್ಟಿರುವ ಕಾರಣ ಇವತ್ತು ಪುನ: ಗೆದ್ದು ಬಂದಿದ್ದಾರೆ. ನಾವು ವಿರೋಧಪಕ್ಷದಲ್ಲಿದ್ದಾಗ ಆಡಳಿತ ಪಕ್ಷದವರನ್ನು ಎಚ್ಚರಿಸಿ ಹೆಚ್ಚಿನ ಒತ್ತನ್ನು ಕೊಡಬೇಕು, ಒಳ್ಳೆಯ ಕೆಲಸವನ್ನು ಮಾಡಿ ಎಂದು ಹೇಳುವಂಥಾದ್ದು ಆಗಿದೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಕಳೆದ ಬಾರಿ ಅಲ್ಲಿ ಏನಾದರೂ ಒಳ್ಳೆಯ ಕೆಲಸ ಮಾಡಿದ್ದರೆ ಅದು ನಾವು ಮಾಡಿದ ಗಲಾಟೆಯಿಂದ ಎಂದು ಹೇಳುತ್ತೇನೆ. ಅವರು ನಾವು ಮಾಡುವ ಗಲಾಟೆಯನ್ನು ತಗೆದುಕೊಳ್ಳುವುದಕ್ಕೆ ಆಗದೇ ಅಲ್ಲಿ ಅನುಕೂಲವನ್ನು ಮಾಡಬೇಕೆನ್ನುವ ಮನಸ್ಸು ಮಾಡಿದರು. ಅವರ ಮನಸ್ಸು, ಭಾವನೆ, ನಮ್ಮ ಒತ್ತಡ, ಎಲ್ಲಾ ಒಂದೇ ಕಡೆ ಕೇಂದ್ರಿಕೃತವಾಗಿ ಆ ಕೆಲಸ ಸಫಲವಾಯಿತು. ಆ ಹಿನ್ನಲೆಯಲ್ಲಿ ಈ ಮಾತನ್ನು ಹೇಳಿ ಅವರಿಗೆ ನಾನು ಗೌರವವನ್ನು ಸೂಚಿಸುತ್ತೇನೆ.

ನಮ್ಮ ಮಾನ್ಯ ರಮಾನಾಥ ರೈಯವರಲ್ಲಿ ನಾನು ವಿಶ್ವಾಸ ಕಾಣುತ್ತಿದ್ದೇನೆ, ಬಹುಶ: ಮಾನ್ಯ ರೈಯವರ ಖಾತೆಯ ಬಗ್ಗೆ ಉಲ್ಲೇಖವಿರುವುದಿದೆ. ಇನ್ನು ಮುಂದಾದರು ಮಾನ್ಯ ರೈಯವರ ಎಚ್ಚಿತ್ತಿಕೊಳ್ಳಬೇಕು, ಸದನದಲ್ಲಿ ನಾವು ಯಾವುದೇ ರೀತಿಯಲ್ಲಿ ನಿದ್ರೆ ಮಾಡಬಾರದು, ಸದನದಲ್ಲಿ ಎಚ್ಚಿತ್ತು ಈ ಕೆಲಸಗಳನ್ನು ಮಾಡಬೇಕು ಎಂದು ಹೇಳುವ ಒಂದು ಧಾಟಿಯಾಗಿರಬಹುದೆಂದು ನಾನು ಭಾವಿಸುತ್ತೇನೆ. ನಾನು ಮೀನುಗಾರಿಕೆ ವಿಷಯಕ್ಕೆ ಸಂಬಂಧಿಸಿದಂತೆ ಹೇಳುತ್ತಿದ್ದೇನೆಯೇ ಹೊರತು ವೈಯಕ್ತಿಕವಾಗಿಯಲ್ಲ.

ಶ್ರೀ.ಎನ್.ಯೋಗೀಶ್‌ಭಟ್: ಸನ್ಮಾನ್ಯ ಅಧ್ಯಕ್ಷರೆ, ಖಾತೆಯನ್ನು ಸಚಿವಸಂಪುಟದ ದರ್ಜೆಗೆ ಏರಿಸುವುದಲ್ಲ, ಆಯವ್ಯಯವನ್ನು ಕೂಡ ಏರಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಮೀನುಗಾರಿಕೆಗೆ ಸಂಬಂಧಿಸಿದಂತೆ ವಿಶೇಷವಾಗಿ ಹೇಳುತ್ತಿದ್ದೇನೆ.

ಶ್ರೀ.ಡಿ.ವಿ.ಸದಾನಂದಗೌಡ: ಇನ್ನೊಂದು ವಿಷಯದ ಬಗ್ಗೆ ವಿಶೇಷವಾಗಿ ಮಾನ್ಯ ಮುಖ್ಯ ಮಂತ್ರಿಯವರು ಪ್ರಸ್ತಾಪ ಮಾಡಿದರು, ಆದರೆ ಸಾಮಾನ್ಯ ರೈತರ ಜನಜೀವನದ ಜೊತೆ ನಿತ್ಯವಿರುವ ಕೆಇಬಿ ಬಗ್ಗೆ ಬಹಳ ಗಂಭೀರವಾಗಿ ಪರಿಗಣನೆ ಮಾಡಲಿಲ್ಲ. ಕೆಇಬಿಯಲ್ಲಿ ನಮಗೆ ಸಿಕ್ಕಿರುವ ಮಾಹಿತಿಯ ಪ್ರಕಾರ 1995-96 ರಲ್ಲಿ 33 ಸಾವಿರ ದಶಕ್ಷ ಯುನಿಟ್‌ಗಳಷ್ಟು ಬೇಡಿಕೆ ಇತ್ತು. ಆ ಸಂದರ್ಭದಲ್ಲಿ ಸುಮಾರು 19,800 ದಶಲ ಯುನಿಟ್ ಗಳಷ್ಟು ಮಾತ್ರ ಉತ್ಪಾದನೆಯಾಗುತ್ತಿತ್ತು, ಈಗ ಸುಮಾರು 52, 53 ಸಾವಿರ ದಶಲಕ್ಷ ಯುನಿಟ್ ಅಷ್ಟು ಬೇಡಿಕೆ ಇದೆ. ಆದರೆ ಪ್ರಮಾಣದಲ್ಲಿ ಎತ್ಪಾದನೆಗಳಾಗುತ್ತಿಲ್ಲ. ತಾವು ಖಾಸಗಿಯವರಿಗೂ ಸಹ ವಿದ್ಯುತ್ ಉತ್ಪಾದನೆಗೆ ಅವಕಾಶ ಕೊಡುತ್ತೇವೆಂದು ಹೇಳಿದ್ದೀರಿ. ಅದನ್ನು ನಾನು ಸ್ವಾಗತಿಸುತ್ತೇನೆ. ಆ ದೃಷ್ಟಿಯಲ್ಲಿ ಹೆಚ್ಚಿನ ಒತ್ತನ್ನು ಕೊಡಬೇಕು ಯಾವಾಗ ಕೆಇಬಿ ವ್ಯವಸ್ಥೆ ಇಡೀ ರಾಜ್ಯದಲ್ಲಿ ಪರಿಪೂರ್ಣವಾಗುತ್ತದೆ, ಆ ದಿವಸ ಇಡೀ ರಾಜ್ಯದ ಕೆಲಸಗಳು ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ. ಕೈಗಾರಿಕೆ ಇರಬಹುದು, ಬೇರೊಂದು ಇರಬಹುದು ಇವತ್ತು ರೈತನ ಸಮಸ್ಯೆ ಏನಾಗಿದೆ ಸ್ವಾಮಿ? ನಮ್ಮ ಊರಿನಲ್ಲಿರುವ ರೈತರು ಮನೆಯಲ್ಲಿ ಮಲಗುವುದಿಲ್ಲ, ಪಂಪ್‌ಶೆಡ್‌ನಲ್ಲಿ ಮಲಗುತ್ತಾರೆ. ರಾತ್ರಿ ಕರೆಂಟ್ ಬಂದಾಗ ಸ್ವಿಚ್ ಹಾಕುತ್ತಾನೆ ಪುನ: ಅಲ್ಲೇ ಮಲಗಿಕೊಳ್ಳುತ್ತಾನೆ; ಕರೆಂಟ್ ಐದು ನಿಮಿಷದಲ್ಲಿ ಪುನ: ಹೋಗುತ್ತದೆ. ಹೆಂಡತಿಮಕ್ಕಳನ್ನು ಬಿಟ್ಟು ಪಂಪ್‌ಶೆಡ್‌ಗಳಲ್ಲಿ ರೈತರು ಮಲಗುವಂತಹ ಒಂದು ಪರಿಸ್ಥಿತಿ ಇವತ್ತಿನ ದಿವಸಗಳಲ್ಲಿ ಆಗುತ್ತಿದೆ, ದಯವಿಟ್ಟು ಅದನ್ನು ತಪ್ಪಿಸಿ. ನಾವು ನೋಡುತ್ತಿರುವಂತೆ ಸಣ್ಣ ಸಣ್ಣ ಪಟ್ಟಣಗಳಲ್ಲಿ ನಿರಂತರವಾಗಿ ವಿದ್ಯುತ್ ಪೂರೈಕೆಗಳು, ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಗಳು ಇಲ್ಲವೇ ಇಲ್ಲ. ಅದಕ್ಕೆ ಬೇಕಾದ ಸಿಬ್ಬಂದಿಯ ಕೊರತೆ ಇದೆ, ಬಹುಶ: ಅಲ್ಲಿ ಮೂರ್ನಾಲ್ಕು ಗ್ರಾಮಗಳಿಗೆ ಒಬ್ಬ ಲೈನ್‌ಮನ್ ಇರುವುದನ್ನು ನೋಡಿದ್ದೇವೆ; ಒಂದು ಗ್ರಾಮಕ್ಕೆ ಕನಿಷ್ಠಪಕ್ಷ ಒಬ್ಬರು ಅಥವಾ ಇಬ್ಬರು ಲೈನ್‌ಮನ್‌ಗಳು ಇರುವ ಅವಶ್ಯಕತೆ ಇದೆ. ಕಳೆದ ಸಾರಿ ಮೂರುವರೆ ಸಾವಿರ ಲೈನ್‌ಮೆನ್‌ಗಳನ್ನು ನೇಮಕ ಮಾಡುವುದರ ಮೂಲಕ ಇದಕ್ಕೆ ಸ್ವಲ್ಪ ಒತ್ತು ಕೊಡುವ ಪ್ರಯತ್ನಗಳನ್ನು ಮಾಡಿದ್ದಾರೆ, ಆದರೆ ಅದು ಪೂರ್ತಿಯಾಗಲಿಲ್ಲ. ನಾವು ಕೆಇಬಿ ಗೆ ಒತ್ತನ್ನು ಕೊಡಲೇ ಬೇಕಾಗುತ್ತದೆ, ಆ ಒತ್ತನ್ನು ಕೊಟ್ಟರೆ ಮಾತ್ರ ಎಲ್ಲಾ ಕೆಲಸಗಳು ಪೂರ್ಣವಾಗಿ ಸಫಲವಾಗುತ್ತವೆ. ಇಲ್ಲಿ ಸರ್ಕಾರದಲ್ಲಿ ಉದ್ಯೋಗದಲ್ಲಿರುವವರು ಬಾಕಿ ಇರುವ ನಾವೆಲ್ಲಾ, ಕರೆಂಟ್ ಇರುವುದರಿಂದ ಏರ್ ಕಂಡಿಷನಲ್ಲಿ ಇಪ್ಪತ್ನಾಲ್ಕು ಗಂಟೆ

ಬದುಕುತ್ತಿರುವುದು. ಆದರೆ ತಾವು ಕೂಡ ಆ ಹಳ್ಳಿಯ ಬದುಕನ್ನು ತಿಳಿದುಕೊಂಡು ಬಂದಿದ್ದೀರಿ, ಇದಕ್ಕೆ ಹೆಚ್ಚು ಒತ್ತನ್ನು ಕೊಡದಿದ್ದರೆ, ಸಾಮಾನ್ಯ ರೈತನ ಬದುಕು ಬರಡಾಗುತ್ತದೆ. ಇವತ್ತು ರಾಜ್ಯದಲ್ಲಿ ಒಂದುಕಡೆ ಅತಿವೃಷ್ಟಿ, ಅನಾವೃಷ್ಟಿಯಾಗುತ್ತಿದೆ ಎನ್ನುವ ಕೂಗನ್ನು ಕೇಳುತ್ತಿದ್ದೇವೆ. ಪಿರಿಯಾಪಟ್ಟಣದಲ್ಲಿ ಸದಸ್ಯರು ಅತಿವೃಷ್ಟಿಯಿಂದ ಕಳೆದ ನಾಲ್ಕೈದು ದಿವಸಗಳಿಂದ ನಿರಂತರವಾಗಿ ಬಿದ್ದ ಮಳೆಯಿಂದಾಗಿ ಅಲ್ಲಿ ಎಲ್ಲವೂ ಕೊಚ್ಚಿ ಹೋಗಿದೆ. ಅಲ್ಲಿ ಸುಮಾರು ಅರವತ್ತು ಲಕ್ಷದಷ್ಟು ಬೆಳೆ ನಷ್ಟವಾಗಿದೆ. ಆ ಬಗ್ಗೆ ಕಂದಾಯ ಅಧಿಕಾರಿಗಳು ವರದಿ ಕಳುಹಿಸಿಕೊಟ್ಟಾಗಲೂ ಕೂಡ, ಅಲ್ಲಿಗೆ ಒಂದು ಪೈಸೆ ಕೂಡ ಪರಿಹಾರ ಧನವನ್ನು ಕೊಡುವುದಕ್ಕೆ ಹೋಗಲಿಲ್ಲ ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಸದಾನಂದಗೌಡರೆ, ಬೇರೆ ಸದಸ್ಯರಿಗೆ ತಾವು ಈಲ್ಡ್ ಆಗಬೇಡಿ, ಎಲ್ಲರ ಎಮರ್ಜೆನ್ಸಿ ಏನಿದೆಯೆಂದು ಗೊತ್ತಿದೆ ಅವರು ಮಾತನಾಡುವಾಗ ಹೇಳುವುದಕ್ಕೆ ಅವಕಾಶವಿರುತ್ತದೆ. ಅವರು ಮಾತನಾಡುವುದಕ್ಕೆ ಎದ್ದಾಗ ತಾವೇಕೆ ಈಲ್ಡ್ ಆಗುತ್ತೀರಿ? ಸದಸ್ಯರು ಮತ್ತೊಬ್ಬ ಸದಸ್ಯರಿಗೆ ಆಗಿ ಮಾತನಾಡುವುದು ಇಲ್ಲಿ ನಡೆಯುವುದಿಲ್ಲ. ಅವರು ಮಾತನಾಡುವಾಗ ಸಮಯವನ್ನು ಹೆಚ್ಚಿಗೆ ಕೊಡುತ್ತೇನೆ, ಮಾನ್ಯ ಸದಾನಂದಗೌಡರೆ, ತಾವು ಯಾರಿಗೂ ಈಲ್ಡ್ ಆಗಬೇಡಿ.

ಶ್ರೀ.ಹೆಚ್.ಸಿ.ಬಸವರಾಜ್(ಪಿರಿಯಾಪಟ್ಟಣ): ನನ್ನ ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಮಳೆಯಿಂದಾಗಿ ಸುಮಾರು 50 ಕೆರೆಗಳು ಹೊಡೆದು ಹೋಗಿವೆ, ಬೆಳೆಗಳು ನಾಶವಾಗಿವೆ; ಅದೇ ರೀತಿ ಸುಮಾರು ಮನೆಗಳು ಇವತ್ತು ನೆಲಸಮವಾಗಿವೆ. ಆದರೂ ಸರ್ಕಾರ ಯಾವ ರೀತಿಯ ಪರಿಹಾರ ಕಾರ್ಯ ಕ್ರಮವನ್ನು ಇನ್ನು ತೆಗೆದುಕೊಂಡಿಲ್ಲ. ಕೂಡಲೇ ಸರ್ಕಾರ ಅದರ ಬಗ್ಗೆ ಗಮನವನ್ನು ಹರಿಸಬೇಕು. ಇವತ್ತು ಹೊಗೆಸೊಪ್ಪಿನ ಬೆಳೆಗಾರರು ಪಿರಿಯಾಪಟ್ಟಣ, ಮೈಸೂರು, ಹುಣಸೂರು, ಅರಕಲಗೂಡು ತಾಲ್ಲೂಕುಗಳಲ್ಲಿ ವಿಪರೀತ ಮಳೆಯಿಂದಾಗಿ ಬಹಳ ಚಿಂತಾಜನಕವಾದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇವತ್ತು ಅವರು ಬೆಳೆದ ಹೊಗೆಸೊಪ್ಪನ್ನು ಮಾರಾಟ ಮಾಡಲಾಗುತ್ತಿಲ್ಲ, ಈ ಬಗ್ಗೆ ಸರ್ಕಾರ ತುರ್ತು ಗಮನ ತೆಗೆದುಕೊಳ್ಳಬೇಕು ಹಾಗೂ ರೈತರ ಸಮಸ್ಯೆಗೆ ಸ್ಪಂಧಿಸಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ.ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇನ್ನೊಂದು ವಿಚಾರವನ್ನು ತರುವುದಕ್ಕೆ ಇಚ್ಛೆ ಪಡುತ್ತಿದ್ದೇನೆ, ಅದೇನೆಂದರೆ ರೈತಾಪಿ ಜನರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆಯ ಬಗ್ಗೆ ಸರ್ಕಾರ ಒಂದು ಸ್ಪಷ್ಟ ಧೋರಣೆಯನ್ನು ತಾಳಲೆ ಬೇಕು. ಇವತ್ತು ನಾವು ಹಾರ್ಸ್ ಪವರ್‌ಗೆ ಇಷ್ಟು ಬೆಲೆ ಎಂದು ನಿಗದಿ ಮಾಡಿದ ಮೇಲೆ ಮತ್ತೆ ಮೀಟರ್ ಅಳವಡಿಕೆ ಸಲ್ಲದೆನ್ನುವ ಭಾವನೆ ಜನರಲ್ಲಿದೆ. ಈ ಸರ್ಕಾರ ರೈತಾಪಿ ಜನರ ಭಾವನೆಗೆ ಸ್ಪಂದಿಸಬೇಕು, ಅಲ್ಲಿ ಮೀಟರ್ ಅಳವಡಿಕೆ ಬದಲು ಹಾರ್ಸ್ ಪವರ್‌ಗೆ ಏನು ಬೆಲೆಯನ್ನು ನಿಗದಿ ಮಾಡಿದ್ದೀರಿ ಆ ಬೆಲೆಯನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಈಗಾಗಲೇ ಬಹುಶ: ಕರ್ನಾಟಕ ರಾಜ್ಯದ ಎಲ್ಲಾ ಕಡೆಗಳಲ್ಲೂ ಸಹ ಮೀಟರ್‌ಗಳ ಕೊರತೆ ಇದೆ; ಇವತ್ತು ಯಾವುದೇ ಒಂದು ಮನೆಗೆ ವಿದ್ಯುದೀಕರಣವಾಗಬೇಕಾದರೆ, ಮೀಟರ್ ಇಲ್ಲದೆ ಅಲ್ಲಿಗೆ ಸಂಪರ್ಕ ಕೊಡುವುದಿಲ್ಲ.

ಬಹುಶ: ಬಾಕಿ ಎಲ್ಲಾ ಕೆಲಸವನ್ನು ಮಾಡಿ ವರ್ಷಗಟ್ಟಲೆ ಮೀಟರ್‌ಗಾಗಿ ಕಾದಿರುವಂತಹ ಜನರಿದ್ದಾರೆ. ತಕ್ಷಣ ರಾಜ್ಯದ ಎಲ್ಲಾ ಕಡೆಗೆ ಮೀಟರ್‌ಗಳ ಪೂರೈಕೆಯಾಗಬೇಕು. ಇವತ್ತು ಮೀಟರ್‌ಗಳ ಅಳವಡಿಕೆ ಇಲ್ಲದ ಕಾರಣ ಮನೆಗಳಿಗೆ ಕರೆಂಟ್ ಲಭ್ಯವಿಲ್ಲದ ಪರಿಸ್ಥಿತಿ ಇದೆ, ಅದಕ್ಕೂ ಕೂಡ ಒತ್ತುಕೊಡುವ ವ್ಯವಸ್ಥೆ ಆಗಬೇಕೆಂದು ಹೇಳುತ್ತೇನೆ. ಬಹುಶ: ಇಲ್ಲಿ ಮಾನ್ಯ ಸಾರಿಗೆ ಸಚಿವರಿಲ್ಲ, ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಕರ್ನಾಟಕ ಸಾರಿಗೆ ಸಂಸ್ಥೆ ಅಥವಾ ಸಾರಿಗೆ ವ್ಯವಸ್ಥೆ ಮತ್ತೊಂದು ಅವ್ಯವಸ್ಥೆಯ ಆಗರವಾಗಿದೆ ಕಳೆದ ಸದನದಲ್ಲಿ ಹಿಂದಿನ ಮಂತ್ರಿಗಳಾದ ಸನ್ಮಾನ್ಯ ಪಿ.ಜಿ.ಆರ್ ಸಿಂಧ್ಯಾ ಹಾಗೂ ಮಾನ್ಯ ಬಚ್ಚೇಗೌಡರು ಪ್ರಾಯಶ: ಈ ಸಾರಿಗೆ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಬೇಕೆಂದು. ಈ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ನಗರಮಟ್ಟದಲ್ಲಿ ಸ್ವಲ್ಪ ಸುಧಾರಣೆಯಾಗಿದೆ, ಆದರೆ ಗ್ರಾಮಾಂತರ ಮಟ್ಟದಲ್ಲಿ ಇನ್ನು ಕೂಡ ಭಾರಿ ಸುಧಾರಣೆಗಳಾಗಲಿಲ್ಲ. ಗ್ರಾಮಾಂತರ ಮಟ್ಟದಲ್ಲಿ ಏನಾಗಿದೆ ಎಂದರೆ, ಇವರೆಲ್ಲಾ ಇದ್ದಾಗ ಅಧಿಕಾರಿಗಳು ಸ್ವಲ್ಪಮಟ್ಟಿಗೆ ಹಿಡಿತದಲ್ಲಾದರು ಇದ್ದರು. ಈಗ ಡಿವಿಷನಲ್ ಕಂಟ್ರೋಲರ್, ಡಿಪೋ ಮ್ಯಾನೇಜರ್ ಅಲ್ಲಿ ಯಾರು ಲಭ್ಯವಿರುವುದಿಲ್ಲ, ಇವತ್ತು ಹೋದ ರೂಟ್‌ನಲ್ಲಿ ನಾಳೆ ಬಸ್ ಲಭ್ಯ ವಿರುವುದಿಲ್ಲ. ನಾಳೆ ಆ ರೂಟ್‌ಲ್ಲಿ ಇಲ್ಲ, ಬೇರೆ ರೂಟ್‌ಗೆ ಬಸ್ ಹಾಕುತ್ತಾರೆ. ಆ ಡಿವಿಷನಲ್ ಕಂಟ್ರೋಲರ್ ತನಗೆ ಖುಷಿ ಬಂದ ಕಡೆ ಹಾಕುತ್ತಾನೆ, ಶಾಲಾ ಮಕ್ಕಳಿಗೆ ಬೆಳಿಗ್ಗೆ ಬರುವುದಕ್ಕೆ ಬಸ್ಸಿನ ವ್ಯವಸ್ಥೆ ಇರುವುದಿಲ್ಲ. ಈ ಮಾತನ್ನು ನಾನು ಏತಕ್ಕೆ ಹೇಳಿದೆ ಎಂದರೆ, ಇದು ಭಾರಿ ಪ್ರಮುಖವಾದ ಅಂಶ. ಇವತ್ತು ನನ್ನ ಪುತ್ತೂರು ವಿಧಾನಸಭಾ ಕ್ಷೇತ್ರವನ್ನು ಉದಾಹರಣೆಗೆ ತೆಗೆದುಕೊಂಡರೆ, ಸುಮಾರು ಹತ್ತು ಸಾವಿರ ಪಾಸ್‌ಗಳನ್ನು ನಮ್ಮ ತಾಲ್ಲೂಕಿಗೆ ಬರುವುದಕ್ಕೆ ಬೇರೆ ಬೇರೆ ಗ್ರಾಮಾಂತರ ಪ್ರದೇಶದಲ್ಲಿರುವ ಮಕ್ಕಳಿಗೆ ಕೊಡುತ್ತೇವೆ. ಅಲ್ಲಿ ಬೇಕಾದ ವ್ಯವಸ್ಥೆ ಇಲ್ಲದೆ ಪಾಸ್ ಕೊಟ್ಟರೆ ಏನು ಸ್ವಾಮಿ? ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದರ ಬಗ್ಗೆ ಒತ್ತು ಕೊಟ್ಟು ಉಲ್ಲೇಖ ಮಾಡಲಿಲ್ಲ. ಅದನ್ನು ಉಲ್ಲೇಖ ಮಾಡಬೇಕಾಗಿತ್ತು. ನ್ಯಾಷನಲ್ ರೂಟ್‌ಗಳಲ್ಲಿ ಒಂದೆರಡು ಬಸ್‌ಗಳನ್ನು ಹಾಕುತ್ತಾರೆ, ಆದರೆ ಖಾಸಗಿ ಬಸ್‌ಗಳನ್ನು ಹಾಕುವುದಕ್ಕೆ ಪರವಾನಿಗೆಯನ್ನು ಕೊಡುತ್ತಿಲ್ಲ; ಇದರಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ. ಈ ಪರಿಸ್ಥಿತಿ ಇರುವಾಗ ಇವತ್ತು ಈ ಬಗ್ಗೆ ಒಂದು ಹೊಸ ಆಲೋಚನೆಯಾಗಬೇಕಾಗಿದೆ. ನ್ಯಾಷನಲ್ ರೂಟ್‌ಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಮಾತ್ರ ಹಾಕುವುದಿದ್ದರೆ ಬೇಕಾದಷ್ಟು ಬಸ್‌ಗಳನ್ನು ಹಾಕಬೇಕು, ಇಲ್ಲವೆಂದರೆ ಖಾಸಗಿಯವರಿಗೆ ಸಾಕಷ್ಟು ಪರವಾನಿಗೆಯನ್ನು ಕೊಡುವುದರ ಮೂಲಕ ಸಾಮಾನ್ಯ ಮನುಷ್ಯ ದಿನನಿತ್ಯ ತನ್ನ ಚಟುವಟಿಕೆಗೆ ಹೋಗಿ ಬರುವುದಕ್ಕಾಗುವಂತಾಗಬೇಕು. ಮಾನ್ಯ ಸಾರಿಗೆ ಮಂತ್ರಿಗಳಾದ ಸಗೀರ್ ಅಹಮ್ಮದ್‌ರವರೆ, ತಾವು ಈವರೆಗೆ ಈ ಸದನದಲ್ಲಿ ಇರಲಿಲ್ಲ, ನೀವು ಇರಬೇಕಾಗಿತ್ತು, ನಾನು ಆಗಿನಿಂದಲೇ ನಿಮ್ಮ ಸಾರಿಗೆ ಸಂಸ್ಥೆಯ ಸಮಸ್ಯೆಗಳ ಆಗರವಾಗಿರುವ ಬಗ್ಗೆ ಹೇಳುತ್ತಿದ್ದೇನೆ. ನೀವು ಬರೆದು ಕೊಂಡದ್ದು ಅದು ಕಾಗದದ ಮೇಲೆ ಮಾತ್ರವಿರುವುದಲ್ಲ, ಆದು ಶೀಘ್ರವಾಗಿ ಅನುಷ್ಠಾನಕ್ಕೆ ಬರಬೇಕು, ಏಕೆಂದರೆ ತಾವು ಹಿಂದೆ ಈ ಮಾತನ್ನು ಹೇಳಿದ್ದಿರಿ; ಅದನ್ನು ನೆನಪಿಸಿಕೊಂಡು ನಾನು ಹೇಳುತ್ತಿದ್ದೇನೆ. ನೀವು ಯಾವತ್ತು ರೈಲ್ ಬಿಡಬಾರದು, ಯಾವಾಗಲೂ ಬಸ್ಸನ್ನೆ ಬಿಡಬೇಕೆನ್ನುವುದು ನನ್ನ ಭಾವನೆಯಾಗಿದೆ. ಆ ರೀತಿಯಲ್ಲಿ ತಮ್ಮ ಕೆಲಸಕಾರ್ಯಗಳಾಗಬೇಕಾಗಿದೆ. ತಾವು ಆ ಕೆಲಸಗಳನ್ನು ಮಾಡುತ್ತೀರೆಂದು ನನಗೆ ವಿಶ್ವಾಸವಿದೆ. ಇವತ್ತು ಈ ಡಿಪೋ ಮ್ಯಾನೇಜರ್ ಹಾಗೂ ಡಿವಿಷನಲ್ ಕಂಟ್ರೋಲರ್‌ಗಳ ಭಾವನೆ ಎಷ್ಟರಮಟ್ಟಿಗಿದೆ ಎಂದರೆ, ಒಬ್ಬ ಡ್ರೈವರ್‌ಗೆ

ಇಂತಹ ರೂಟ್ ಹಾಕಬೇಕೆಂದರೆ ಕವರ್ ಕೊಡುವ ವ್ಯವಸ್ಥೆ ಯಾಗಬೇಕೆಂದು ನಾನು ಕೇಳಿದ್ದೇನೆ. ಇವತ್ತು ಕೂಡ, ಇಂತಹ ರೂಟ್‌ನಲ್ಲಿ ಇಂತಹ ಡ್ರೈವರ್ ಹಾಕಬೇಕೆಂದರೆ, ಕಂಡಕ್ಟರ್ ಹಾಕಬೇಕಾದರೆ, ಟ್ರಾನ್ಸಫರ್ ಆಗಬೇಕಾದರೆ, ರಜೆ ತೆಗೆದುಕೊಳ್ಳಬೇಕಾದರೆ ಅವರಿಗೆ ಕವರ್‌ಗಳು ಹೋಗಬೇಕೆನ್ನುವ ಭಾವನೆಯಿದೆ. ಇದನ್ನು ನಾನು ನೇರವಾಗಿ ಹೇಳುತ್ತಿದ್ದೇನೆ; ನಿಜವಾಗಿಯೂ ಕೂಡ ಇವತ್ತು ಅದು ನಡೆಯುತ್ತಿದೆ. ಒಬ್ಬ ಡಿವಿಷನಲ್ ಕಂಟ್ರೋಲರ್‌ನ ಅಹಂಕಾರ ಎಲ್ಲಿಯವರೆಗಿದೆ ಎಂದರೆ ನಾಡ ಹಬ್ಬಗಳನ್ನು ಡಿಪೋಗಳಲ್ಲಿ ಆಚರಣೆ ಮಾಡಬಾರದೆಂದು ಹೇಳಿದ್ದಾರೆ. ತಾವು ಕರ್ನಾಟಕ ರಾಜ್ಯದ ತಾಯಿಭುವನೇಶ್ವರಿ ಬಗ್ಗೆ, ನಾಡಿನ ಸಂಸ್ಕೃತಿ ಪರಂಪರೆ ಬಗ್ಗೆ ಬಹಳ ಮಾತನಾಡಿದ್ದೀರಿ, ಮಂಗಳೂರಿನ ಡಿಪೋನಲ್ಲಿ, ಕೊಡಗಿನಿಂದ ಹಿಡಿದು ಧರ್ಮಸ್ಥಳ, ಪುತ್ತೂರು, ಮಂಗಳೂರು ಇರಬಹುದು, ಅಲ್ಲಿ ನಾಡಹಬ್ಬವನ್ನು ಆಚರಣೆ ಮಾಡಬಾರದು, ಕೇವಲ ಬಸ್‌ಗೆ ಪೂಜೆ ಮಾಡಿ ಎಂದು ಹೇಳಿದ್ದಾರೆ. ಒಂದು ನಾಡಿನ ಕಲೆ, ಸಂಸ್ಕೃತಿ, ಪರಂಪರೆಗಳನ್ನು ಎತ್ತರದ ಸ್ಥಾನಕ್ಕೆ ತೆಗೆದುಕೊಂಡು ಹೋಗಬೇಕೆಂದು ಈ ಸದನದಲ್ಲಿ ಹೇಳುವ ನಾವೆಲ್ಲಾ, ಒಬ್ಬ ಅಧಿಕಾರಿ ತನ್ನ ಕುರ್ಚಿಯಲ್ಲಿ ಕುಳಿತುಕೊಂಡು ಈ ನಾಡಿನ ಸಂಸ್ಕೃತಿಯಾದ ನಾಡಹಬ್ಬವನ್ನು ಆಚರಣೆ ಮಾಡಬಾರದೆಂದು ಹೇಳುತ್ತಾರೆ. ನಾನು ನಿಮ್ಮ ಎಂಡಿಯವರನ್ನು ಭೇಟಿ ಮಾಡಿ ಮಾತನಾಡಿದೆ, ಅವರು ಸಾರ್ವಜನಿಕ ಸಮಾರಂಭಗಳನ್ನು ಮಾಡಬಾರದೆಂದು ಸರ್ಕ್ಯೂಲರ್ ಹೊರಡಿಸಿದ್ದೇವೆಂದು ಹೇಳಿದರು, ಅದನ್ನು ಒಪ್ಪಿಕೊಳ್ಳುತ್ತೇನೆ. ಖಂಡಿತವಾಗಿಯೂ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕ ಸಮಾರಂಭವನ್ನು ಮಾಡಲು ಬಿಡಬಾರದು. ರಾಜಕೀಯ ವ್ಯಕ್ತಿಗಳಿಗೆ ಜನ ಸೇರದಿದ್ದರೆ ಬಸ್ ನಿಲ್ದಾಣದ ಹತ್ತಿರ ಒಂದು ಮೈಕ್ ಇಟ್ಟರೆ ಬಸ್‌ಗೆ ಹೋದವರು ಅಲ್ಲಿಗೆ ಬರುತ್ತಾರೆ, ಆ ರೀತಿ ಮಾಡುವವರಿದ್ದಾರೆ, ಅದು ಸರಿ.

ಅಧ್ಯಕ್ಷರು: ಈವರೆಗೆ ತಾವು ನಲವತ್ತೈದು ನಿಮಿಷಗಳನ್ನು ತೆಗೆದುಕೊಂಡಿದ್ದೀರಿ ಮತ್ತೆ ಇನ್ನೂ ಎಷ್ಟು ಸಮಯ ಬೇಕಾಗುವುದು?

ಶ್ರೀ.ಡಿ.ವಿ.ಸದಾನಂದಗೌಡ: ಇನ್ನು 10 ನಿಮಿಷಗಳು ಬೇಕಾಗುವುದು. ಡಿಪೋಗಳಲ್ಲಿ ನಾಡಹಬ್ಬಗಳನ್ನು ಆಚರಣೆ ಮಾಡಬಾರದು; ಒಂದು ದಿವಸ ಅಲ್ಲಿರುವ ನೌಕರರರು, ಅಲ್ಲಿರುವ ಗ್ಯಾರೇಜ್‌ನವರು, ಅಲ್ಲಿರುವ ಡ್ರೈವರ್, ಕಂಡಕ್ಟರ್‌ಗಳನ್ನು ನಾಡಹಬ್ಬವನ್ನು ಆಚರಣೆ ಮಾಡುವುದಕ್ಕೆ, ಸಂಗೀತ ಇತ್ಯಾದಿ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬಾರದೆನ್ನುವ ವ್ಯವಸ್ಥೆ ಇದೆಯೇ? ತಾವು ದಯವಿಟ್ಟು ಇದನ್ನು ಗಂಭೀರವಾಗಿ ಆಲೋಚನೆ ಮಾಡಬೇಕು. ಕನಿಷ್ಟ ವರ್ಷದಲ್ಲಿ ಒಂದು ದಿವಸ, ನಮ್ಮ ನಾಡಿನ ಸಂಸ್ಕೃತಿ ಪರಂಪರೆಗಳನ್ನು ಉಳಿಸುವ ನಾಡಹಬ್ಬಗಳನ್ನು ಆಚರಣೆ ಮಾಡುವ ದಿವಸಗಳಲ್ಲಿ, ಅವರ ಡಿಪೋಗಳಲ್ಲಿ ಸಾರ್ವಜನಿಕರು ಬೇಡ, ಬಸ್‌ಗೆ ಹೋಗಬೇಕಾದರೆ ಸಾರ್ವಜನಿಕರು ಬಂದೇ ಬರುತ್ತಾರೆ, ಆದರು ಕೂಡ ಅದರಲ್ಲಿ ಬೇರೆಯವರು ಭಾಗವಹಿಸದೆ ಇದ್ದರೂ ನೋಡುವುದಕ್ಕೆ ಮಾತ್ರ ಇರಲಿ, ಇವರು ನಾಡಹಬ್ಬವನ್ನು ಆಚರಣೆ ಮಾಡುವಂತೆ ಒಂದು ಹೊಸ ಸರ್ಕ್ಯೂಲರ್ ಅನ್ನು ತಕ್ಷಣ ಇವತ್ತೆ ತಾವು ಮಾಡಿದರೆ ನನಗೆ ಸಂತೋಷವಾಗುತ್ತದೆ ಏಕೆಂದರೆ, ಈ ನಾಡಿನ ಮೇಲೆ ನಮಗೆ ಪ್ರೀತಿ ವಿಶ್ವಾಸ ಅಭಿಮಾನವಿದೆ ಎಂದು ನಾನು ಭಾವಿಸಿ ಕೊಳ್ಳುತ್ತೇನೆ; ಈ ಕೆಲಸಗಳನ್ನು ಮಾಡಬೇಕಾಗಿದೆ. ಈ ರೀತಿ ಕೆಎಸ್‌ಆರ್‌ಟಿಸಿಯಲ್ಲಿರುವ ಉನ್ನತಮಟ್ಟದಲ್ಲಿರುವ ಅಧಿಕಾರಿಗಳು ನಡೆದುಕೊಳ್ಳುತ್ತಿದ್ದಾರೆ. ಕೆಎಸ್‌ಆರ್‌ಟಿಸಿನಲ್ಲಿ ಒಬ್ಬ

ಕಂಡಕ್ಟರ್ ಹತ್ತಿರ 15 ರೂಪಾಯಿಗಳಿಗಿಂತ ಹೆಚ್ಚಿಗೆ ಇರಬಾರದು, ಅದನ್ನು ಈಗ ನೂರು ರೂಪಾಯಿಗಳಿಗೆ ಹೆಚ್ಚಿಸಿದ್ದೀರಿ. ಬೆಂಗಳೂರಿನಿಂದ ಬಾಂಬೆಗೆ ಬಸ್ ಹೊರಟು ಮಧ್ಯದಲ್ಲಿ ಬಸ್ ಕೆಟ್ಟುಹೋದರೆ, ಆಗ ಅವನು ಅವನಲ್ಲಿರುವ ಕಲೆಕ್ಷನ್ ಹಣವನ್ನು ತೆಗೆದುಕೊಂಡು ಖರ್ಚುಮಾಡುವಂತಿಲ್ಲ, ಎರಡು ದಿವಸಗಳ ಕಾಲ ಬಸ್ ಅಲ್ಲೇ ರಿಪೇರಿಯಾಗಬೇಕು, ತನ್ನಲ್ಲಿ 15 ರೂಪಾಯಿಗಳನ್ನಿಟ್ಟುಕೊಂಡು ಊಟ ಮಾಡುವುದಕ್ಕೆ ಸಾಧ್ಯವಿದೆಯೇ? ಹೀಗೇನಾದರು ಇದೆಯಾ ಈ ಕಾನೂನು? ಕದಿಯುವವನು ಹೇಗಾದರೂ ಮಾಡಿಕದ್ದೇ ಕದಿಯುತ್ತಾನೆ, ಹಣ ಸಂಗ್ರಹವಾದ ಮೇಲೆ ಅದನ್ನು ಸೀಟ್ ಅಡಿಯಲ್ಲಿ ಬೇಕಾದರೂ ಇಡುತ್ತಾನೆ.

11.10 ಎ.ಎಂ.

ಅದನ್ನು ಕಳ್ಳನಿಗೆ ಯಾರೂ ಕಲಿಸಬೇಕಾಗಿಲ್ಲ. ಆದರೆ ಈ ರೀತಿಯಲ್ಲಿ ಕಳ್ಳತನವನ್ನು ಕಲಿಸುವಂಥ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಊಟಕ್ಕೆ ಇಲ್ಲದಿದ್ದರೆ ಅವರು ಕದಿಯಲೇಬೇಕಾಗುತ್ತದೆ. 15 ರೂಪಾಯಿಗಳನ್ನು ಇಟ್ಟು ಕೊಂಡಿದ್ದು ಅಲ್ಲಿ ಏನಾದರೂ ಸಿಗದಿದ್ದರೆ ಕೊನೆಗೆ ಬಸ್ಸಿನ ಒಂದು ಸೀಟನ್ನಾದರೂ ಮಾರಿ ಅವರು ಊಟ ಮಾಡಬೇಕಾಗುತ್ತದೆ. ಮಾನ್ಯ ಸಿಂಧ್ಯರವರು ಮತ್ತು ಮಾನ್ಯ ಬಚ್ಚೇಗೌಡರು, ಮಾಡಿದಂಥ ಪ್ರಯತ್ನದಿಂದಾಗಿ ಇವತ್ತು ಇಷ್ಟಾದರೂ ಮೇಲಕ್ಕೆ ಬಂದಿದೆ.

ನಾನು ಅದನ್ನು ಶ್ಲಾಘನೆ ಮಾಡಬೇಕಾಗಿದೆ. ಮಾನ್ಯ ಸಗೀರ್ ಅಹಮದ್‌ರವರು ಅದನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ಹೇಳುತ್ತಿದ್ದೇನೆ. ಅವರ ಮೇಲೆ ಒತ್ತಡ ಹಾಕಿದ ಕಾರಣ ಅವರು ಅದನ್ನು ಎತ್ತಿದ್ದಾರೆ. ಅವರ ಗಮನಕ್ಕೆ ಬಂದ ತಕ್ಷಣ ಅದಕ್ಕೆ ಪ್ರಕ್ರಿಯೆ ಪ್ರಾರಂಭ ಮಾಡಿದ್ದಾರೆ. ಆ ರೀತಿಯ ವ್ಯವಸ್ಥೆಗಳಾಗಬೇಕು. ತಾವು ಡಿವಿಷನಲ್ ಕಂಟ್ರೋಲರ್‌ಗಳು ಮತ್ತು ಡಿಪೋ ಮೇನೇಜರ್‌ಗಳನ್ನು ನೋಡಿಕೊಳ್ಳಬೇಕು. ಕೇವಲ ಸಣ್ಣಪುಟ್ಟ ಕೆಲಸಗಳಿಂದ ಇದು ಆಗಬಾರದು ಎನ್ನುವ ವಿನಂತಿಯನ್ನು ನಾನು ಮಾಡುತ್ತೇನೆ. ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲೆಲ್ಲಿ ನ್ಯಾಷನಲ್ ರೂಟ್‌ಗಳಿವೆ ಅಲ್ಲಿ ಬೇರೆ ಬಸ್ಸುಗಳನ್ನು ಓಡಿಸಲು ಆಗುವುದಿಲ್ಲ. ಆ ರೂಟ್‌ಗಳಲ್ಲಿ ನಿಮ್ಮದು ಎರಡೇ ಬಸ್ಸುಗಳಿಂದ ಜನಗಳಿಗೆ ಬರಲು ಆಗುವುದಿಲ್ಲ. ಇದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ನ್ಯಾಷನಲ್ ರೂಟ್‌ಗಳಲ್ಲದ ಕಡೆ ಪ್ರೈವೇಟ್ ಬಸ್‌ಗಳನ್ನು ಓಡಾಟ ಮಾಡಿಸಿ. ಇಲ್ಲದಿದ್ದರೆ, ಕನಿಷ್ಟ ಸಾರಿಗೆ ನೀತಿಯನ್ನು ಬದಲಾವಣೆ ಮಾಡಿ, ಪ್ರೈವೆಟೈಸೇಷನ್‌ಗೆ ಅವಕಾಶವನ್ನು ಕೊಡುವುದರ ಮುಖಾಂತರ ಅನುಕೂಲ ಮಾಡಿಕೊಡಿ. ಪ್ರೈವೇಟ್ ಬಸ್ಸುಗಳನ್ನು ಹಾಕಿದರೆ ಕೆ.ಎಸ್.ಆರ್.ಟಿ.ಸಿ.ಗೆ ದುಡ್ಡು ಆಗುವುದಿಲ್ಲ ಎಂದು ಹೇಳುತ್ತೀರಿ. ಸರಿಯಾಗಿ ಕೆಲಸ ಮಾಡಿದರೆ ಯಾರಿಗೆ, ಏಕೆ ದುಡ್ಡ ಆಗುವುಲ್ಲ? ಪ್ರೈವೇಟ್‌ನವರಿಗೆ ಹೇಗೆ ದುಡ್ಡು ಆಗುತ್ತದೆ; ಸಾಮಾನ್ಯ ಜನರಿಗೆ ಸೌಲಭ್ಯ ಕೊಡಬೇಕು ಎಂದಾದರೆ ಈ ಕೆಲಸಗಳನ್ನು ಮಾಡಬೇಕು. ಎಲ್ಲದಕ್ಕೂ ಮುಖ್ಯವಾಗಿ ಜನಸಂಖ್ಯೆಯನ್ನು ಹತೋಟಿಯಲ್ಲಿ ತರತಕ್ಕಂಥಾದ್ದು ಆಗಬೇಕು. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಉಲ್ಲೇಖ ಮಾಡಿಲ್ಲ. ಈಗ ನಾನು ಕೇಳಿದುದೆಲ್ಲಾ ಆಗ ಬೇಕಾದುದು ಹೆಚ್ಚು ಜನಸಂಖ್ಯೆಯಾದಾಗ ಮಾತ್ರ ಜಾಸ್ತಿ ಬಸ್ಸು, ಜಾಸ್ತಿ ಆಸ್ಪತ್ರೆ, ಜಾಸ್ತಿ ಸ್ಕೂಲು ಅಥವಾ ಮತ್ತೊಂದು ಯಾವಾಗ ಜಾಸ್ತಿ ಬೇಕಾಗುತ್ತದೆ ಎಂದರೆ ಜನಸಂಖ್ಯೆ ಜಾಸ್ತಿಯಾದಾಗ. ಜನಸಂಖ್ಯೆಯ ನಿಯಂತ್ರಣಕ್ಕೆ ನಿಮ್ಮ ಸರ್ಕಾರದ ನಿಲುವೇನು? ಜನಸಂಖ್ಯೆಯನ್ನು ನಿಯಂತ್ರಣ ಮಾಡಿದರೆ ಬಹುಶ: ಎಲ್ಲಾ ಸಮಸ್ಯೆಗಳಿಗೂ ಒಂದು ಹಂತದಲ್ಲಿ ನಾವು ಪರಿಹಾರವನ್ನು ಮಾಡಲು ಆಗುತ್ತದೆ. ಇದನ್ನು ಎಲ್ಲಿಯೂ ಉಲ್ಲೇಖ ಮಾಡಿಲ್ಲ. ಇದನ್ನು

ಉಲ್ಲೇಖ ಮಾಡಬೇಕಾಗಿತ್ತು. ಈ ದೇಶ ಜಗತ್ತಿನ ಅತ್ಯಂತ ದೊಡ್ಡ ದೇಶ. ಇಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆ ಇದೆ, ಅತ್ಯಂತ ಹೆಚ್ಚು ಮಾನವ ಸಂಪನ್ಮೂಲ ಇದೆ. ಮಾನವ ಸಂಪನ್ಮೂಲವನ್ನು ಕ್ರೋಢೀಕರಣ ಮಾಡುವುದರ ಜೊತೆಗೆ ಜನಸಂಖ್ಯಾ ಸ್ಫೋಟವನ್ನು ಕೂಡ ನಿಯಂತ್ರಣ ಮಾಡುವಂಥ ವ್ಯವಸ್ಥೆಯನ್ನು ಮಾಡದಿದ್ದರೆ ನಾವು ತುಂಬಾ ಹಿಂದೆ ಹೋಗುವಂಥ ಎಲ್ಲಾ ಸಾಧ್ಯತೆಗಳಿವೆ. ಆದಕಾರಣ ಇದರ ಬಗ್ಗೆ ಸ್ಪಷ್ಟವಾದ ರೀತಿನೀತಿಗಳನ್ನು ನಿರೂಪಣೆ ಮಾಡಬೇಕು. ಹಿರಿಯರಾದ ಮಾನ್ಯ ಕಾಗೋಡು ತಿಮ್ಮಪ್ಪನವರು, ಎಷ್ಟು ಪರ್ಸೆಂಟ್ ಜನಸಂಖ್ಯೆಯನ್ನು ಕಡಿಮೆ ಮಾಡಬಹುದು ಎನ್ನುವುದರ ಬಗ್ಗೆ ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಬೇಕು. ಆದರಿಂದಾಗಿ ನಾವೆಲ್ಲಾ ಆ ದಿಸೆಯಲ್ಲಿ ಹೋಗಬೇಕು.

ಇನ್ನು, ಒಣ ಬೇಸಾಯಕ್ಕೆ ಸರ್ಕಾರ ಹೆಚ್ಚಿನ ಒತ್ತು ಕೊಡಬೇಕು. ಕರ್ನಾಟಕ ರಾಜ್ಯದಲ್ಲಿರುವಂಥ ಎಲ್ಲ ರೈತಾಪಿ ವರ್ಗದ ಜನರಲ್ಲಿ ಶೇ.70 ರಷ್ಟು ಆ ವರ್ಗದ ಜನ ಒಣ ಬೇಸಾಯವನ್ನು ಮಾಡಿಕೊಂಡಿರುವಂಥಾದ್ದು ಆಗಿದೆ. ಹಿಂದೆ ಅದಕ್ಕೆ ತಾಲ್ಲೂಕು ಮಟ್ಟದಲ್ಲಿ ಒಂದು ಕಮಿಟಿ ಇತ್ತು. ಅದಕ್ಕೆ ಉಪ ವಿಭಾಗಾಧಿಕಾರಿಗಳು ಮುಖ್ಯಸ್ಥರಾಗಿದ್ದರು. ಆದರೆ ಕಾಲಕ್ರಮೇಣ ಅದಕ್ಕೆ ಯಾರೂ ದುಡ್ಡು ಕೊಡದೇ ಆ ವ್ಯವಸ್ಥೆ ಕುಸಿದು ಬಿತ್ತು. ಇವತ್ತು ಬಣ ಬೇಸಾಯಗಾರಬಣಗಿ ಹೋಗುತ್ತಿದ್ದಾನೆ. ಅದಕಾರಣ ಅದಕ್ಕೆ ಹೆಚ್ಚಿನ ಒತ್ತು ಕೊಡುವಂಥ ಕೆಲಸವಾಗಬೇಕು ಎನ್ನುವಂಥ ವಿಚಾರಗಳನ್ನು ಉಲ್ಲೇಖ ಮಾಡುತ್ತೇನೆ. ಈ ರೀತಿ ಆದ್ಯತಾ ವಲಯದ ಹತ್ತು ಹಲವು ಅಂಶಗಳ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ.

ನಗರ ಪ್ರದೇಶಗಳಿಗೆ ಹೆಚ್ಚಿನ ಒತ್ತು ಕೊಡಬೇಕು ಎಂದು ಹೇಳಿದರು. ನಿನ್ನೆ ಮಾನ್ಯ ಸೋಮಣ್ಣನವರು ಬೆಂಗಳೂರಿನ ಬಗ್ಗೆ ಭಾರೀ ಮಾತನಾಡಿದರು; ಬಹಳ ಸಂತೋಷ. ಆದರೆ ಒಂದು ಕಡೆ ಒತ್ತು ಕೊಟ್ಟು, ಇನ್ನೊಬ್ಬರನ್ನು ದಯವಿಟ್ಟು ಮರೆತುಬಿಡಬೇಡಿ. ಕೇವಲ 50 ಲಕ್ಷ ಜನಸಂಖ್ಯೆ ಇರುವಂಥ ಬೆಂಗಳೂರಿಗೆ ತಮ್ಮೆಲ್ಲ ಗಮನವನ್ನು ಕ್ರೋಢೀಕರಣ ಮಾಡುವುದರ ಮೂಲಕ, ಬಾಕಿ ಉಳಿದ ಸುಮಾರು ನಾಲ್ಕೂವರೆ ಕೋಟಿ ಜನರನ್ನು ಮರೆಯುವಂಥ ಕೆಲಸ ಆಗಬಾರದು. ಎಲ್ಲರಿಗೂ ಸಮಪಾಲು, ಸಮ ರೀತಿಯಲ್ಲಿ ವ್ಯವಸ್ಥೆಯಾಗುವಂತಾಗಬೇಕು ಎನ್ನುವ ವಿಚಾರವನ್ನು ನಾನು ಹೇಳುತ್ತೇನೆ.

ಇನ್ನು ಕೊನೆಯದಾಗಿ ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಖರ್ಚಿಯನ್ನು ಉಳಿಸಿಕೊಳ್ಳುವಂಥ ಸಂದರ್ಭಗಳು ಅದಕ್ಕೆ ಬೇಕಾದಂಥ ರಾಜನೀತಿಯನ್ನು ಅಳವಡಿಸಿಕೊಳ್ಳಬಾರದು. ಈ ದೇಶದ ದೊಡ್ಡ ದುರಂತವೆಂದರೆ, ಈ ದೇಶದಲ್ಲಿ ಖುರ್ಚಿ ಖಾಲಿಯಾಗುತ್ತದೆ ಎನ್ನುವಾಗ ಹೊಸದೊಂದು ರಾಜನೀತಿ ಸೃಷ್ಟಿಯಾಗುತ್ತದೆ. ಅವರಿಗೆ ಬೇಕಾದ ರಾಜನೀತಿ ಆಗುತ್ತದೆ. ಇಡೀ ರಾಜ್ಯದ ಜನರ ಮನಸ್ಸಿನ ಭಾವನೆಗೆ ಪ್ರತಿರೋಧವಾಗಿ, ಅವರ ಸ್ವಂತ ಹಿತಾಸಕ್ತಿಗೆ ಬೇಕಾದಂಥ ರೀತಿ ನೀತಿಗಳನ್ನು ಮಾಡಿಕೊಳ್ಳುವಂಥ ಒಂದು ಹೊಸ ವ್ಯವಸ್ಥೆ ನಮ್ಮ ದೇಶದ ರಾಜಕಾರಣದಲ್ಲಿ ರಕ್ತಗತವಾಗಿಬಿಟ್ಟಿದೆ. ಖುರ್ಚಿ ಉಳಿಯಬೇಕು ಎಂದರೆ ಏನು ಬೇಕಾದರೂ ಮಾಡುವುದು ಆಗಿದೆ. ಈಗ ಆಗುತ್ತಿದೆಯಲ್ಲ ಹಾಗೆ, 43ಕ್ಕೆ ಮತ್ತೆ 7 ಅನ್ನು ಸೇರಿಸುವುದು, ನಂತರ ಮತ್ತೆಷ್ಟೋ ಗೊತ್ತಿಲ್ಲ, ಇದು ಆಗಬಾರದು. ಖುರ್ಚಿಗೋಸ್ಕರ ಯಾವುದೇ ಒಂದು ರಾಜನೀತಿಯನ್ನು ಬಲಿ ಕೊಡುವಂಥ ವ್ಯವಸ್ಥೆ ಆಗಬಾರದು. ರಾಗದ್ವೇಷಗಳಿಂದ ಕೂಡಿದಂಥ ರಾಜಕಾರಣಕ್ಕೆ ನಾವು

ಇತಿಶ್ರೀ ಹಾಕಬೇಕು. ಇದು ಆಗಬೇಕಾದರೆ, ಈಗಿನಿಂದಲೇ ಆಡಳಿತವನ್ನು ಬಿಗಿ ಹಿಡಿಯಬೇಕು; ಪ್ರಾರಂಭದಿಂದಲೇ ಇದನ್ನು ಮಾಡಬೇಕು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಲಿಕ್ಕಿಲ್ಲ. ಈ ನಾಲ್ಕು ದಿವಸದಲ್ಲೇ, ಸಣ್ಣದು ಇರುವಾಗಲೇ, ಈಗಿನ ಸಚಿವ ಸಂಪುಟ ವ್ಯವಸ್ಥೆಯಲ್ಲಿ ಸ್ವಲ್ಪ ಬಿಗಿಯಾದರೆ, ಮುಂದೆ ಆ ಬಿಗಿ ಮುಂದುವರೆಯುತ್ತದೆ. ನಾವು ಚೆನ್ನಾಗಿ ಕೆಲಸ ಮಾಡಬೇಕು ಎಂದಾದರೆ ಒಂದು ರಾಜಕೀಯ ಇಚ್ಛಾಶಕ್ತಿ ನಮ್ಮ ಮನಸ್ಸಿನಲ್ಲಿ ಇರಬೇಕು. ಏನೇ ಆಗಲೀ ಇಂಥ ಕೆಲಸಗಳು ಆಗಲೇಬೇಕು, ಈ ಸರ್ಕಾರಕ್ಕೆ ಒಳ್ಳೆಯದಾಗುವಂಥ ಕೆಲಸಗಳನ್ನು ನಾವು ಮಾಡುತ್ತೇವೆ ಎಂದು ಹೇಳುವಂಥ ಪೊಲಿಟಿಕಲ್ ವಿಲ್ ಅನ್ನು ಜಾಜಕೀಯ ಇಚ್ಛಾಶಕ್ತಿಯನ್ನು ಬೆಳೆಸಿ ಕೊಳ್ಳುವಂಥ ಕೆಲಸಗಳನ್ನು ಮಾಡಬೇಕು. ರಾಜಕೀಯ ಚಂಚಲತೆಯಿಂದ ದೂರವಿದ್ದು, ದೂರಗಾಮಿ ಮತ್ತು ಪರಿಪಕ್ವವಾದಂಥ ಇಚ್ಛಾಶಕ್ತಿ ನಿಮ್ಮಲ್ಲಿ ಬರಬೇಕು. ಸ್ವಜನ ಪಕ್ಷಪಾತ, ಜನ ವಿರೋಧಿ ಕೆಲಸಗಳಿಗೆ ಪೂರಕವಾಗುವಂಥ ವ್ಯವಸ್ಥೆಯನ್ನು ಮಾಡಬಾರದು ಎಂದು ಹೇಳಿ, ಒಟ್ಟಾರೆ ಒಂದು ಸ್ವಾವಲಂಬಿ, ಸ್ವಾಭಿಮಾನಿ, ಸಮೃದ್ಧ ಕರ್ನಾಟಕಕ್ಕಾಗಿ ನಾವೆಲ್ಲಾ ಒಟ್ಟಾಗಿ ದುಡಿಯೋಣ ಎಂದು ಹೇಳುತ್ತೇನೆ. ಈ ಮಾತುಗಳು ಕೇವಲ ಮಾನ್ಯ ಮುಖ್ಯಮಂತ್ರಿಯವರು ಮತ್ತು ಸಚಿವ ಸಂಪುಟದ ಸಚಿವರಿಗೆ ಮಾತ್ರವಲ್ಲ, ಈ ಸದನದಲ್ಲಿ ಇರುವಂಥ ಎಲ್ಲ ಜನ ಪ್ರತಿನಿಧಿಗಳಿಗೆ ಅನ್ವಯವಾಗುತ್ತದೆ ಎನ್ನುವ ಭಾವನೆ ನನ್ನದು. ಈ ದಿಸೆಯಲ್ಲಿ ನಾವೆಲ್ಲಾ ಒಗ್ಗಟ್ಟಾಗಿ ಕೆಲಸ ಮಾಡೋಣ. ಯಾವುದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಮಾಡಿಲ್ಲ, ಅವುಗಳ ಕಡೆ ಗಮನ ಕೊಡುವಂಥ ಪ್ರಯತ್ನಗಳನ್ನು ಸರ್ಕಾರ ಮಾಡಬೇಕು. ನಾವು ಏನೆಲ್ಲಾ ಕೇಳಿದ್ದೇವೆ, ಅದಕ್ಕೆಲ್ಲಾ ಉತ್ತರವನ್ನು ಕೊಡುತ್ತಾರೆ ಎನ್ನುವ ಭಾವನೆ, ಭರವಸೆ ನಮಗಿದೆ. ನಾವೆಲ್ಲಾ ಸೇರಿ ಒಳ್ಳೆಯ ಸಮಗ್ರ ಕರ್ನಾಟಕವನ್ನು ಕಟ್ಟೋಣ. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಕರ್ನಾಟಕಗಳು ನಮಗೆ ಬೇಡ. ಇಡೀ ಕರ್ನಾಟಕ ಒಂದೇ ಇರಲಿ ಎನ್ನುವ ಮಾತನ್ನು ಹೇಳುತ್ತಾ, ತಮ್ಮಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳಲು ನಾನು ಇಚ್ಛಿಪಡುತ್ತಿದ್ದೇನೆ. ಕೇಂದ್ರದಲ್ಲಿ ಅತ್ಯಂತ ಒಳ್ಳೆಯ ಸಂಪ್ರದಾಯವನ್ನು ಹಾಕಿದ್ದಾರೆ. ಕೇಂದ್ರ ಸರ್ಕಾರ ಲೋಕಸಭೆಯ ಡೆಪ್ಯುಟಿ ಸ್ಪೀಕರ್ ಸ್ಥಾನವನ್ನು ವಿರೋಧ ಪಕ್ಷಗಳಿಗೆ ಕೊಡುವುದರ ಮುಖಾಂತರ, ಈ ದೇಶದಲ್ಲಿ ಸಮಗ್ರ ಚಿಂತನೆ ಮಾಡುವಂಥ ಒಂದು ರಾಜಕೀಯ ಬದಲಾಣೆಯನ್ನು ತರುವಂಥ ವ್ಯವಸ್ಥೆಯನ್ನು ಮಾಡಿದೆ. ನನಗೆ ವಿಶ್ವಾಸವಿದೆ, ಇವತ್ತು ಹೊಸ ಸರ್ಕಾರ ಬಂದಿದೆ. ಕೇಂದ್ರದಲ್ಲಿ ತಮ್ಮ ಪಕ್ಷದವರೇ ಡೆಪ್ಯುಟಿ ಸ್ಪೀಕರ್ ಆಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಈ ರೀತಿಯ ಪರಿವರ್ತನೆಗೆ ಒಂದು ಅಡಿಪಾಯ ಹಾಕುವಂಥ ಕೆಲಸವನ್ನು ತಾವು ಮಾಡಿ. ಯಾರೂ ಕೈ ಇಟ್ಟು ಕುಳಿತುಕೊಳ್ಳುವುದು ಬೇಡ, ಎಲ್ಲರೂ ಕೈ ತೆಗೆದು ಒಟ್ಟಾರೆ ಕುಳಿತು ಕೊಳ್ಳುವಂಥ ಕೆಲಸವನ್ನು ಈ ಸದನದಲ್ಲಿ ಮಾಡೋಣ. ಒಗ್ಗಟ್ಟಾಗಿ ಶ್ರಮಿಸುವಂಥ ವ್ಯವಸ್ಥೆಯಾಗಬೇಕು ಎನ್ನುವುದೇನಾದರೂ ಇದ್ದರೆ, ಅಧಿಕಾರದಲ್ಲಿ ಅಲ್ಲಲ್ಲಿ ಹಂಚಿಕೆಗಳಾಗುವಂಥಾಗಬೇಕು. ಯಾವ ರೀತಿ ಅಧಿಕಾರ ವಿಕೇಂದ್ರೀಕರಣವಾಗುತ್ತದೆ, ಯಾವ ರೀತಿ ಕೇಂದ್ರದಲ್ಲಿ ನಮಗೆ ಒಂದು ಮಾರ್ಗದರ್ಶಿ ಸೂತ್ರವನ್ನು ಹಾಕಿಕೊಟ್ಟಿದ್ದಾರೆ, ಆ ಮಾರ್ಗದರ್ಶಿ ಸೂತ್ರವನ್ನು ಕರ್ನಾಟಕದಲ್ಲಿ ಅಳವಡಿಸುವ ಮುಖಾಂತರ, ಈ ದೇಶದ ಎಲ್ಲಾ ರಾಜ್ಯಗಳ ಪೈಕಿ ಕರ್ನಾಟಕ ರಾಜ್ಯ ರಾಜಕೀಯ ವಿಚಾರದಲ್ಲಿ ಮುಂಚೂಣಿಯಲ್ಲಿದೆ ಎನ್ನುವುದನ್ನು ತೋರಿಸಿ ಕೊಡುವಂಥ ಹೊಸ ಪ್ರಯತ್ನವನ್ನು ಮಾಡಬೇಕು ಎನ್ನುವ ವಿನಂತಿಯನ್ನು ವಿರೋಧಪಕ್ಷದ ಎಲ್ಲ ಮಾನ್ಯ ಸದಸ್ಯರ ಪರವಾಗಿ ನಾನು ಮಾನ್ಯ ಮುಖ್ಯಮಂತ್ರಿಯವರ ಮತ್ತು

ಅವರ ಸಹೋದ್ಯೋಗಿ ಸಚಿವರಲ್ಲಿ ಮಾಡಿಕೊಳ್ಳುತ್ತೇನೆ. ಈ ನಾಡಿನ ಎಲ್ಲಾ ಜನರಿಗೆ ಶುಭವಾಗಲಿ, ಮುಂದಿನ ಅಧಿಕಾರದ ಅವಧಿಯಲ್ಲಿ ತಮಗೂ ಶುಭವಾಗಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿ, ಶುಭ ಹಾರೈಸಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ, ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ವಿಧಾನ ಮಂಡಲವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಮಾಡಿದ ಮೊದಲನೇ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡತಕ್ಕಂಥ ಅವಕಾಶವನ್ನು ಕೊಟ್ಟಿರುವುದಕ್ಕೆ ತಮಗೆ ನಾನು ಚಿರಋಣಿಯಾಗಿದ್ದೇನೆ. ಈ ಸಭೆಯಲ್ಲಿ ಹೊಸ ಸದಸ್ಯರಿಗೆ ಹೆಚ್ಚು ಅವಕಾಶಗಳನ್ನು ಕೊಡತಕ್ಕಂಥ ಸಂಪ್ರದಾಯ ನಮ್ಮಲ್ಲಿ ಪ್ರಾರಂಭವಾಗಬೇಕು. ಜೊತೆಗೆ, ಹೊಸ ಸದಸ್ಯರಲ್ಲೂ ಸಹ, ನಮಗೆ ಸಮಯಾವಕಾಶ ಇಲ್ಲ, ಕೇವಲ ಮುಂದುಗಡೆ ಕುಳಿತುಕೊಂಡಿರತಕ್ಕಂಥ ಮುಖಂಡರುಗಳೇ ಎಲ್ಲವನ್ನೂ ಮಾತನಾಡುತ್ತಾರೆ ಎನ್ನುವ ಭಾವನೆ ಬರಬಾರದು. ಆದ್ದರಿಂದ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೇ, ನನ್ನ ಪಕ್ಷದ ಪರವಾಗಿ ರಾಜ್ಯದ ಜನತೆಯ ಹಿತದೃಷ್ಟಿಯಿಂದ, ರಾಜ್ಯದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ, ಮುಂದಿನ ಐದು ವರ್ಷಗಳಲ್ಲಿ ಸರ್ಕಾರ ಮಾಡಬೇಕಾಗಿರತಕ್ಕಂಥ ಕೆಲಸಗಳ ಬಗ್ಗೆ ತಮ್ಮ ಮೂಲಕ ಮಾನ್ಯ ಸಭಾನಾಯಕರಿಗೆ, ಮಂತ್ರಿ ಮಂಡಲದ ಸದಸ್ಯರಿಗೆ, ಈ ಸದನಕ್ಕೆ ಮತ್ತು ಈ ರಾಜ್ಯದ ಜನತೆಯ ಗಮನಕ್ಕೆ ತರಬೇಕು ಎನ್ನುವ ದೃಷ್ಟಿಯಿಂದ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕು ಎಂದು ಬಯಸುತ್ತೇನೆ. ಮೊದಲನೆಯದಾಗಿ, 1999ರ ಸೆಪ್ಟೆಂಬರ್ 5 ಮತ್ತು 11ನೇ ತಾರೀಖುಗಳಂದು ನಡೆದಂಥ ಚುನಾವಣೆಯಲ್ಲಿ ರಾಜ್ಯದ ಮತದಾರರು ಕೊಟ್ಟಿರತಕ್ಕಂಥ ತೀರ್ಮಾನಕ್ಕೆ ನಾವು ಮತ್ತು ನಮ್ಮ ಪಕ್ಷದ ಎಲ್ಲ ಸದಸ್ಯರುಗಳು ತಲೆಬಾಗುತ್ತೇವೆ. ಕಳೆದ ವಿಧಾನಸಭೆಯ ಕೊನೆಯ ಅಧಿವೇಶದ ಸಂದರ್ಭದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧಪಕ್ಷದ ನಾಯಕರಾಗಿದ್ದರು. ಆ ಸಂದರ್ಭದಲ್ಲಿ ಮಾನ್ಯ ಜೆ.ಹೆಚ್. ಪಟೇಲರ ನೇತೃತ್ವದಲ್ಲಿದ್ದಂಥ ಸರ್ಕಾರ ಮತ್ತು ಆ ಹಿಂದೆ ಶ್ರೀಮಾನ್ ಹೆಚ್.ಡಿ. ದೇವೇಗೌಡರ ನೇತೃತ್ವದಲ್ಲಿ ಇದ್ದಂಥ ನಾಲ್ಕೂವರೆ ವರ್ಷಗಳ ಸರ್ಕಾರ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರ ಬಗ್ಗೆ ನಾವೆಲ್ಲರೂ ಮಾತನಾಡಿರತಕ್ಕಂಥ ಚರ್ಚೆಯೇ ನಾವು ಮಾಡಿರತಕ್ಕಂಥಾದ್ದಕ್ಕೆ ಸಾಕ್ಷಿಯಾಗಿದೆ. ಆದ್ದರಿಂದ, ನಮ್ಮ ಸರ್ಕಾರ ಅದನ್ನು ಮಾಡಿತ್ತು, ಇದನ್ನು ಮಾಡಿತ್ತು ಎಂದು ಹೇಳಿಕೊಳ್ಳತಕ್ಕಂಥ ಅವಶ್ಯಕತೆ ನನಗೆ ಇಲ್ಲ. ಸರ್ಕಾರ ಅನೇಕ ಉತ್ತಮವಾದ ಕೆಲಸಗಳನ್ನು ಮಾಡಿದ್ದರೂ ಸಹ, ನಾವೆಲ್ಲಾ ನಿರ್ವಿಕಾರವಾದ ದೃಷ್ಟಿಯಿಂದ, ನಿರ್ವಂಚನೆಯ ದೃಷ್ಟಿಯಿಂದ, ಸಮಗ್ರ ಕರ್ನಾಟಕ ಅಭಿವೃದ್ಧಿಯ ದೃಷ್ಟಿಯಿಂದ ಅನೇಕ ಉತ್ತಮವಾಗಿರತಕ್ಕಂಥ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರೂ, ಬಹುಶಃ ಇಡೀ ಸದನವನ್ನು ಸಂಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಸಾಮಾಜಿಕ ಹಿನ್ನಲೆಯಲ್ಲಿ ಬಂದಿರತಕ್ಕಂಥ ಮಾನ್ಯ ಜೆ.ಹೆಚ್.ಪಟೇಲ್‌ರವರು ಈ ರಾಜ್ಯದ, ರಾಷ್ಟ್ರದ ಮುತ್ಸದ್ದಿ ರಾಜಕಾರಣಿಗಳಲ್ಲಿ ಒಬ್ಬರಾದರೂ ಸಹ ಜನ ನಮಗೆ ಸೋಲನ್ನು ಕೊಟ್ಟಿದ್ದಾರೆ. ಇದು ಒಂದು ದೊಡ್ಡ ಶಿಕ್ಷೆ ಎಂದು ನಾವು ಭಾವಿಸಿಕೊಂಡಿಲ್ಲ. ಕಾಂಗ್ರೆಸ್ ಪಾರ್ಟಿಗೆ ಮತ್ತು ಮಾನ್ಯ ಸಭಾನಾಯಕರಿಗೆ ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತಿದ್ದೇನೆ. ಅವರ ಅಧ್ಯಕ್ಷತೆಯಲ್ಲಿ

ಕಾಂಗ್ರೆಸ್ ಪಾರ್ಟಿಗೆ ಬೆಂಬಲಕೊಟ್ಟಒಂದೇ ಪಕ್ಷ ಸರ್ಕಾರವನ್ನು ರಚಿಸಿ ಆಡಳಿತ ಮಾಡಬೇಕೆಂದು ಈ ರಾಜ್ಯದ ಜನತೆ ಆರಿಸಿ ಕಳುಹಿಸಿದ್ದಾರೆ. ನಮ್ಮ ಜನ ಎಷ್ಟೊಂದು ಪ್ರಬುದ್ಧರು, ಎಷ್ಟೊಂದು ಚಿಂತನೆ ಮಾಡುತ್ತಾರೆ ಎನ್ನುವುದನ್ನು ಕರ್ನಾಟಕದಲ್ಲಿ ಎರಡನೇ ಬಾರಿಗೆ ಅವರು ತೋರಿಸಿ ಕೊಟ್ಟಿದ್ದಾರೆ. 1984ರಲ್ಲಿ ಈ ದೇಶದ ಮಹಾನ್ ನಾಯಕಿ ಶ್ರೀಮತಿ ಇಂದಿರಾಗಾಂಧಿಯವರ ಕೊಲೆ ಆದಂಥ ಸಂದರ್ಭದಲ್ಲಿ ಲೋಕಸಭಾ ಚುನಾವಣೆಯಲ್ಲಿ ನಮ್ಮ ರಾಜ್ಯದ 24 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಾರ್ಟಿಗೆ ಮತವನ್ನು ಕೊಟ್ಟು, ಮತ್ತೆ ಮೂರೇ ತಿಂಗಳಲ್ಲಿ ನಡೆದಂಥ ವಿಧಾನಸಭೆ ಚುನಾವಣೆಯಲ್ಲಿ ಮತ್ತೊಮ್ಮೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ನಾಯಕತ್ವಕ್ಕೆ ನಮ್ಮ ಜನತೆ ಬೆಂಬಲವನ್ನು ಕೊಟ್ಟರು. ಅದೇ ರೀತಿ ಈ ಸಲ 136 ಜನ ಕಾಂಗ್ರೆಸ್‌ನಿಂದ ಗೆದ್ದು ಬರುವ ಹಾಗೆ ಮತ್ತು ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಎಂದರೆ ಸ್ವತಂತ್ರವಾಗಿ ಸ್ಪರ್ಧೆ ಮಾಡಿರತಕ್ಕಂಥ ಕೆಲವು ಮುಖಂಡರು ಗೆದ್ದು ಬರುವ ಹಾಗೆ ಜನಗಳು ತೀರ್ಮಾನವನ್ನು ಕೊಟ್ಟಿದ್ದಾರೆ. ಈ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಮತದಾರರು ನಮಗೆ ಶಿಕ್ಷೆಯನ್ನು ಕೊಟ್ಟಿದ್ದಕ್ಕೆ ಅದರ ಬಗ್ಗೆ ಏನೂ ವಿಷಾದ ಇಲ್ಲ. ಈ ತೀರ್ಮಾನಕ್ಕೆ ನಾವು ಮತದಾರರನ್ನು ಅಭಿನಂದಿಸಿ, ನಮಗೆ ಏನು ಜವಾಬ್ದಾರಿಯನ್ನು ಕೊಟ್ಟಿದ್ದಾರೆ ಅದನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತೇವೆ. ಮಾನ್ಯ ಗೌರವಾನ್ವಿತ ಸದಸ್ಯರು ಮಾತನಾಡುತ್ತಾ ಮಾನ್ಯ ಸಿಂಧ್ಯಾರವರಿಗೆ ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವುದಕ್ಕೆ ಬಹಳ ನೋವು ಆಗಿದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಖಂಡಿತವಾಗಿ ಆ ನೋವು ನನಗೆ ಇಲ್ಲ. ನನ್ನ ಸಹೋದ್ಯೋಗಿಗಳಾದ ಶ್ರೀಮಾನ್ ಬಚ್ಚೇಗೌಡರು, ಶ್ರೀಮಾನ್ ಸಿ.ಬೈರೇಗೌಡರು, ಶ್ರೀ ಬಿ.ಸೋಮಶೇಖರ್‌ರವರು ಹೀಗೇ ಈ ಕಡೆ ಕುಳಿತಿರತಕ್ಕಂಥ ಅನೇಕ ಮುಖಂಡರುಗಳಾದ ನಾವು 10 ವರ್ಷ, 12 ವರ್ಷಗಳ ಕಾಲ ಮಂತ್ರಿಗಳಾಗಿ, ವಿರೋಧ ಪಕ್ಷದಲ್ಲಿ ಕುಳಿತು, ಜೈಲು ವಾಸ ಅನುಭವಿಸಿ ಇಲ್ಲಿಗೆ ಬಂದಿರತಕ್ಕಂಥವರು ಆಗಿದ್ದೇವೆ. ಆದ್ದರಿಂದ ಇದೊಂದು ನಮ್ಮ ಪಕ್ಷ ಮತ್ತು ನಮ್ಮ ನಾಯಕತ್ವಕ್ಕೆ ಆತ್ಮಾವಲೋಕನ ಮಾಡಿಕೊಳ್ಳತಕ್ಕಂಥ ಸಂದರ್ಭ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ನಾವು ಈಗ ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದೇವೆ. ಬಹುಶಃ ಪಕ್ಷದ ಆಡಳಿತ ಗೌರವಾನ್ವಿತ ಸದಸ್ಯರುಗಳಿಗೆ ಈ ವಿರೋಧಪಕ್ಷ ಇನ್ನೂ ಸ್ವಲ್ಪ ಶಕ್ತಿಯುತ ಆಗಬೇಕು ಎನ್ನತಕ್ಕಂಥ ಬಯಕೆ ಇದೆ. ಇದು ಆಡಳಿತಪಕ್ಷದ ಸ್ವಾರ್ಥ ದೃಷ್ಟಿಯಿಂದ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನೀವೆಲ್ಲ ಮಂತ್ರಿಗಳು ಆಗಬೇಕು, ನಿಮ್ಮಲ್ಲಿ ಭಿನ್ನಮತ ಬರಬೇಕು, ನಾಯಕತ್ವ ಬದಲಾವಣೆ ಆಗಬೇಕು ಎನ್ನತಕ್ಕಂಥ ಒಂದು ಹೆಬ್ಬಯಕೆ, ದುರ್ಬಯಕೆ ತಾವು ಮಾಡುತ್ತಿದ್ದೀರಿ ಎಂದು ನಾನು ಹೇಳುವುದಿಲ್ಲ. ಕಳೆದ ವಿಧಾನಸಭೆಯಲ್ಲಿ ಶ್ರೀಮಾನ್ ಹೆಚ್.ಎಸ್.ನಂಜೇಗೌಡರು ಇದ್ದರು, ಅವರು ನೀರಾವರಿ ವಿಚಾರದಲ್ಲಿ ದೊಡ್ಡ ತಜ್ಞರಾಗಿದ್ದರು. ಕನ್ನಡದ ಬಗ್ಗೆ ಹಗಲು-ರಾತ್ರಿ ಹೋರಾಟ ಮಾಡಿದಂಥ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಈ ಸದನದಲ್ಲಿ ಇದ್ದರು. ಅವರನ್ನು ಸೋಲಿಸಿ ಇಲ್ಲಿ ಆಯ್ಕೆ ಮಾಡಿರತಕ್ಕಂಥ ಜನಗಳಿಗೆ ಯಾವುದೇ ರೀತಿಯಿಂದಲೂ ಸಹ ನೋವು ಆಗಬಾರದು ಎನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಅವರನ್ನು ನೋಯಿಸಬೇಕು ಎನ್ನತಕ್ಕಂಥ ಉದ್ದೇಶ ನನ್ನದಾಗಿಲ್ಲ. ಬಹುಶಃ ಶ್ರೀಮಾನ್ ಎಸ್.ಎಂ.ಕೃಷ್ಣರವರ ಸಚಿವ ಸಂಪುಟ ಸ್ವಲ್ಪ ದೊಡ್ಡದು ಇರಬಹುದೆಂದು ನಾನು ಒಪ್ಪಿಕೊಳ್ಳುತ್ತೇನೆ. ಸಚಿವ ಸಂಪುಟ ದೊಡ್ಡದೇ ಆಯಿತು. ಇನ್ನು ಮಾನ್ಯ ಯಡಿಯೂರಪ್ಪನವರು ಅವರದೇ ಆದ ರೀತಿಯಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಿ ಅವರ

ಪಕ್ಷದಲ್ಲಿ 4 ಜನ ಸದಸ್ಯರು ಮಾತ್ರ ಇದ್ದಂಥಾದ್ದನ್ನು ಮುಂದೆ ಆ ಪಕ್ಷದಲ್ಲಿ 44ಜನ ಸದಸ್ಯರು ಗೆದ್ದು ಬರುವ ಹಾಗೆ, ಅಷ್ಟರಮಟ್ಟಿಗೆ ಎತ್ತರಕ್ಕೆ ತೆಗೆದುಕೊಂಡು ಹೋದ ಕೀರ್ತಿ ಅವರಿಗೆ ಸಲ್ಲುತ್ತದೆ. ಅನೇಕ ವಿಚಾರದಲ್ಲಿ ನಮಗೂ ಅವರಿಗೂ ಹೊಂದಾಣಿಕೆ ಆಗುತ್ತಿರಲಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಶ್ರೀಮಾನ್ ವಾಟಳ್ ನಾಗರಾಜ್‌ರವರಂಥ, ಶ್ರೀಮಾನ್ ಹೆಚ್.ಎನ್.ನಂಜೇಗೌಡರಂಥ, ಮಾನ್ಯ ಜೆ.ಹೆಚ್.ಪಟೇಲ್‌ರಂಥ ಮುತ್ಸದ್ಧಿ ನಾಯಕರು ಈ ಸದನದಲ್ಲಿ ಕಳೆದ ಬಾರಿ ಏನಿದ್ದರು. ಇವರೆಲ್ಲರೂ ಸಹ ಈ ಸಲ ಇದ್ದಿದ್ದರೆ ಚೆನ್ನಾಗಿರುತ್ತಿತ್ತು; ಅಷ್ಟರಮಟ್ಟಿಗೆ ಇವತ್ತು ಈ ಸದನ ಬಡವಾಗಿದೆ ಅಥವಾ ಆ ಒಂದು, ಶ್ರೀಮಂತಿಕೆಯನ್ನು ಕಳೆದುಕೊಂಡಿದೆ ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. 1963ನೇ ಇಸವಿಯಲ್ಲಿ ಮಾಡಿದಂಥ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡತಕ್ಕಂಥ ಆ ಸಂದರ್ಭದಲ್ಲಿ ವಿಧಾನಸಭೆಯನ್ನು ಪ್ರವೇಶ ಮಾಡಿದಂಥ ಮಾನ್ಯ ಎಸ್.ಎಂ.ಕೃಷ್ಣರವರು ಏನು ಭಾಷಣ ಮಾಡಿದ್ದಾರೆ ಎನ್ನುವ ಕುತೂಹಲದಿಂದ ಅದನ್ನು ನಾನು ಇಲ್ಲಿಗೆ ಬರುವುದಕ್ಕೆ ಮುಂಚೆ ಓದಲಿಕ್ಕೆ ಪ್ರಾರಂಭ ಮಾಡಿದೆ. ಆಗ ಇದ್ದಂಥ ಅತಿರಥ-ಮಹಾರಥರುಗಳಾದ ಶ್ರೀಯುತರುಗಳಾದ ಎಸ್.ಆರ್.ಕಂಠಿಯವರು, ಎಸ್. ನಿಜಲಿಂಗಪ್ಪನವರಂಥ ದಿಗ್ಗಜಗಳನ್ನು ನೆನೆಸಿಕೊಂಡಾಗ, ನಾವು ಅವರ ಮುಂದೆ ಬಹಳ ಸಣ್ಣವರಾಗಿದ್ದೇವೆ; ನಾವು ಈ ಸದನದ ಘನತೆಯನ್ನು, ಶ್ರೀಮಂತಿಕೆಯನ್ನು, ಗೌರವವನ್ನು ಹೆಚ್ಚು ಮಾಡಲಿಕ್ಕೆ ಅತ್ಯಂತ ಪ್ರಾಮಾಣಿಕವಾದ ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕು ಎನ್ನತಕ್ಕಂಥ ನನ್ನ ಒಂದು ಅಭಿಪ್ರಾಯವನ್ನು ಈ ಸದನದಲ್ಲಿ ಬಹಳ ವಿನಯಪೂರ್ವಕವಾಗಿ ಹೇಳಲಿಕ್ಕೆ ಬಯಸುತ್ತೇನೆ. ಅದರ ಜೊತೆಗೆ ಅವರು ಶ್ರೀಮಾನ್ ಎಸ್.ಎಂ. ಕೃಷ್ಣರವರಿಗೆ ಮತ್ತು ನಮಗೆ ಬಹಳ ದೊಡ್ಡ ಜವಾಬ್ದಾರಿಯನ್ನು ಹೊರಿಸಿಬಿಟ್ಟಿದ್ದಾರೆ. ಆಡಳಿತ ಪಕ್ಷದಲ್ಲಿ ಕುಳಿತಿರತಕ್ಕಂಥ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಒಂದು ಹೋರಾಟದ ಹಿನ್ನೆಲೆಯುಳ್ಳ ಹಿಂದುಳಿದ ವರ್ಗಗಳ ಜನಗಳ ಪರವಾಗಿ ಹೋರಾಟ ಮಾಡಿಕೊಂಡು ಬಂದಿರತಕ್ಕಂಥ ಒಬ್ಬ ಜನಪ್ರಿಯ ಮುಖಂಡರು ಆಗಿದ್ದಾರೆ. ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು 25 ವರ್ಷಗಳ ಕಾಲ ಈ ವಿಧಾನಸಭೆಯಲ್ಲಿ ಕೆಲಸ ಮಾಡಿರತಕ್ಕಂಥ ದಲಿತ ವರ್ಗದವರಿಗೆ ಅಷ್ಟೇ ಅಲ್ಲ ಎಲ್ಲಾ ವರ್ಗದ ಜನಗಳಿಗೂ ಸಹ ಒಬ್ಬ ಮುಖಂಡರಾಗಿರತಕ್ಕಂಥವರು. ಶ್ರೀಮಾನ್ ಘೋರ್ಪಡೆಯುವರು, ಶ್ರೀಮಾನ್ ಕೆ.ಹೆಚ್.ರಂಗನಾಥ್‌ರವರು, ಶ್ರೀ ಶ್ರೀಕಂಠಯ್ಯನವರು, ಶ್ರೀ ಡಿ.ಬಿ. ಚಂದ್ರೇಗೌಡರು ಮುಂತಾದ ಈ ಎಲ್ಲಾ ಘಟಾನುಘಟಿಗಳ, ಅತಿರಥ ಮಹಾರಥರುಗಳ, ಈ ದಿಗ್ಗಜಗಳ ಮುಂದೆ ನಾವು ಇಲ್ಲಿ ಕೆಲಸ ಮಾಡಬೇಕೆಂದರೆ ಸ್ವಲ್ಪ ಕಷ್ಟವಾಗಬಹುದೆಂದು ನಾವು ಒಪ್ಪಿಕೊಳ್ಳುತ್ತೇವೆ. ಆದರೂ ಸಹ ರಾಜ್ಯದ ಜನರ ಹಿತದೃಷ್ಟಿಯಿಂದ ಪ್ರಾಮಾಣಿಕವಾಗ ಪ್ರಯತ್ನವನ್ನು ಮಾಡುತ್ತೇನೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಶ್ರೀ ಚಿಮ್ಮನಕಟ್ಟಿಯವರು, ಶ್ರೀಮತಿ ಮೋಟಮ್ಮನವರು ಬೇಜಾರು ಮಾಡಿಕೊಳ್ಳಬಾರದು. ನೀವೆಲ್ಲ ಪ್ರತಿಭಾವಂತರು ಇದ್ದೀರಿ. ನಿಮ್ಮ ಪ್ರತಿಭೆಗೆ ಸರಿಯಾದ ಪುರಸ್ಕಾರವನ್ನು ಇವತ್ತು ಮಾನ್ಯ ಸಭಾನಾಯಕರು ಕೊಟ್ಟಿದ್ದಾರೆ. ಇದನ್ನು ಬೆಳಣಿಗೆಯ ದೃಷ್ಟಿಯಿಂದ ಉಪಯೋಗಿಸಿಕೊಂಡು ತಾವೆಲ್ಲ ಚೆನ್ನಾಗಿ ಕೆಲಸ ಮಾಡುತ್ತೀರಿ ಎನ್ನತಕ್ಕಂಥ ವಿಶ್ವಾಸ ನಮ್ಮದಾಗಿದೆ. ಏಕೆಂದರೆ ನನಗೆ ಗೊತ್ತಿರುವ ಹಾಗೆ ಕಾಂಗ್ರೆಸ್ ಪಕ್ಷದಲ್ಲಿ ಇದು ಬಹಳ ಕಷ್ಟ; ಮಾನ್ಯ ರಾಜ್ಯಪಾಲರ ಭಾಷಣ ಏನಿದೆ ಇದು ಒಂದು ದೊಡ್ಡ ಬೈಬಲ್ ಇದ್ದಹಾಗೆ; ಇದರಲ್ಲಿ ಹೇಳಿರತಕ್ಕಂಥದ್ದು

ಎಲ್ಲವನ್ನು ಮಾಡಿಬಿಡಬೇಕು ಎಂದು ಹೇಳಿದರೆ ಆಗುವುದಿಲ್ಲ. ಇದರಲ್ಲಿ ಹೇಳಿದೆಲ್ಲವನ್ನೂ ಮಾಡುವುದಕ್ಕೆ ಆ ಗುವುದಿಲ್ಲ ಎನ್ನುವುದು ನನಗೆ ಗೊತ್ತಿದೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಪತ್ರಿಕಾ ಮುಖಂಡರು ನನ್ನ ಪ್ರತಿಕ್ರಿಯೆಯನ್ನು ಕೇಳಿದಂಥ ಸಂದರ್ಭದಲ್ಲಿ 'ರಾಜ್ಯಪಾಲರ ಭಾಷಣದಲ್ಲಿ ಅನೇಕ ಯೋಗ್ಯವಾಗಿರತಕ್ಕಂಥ ವಿಚಾರಗಳನ್ನು ಸರ್ಕಾರದವರು ಹೇಳಿದ್ದಾರೆ, ಆ ಯೋಗ್ಯವಾದ ವಿಚಾರಗಳನ್ನು ಕಾರ್ಯಗತಗೊಳಿಸುವಂಥದ್ದು ಬಹಳ ಕಷ್ಟದ ಕೆಲಸ, ಎಂದು ಹೇಳಿದ್ದೇನೆ. ಕಳೆದ 12 ವರ್ಷಗಳಲ್ಲಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಸಂದರ್ಭದಲ್ಲಿ ನಾನು ಸಹಿತ ಸಚಿವ ಸಂಪುಟದ ಸದಸ್ಯನಾಗಿ ಇಲ್ಲಿ ಆ ಬಗ್ಗೆ ಏನೇನು ಚರ್ಚೆಯಾಗುತ್ತದೆ ಎನ್ನುವ ವಿಚಾರವನ್ನು ತಿಳಿದುಕೊಂಡಿದ್ದೇನೆ. ಅದರಿಂದಾಗಿ ಇದರಲ್ಲಿ ಹೇಳಿರುವುದೆಲ್ಲವನ್ನೂ ಮಾಡುವುದು ಬಹಳ ಕಷ್ಟದ ಕೆಲಸ ಎನ್ನುವ ಅರಿವು ನಮಗೆ ಇದೆ. ಅದರ ಜೊತೆಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನೇನು ಕಾರ್ಯಕ್ರಮಗಳನ್ನು ಮಾಡುತ್ತೇವೆ ಎಂಬುದೆಲ್ಲವನ್ನು ಹೇಳಬೇಕೆನ್ನುವುದೇನೂ ಇಲ್ಲ. ಮತ್ತು ಇಲ್ಲಿ ಹೇಳಿದಷ್ಟನ್ನೇ ಮಾಡಬೇಕೆಂದೇನೂ ಇಲ್ಲ. ಆದರ ಒಂದು ಇತಿಮಿತಿಗಳನ್ನು ಸಹಿತ ನಾವು ಅರ್ಥಮಾಡಿಕೊಂಡಿದ್ದೇವೆ. ಅದರಿಂದಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರಿಂದ ರಾಜ್ಯದ ಜನತೆ ಬಹಳ ದೊಡ್ಡ ನಿರೀಕ್ಷೆಯನ್ನು ಮಾಡುತ್ತಾರೆ. ತಾವು ಬಹುಶ: ಮತ್ತೆ ವಿಧಾನಸಭೆಗೆ ಬರಬೇಕು ಎನ್ನತಕ್ಕಂಥ ಆಸೆ ಇದ್ದರೂ ಸಹ ರಾಜಕೀಯದ ಸಮಕಾಲೀನರು ಅಂದರೆ ಶ್ರೀಮಾನ್ ಎಸ್.ಎಂ.ಕೃಷ್ಣರವರು, ಶ್ರೀಮಾನ್ ಕೆ.ಹೆಚ್.ರಂಗನಾಥ ನವರಂಥವರು ರಾಜ್ಯಕ್ಕೆ ಏನು ಮಾಡಬೇಕು, ತಮ್ಮ ಕೊಡುಗೆ ರಾಜ್ಯಕ್ಕೆ ಏನು ಕೊಡಬೇಕು ಎನ್ನುವ ಯೋಜನೆ ಮತ್ತು ಯೋಜನೆ ಮಾಡುವಂಥ ಕಾಲ ಈಗ ಬಂದಿದೆ. ನಿಮ್ಮ ನಾಯಕತ್ವದಲ್ಲಿ ಮುಂದಿನ ಐದು ವರ್ಷಗಳಲ್ಲಿ ಈ ಸರ್ಕಾರ ಏನು ಮಾಡಬೇಕು ಎಂಬುದನ್ನು ತಿಳಿದುಕೊಂಡು ಮಾಡುವುದು ಇದು ಬಹಳ ಮುಖ್ಯವಾದ ವಿಚಾರ. ನಾನು ನಿಮ್ಮ ವ್ಯಕ್ತಿತ್ವ, ನಿಮ್ಮ ಶಿಕ್ಷಣ, ನೀವು ಮಾಡಿರತಕ್ಕಂಥ ವಿದೇಶದ ಪ್ರವಾಸ, ನಿಮ್ಮ ವಾಕ್‌ಪಟುತ್ವ, ಮತ್ತು ಸೌಜನ್ಯ, ಸ್ನೇಹ ಪರವಾಗಿ ಇರತಕ್ಕಂಥ ವಿಶ್ವಾಸ, ತಾವು ವಿಧಾನಸಭೆಯಲ್ಲಿ, ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಶ್ರೀ ಎಸ್.ಶಿವಪ್ಪನವರು, ಶ್ರೀ ಗೋಪಾಲಗೌಡರು ಬದುಕಿದ್ದಂಥ ಸಂದರ್ಭದಲ್ಲಿ ಸದಸ್ಯರಾಗಿ ತಾವು ಕೆಲಸ ಮಾಡಿದ್ದೀರಿ. ಅನೇಕ ಹೋರಾಟಗಳಲ್ಲಿ ಕೆಲಸ ಮಾಡಿದ್ದೀರಿ. ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ, ಕೇಂದ್ರ ಸರ್ಕಾರದ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಮಾನ್ಯ ಅಧ್ಯಕ್ಷರೆ, ತಮ್ಮ ಸ್ಥಾನದಲ್ಲಿ ಶ್ರೀಮಾನ್ ಎಸ್.ಎಂ.ಕೃಷ್ಣರವರು ಕುಳಿತು ನಿರ್ವಂಚನೆಯಿಂದ ಕೆಲಸ ಮಾಡಿರತಕ್ಕಂಥದ್ದು ಕೂಡ ನಮಗೆಲ್ಲಾ ಗೊತ್ತಿದೆ. ಮತ್ತು ಅವರು ನಿಜವಾದ ಮಣ್ಣಿನ ಮಗ, ರೈತನ ಮಗ ಎನ್ನುವುದು ಸಹ ಗೊತ್ತಿದೆ. ಮಾನ್ಯಮುಖ್ಯಮಂತ್ರಿಯವರು ಸಹ ರೈತನ ಮಗ ಎಂದು ಹೇಳಿದ್ದೇನೆಯೇ ಹೊರತು ಬೇರೆ ಅರ್ಥಗಳನ್ನು ಯಾರೂ ಸಹ ಕಲ್ಪಿಸಿಕೊಳ್ಳಬಾರದು ಎಂದು ಕೇಳಿಕೊಳ್ಳುತ್ತೇನೆ. ಆಡಳಿತಪಕ್ಷಕ್ಕೆ ಸರಿಸಮಾನವಾಗಿರತಕ್ಕಂಥ ವಿರೋಧಪಕ್ಷ ಇಲ್ಲಿ ವೆನೋ ಎಂದು ನಿಮ್ಮಲ್ಲಿ ಅನೇಕರಿಗೆ ಅನಿಸಿರಬೇಕು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಆಡಳಿತ ಪಕ್ಷದಲ್ಲಿ ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ, ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಯಾವ ತರಹ ಇತ್ತು ಎಂದರೆ - ನೋಡಪ್ಪ, ಅವನು ದಲಿತವರ್ಗದವನು, ಹಿಂದುಳಿದ ವರ್ಗದವನು, ಅಲ್ಪಸಂಖ್ಯಾತರ ಕಡೆಯವನು, ಅಥವಾ ಅವನು ರೈತರ ಪರವಾಗಿ ಹೋರಾಟ ಮಾಡಿದವನು, ಅವರು ಅದಕ್ಕೆ

ಅಧ್ಯಕ್ಷರು, ಅವರ ಎದುರು ಸ್ವಲ್ಪ ವೀಕ್ ಅಭ್ಯರ್ಥಿಯನ್ನು ನಿಲ್ಲಿಸುವುದು ಸರಿ ಏನೋ, ಅವರೂ ಪುನ: ವಿಧಾನಸಭೆಗೆ ಗೆದ್ದು ಬರಲಿ ಎಂದು ಯೋಜನೆ ಮಾಡುವ ಕಾಲ ಆವತ್ತಿನ ದಶಕದಲ್ಲಿ ಇತ್ತು. ಆದರೆ ಇವತ್ತು ಅಂಥವರು ಯಾರ್‍ಯಾರು ಇದ್ದಾರೆ ಅವರೆಲ್ಲರನ್ನು ಸಹಿತ ಗುರುತಿಸಿ ಅವರನ್ನೆಲ್ಲ ಕತ್ತರಿಸುವುದು ಹೇಗೆ ಎನ್ನುವ ಲೆಕ್ಕಾಚಾರವನ್ನು ಹಾಕುವ ಕಾಲಚಕ್ರ ಬಂದು ಬಿಟ್ಟಿದೆ. ಆ ಮಟ್ಟಿಗೆ ಈಗ ಕೆಲವರಲ್ಲಿ ಯಾರು ಅಂಥವರು, ಅವರುಗಳನ್ನು ಮುಳುಗಿಸಿ ಬಿಡಬೇಕು ಎನ್ನುವ ಯೋಜನೆ ಬಂದು ಬಿಟ್ಟಿದೆ; ಈಗ ಪಿತೂರಿಗಳ ರಾಜಕಾರಣ ಬಂದುಬಿಟ್ಟಿದೆ. ಮಾನ್ಯ ಕೃಷ್ಣರವರನ್ನು ಹೇಗಾದರೂ ಮಾಡಿ ಸೋಲಿಸಬೇಕು. ಮಾನ್ಯ ಜೆ.ಹೆಚ್.ಪಟೇಲರನ್ನು ಹೇಗಾದರೂ ಮಾಡಿ ಸೋಲಿಸಬೇಕು, ಮಾನ್ಯ ಯಡಿಯೂರಪ್ಪನವರನ್ನು ಸೋಲಿಸಬೇಕು. ಮಾನ್ಯ ಖರ್ಗೆಯವರನ್ನು ಹೇಗಾದರೂ ಮಾಡಿ ಸೋಲಿಸಬೇಕು ಎನ್ನುವುದು ಈಗ ಇರುವುದೇ ವಿನಹ ಆಗ 1967, 68,69ರಲ್ಲಿ - ನಾವು ಸ್ವಲ್ಪದುಡ್ಡು ಬೇಕಾದರೆ ಕೊಡುತ್ತೇವಪ್ಪಾ, ಅವರು ಚುನಾವಣೆಯಲ್ಲಿ ಗೆದ್ದು ಬರಲಿ, ಚುನಾವಣೆ ಖರ್ಚು ಬಹಳ, ಮಾನ್ಯ ಗೋಪಾಲಗೌಡರಂಥ ಪ್ರಾಮಾಣಿಕ ರಾಜಕಾರಣಿ ಸದನಕ್ಕೆ ಪುನ: ಆರಿಸಿ ಬರಬೇಕು ಎನ್ನತಕ್ಕಂಥ ಕಾಲ ಆವತ್ತು ಇತ್ತು. ಆದರೆ ಇವತ್ತು ಕನಕಪುರದ ಬಗ್ಗೆ ಮಾತನಾಡುವುದು ಬೇಡ. ನನ್ನ ದೃಷ್ಟಿಯಲ್ಲಿ ನಮ್ಮ ಮತದಾರರು ನನಗೆ ದೇವರು ಸ್ವಾಮಿ. ಅವರು ನನಗೆ ಪುನರ್‌ಜನ್ಮವನ್ನು ಈ ಸಲ ಕೊಟ್ಟಿದ್ದಾರೆ. ಅದನ್ನು ನಾನು ವೈಯಕ್ತಿಕವಾಗಿ ಇಲ್ಲಿ ಹೇಳುವುದಕ್ಕೆ ಇಚ್ಛೆ ಪಡುವುದಿಲ್ಲ.

(ಗೊಂದಲ)

ಶ್ರೀ ಕರಿಯಣ್ಣ (ಹೊಳೆಹೊನ್ನೂರು):- ಅವರಂತಹ ಪ್ರತಿಭಾವಂತ ಯುವಕರು ಇನ್ನೊಬ್ಬರು ಇಲ್ಲ. ಅವರು ಅವರ ಎದುರಿಗೆ ನಿಂತು ಗೆದ್ದು ಬರಬಾರದೆನ್ನುವುದರಲ್ಲಿ ಕುತಂತ್ರ ರಾಜಕಾರಣ ಮಾಡುತ್ತಾರೆಂದು ಹೇಳುತ್ತಾರೆಯೋ ಏನೋ ಗೊತ್ತಿಲ್ಲ.

ಶ್ರೀ ಪಿ.ಜೆ.ಆರ್. ಸಿಂಧ್ಯಾ:- ಮಾನ್ಯ ಎಸ್.ಎಂ.ಕೃಷ್ಣರವರ ವ್ಯಕ್ತಿತ್ವದ ಬಗ್ಗೆ ನಾನು ಹೇಳುತ್ತಿದ್ದೇನೆ. ಇಂಥ ವ್ಯಕ್ತಿತ್ವ ಹೊಂದಿರುವ ತಮಗೆ ಇವತ್ತು ಕನ್ನಡಾಂಬೆ ಅಧಿಕಾರ ನಡೆಸಲು ಅವಕಾಶ ಕೊಟ್ಟಿದ್ದಾಳೆ. ಇದರ ಹಿಂದೆ ಒಂದು ಹೋರಾಟವಿದೆ. ಇಲ್ಲಿ ಮಂತ್ರಿಗಳಾಗಿ ಕೆಲಸ ಮಾಡುವುದು ಸುಲಭ. ಆದರೆ, ವಿರೋಧಪಕ್ಷದಲ್ಲಿ ಆಡಳಿತ ಪಕ್ಷದವರ ಮರ್ಜಿಗೆ ಒಳಗಾಗದಂತೆ ನೈತಿಕ ಶಕ್ತಿಯನ್ನು ಉಳಿಸಿಕೊಡು ಕೆಲಸ ಮಾಡುವುದು ಬಹಳ ಕಷ್ಟದ ಕೆಲಸ. ಆಡಳಿತದಲ್ಲಿರುವವರು ನಮ್ಮ ಯಾವುದಾದರೊಂದು ವೀಕ್ ಪಾಯಿಂಟ್‌ನ್ನು ಹಿಡಿದು ಎಳೆಯದಿರಲೆಂದು ಆದಷ್ಟು ಪ್ರಯತ್ನ ಮಾಡುತ್ತಿರುತ್ತಾರೆ. ಆದರೆ, ಆ ನೈತಿಕತೆಯನ್ನು, ಆ ಒಂದು ಶಕ್ತಿಯನ್ನು ಉಳಿಸಿಕೊಂಡು ಮಾನ್ಯ ಖರ್ಗೆಯವರು ಕೆಲಸ ಮಾಡಿದರು; ಶ್ರೀ ಹೆಚ್.ಕೆ. ಪಾಟೀಲರವರು ಕೆಲಸ ಮಾಡಿದರು. ಆ ಒಂದು ಹೋರಾಟ, ಕಾಂಗ್ರೆಸ್ ಪಕ್ಷದ ಬಗ್ಗೆ, ನಮ್ಮ ತಿಕ್ಕಾಟ. ಇದರಿದಾಗಿ, ತಾವು it is a positive vote, we agree our defeat. ಅದನ್ನು ಅನಲೈಸ್ ಮಾಡುವುದಕ್ಕೆ ನಾನು ಹೋಗುತ್ತಿಲ್ಲ. ಈ ರಾಜ್ಯದ ಜನತೆ ನಿಮಗೆ ಅಧಿಕಾರ ಕೊಟ್ಟಿದ್ದಾರೆ. ತಮ್ಮ ಬಗ್ಗೆ ಒಂದು ಕಲ್ಪನೆ ಇದೆ. ನಾವು 1960-70ನೇ ಇಸವಿಯಲ್ಲಿ ಕಾಲೇಜಿನ ವಿದ್ಯಾರ್ಥಿಗಳಾಗಿದ್ದೆವು. ಆ ಸಂದರ್ಭದಲ್ಲಿ ತಮ್ಮ ಭಾಷಣವೆಂದರೆ ಬಹಳ ಜನರು ಸೇರುತ್ತಿದ್ದರು. ಮಂಡ್ಯದಲ್ಲಿ ತಮಗೆ ಭವ್ಯ ಸ್ವಾಗತ ಕೊಡುತ್ತಿದ್ದರು. ನಂತರ, ತಾವು ಇಂಡಸ್ಟ್ರಿ ಮಿನಿಸ್ಟರ್ ಆಗಿದ್ದಾಗ ಪೆಟ್ರೋಲ್ ಅಭಾವವಿದ್ದ

ಸಂದರ್ಭದಲ್ಲಿ ನಿಮ್ಮ ಮನೆಯಿಂದ ಇಲ್ಲಿಯವರೆಗೂ ಸೈಕಲ್ ಮೇಲೆ ಬಂದಿದ್ದನ್ನು ಜನರು ಇನ್ನೂ ಮರೆತಿಲ್ಲ. ಮೊನ್ನೆ ಯಾರೋ ವಾಚಕರ ವಾಣಿಯಲ್ಲಿ, ಮಾನ್ಯ ಎಸ್.ಎಂ.ಕೃಷ್ಣರವರಿಂದ ನಾವು ಭಾರೀ ನಿರೀಕ್ಷೆ ಮಾಡಿಕೊಂಡಿದ್ದೇವೆಂದು ಬರೆದಿದ್ದರು. ಹಾಗೆ ತಮ್ಮಿಂದ, ಈ ರಾಜ್ಯದ ಜನತೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ; ಈ ಸರ್ಕಾರದಿಂದ ಬಹಳ ನಿರೀಕ್ಷಿಸಿದ್ದಾರೆ. ಆ ನಿರೀಕ್ಷೆ ವಿಫಲವಾಗದಿರುವ ಹಾಗೆ ನಡೆದುಕೊಳ್ಳುವುದು ಕೇವಲ ಮಾನ್ಯ ಸಭಾನಾಯಕರ ಕರ್ತವ್ಯವಷ್ಟೇ ಅಲ್ಲ, ನಿಮ್ಮೆಲ್ಲರ ಜವಾಬ್ದಾರಿಯೂ ಆಗಿದೆ. ಇದು ಬಹಳ ಮುಖ್ಯವಾದ ಅಂಶ. ತಾವು ಇನ್ನೊಂದು ಒಳ್ಳೆಯ ಕೆಲಸ ಮಾಡಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳಾದ ಮೇಲೆ ಈ ಸಾರಿ ಬೆಂಗಳೂರಿನ ನಾಗರೀಕರು ಬಹಳ ಖುಷಿ ಪಟ್ಟಿದ್ದಾರೆ. ಅದು ಕಾಂಗ್ರೆಸ್ಸಿನ ಸಂಸ್ಕೃತಿ ಎಂದು ಹೇಳಿದರೆ ಯಾರೂ ಬೇಜಾರು ಮಾಡಿಕೊಳ್ಳಬಾರದು. ಮುಖ್ಯಮಂತ್ರಿಗಳಾದ ತಕ್ಷಣವೇ ಎಲ್ಲಾ ರಸ್ತೆಗಳನ್ನೂ ಕೆಡಿಸಿ, ಅಲ್ಲೆಲ್ಲಾ ಬಾವುಟಗಳನ್ನು, ಕಟ್ಟಿ ಅವರಿವರ ಕಟ್ ಔಟ್ ಹಾಕಿ, ತಾತ, ಮುತ್ತಾತರ ಫೋಟೋಗಳನ್ನು ಹಾಕಿ, ಅವರ ಪಕ್ಕದಲ್ಲಿ ತಮ್ಮದೊಂದು ಕಟ್‌ಔಟ್ ಹಾಕಿಕೊಂಡು, ರಸ್ತೆಗಳನ್ನು ಕೆಡಿಸಿ, ಟ್ರಾಫಿಕ್ ಜಾಮ್ ಮಾಡಿಸಿ, ಎಲ್ಲ ಜಾಗಗಳಲ್ಲೂ ಫೋಟೋಗಳನ್ನು ನೋಡಬೇಕಾಗಿತ್ತು; ಆದರೆ, ತಾವು ಸರಳ ಸಮಾರಂಭದಲ್ಲಿ ಈ ರಾಜ್ಯದ ಮುಖ್ಯಮಂತ್ರಿಗಳಾದಿರಷ್ಟೇ ಅಲ್ಲ. Vulgar, exhibition ಆಗಲಿಲ್ಲ. This was an important aspect which I admire for the first time,..

ಪ್ರತಿಕೆಗಳಲ್ಲಿ ತಮಗೆ ಪ್ರತಿನಿತ್ಯವೂ ಅಭಿನಂದನೆಗಳು, ಬರುತ್ತಿದ್ದವು. ಅವರು ಎಲ್ಲಿರುತ್ತಾರೆಂಬುದು ಗೊತ್ತಿಲ್ಲ. ಭಾರೀ ದೊಡ್ಡ ಮನುಷ್ಯರೆಂದು ನೋಡಿದರೆ, ನಿನ್ನೆ ತಾನೆ ಜನತಾದಳವನ್ನೋ, ಬಿಜೆಪಿಯನ್ನೋ ಬಿಟ್ಟು ಬಂದಿರುತ್ತಾರೆ; ಅವರು ದೊಡ್ಡದಾಗಿ ನಿಮ್ಮ ಫೋಟೋ ಹಾಕಿ, ಹಾರ ಹಾಕಿ, ಈ ಕಡೆ ನೋಡಿದಂತೆ ಮಾಡುತ್ತಿರುತ್ತಾರೆ; ನೀವು ಎಲ್ಲೋ ನೋಡುತ್ತಿರುತ್ತೀರಿ, ಆ ಫೋಟೋ ಕಟ್‌ಔಟ್ ಮಾಡಿ ಹಾಕಿರುತ್ತಾರೆ. ಈ ಕಟ್‌ಔಟ್ ಸಂಸ್ಕೃತಿ ಇಲ್ಲದಿರುವುದನ್ನು ನೋಡಿ ಈ ವರ್ಷ ಪೋಲೀಸರು ಬಹಳ ಖುಷಿ ಪಟ್ಟಿ ದ್ದಾರೆಂದುಕೊಂಡಿದ್ದೇವೆ. ತಾವು ಅದನ್ನು ಕೊನೆಗಾಣಿಸಿದ್ದೀರಿ. ಈ ಸಂದರ್ಭದಲ್ಲಿ ಬಹಳ ಒಳ್ಳೆಯ ಸಂಪ್ರದಾಯಗಳನ್ನು ಹಾಕುವ ತಾವು ಮಾನ್ಯ ಚಂದ್ರಬಾಬು ನಾಯ್ಡುರವರನ್ನು ಅನುಕರಿಸುವ ಅವಶ್ಯಕತೆ ಇಲ್ಲ. ಮಾನ್ಯ ಚಂದ್ರಬಾಬುನಾಯ್ಡುರವರು ನಮಗೆ ಬೇಕಾಗಿರುವ ಸ್ನೇಹಿತರು, ನಮ್ಮ ಎಸ್.ಡಿ.ಎ. ಸದಸ್ಯರು. ನಮ್ಮ ರಾಜ್ಯ ಬಹಳ ದೊಡ್ಡ ಇತಿಹಾಸ, ಪರಂಪರೆ ಇರುವ, ವೈಜ್ಞಾನಿಕವಾಗಿ, ಶೈಕ್ಷಣಿಕವಾಗಿ ಇಡೀ ರಾಷ್ಟ್ರಕ್ಕಷ್ಟೇ ಅಲ್ಲ, ಇಡೀ ವಿಶ್ವದಲ್ಲೇ ಹೆಸರು ಗಳಿಸಿದೆ. ತಾವು ಯಾವ ದಾರಿಯಲ್ಲಿ ಹೋಗಬೇಕೆಂಬುದರ ಬಗ್ಗೆ ಮುನ್ನೆಚ್ಚರಿಕೆ ತೆಗೆದುಕೊಂಡಿದ್ದೀರಿ, ಇದು ಸರಿಯಾಗಿದೆ ಎನ್ನುವ ವಿಚಾರವನ್ನು ಹೇಳುತ್ತೇನೆ. These are some of the positive aspects of your personality...

ತಮ್ಮ ವ್ಯಕ್ತಿತ್ವ, ತಾವು ನಡೆದುಕೊಂಡಿರುವ ವಿಚಾರಗಳ ಬಗ್ಗೆ ನಾವು ಕೆಲವು ಸಕಾರಾತ್ಮಕವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಆದರೆ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದಾಗ ತುಂಬಾ ನಿರಾಶೆಯಾಗಿದೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ; ಏಕೆ ನಿರಾಶೆಯಾಗಿದೆ ಎಂಬುದನ್ನು ಸಹ ಹೇಳುತ್ತೇನೆ. ರಾಜ್ಯದ ಜನರ ಇಲ್ಲಿ ಒಂದು ಬದಲಾವಣೆ ಮಾಡಿದಾಗ,

ಮಾನ್ಯ ಜೆ.ಹೆ.ಚ್.ಪಟೇಲರು, ಮಾನ್ಯ ದೇವೇಗೌಡರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ಸಿಂಧ್ಯಾರವರು ಅಧಿಕಾರದಲ್ಲಿರುವುದು ಬೇಡವೆಂದು ತೀರ್ಮಾನಿಸಿದಾಗ, ಕೆಲವು ವರ್ಗದ ವಿಶೇಷವಾಗಿ ರಾಜ್ಯದ ಸುಮಾರು 95 ಲಕ್ಷದಿಂದ 1 ಕೋಟಿ ಜನರು ಕಾಂಗ್ರೆಸ್ ಪಕ್ಷಕ್ಕೆ ಓಟು ಕೊಟ್ಟಿದ್ದಾರೆ. ಇವರ ಪಕ್ಷಕ್ಕೆ 40-45 ಲಕ್ಷ ಮತದಾರರು, ನಮ್ಮ ಪಕ್ಷಕ್ಕೆ 25-30ಲಕ್ಷ ಮತದಾರರು, ನಿಮಗೂ 20 ಲಕ್ಷ ಮತದಾರರು ಮತ ನೀಡಿದ್ದಾರೆ. ಆ ಮತದಾರರ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವ ಭಾಷಣ ಇದಾಗಬೇಕು. ನಂತರ, ಯಥಾಪ್ರಕಾರವಾಗಿ ಹೋಗಲೇಬೇಕು. ದಿವಂಗತ ಶ್ರೀಮತಿ ಇಂದಿರಾಗಾಂಧಿ, ಶ್ರೀ ರಾಜೀವ್‌ಗಾಂಧಿ ಹೆಸರಿನಲ್ಲಿ ಮತ್ತು ಶ್ರೀಮತಿ ಸೋನಿಯಗಾಂಧಿಯವರ ಹೆಸರಿನಲ್ಲಿ ತಾವು ಚುನಾವಣೆ ಗೆಲ್ಲುವುದರ ಮೂಲಕ ಪ್ರಣಾಳಿಕೆಯನ್ನು ಸಹ ಹೊರಡಿಸಿದ್ದೀರಿ. ಆದರೆ, ಆ ಪ್ರಣಾಳಿಕೆಯನ್ನು ಓದಿ ಜನ ಓಟು ಕೊಟ್ಟಿದ್ದಾರೆಂಬ ಕಲ್ಪನೆ ನನಗೂ ಸಹ ಇಲ್ಲ. ತಮ್ಮ ಬಗ್ಗೆ ವಿಶ್ವಾಸವಿರುವುದರಿಂದ ತಾವೂ ಓದಿರುತ್ತೀರಿ, ಮಾನ್ಯ ಡಿ.ಬಿ.ಚಂದ್ರೇಗೌಡರು, ಮಾನ್ಯ ಬಿ.ಕೆ.ಚಂದ್ರಶೇಖರ್‌ರವರೂ ಓದಿರಬಹುದು. ಮಾನ್ಯ ಖರ್ಗೆಯವರಂತೂ ಓದಿರುತ್ತಾರೆ; ಅವರು ಅಷ್ಟು ಸುಲಭವಾಗಿ ಅದನ್ನು ಬಿಡುವುದಿಲ್ಲ. ಆದರೆ, ತಾವೇನು ಪ್ರಣಾಳಿಕೆಯಲ್ಲಿ ಹೇಳಿದ್ದೀರಿ, ಆ ಪ್ರಣಾಳಿಕೆಯಲ್ಲಿರುವ ವಿಚಾರಗಳ ದೃಷ್ಟಿಯಿಂದಾಗಿ ಮಾನ್ಯ ರಾಜ್ಯಪಾಲರ ಭಾಷಣವನ್ನು ಓದಲೇಬೇಕೆನ್ನುವುದು ನಮ್ಮ ಬಯಕೆಯಾಗಿದೆ; ಅದು ಆಗಿಲ್ಲ. ಇದು ತಾವು ಜನರಿಗೆ ಮಾಡಿರುವ ಮೊದಲನೆ ಅಪರಾಧವೆಂದು ಹೇಳುವುದಿಲ್ಲ. ಆದರೆ, ತಪ್ಪು ಹೆಚ್ಚಿ ತಪ್ಪು ದಿಕ್ಕನ್ನು ತುಳಿಯುತ್ತಿದ್ದೀರೆಂದು ಹೇಳಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದವರು ನೀವು ಇಂದು ಯಾವ ಸಿದ್ಧಾಂತದ, ಆಧಾರದ ಮೇಲೆ ಗೆದ್ದು ಬಂದಿರುವಿರೋ, ಆ ಪಕ್ಷದ ಸಿದ್ಧಂತ 1969ರವರೆಗೂ ಒಂದು ರೀತಿ ಇತ್ತು; 1970ರಿಂದ ಪ್ರೀವಿಪರ್ಸ್ ಮಾಡುತ್ತಿದ್ದಿರಿ, ಗರೀಬಿ ಹಠಾವೋ ಎಂದು ಮಾತನಾಡುತ್ತಿದ್ದಿರಿ, 15,20 ಅಂಶಗಳ ಕಾರ್ಯಕ್ರಮಗಳ ಬಗ್ಗೆ ಮಾತನಾಡುತ್ತಿದ್ದಿರಿ, ಸ್ಥಿರತೆ, ಭದ್ರತೆ, ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಮಾತನಾಡುವ ಜನ, ಬ್ಯಾಂಕುಗಳ ನ್ಯಾಷನಲೈಜ್ ಮಾಡಿರುವ ಜನ, ಬಾಂಡೆಡ್ ಲೇಬರ್ ಬಗ್ಗೆ ಮಾತನಾಡುವ ಜನ, ಈಗ ಎಲ್ಲಿ ಹೋಯಿತು ನಿಮ್ಮ ಪೌರುಷತ್ವ? ಬಡತನ ವಿರೋಧಿ ಕಾರ್ಯಕ್ರಮಗಳನ್ನು ಹೇಳಿದ ಜನರು ನೀವು. you always swear by the poor people but that has not been reflected in this Address. That is my regrets...ಅದು ಏಕೆ ಆಗಿಲ್ಲ? ಇಂದು ಅಲ್ಪಸಂಖ್ಯಾತರ ಬಗ್ಗೆ ನಿಮ್ಮ ಆರ್ಥಿಕ ಕಾರ್ಯಕ್ರಮಗಳೇನು? ನಿಮ್ಮ ಪ್ರಣಾಳಿಕೆಯಲ್ಲಿ ನೀವು ಅಲ್ಪಸಂಖ್ಯಾತರಿಗೆ ಹೇಳಿದ್ದೇನು? 7 ಜನ ಮಂತ್ರಿಗಳನ್ನು ಅಲ್ಪಸಂಖ್ಯಾತ ವರ್ಗದಿಂದ ಮಾಡಿದ್ದೀರಿ. ಮಾನ್ಯ ರೋಷನ್‌ಬೇಗ್, ಮಾನ್ಯ ಖಮರುಲ್ ಇಸ್ಲಾಂ ಇವರೆಲ್ಲಾ ನನ್ನ ಆಪ್ತ ಸ್ನೇಹಿತರು. ಮಾನ್ಯ ರೋಷನ್ ಬೇಗ್‌ರವರು ಜನತಾದಳದಲ್ಲಿದ್ದಾಗಲೂ ಟೂರಿಸಂ ಮಿನಿಸ್ಟರ್ ಆಗಿದ್ದು, ಈಗ ಕಾಂಗ್ರೆಸ್ ಪಕ್ಷದಿಂದಲೂ ಟೂರಿಸಂ ಮಿನಿಸ್ಟರ್ ಆಗಿ ಬೇರೆಯದನ್ನು ಮಾಡುವುದಕ್ಕಾಗುದಿಲ್ಲ. ಇಂಡಸ್ಟ್ರಿ ಮಿನಿಸ್ಟರ್ ಆಗಿರುವ ಮಾನ್ಯ ಆರ್.ವಿ.ದೇಶಪಾಂಡೆಯವರು ಜನತಾದಳಕ್ಕೊಂದು ನೀತಿ, ಕಾಂಗ್ರೆಸ್‌ಗೊಂದು ನೀತಿ ಎಂದು ಮಾಡುವುದಕ್ಕಾಗುವುದಿಲ್ಲ. We cannot expect anything more. It is the same wine not in the same bottle, not in the old but in the new bottle... ಅಲ್ಪಸಂಖ್ಯಾತರ ಬಗ್ಗೆ ಪ್ರಣಾಳಿಕೆಯಲ್ಲಿ

ಏನೇನು ಹೇಳಿದ್ದೀರಿ, ಆದರೆ, ಅದನ್ನು ರಿಫ್ಲೆಕ್ಟ್ ಮಾಡಲಿಕ್ಕಾಗಲಿಲ್ಲ? ಯೋಚನೆ ಮಾಡುವುದಕ್ಕೆ ನಿಮಗೆ ಸಮಯ ಸಿಗಲಿಲ್ಲವೋ ಅಥವಾ ಮುಂದೆ ಮಾಡುತ್ತೀರೋ ಎನ್ನುವುದಕ್ಕೆ ವಿತರಣೆ ಕೊಡಬೇಕು. IIಇನ್ನು ಕ್ರಿಶ್ಚಿಯನ್ನರ ರಕ್ಷಣೆ ಬಗ್ಗೆ ಹೇಳುವುದಾದರೆ, ಸದ್ಯದಲ್ಲೇ ಪೋಪ್‌ರವರು ಭಾರತಕ್ಕೆ ಭೇಟಿ ನೀಡಲಿದ್ದು, ನಾವು ಕರ್ನಾಟಕದ ಜನ ಸಮಗ್ರವಾಗಿ ಸ್ವಾಗತಿಸುತ್ತೇವೆನ್ನುವ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ಸದನದ ಮೂಲಕ ನಮ್ಮ ರಾಜ್ಯದಲ್ಲಿರುವ ಕ್ರಿಶ್ಚಿಯನ್ ಜನಾಂಗವಿರಬಹುದು, ಇತರೆ ಜನಾಂಗವಿರಬಹುದು, ನಾವು ಅವರ ಧರ್ಮಗುರುಗಳು ಬರುವುದನ್ನು ಸ್ವಾಗತಿಸುತ್ತೇವೆನ್ನುವುದಾಗಬೇಕು. ಈ ಭಾಷಣದಲ್ಲಿ ತಾವು ಯಾವ ವರ್ಗದ ಜನರ ಆಧಾರದ ಮೇಲೆ ಅಧಿಕಾರಕ್ಕೆ ಬಂದಿದ್ದೀರಿ, ಅವರಿಗೆ ಏನನ್ನು ಕೊಡಲಿಕ್ಕೆ ಹೊರಟಿದ್ದೀರಿ ಎಂಬುದನ್ನು ಹೇಳಬೇಕು. ಬಹುಶ: ಮಾನ್ಯ ಕೃಷ್ಣರವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಇನ್‌ವೈಟಿ ಆಗಿರುತ್ತಾರೆ. ರಾಷ್ಟ್ರದ ಬೆಳವಣಿಗೆ ದೃಷ್ಟಿಯಿಂದ ಅದರ ವಿಚಾರ ಬಹಳ ಪ್ರಸ್ತುತವಾಗಿದೆ. ಶ್ರೀ ಎ.ಕೆ. ಆಂಟೋನಿಯವರ ಅಧ್ಯಕ್ಷತೆಯಲ್ಲಿ ನೇಮಿಸಿದ ಸಮಿತಿ ವರದಿ ಕೊಡುತ್ತಿದೆ. ಅದರಲ್ಲಿ ಅವರು ಏನು ಹೇಳಿದ್ದಾರೆ ? ನಾನು ಯಾರ ಹೆಸರನ್ನೂ ತೆಗೆದುಕೊಳ್ಳುವುದಕ್ಕೆ ಬಯಸುವುದಿಲ್ಲ. ಮಾನ್ಯ ವೈ.ಕೆ. ರಾಮಯ್ಯನವರು ಸಿಟ್ಟು ಮಾಡಿಕೊಂಡರು.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಿದ್ದಾರೋ, ಕಾಂಗ್ರೆಸ್ ವರ್ಕಿಂಗ್ ಕಮಿಟಿ ಡೆಲಿಬರೇಷನ್ ಮೇಲೆ ಭಾಷಣ ಮಾಡುತ್ತಿದ್ದಾರೆಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಏನು ಬೇಕಾದರೂ ಮಾತನಾಡಬಹುದಲ್ಲಾ? ಈ ದೇಶದ ಆರ್ಥಿಕ ನೀತಿಯನ್ನು ಬದಲಾವಣೆ ಮಾಡಿದ ದೃಷ್ಟಿಯಿಂದ, ಉದಾರೀಕರಣದ ನೀತಿಯನ್ನು ಸರಿಸಿದ್ದರಿಂದ, ಈ ದೇಶದ ಬಡವರ ಬಗ್ಗೆ ಮಾತು ಬಿಟ್ಟಿದ್ದರಿಂದ, ಅಕ್ಕಿ, ಬಟ್ಟೆ, ಸೈಟು, ರೈತರ ಬಗ್ಗೆ, ದಲಿತರ ಬಗ್ಗೆ ಮಾತನಾಡುವುದನ್ನು ಬಿಟ್ಟಿದ್ದರಿಂದ, ಕೈಗಾರಿಕೆಗಳಲ್ಲಿ ಬೇರೆ ದೃಷ್ಟಿಯಿಂದ ಹಣ ತೊಡಗಿಸುತ್ತಾರೆನ್ನುವ ಒಂದೇ ಒಂದು ಕಾರಣದಿಂದ ಹಿಂದುಳಿದ ವರ್ಗದವರಿಗೆ, ದಲಿತರಿಗೆ ಇದರಿಂದಾಗಿ ದಾರಿ ಬಿಟ್ಟಿದ್ದರಿಂದಾಗಿ, ಕಾಂಗ್ರೆಸ್ ಪಕ್ಷಕ್ಕೆ 111 ಸೀಟುಗಳು ಬಂದಿವೆ ಎಂದು ಮಾನ್ಯ ಆಂಟೋನಿಯವರು ಹೇಳಿದ್ದಾರೆ.

SRI K.H. RANGANATH: If you could kindly yeild for a minute, please read paragraph No.8. It is very comperhensive:

> " The efforts of my Government would bo to strengthen the programmes for the welfare of Scheduled Castes and Scheduled Tribes in education and employment. We will strive to increase social justice to backward classes and enable them to be active and meaningful partners in the nation's economic, social and cultural life. Institutions dealing with minorities would be further strengthened to ensure that they would by in the social and economic mainstream."

SRI P.G.R.SCINDIA: I Compliment you for that.

SRI K.H.RANGANATH: Direction is there. ಆ ಬಗ್ಗೆ ಡೀಟೈಲ್ಸ್ ಹೇಳದೇ ಇರಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ತಮ್ಮಂತಹ ಸೀನಿಯರ್ ಮೇಂಬರ್ಸ್ ಕಾಂಗ್ರೆಸ್ ಪಾರ್ಟಿಯಲ್ಲಿ, ಈ ಕ್ಯಾಬಿನೆಟ್‌ನಲ್ಲಿ ಇದ್ದೀರಿ; ಅದಕ್ಕಾಗಿ ಇದು ಬಂದಿದೆ ಎಂದು ನಾನು ತಮ್ಮನ್ನು ಅಭಿನಂದಿಸುತ್ತೇನೆ. ಆದರೆ ನಾನು ಏನು ಹೇಳುತ್ತೇನೆಂದರೆ, where are youe specific programmes?

SRI K.H.RANGANATH: I never expected this double standard by the Hon'ble Member.

SRI P.G.R.SCINDIA: I will never do that. I know you don't mean it. ಈ ಮಾನ್ಯ ರಾಜ್ಯಪಾಲರ ಬಡವರಿಗೋಸ್ಕರ ತಾವು ಕೊಟ್ಟಿರತಕ್ಕಂಥ ಕಾರ್ಯಕ್ರಮಗಳು ಏನು? ನಮ್ಮ ಸರ್ಕಾರ ಇಲ್ಲಿ ಅಧಿಕಾರದಲ್ಲಿದಂತಹ ಸಂದರ್ಭದಲ್ಲಿ, ಮಾನ್ಯ ಸಂಸದೀಯ ಸಚಿವರಾದ ಡಿ.ಬಿ.ಚಂದ್ರೇಗೌಡ ರವರಿಗೆ ಗೊತ್ತಿದೆ, ಮಾನ್ಯ ಎನ್.ಟಿ.ಆರ್. ರವರ ನಂತರ ಇಡೀ ಕರ್ನಾಟಕ ರಾಜ್ಯದಲ್ಲಿ ಇಡೀ ರಾಷ್ಟ್ರದಲ್ಲಿಯೇ ಮೊಟ್ಟ ಮೊದಲಬಾರಿಗೆ ಎರಡೂ ರೂಪಾಯಿಗಳಿಗೆ, ಕೆ.ಅಕ್ಕಿಯನ್ನು ಕೊಟ್ಟಿದ್ದೆವು. ಈ ಕಾರ್ಯಕ್ರಮವನ್ನು ನಾವು ಜಾರಿಗೆ ತಂದಿದ್ದೇವೆ. ಇದನ್ನು ಈಗ ನಿಮಗೆ ಜ್ಞಾಪಕ ಮಾಡುವುದಕ್ಕೆ ಬಯಸಿದೆನೇ ಹೊರತು, ನಿಮ್ಮ ನೀತಿ ಸಿದ್ಧಾಂತದ ಆಧಾರದ ಮೇಲೆ ಈ ಭಾಷಣ ಆಗಬೇಕಾಗಿತ್ತೇ ಹೊರತು, ಇದನ್ನು ಬಿಟ್ಟಿದ್ದೀರಾ ಎಂದು ಒಂದು ವಿಶ್ಲೇಷಣೆಗಾಗಿ, ಒಂದು ಪೀಠಿಕೆಯಾಗಿ ಈ ವಿಚಾರಗಳನ್ನು ನಾನು ಪ್ರಸ್ತಾಪಿಸಿದ್ದೇನೆ. ಮಾನ್ಯ ಅಧ್ಯಕ್ಷರೇ, ಇವರ ಪ್ರಣಾಳಿಕೆಯಲ್ಲಿ ಹೇಳಿರುವ ಕೆಲವು ವಿಚಾರಗಳನ್ನು ಮಾನ್ಯ ಸಭಾನಾಯಕರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಬಚ್ಚೇಗೌಡರವರು ನಿನ್ನೆ ಈ ವಿಚಾರವನ್ನು ಪ್ರಸ್ತಾಪಿಸಿದರು. ಪುಟ್ಟ 27ರಲ್ಲಿ, "ಮನೆಗಳು, ನಿವೇಶನಗಳು ಮತ್ತು ಕೊಳಗೇರಿ ಪ್ರದೇಶಗಳ ವ್ಯಾಪಕ ಸಮೀಕ್ಷೆಯನ್ನು ಹತ್ತೊಂಬತ್ತು ಲಕ್ಷ ವಸತಿಹೀನರನ್ನು ಗುರ್ತಿಸಿದ ಜನಾತದಳದ ಸರ್ಕಾರ ಕಳೆದ ಐದು ವರ್ಷಗಳಲ್ಲಿ ಕನಿಷ್ಠ ಒಂದು ಲಕ್ಷ ಮನೆಗಳನ್ನು ಒದಗಿಸಿಲ್ಲ" ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. If, it is so. ನಾನು ಒಂದು ಸವಾಲನ್ನು ಹಾಕುತ್ತಿದ್ದೇನೆ. ನಮ್ಮ ನಾಲ್ಕೂವರೆ ವರ್ಷಗಳ ಅಧಿಕಾರವಧಿಯಲ್ಲಿ ಮೂರುವರೆ ಲಕ್ಷ ಮನೆಗಳನ್ನು ಕಟ್ಟಿಸದೇ ಹೋಗಿದ್ದರೆ ಈ ಸ್ಥಾನದಲ್ಲಿ ಒಂದು ನಿಮಿಷವೂ ಸಹ ಉಳಿಯುವುದಕ್ಕೆ ನಾವು ಅಯೋಗ್ಯರು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ನಾವು ಜನಗಳಿಗೆ ವಂಚನೆಯನ್ನು ಮಾಡಿಲ್ಲ. ಆದರೆ ತಾವು ತಪ್ಪುದಾರಿಗೆ ಹೋಗತಕ್ಕಂಥ ಕ್ರಮವನ್ನು ಮಾಡಿದ್ದೀರಿ. ಯಾರು ಇದನ್ನು ಮಾಡಿದವರು? ಇದಕ್ಕಾಗಿಯೇ ನೀವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅದನ್ನೆಲ್ಲಾ ಹೇಳುವುದಕ್ಕಾಗಿಲ್ಲ. ನೀವು ಚುನಾವಣಾ ಪ್ರಚಾರದ ಭಾಷಣದಲ್ಲಿ ಈ ರೀತಿ ಸುಳ್ಳುಗಳ ಕಂತೆಯನ್ನು ಹೇಳಿರುವುದರಿಂದ ಈ ರೀತಿ ಆಗಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ನಾನು ಅಭಿನಂದಿಸುತ್ತೇನೆ. ಏಕೆಂದರೆ, ನಿನ್ನೆ ತಾವು ಆಟೋರಿಕ್ಷಾ ಒಂದರ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ಪೋಲಿಸ್‌ರವರನ್ನು ತಾವು ಅಭಿನಂದಿಸಿದ್ದೀರಿ. ಮಾನ್ಯ ಕೃಷ್ಣಾರವರು ಸಿ.ಓ.ಡಿ. ಆಫೀಸ್‌ಗೆ ಹೋದಾಗ ಪೋಲಿಸ್‌ರವರನ್ನು

ಕಾಂಪ್ಲಿಮೇಂಟ್ ಮಾಡಿದ್ದಾರೆ. ಇದರ ಜೊತೆಗೆ ಗೌರ್ನರ್ ಅಡ್ರೆಸ್‌ನಲ್ಲೂ ಕೂಡ ಕಾಂಪ್ಲಿಮೆಂಟ್ ಮಾಡಿದ್ದೀರಿ. ಬಹಳ ಚೆನ್ನಾಗಿ ಚುನಾವಣೆಯಾಗಿದೆ, ಪೋಲಿಸ್‌ನವರು ನಿಷ್ಪಕ್ಷಪಾತವಾಗಿ ನಡೆದು ಕೊಂಡಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದ್ದೀರಿ. ಆದರೆ ತಾವು ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ? I am not going to claim credit only for me, but jointly yes, for our Government, for our leader Mr.Patel.

"ಜನತಾದಳದ ಸರ್ಕಾರದ್ದಾ ಆಡಳಿತದ ವ್ಯವಸ್ಥೆ ಬಗ್ಗೆ, ಹೇಳಿದ್ದೀರಿ. ಹಾಗೆಯೋ ಬೆಂಗಳೂರಿಗೆ ಮಾತ್ರ ಸೀಮಿತವಾಗಿದ್ದ ಭೂಗತ ಚಟುವಟಿಕೆಗಳನ್ನು ಹತ್ತಿಕ್ಕಲು ಇಂದಿನ ನಮ್ಮ ಸರ್ಕಾರ ಕಟ್ಟುನಿಟ್ಟಿನ ನಿರ್ಧಾರ ತೆಳೆದಿದ್ದು ಈಗ ಇಂಥ ಚಟುವಟಿಕೆಗಳು ಹುಬ್ಬಳ್ಳಿ, ಧಾರವಾಡ, ಮಂಗಳೂರು, ಇಂಥ ನಗರಗಳಿಗೂ ಹರಡಿದೆ. ಪ್ರತಿ ಒಂದು ಸಾವಿರಕ್ಕಿಂತ ಹೆಚ್ಚು ಅಪರಾಧ ಪ್ರಮಾಣದಲ್ಲಿ ಪಾಟ್ನಾ ನಂತರ ಯಾವ ಆಧಾರದ ಮೇಲೆ ನೀವು ಹೇಳಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಪ್ರಾಮಾಣಿಕವಾಗಿ ಎರಡು ವಿಚಾರಗಳನ್ನು ಹೇಳಿದ್ದರು. ಏನೆಂದರೆ, ಕೆ.ಯಿ.ಬಿ.ವಿಚಾರವಾಗಿ ಇವರು ಮತ್ತು ಮಾನ್ಯ ಯಡಿಯೂರಪ್ಪನವರು ಟೀಕೆ ಮಾಡಿದ್ದೇ ಮಾಡುತ್ತಿದ್ದರು. They were having every right. ವಸ್ತುಸ್ಥಿತಿಯನ್ನು ಮಾನ್ಯ ಕೃಷ್ಣಾರವರು ಅರ್ಥ ಮಾಡಿಕೊಂಡಿದ್ದಾರೆ. ಕೆ.ಯಿ.ಬಿ.ಬಗ್ಗೆ ಮಾತನಾಡುತ್ತಾ ಏನು ಹೇಳಿದ್ದಾರೆಂದರೆ, ನಾವು ಪುಗ್ಸಾಟೆ ಕರೆಂಟ್ ಕೊಡುತ್ತೇವೆಂದು ಯಾವ ರೈತರಿಗೂ ಹೇಳಿಲ್ಲ. ರೆಗ್ಯೂಲೇಟರಿ ಕಮೀಷನ್‌ಗೆ ಮತ್ತಷ್ಟು ಅಧಿಕಾರ ಕೊಟ್ಟು ಅದನ್ನು ಸರಿ ಮಾಡುತ್ತೇವೆ ಎಂದು ಹೇಳಿದ್ದಾರೆ. I complement you for this. But what happened to your speech when you were sitting on this side?

ಈ ಕಡೆ ಕುಳಿತಾಗ ಭಾಷಣ ಮಾಡಿದ್ದೀರಲ್ಲಾ ಅದು ಎನು ಆಯಿತು ಎಂದು ನಾನು ಕೇಳಬಯಸುತ್ತೇನೆ. ರೇಷ್ಮೆ ಉದ್ಯಮಕ್ಕೆ ಭಾರಿ ಪೆಟ್ಟು ಬಿದ್ದಿದೆ ಎಂಬುದರ ಬಗ್ಗೆ ಮಾನ್ಯ ವೈ.ಕೆ.ರಾಮಯ್ಯನವರ ಹೋರಾಟ ಏನು ಇದೆ ಅದಕ್ಕೆ ನಮ್ಮ ಬೆಂಬಲ ಕೂಡ ಇದೆ. ಆಮದು ನೀತಿಗೆ ಬದಲಾವಣೆ ತಂದು ರಾಜ್ಯದ ಹಿತರಕ್ಷಣೆ ಮಾಡುತ್ತಾರಂತೆ. ಈ ಮಾತನ್ನು ನೀವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏಕೆ ಹೇಳಲಿಲ್ಲ? ಕೊನೆಯಪಕ್ಷ ಜನವರಿಯಲ್ಲಿ ಮಾಡತಕ್ಕಂಥ ಭಾಷಣದಲ್ಲಿ ಇದನ್ನೆಲ್ಲಾ ಸೇರಿಸುತ್ತೀರಿ ಎನ್ನತಕ್ಕಂಥ ಆಶಾಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಈಗಲಾದರೂ ಸಹ, ಈ ರೇಷ್ಮೆ ಕೃಷಿಗೆ ಸಂಬಂಧಪಟ್ಟಂತಹ ವಸ್ತುಗಳನ್ನು ಮುಕ್ತವಾಗಿ ಆಮದು ಮಾಡಿಕೊಳ್ಳುವಂತಹ ನೀತಿಯನ್ನು ಕೇಂದ್ರ ಸರ್ಕಾರ ಅನುಸರಿಸುತ್ತಿದೆ. ಅಲ್ಲಿ ಯಾವುದೇ ಸರ್ಕಾರ ಇರಲಿ, ಇದರಿಂದ ಕೇವಲ ನಮ್ಮ ರಾಜ್ಯಕ್ಕೆ ಮಾತ್ರ ಮಾರಕವಾಗುವುದಲ್ಲದೇ ಇಡೀ ದೇಶದ ರೈತರಿಗೆ ಮಾರಕವಾಗತಕ್ಕಂಥ ನೀತಿಗಳನ್ನು, ವಿಶ್ವ ವಾಣಿಜ್ಯ ವ್ಯವಹಾರದ ಆಧಾರದ ಮೇಲೆ ನಡೆಯತಕ್ಕಂಥ ನೀತಿಗಳು ಏನಿವೆ ಇವುಗಳಿಗೆ ಮೊದಲನೆಯದಾಗಿ ಬಲಿಯಾಗತಕ್ಕವರು ಈ ದೇಶದ ರೈತರು. ರೈತರು ಬಲಿಯಾಗತಕ್ಕಂಥದ್ದರ ಬಗ್ಗೆ ತಾವು ಧೃಡವಾದ ನಿರ್ಧಾರವನ್ನು ತೆಗೆದುಕೊಂಡು ಕೇಂದ್ರದಲ್ಲಿ ಯಾವುದೇ ಸರ್ಕಾರವಿದ್ದರೂ ಕೂಡ ಅದಕ್ಕೆ ತಮ್ಮ ನಿರ್ಧಾರವನ್ನು ತಿಳಿಸಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ರೇಷ್ಮೆ ಬೆಳೆಗಾರರ ಬಗ್ಗೆ ತಾವು ಏನು ಆಮದು ನೀತಿಯನ್ನು ಬದಲಾವಣೆ ಮಾಡತಕ್ಕಂಥ ಕೆಲಸ ರಾಜ್ಯ ಸರ್ಕಾರದಿಂದ ಆಗದೇ ಇರಬಹುದು. ಆದರೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, ನಮ್ಮ ಪಕ್ಷದ ಅಧ್ಯಕ್ಷರು ಹಾಗೂ ನಮ್ಮ ನಾಯಕರು ಆಗಿರತಕ್ಕಂಥ ಶ್ರೀಮಾನ್ ಭೈರೇಗೌಡರು ಏನು ಹೇಳಿದ್ದಾರೆ ಆ ವಿಚಾರದ ಬಗ್ಗೆ ಗಮನ ಕೊಟ್ಟಿರತಕ್ಕಂಥದ್ದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಕಾಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಇವರು ಏನು ಹೇಳಿದರು? ಏನು ಮಾಡುವುದಕ್ಕೆ ಆಗಿಲ್ಲ? ಎಲ್ಲಿ ಎಡವುದಕ್ಕೆ ಹೊರಟಿದ್ದಾರೆ ಎನ್ನುವುದನ್ನು ಸಹ ನಾನು ಈ ಸಂದರ್ಭದಲ್ಲಿ ಪ್ರಸ್ತಾಪಿಸಿ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಾವು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರ ಮಾಡಿದಾದ ಮೇಲೆ ನಾವು ನಮ್ಮ ಮಾನ್ಯ ಜೆ.ಹೆಚ್.ಪಟೇಲ್‌ರವರು ಎಲ್ಲರೂ ಬಂದು ತಮಗೆ ಅಭಿನಂದನೆಗಳನ್ನು ಸಲ್ಲಿಸಿದೆವು. It was a good precedent on the part of the former Chief Minister. He came and he complimented and you also reciprocated. All that is a good precedent.

ಇದಾದ ನಂತರ ಇನ್ನು ಸಚಿವ ಸಂಪುಟದ ವಿಸ್ತರಣೆಯ ವಿಚಾರ. ಮಾನ್ಯ ಕೃಷ್ಣಾರವರು ಈ ಸರ್ಕಾರದಲ್ಲಿ ಸಣ್ಣ ಕ್ಯಾಬಿನೆಟ್ ಇರುತ್ತದೆ ಎಂದು ಪತ್ರಿಕಾ ಹೇಳಿಕೆ ನೀಡಿದ್ದರು. ಇದಾದನಂತರ ಎಲ್ಲಿ ಎಡವಿದಿರಿ ಎಂದರೆ, ನೀವು ನಿಮ್ಮ ಸರ್ಕಾರವನ್ನು ರಚನೆ ಮಾಡಿಕೊಂಡು ದೆಹಲಿಗೆ ಹೋದಿರಿ.

" This is the Government" ನಿಮ್ಮ ರನ್‌ವೇನಲ್ಲಿ ಕ್ರಾಷ್ ಆಗಿ ಹೋಯಿತು.

" Crashing on " taking of itself. This Government is a Government which has crashed while taking of itself. ಇದು ಏಕೆ ಹೀಗೆ ಆಯಿತು ಎನ್ನುವ ವಿಚಾರವನ್ನು ನಾನು ಹೇಳುತ್ತೇನೆ. ನೀವು ಚಿಕ್ಕ ಸಂಪುಟ ರಚಿಸುತ್ತೇವೆಂದು ಹೇಳಿ ಈಗ 42 ಜನ ಮಂತ್ರಿಗಳನ್ನು ನೇಮಕ ಮಾಡಿದ್ದೀರಿ. ಇದನ್ನು ಯಾವ ರೀತಿ ಮಾಡಿದ್ದೀರಿ ಎಂದರೆ ಗುಲ್ಬಾರ್ಗ್‌ದಲ್ಲಿ ಆರು ಜನರಿಗೆ ಅವಕಾಶ ಮಾಡಿ ಕೊಟ್ಟಿದ್ದೀರಿ. ರಾಜಕೀಯ ವಿಶ್ಲೇಷಣಾ ಕಾರರು ಅನೇಕ ರೀತಿಯಲ್ಲಿ ಬರೆಯುತ್ತಾರೆ. ಬಹುಶ: ತಾವು ಕೂಡ ಈ ಬಗ್ಗೆ ಓದಿರಬಹುದು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಾವು ಎರಡೂ ವರ್ಷಗಳಕಾಲ ಇದ್ದೇವು. ಆ ಸಂದರ್ಭದಲ್ಲಿ ಓದುವ ಚಟ ಇತ್ತು. ಅನಿಮಲ್ ಫಾರಂ ಎನ್ನುವ ಒಂದು ಪುಸ್ತಕದಲ್ಲಿ ಒಬ್ಬ ಡಿಕ್ಟೇಟರ್ ಆಗಿರತಕ್ಕವನು ಯಾವ ರೀತಿ ಒಂದು ಪ್ರಾಣಿ ಡಿಕ್ಟೇಟರ್ ಆಗಿ ಸಣ್ಣ ಸಣ್ಣ ಮೀನುಗಳನ್ನು ದೊಡ್ಡ ದೊಡ್ಡ ಮೀನುಗಳು ತಿನ್ನುತ್ತವೆ, ಅದನ್ನು ಮತ್ತೊಂದು ಪ್ರಾಣಿ ತಿಂದು ಶಾರ್ಕ್ ಮೀನು ತಿನ್ನುವ ಹಾಗೆ, ಮಾಡುವ ರೀತಿಯಲ್ಲಿ ಮಾಡಿದ್ದಿರೋ ಅಥವಾ ಪೊಲಿಟಿಕಲ್ ಎಕ್ಸ್‌ಪಿಡಿಯೆಸ್ಸ್‌ಗೆ ಮಾಡಿದ್ದಿರೋ ನಮಗೆ ಅರ್ಥವಾಗುತ್ತಿಲ್ಲ. Because your rival is sitting next to you.

ಅವರನ್ನು ಅಂಡರ್‌ಮೈನ್ ಮಾಡಲಿಕ್ಕೆ ಎಂದು ಈ ರೀತಿ ಮಾಡಿದ್ದಿರೋ?

ಶ್ರೀ ಡಿ.ಬಿ.ಚಂದ್ರೇಗೌಡ (ಮಾನ್ಯ ಸಂಸದೀಯ ಸಚಿವರು):- ಮಾನ್ಯ ಸಿಂಧ್ಯಾರವರೇ,

ಈ ರೀತಿ ನೀವು ನಮ್ಮನ್ನು ಒಡೆದು ಆಳುವುದಕ್ಕೆ ಆಗುವುದಿಲ್ಲ. ದಯಮಾಡಿ ನೀವು ಆ ಪ್ರಯತ್ನ ಮಾಡಬೇಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ಪ್ರಾಮಾಣೀಕಾವಾಗಿ ಅಂಥ ಪ್ರಯತ್ನ ಮಾಡುವುದಿಲ್ಲ. ನಾನು ಕೇವಲ ವಿಶ್ಲೇಷಣೆ ಮಾಡಬೇಕಾಗುತ್ತದೆ. ಮಾನ್ಯ ಸಭಾನಾಯಕರೇ, ತಾವು ಮಾನ್ಯ ನಿಜಲಿಂಗಪ್ಪನವರ ಜೊತೆಯಲ್ಲಿ ಸಮಗ್ರವಾಗಿ ರಾಜ್ಯದ ಹಿತದೃಷ್ಠಿಯಿಂದ ಹೋರಾಟ ಮಾಡಿರತಕ್ಕಂಥವರು; ಸಮಗ್ರ ಕರ್ನಾಟಕಕ್ಕೆ ಹೋರಾಟ ಮಾಡಿರತಕ್ಕಂಥವರು ತಾವು. ತಮ್ಮ ಭಾಷಣದಲ್ಲಿ 'ಕರ್ನಾಟಕ' ಎಂದು ಹೆಸರಿಡುವುದಕ್ಕೆ ಅಂಥ ಸಂದರ್ಭದಲ್ಲೂ ಕೂಡ ತಾವು ಸ್ವಾಗತಿಸಿರುವುದನ್ನು ನಾವು ಕಾಣಬಹುದಾಗಿದೆ. ತಾವು ಅಂದು ತಮ್ಮ ಭಾಷಣದಲ್ಲಿ ಈ ಮಾತನ್ನು ಹೇಳಿ ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಆದರೆ ಇವತ್ತು ಬೀದರ್ ಜಿಲ್ಲೆಗೆ ಸಂಬಂಧಪಟ್ಟಂತೆ ಯಾರೋಬ್ಬರನ್ನು ತಮ್ಮ ಮಂತ್ರಿಮಂಡಲದಲ್ಲಿ ಸೇರಿಸಿ ಕೊಂಡಿಲ್ಲ. ಆ ಬೀದರ್ ಜನ ಏನು ತಪ್ಪು ಮಾಡಿದ್ದಾರೆ? ನಿಮ್ಮ ಪಾರ್ಟಿಯಲ್ಲಿ ಆಗಿರತಕ್ಕಂಥ ಒಳಜಗಳದಿಂದಾಗಿ ಆ ಜಿಲ್ಲೆಯಲ್ಲಿ ನಮ್ಮಂತೆಯೇ ನೀವು ಸೋತಿದ್ದೀರಿ. ಹೀಗಾಗಿ ಆ ಬೀದರ್ ಜಿಲ್ಲೆಯ ಜನತೆಗೆ ವಂಚನೆ ಮಾಡಿದ್ದೀರಿ. ಬಿಜಾಪುರ ಮತ್ತು ರಾಯಚೂರು ಜಿಲ್ಲೆಯವರಿಗೆ ಮಂತ್ರಿ ಪದವಿ ಕೊಡದೇ ಅವರನ್ನು ವಂಚಿತರನ್ನಾಗಿ ಮಾಡಿದ್ದೀರಿ, ಹಾಗೆಯೇ ಉಡುಪಿ ಶ್ರೀ ಕೃಷ್ಣ ಕ್ಷೇತ್ರದವರು ಸಹಾ ಅರಕೆ ಮಾಡಿಕೊಂಡಿದ್ದರು, ಆದರೆ ಅವರಿಗೆ ಇನ್ನೂ ತಿರುಪತಿ ನಾಮ ಸಿಕ್ಕಿಲ್ಲ, ಇದು ಯಾವಾಗ ಸಿಗುತ್ತದೆಯೋ ಗೊತ್ತಿಲ್ಲ. ಇನ್ನು ಗುಲ್ಬರ್ಗ ಜಿಲ್ಲೆಯಲ್ಲಿ ಆರು ಜನರಿಗೆ ಮಂತ್ರಿ ಪದವಿ ಕೊಟ್ಟು ಮಾನ್ಯ ಮಲ್ಲಿಕಾರ್ಜುನ ಖರ್ಗೆ ಮತ್ತು ಮಾನ್ಯ ಧರ್ಮಸಿಂಗ್‌ರವರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬಾರದೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದೀರಾ? ಚಿಕ್ಕ ಮಂಗಳೂರು ಜಿಲ್ಲೆಯಲ್ಲಿ ಮೂರು ಜನರಿಗೆ ಮಂತ್ರಿ ಸ್ಥಾನವನ್ನು ಕೊಟ್ಟಿದ್ದೀರಿ. ನನಗೆ ಬಹಳ ಬೇಕಾಗಿರತಕ್ಕಂಥ ನನ್ನ ಸಹೋದರಿ ಶ್ರೀಮತಿ ಮೋಟಮ್ಮನವರಿಗೆ ನಿಜವಾಗಿಯೂ ಅವರನ್ನು ನಾನು ಅಭಿನಂದಿಸುತ್ತೇನೆ. ಆದರೊಬ್ಬರು ದಕ್ಷ ಮಹಿಳೆ, ಅವರಿಗೆ ಪ್ರಿಯವಾದ ಒಳ್ಳೆಯ ಇಲಾಖೆಯನ್ನು ಕೊಟ್ಟಿದ್ದೀರಿ, ಒಳ್ಳೆಯ ಕೆಲಸವನ್ನು ಮಾಡಬೇಕು. ಚಿಕ್ಕಮಂಗಳೂರಿನಲ್ಲಿ ಮೂರು ಜನಕ್ಕೆ ಕೊಟ್ಟು ನಂತರ ಬಾಗಲಕೋಟೆ ಜಿಲ್ಲೆಯಲ್ಲಿ ಮೂರು ಜನಕ್ಕೆ ಮಂತ್ರಿ ಪದವಿ ಕೊಟ್ಟಿದ್ದೀರಿ, ಹಾಗೆಯೇ ಕೊಡಗು ಜಿಲ್ಲೆಯಲ್ಲಿರತಕ್ಕಂಥ ಮೂರು ಕ್ಷೇತ್ರದವರಿಗೂ ಮಂತ್ರಿ ಸ್ಥಾನವನ್ನು ಕೊಟ್ಟಿದ್ದೀರಿ. ಇದರಲ್ಲಿ ಮಾನ್ಯ ಟಿ.ಜಾನ್‌ರವರಿಗೆ ಮತ್ತು ಶ್ರೀಮತಿ ಸುಮಾವಸಂತ್‌ರವರಿಗೆ ಕೊಡಲಾಗಿದೆ; ಆದರೆ ಬಹಳ ದಿನಗಳಿಂದೀಚೆಗೆ ಮಾನ್ಯ ನಾಣಯ್ಯನವರು ಬಂದಿದ್ದಾರೆ. ಮಾನ್ಯ ಅಪ್ಪಚ್ಚುರಂಜನ್‌ರವರು ವಿರೋಧ ಪಕ್ಷದ ಕಡೆ ಇರುವುದರಿಂದ ಅವರಿಗೆ ಮಂತ್ರಿ ಪದವಿ ಸಿಕ್ಕಿಲ್ಲವೆಂದು ನನಗನ್ನಿಸುತ್ತದೆ. ಕೆಲವರ್‍ಯಾರದರೂ ಮಂತ್ರಿ ಆಗಬೇಕೆಂದು ಆಸೆ ಇರತಕ್ಕಂಥವರು ಕೂರ್ಗ್ ಜಿಲ್ಲೆಗೆ ಮೆಂಬರ್‌ಶಿಪ್ ಟ್ರಾನ್ಸ್‌ಫರ್ ಮಾಡಿಕೊಳ್ಳುವುದಕ್ಕೆ ಸಾಧ್ಯವಾದರೆ ಪ್ರಯತ್ನ ಮಾಡಬಹುದು. ಆದರೆ ನಿಮಗೆ ಸಿಗತ್ತದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. On what basis you have expanded this Cabine? ರೀಜನಲ್ ಇಮ್‌ಬ್ಯಾಲೆನ್ಸ್ ತೆಗೆದು ಹಾಕುತ್ತೇವೆಂದು, ಆ ಕರ್ನಾಟಕ, ಈ ಕರ್ನಾಟಕ ಎಂಬ ಎಲ್ಲಾ ಭಾವನೆಗಳನ್ನು ತೊಡೆದು ಹಾಕುತ್ತೇವೆಂದು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೀರಿ. ಇವತ್ತಿನದಿವಸ ಕೂರ್ಗ್ ನಮ್ಮ ರಾಜ್ಯದಿಂದ ಕೈತಪ್ಪಿ ಹೋಗುತ್ತದೆ ಎನ್ನತಕ್ಕಂಥ

ದೃಷ್ಟಿಯನ್ನು ಇಟ್ಟು ಕೊಂಡು ಕೂರ್ಗ್ ಜಿಲ್ಲೆಯಿಂದ ಮೂರು ಜನ ಮಂತ್ರಿಗಳನ್ನು ಮಾಡಿದ್ದೀರಾ? ಅಥವಾ ಓವರ್ ರೆಪ್ರೆ ಜೆಂಟೇಶನ್ ಕೊಟ್ಟಿದ್ದೀರೋ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಆದರೆ ಎಲ್ಲಾ ವಿಚಾರಗಳಲ್ಲಿ ನಿಮ್ಮದು ಒಂದು ದೊಡ್ಡತನ ಇದೆ. You say: I am sorry. I have made a mistake. ಎಂದು ಹೇಳುತ್ತಿರಿ ನಿಮ್ಮ ಅಧಿಕಾರಿಗಳು ಸ್ವಲ್ಪ ಗಮನ ಹರಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಖಾತೆ ಹಂಚುವಂತಹ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರಿಗೆ ಒಂದು ರಹಸ್ಯ ಪತ್ರವನ್ನು ಕಳುಹಿಸುತ್ತಾರೆ. ಇದು ಮುಖ್ಯ ಕಾರ್ಯದರ್ಶಿಯವರಿಗೂ ಮತ್ತು ಕೆಲವೊಬ್ಬರು ಮಂತ್ರಿಗಳಿಗೆ ಮಾತ್ರ ಗೊತ್ತಿರುತ್ತದೆಯೇ ಹೊರತು ಬೇರೆ ಯಾರಿಗೂ ಸಹ ಗೊತ್ತಿರುವುದಿಲ್ಲ. ಏಕೆಂದರೆ ಯಾರೂ ಸಹ ಕೋಳಿಗೆ ಮಸಾಲಿಯನ್ನು ಅರೆಯುವುದಿಲ್ಲ ಎಂಬುದು ನಿಮಗೂ ಗೊತ್ತಿದೆ. ಆದರೂ ಸಹ ತಾವು ಹಾಗೆ ಕಳುಹಿಸಿ ಕೊಡುವಂಥ ಸಂದರ್ಭದಲ್ಲಿ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್‌ನ್ನು ನೀವು ಬಿಟ್ಟಿದ್ದೀರಾ? It is always with the Chief Minister. I know how powerful I am as a Home Minister without Intelligence Department briefing me. The relationship between the Chief Minister and the Home Minister should be like a successful family husband and wife. ಇಲ್ಲದಿದ್ದರೆ ಏನು ಉಪಯೋಗವಿಲ್ಲ. ಇಲ್ಲಿ ಇರತಕ್ಕಂಥ ಐದಾರು ಹುದ್ದೆಗಳು ಯಾವುದೆಂದರೆ, ಗೃಹ ಕಾರ್ಯದರ್ಶಿ, ಡಿ.ಜಿ.ಪಿ;, ಮತ್ತು ಇಂಟೆಲಿಜೆನ್ಸ್ ಇಲಾಖೆ ಹಾಗೂ ಪೋಲೀಸ್ ಕಮಿಷನರ್, ಇದನ್ನು ಬಿಟ್ಟರೆ ಪೊಲೀಸ್ ಇಲಾಖೆಯಲ್ಲಿ ಬೇರೇನು ಬರುವುದಿಲ್ಲ. ಆದರೆ ನೇರವಾಗಿ ನೀವೇ ಬ್ರೀಫಿಂಗ್ ಇಟ್ಟುಕೊಂಡು ಮಾನ್ಯ ಗೃಹ ಮಂತ್ರಿಗಳಿಗೆ ದೊಡ್ಡದನ್ನು ಕೊಡುತ್ತೇವೆಂದು ಹೇಳಿದ್ದೀರಿ. ಈ ರೀತಿ ಮಾಡುವುದರಿಂದ ಗೃಹ ಮಂತ್ರಿಗಳ ಕೈಯಲ್ಲಿ ಯಾವುದೇ ರೀತಿಯ ಅಧಿಕಾರ ಇರುವುದಿಲ್ಲ. Why did not the bureaucracy advised you? They should have advised. ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇರಬೇಕು: ಇದನ್ನು ಏಕೆ ಮಾಡಲಿಲ್ಲ? " I am sorry, I have made a mistake",

ಎಂದು ಸಂದರ್ಶನದಲ್ಲಿ ಹೇಳಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇನ್ನು ಸ್ಪೀಕರ್ ಎಲೆಕ್ಷನ್ ನಡೆಯುವಾಗ ನಮ್ಮನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಮಾನ್ಯ ವೆಂಕಟಪ್ಪ ನವರು ಒಳ್ಳೆಯ, ದಕ್ಷ ರಾಜಕಾರಣಿಗಳು, ಇವರನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವಾಗ ನಮ್ಮ ಕಡೆಯಿಂದ ಒಂದು ಮಾತನ್ನು ಕೇಳಿದ್ದರೆ ಚೆನ್ನಾಗಿರುತ್ತಿತ್ತು. ಆದರೆ 12 ಗಂಟೆಗೆ ಇನ್ನು 20 ನಿಮಿಷ ಇರುವಾಗ ಸದನದಲ್ಲಿ ನಾವು ತಪ್ಪು ಮಾಡಿದ್ದೇವೆಂದು ಒಪ್ಪಿಕೊಂಡರು. How your plane has crashed during the take-off? ಇನ್ನು ಉಪಾಧ್ಯಕ್ಷರನ್ನು ಆಯ್ಕೆ ಮಾಡುವುದಕ್ಕೆ ವಿರೋಧಪಕ್ಷದವರ ಅಟೆಂಡೆನ್ಸ್ ನೋಡಿ ಕೊಂಡು ನಮ್ಮನ್ನು ಕನ್ಸಲ್ಟ್ ಮಾಡುತ್ತೀರಾ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):- ಉಪಾಧ್ಯಕ್ಷರನ್ನು ಆಯ್ಕೆ ಮಾಡುವುದಕ್ಕಾಗಿ ಆಡಳಿತ ಪಕ್ಷದವರು ಇದುವರೆಗೂ ನಮ್ಮನ್ನು ಸಂಪರ್ಕಿಸಿಲ್ಲ. ಆದರೆ ಕನ್ಸಲ್ಟ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- Reallotment of Portfolios- ಕೇವಲ ನಾಲ್ಕು ದಿವಸಗಳಲ್ಲಿ ಮಂತ್ರಿಳ ಎಫೀಷಿಯೆನ್ಸಿ ಕಂಡು ಹಿಡಿದ್ದೀರಾ? ಅಂದರೆ ಎಫೀಷಿಯೆನ್ಸಿ ಆಧಾರದ ಮೇಲೆ ನೀವು ಮಂತ್ರಿಗಳಿಗೆ ಖಾತೆಯನ್ನು ಕೊಟ್ಟಿಲ್ಲವೆ? ನೀವು ರಾಜಕೀಯ ಒತ್ತಡಕ್ಕೆ ಒಳಗಾಗಿ ಮತ್ತು ಯಾರನ್ನೋ ತೃಪ್ತಿಪಡಿಸುವ ದೃಷ್ಟಿಯಿಂದ ಮಂತ್ರಿಗಳ ಖಾತೆಯನ್ನು ಮರು ಹಂಚಿಕೆ ಮಾಡಿದ್ದೀರಾ? ಕ್ಯಾಬಿನೆಟ್ ವಿಸ್ತರಣೆ ಮಾಡುವುದಕ್ಕೆ ಒಂದು ವಾರ ಮಾಡಿದ್ದೀರಿ ಮತ್ತು ಗೃಹ ಸಚಿವರ ಹತ್ತಿರ ಇಂಟಲಿಜಿನ್ಸ್ ಡಿಪಾರ್ಟ್‌ಮೆಂಟ್‌ನ್ನು ಸಹ ನೀವೇ ವಹಿಸಿಕೊಂಡಿದ್ದೀರಿ. ಈಗ ಬೇರೆ ಬೇರೆ ಮಂತ್ರಿಗಳು ಬೇರೆ ಖಾತೆಗಳನ್ನು ಕೇಳುತ್ತಿದ್ದಾರೆ. ಈಗಾಗಲೇ ಒಬ್ಬ ಮಂತ್ರಿಗಳು ಮೈಸೂರಿನಲ್ಲಿ ನಾನು ಹಣಕಾಸಿನ ಇಲಾಖೆಯನ್ನು ಕೇಳಿದ್ದೆ, ಅದಕ್ಕಾಗಿಯೇ ನನಗೆ ಆ ಇಲಾಖೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಹೇಳುತ್ತೇನೆಂದು ಹೇಳಿಕೆ ಕೊಟ್ಟಿದ್ದಾರೆ. ಈ ರೀತಿಯ ಸಂಪ್ರದಾಯವನ್ನು ನಾವು ಇದುವರೆಗೂ ಕೇಳಿಲ್ಲ. ಹಿಂದೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಮ್ಮ ಸರ್ಕಾರದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ನಿಮ್ಮದು ಜಂಬೋಜೆಟ್ ಸರ್ಕಾರ ಎಂದು ಹೇಳಿದ್ದರು. ತಾವು ವಾಸ್ತವಾಂಶದ ಪರವಾಗಿ ಮಾತನಾಡುತ್ತೀರಿ. ಆದರೆ ನೀವು ಸಹ ಜಂಬೋಜೆಟ್ ಮಾಡಬೇಕಾಗುತ್ತದೆ ಇನ್ನು ಏನುಮಾಡುವುದಕ್ಕಾಗುವುದಿಲ್ಲ. ಈಗ ಮತ್ತೆ ಏಳೆಂಟು ಜನರಿಗೆ ಮಂತ್ರಿ ಸ್ಥಾನವನ್ನು ಮಾಡಬೇಕೆಂದು ಹೊರಟಿದ್ದೀರಿ. ಇದನ್ನು ಮಾಡದೇ ಇದ್ದರೆ ನಿಮಗೂ ತೊಂದರೆ ಆಗಬಹುದು. ಇದನ್ನು ನಿಮಗೆ ಬಿಡುತ್ತೇವೆ, ಇದರಿಂದ ನೀವೇ ಕಷ್ಟಪಡಬೇಕಾಗುತ್ತದೆ. ಖಾತೆ ಹಂಚಿಕೆಯನ್ನು ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ ಇದನ್ನು ಮಾಡುವುದಕ್ಕೆ ತಮಗೆ ಯಾರು ಅಡ್ವೈಜ್ ಮಾಡಿದ್ದಾರೆಯೋ ನನಗೆ ಗೊತ್ತಿಲ್ಲ ಅಥವಾ ತಾವೇ ತೀರ್ಮಾನ ತೆಗೆದುಕೊಂಡಿದ್ದೀರೋ ಏನೋ ಅದು ಸಹ ನನಗೆ ಗೊತ್ತಿಲ್ಲ. One, you are one of the most powerful Chief Minister of the State.

Power, you have maintained with you. Energy Sector it is with you. Most important and vital portfolio- Finance is with you. ತಾವು ಇದನ್ನೆಲ್ಲಾ ನಿರ್ವಸುವುದಕ್ಕೆ ನಿಮಗೆ ಎಲ್ಲಿ ಸಮಯ ಇದೆ? ಈ ಬಗ್ಗೆ ತಾವು ದಯವಿಟ್ಟು ತಿಳಿಸಬೇಕು. ಬಹಳಷ್ಟು ಕೆಲಸವನ್ನು ಮಾಡಿ ಸೈಬರ್ ಮುಖ್ಯಮಂತ್ರಿಯಾಗುತ್ತೇವೆಂದರೆ, ತಮಗೆ ಸಮಯ ಎಲ್ಲಿದೆ? ಆರ್ಥಿಕ ಇಲಾಖೆಯ ಜವಬ್ದಾರಿಯನ್ನು ನೀವೇ ವಹಿಸಿಕೊಂಡಿದ್ದೀರಿ. ನಾನು ರಾಜ್ಯದ ಹಿತದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಹೊಸದಾಗಿ ಚುನಾಯಿತರಾಗಿ ಬಂದಿರತಕ್ಕಂಥ ಮಾನ್ಯ ಬಸವರಾಜುರವರು ಮತ್ತು ಮಾನ್ಯ ಹಂಪನಗೌಡರವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಳೆಯಿಂದ ಆಗಿರತಕ್ಕಂಥ ಅನಾಹುತದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲಿದ್ದಾರೆ. ಇದಕ್ಕಾಗಿ ಹಣ ಬಿಡುಗಡೆ ಮಾಡಬೇಕು, ಈ ಹಮ ಜಿಲ್ಲಾಧಿಕಾರಿಗಳಿಗೆ ಹೋಗಬೇಕು. ಹಾಗೆಯೇ ಇವತ್ತು ಅಬ್ಕಾರಿ ಇಲಾಖೆಯಲ್ಲಿ ಸೋರಿಕೆ ಆಗುತ್ತಿದೆ, ಇದನ್ನೆಲ್ಲಾ ಸರಿಪಡಿಸಬೇಕಾಗುತ್ತದೆ. ಆದ್ದರಿಂದ ಇದಕ್ಕೆಲ್ಲಾ ನಿಮಗೆ ಸಮಯ ಎಲ್ಲಿರುತ್ತದೆ? ಇವತ್ತು ಆರ್ಥಿಕ ಇಲಾಖೆ, ಕೆ.ಪಿ.ಸಿ. ಮತ್ತು ಕೆ.ಇ.ಬಿ. ಹಾಗೂ ಇಂಟಲಿಜಿನ್ಸ್, ಅಬ್ಕಾರಿ, ಬಿ.ಡಿ.ಎ. ಮತ್ತು ಬಿ.ಡಬ್ಲ್ಯೂ.ಎಸ್.ಬಿ;, ಈ ಎಲ್ಲಾ ಇಲಾಖೆಗಳನ್ನು ತಾವೇ ಇಟ್ಟುಕೊಂಡಿದ್ದೀರಿ, ಇನಾ ಇಲಾಖೆಯ ಖಾತೆಯನ್ನು ಬೇರೆಯವರಿಗೆ ಕೊಟ್ಟಿದ್ದೀವ? ಇದಕ್ಕೋಸ್ಕರ ನಾನು ಅನಿಮಲ್ Farm ಲೈಫ್‌ನ್ನು ಉದಾಹರಣೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

Man when he is sitting in power , he feels insecure, ಎಲ್ಲಿ ಈ ಅಧಿಕಾರ ಹೊರಟು ಹೋಗುತ್ತದೆಯೋ ಎಂಬ ಭಯದಿಂದ ಇದನ್ನು ಮಾಡಿದ್ದೀರಾ? ಆ ರೀತಿಯ ಭಯವನ್ನು ನೀವು ಪಡಬೇಡಿ. ನಿಮಗೆ ಜನ ಓಟು ಕೊಟ್ಟಿದ್ದಾರೆ; ಭಿನ್ನಮತ ಮಾಡಿದರೆ ನಿಮ್ಮ ಪಾರ್ಟಿ ಮುಳುಗಿ ಹೋಗುತ್ತದೆ ಎಂಬುದು ನಿಮ್ಮ ಕಡೆಯವರಿಗೆ ಗೊತ್ತಿದೆ. ಈ ಹಡಗು ಮುಳುಗಿ ಹೋದರೆ ಆಮೇಲೆ ಏನು ಮಾಡುವುದು? ಏನು ಮಾಡುವುದಕ್ಕಾಗುವುದಿಲ್ಲ. 10-15 ವರ್ಷಗಳಿಂದ ನನ್ನ ತರಹ ಈ ಸಭೆಯಲ್ಲಿರುವವರೆಲ್ಲರೂ ಹೋದರೆ ಸಾಕೆಂದು ಕಾಯುವ ಕಾಲ ಬಂದಿದೆ. ಆದ್ದರಿಂದ ಇದನ್ನು ಏಕೆ ಮಾಡಿದ್ದೀರಿ? ರಾಜ್ಯದ ಹಿತದೃಷ್ಟಿಯಿಂದ ಇದು ಸರಿಯಲ್ಲ. ಈಗಾಗಲೇ ಮಾಡಿದವರೆಲ್ಲರೂ ಅನುಭವಿಸಿದ್ದಾರೆ. ಆದರೆ ನೀವು ಆ ರೀತಿ ಅನುಭವಿಸಬಾರದೆಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು ಅಧಿಕಾರದ ವಿಕೇಂದ್ರಿಕರಣದ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಇದ್ದೆ. ಆದರೆ ಮಾನ್ಯ ಘೋರ್ಪಡೆಯವರು ಸಭೆಯಲ್ಲಿ ಇಲ್ಲ. ಇದರ ಬಗ್ಗೆ ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ ನಮ್ಮ ವತಿಯಿಂದ ನಮ್ಮ ಪಕ್ಷದ ಅಭಿಪ್ರಾಯ ಏನೆಂಬುದನ್ನು ಸೂಚಿಸುತ್ತೇವೆ. ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಶ್ರೀಮಾನ್ ರಾಜೀವ್‌ಗಾಂಧಿಯವರು ಬಯಸಿದಂಥ ಸಂದರ್ಭದಲ್ಲಿ ಇದನ್ನು ಸಂವಿಧಾನಕ್ಕೆ ಸೇರಿಸುವುದರ ಮೂಲಕವಾಗಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರೆ ಈ ಪದ್ಧತಿಯನ್ನು ರಾಷ್ಟ್ರದಲ್ಲಿ ಪ್ರಥಮ ಬಾರಿಗೆ ಮಾನ್ಯ ರಾಮಕೃಷ್ಣ ಹೆಗಡೆಯವರು ಪ್ರಾರಂಭ ಮಾಡಿದರು. ಈಗ ಇದಕ್ಕೆ ಕೆಲವು ಬದಲಾವಣೆಗಳನ್ನು ಮಾಡಿರತಕ್ಕಂಥ ವಿಚಾರಗಳಿರಬಹುದೆಂದು ನಮ್ಮ ಪಕ್ಷದ ಅಭಿಪ್ರಾಯವಾಗಿದೆ. ಆದರೆ, ಸಾಮಾನ್ಯ ಜನರ ದೃಷ್ಟಿಯಿಂದ ಏನೆಂಬುದನ್ನು ಆ ಸಂದರ್ಭ ಬಂದಾಗ ನಾವು ತಿಳಿಸುತ್ತೇವೆ. ಇನ್ನು ವಿಕೇಂದ್ರಿಕರಣದ ಪ್ರಕ್ರಿಯೆ ಕೇವಲ ಪಂಚಾಯತಿ ಅಧ್ಯಕ್ಷರಿಗೆ ಮಾತ್ರವಲ್ಲ, ಇದು ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಮಂತ್ರಿಗಳವರೆಗೆ ಆಗಬೇಕೆಂಬುದು ನನ್ನ ಬಯಕೆ. ಈ ವಿಕೇಂದ್ರಿಕರಣದಲ್ಲಿ ಕೊನೆಯಪಕ್ಷ ನಿಮ್ಮ ಸಹೋದ್ಯೋಗಿಗಳ ಮೇಲೆ ವಿಶ್ವಾಸ ಇಟ್ಟುಕೊಳ್ಳಬೇಕು. ಅವರಿಗೆ ಅದೇ ಖಾತೆಗಳನ್ನು ಕೊಡಿ, ಅವರೇ ಮಾಡಲಿ ಏನು ತೊಂದರೆಯಾಗುವುದಿಲ್ಲ. ಈ ವರ್ಷ ರಾಜ್ಯದಲ್ಲಿ ಹೆಚ್ಚು ಮಳೆಬಿದ್ದು ಬಹಳ ತೊಂದರೆಯಾಗಿದೆ. ಹೆಚ್ಚು ಮಳೆಯಿಂದ ಆಗಿರತಕ್ಕಂಥ ಅನಾಹುತಗಳ ಬಗ್ಗೆ ನೀವು ಇದುವರೆಗೂ ಕೇಂದ್ರಸರ್ಕಾರವನ್ನು ಅಪ್ರೋಚ್ ಮಾಡಿಲ್ಲವೆಂದು ಕಾಣುತ್ತದೆ. ಒಂದು ವೇಳೆ ಅಪ್ರೋಚ್ ಮಾಡಿದ್ದರೆ, ದಯವಿಟ್ಟು ಈ ಸಭೆಯಲ್ಲಿ ಹೇಳಿ. ಇವತ್ತು ಸಿ.ಆರ್.ಎಫ್.ಬಗ್ಗೆ ಹೇಳುವುದಾದರೆ, ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ವಾಜಪೇಯಿರವರು ಒರಿಸ್ಸಾಗೆ ಹೋಗಿ ಅಲ್ಲಿ ಇರತಕ್ಕಂಥ ಜನರನ್ನು ಭೇಟಿ ಮಾಡಿ 200 ಕೋಟಿ ರೂಪಾಯಿಗಳನ್ನು ಆ ಒಂದು ಪರಿಹಾರಕ್ಕೆ ಬಿಡುಗಡೆ ಮಾಡಿದ್ದಾರೆ. ಇದೇ ರೀತಿಯಾಗಿ ಮಾನ್ಯ ಕಂದಾಯ ಮಂತ್ರಿಗಳು ತುರ್ತಾಗಿ ಡಿ.ಸಿ.ಯವರನ್ನು ಭೇಟಿ ಮಾಡಬೇಕು. ಮಾನ್ಯ ಕಂದಾಯ ಮಂತ್ರಿಗಳು ದಕ್ಷರು ಒಳ್ಳೆಯ ಅನುಭವ ಹೊಂದಿದ್ದು, ಹಾಗೂ ಒಳ್ಳೆಯ ಕೆಲಸ ಮಾಡಿರುವುದರಿಂದ ಇದನ್ನು ತಕ್ಷಣ ಮಾಡುತ್ತಾರೆಂಬ ವಿಶ್ವಾಸ ನನಗೆ ಇದೆ. ಮಾನ್ಯ ಸೋಮಶೇಖರ್‌ರವರು ಮಾನ್ಯ ಕಂದಾಯ ಮಂತ್ರಿಗಳಾಗಿದ್ದಾಗ ಅತ್ಯಂತ ಉತ್ತಮ ರೀತಿಯಲ್ಲಿ ಕೆಲಸ ಮಾಡಿದಂಥ ಮಂತ್ರಿಗಳಾಗಿದ್ದರು. ಅವರ ಅನುಭವವನ್ನು ಈಗಾಗಲೇ ಈ ಸಭೆಯಲ್ಲಿ ತಿಳಿಸಿದ್ದಾರೆ. ಆದ್ದರಿಂದ ತಾವು ಇದನ್ನು ಆದಷ್ಟು ಬೇಗ ಮಾಡಬೇಕೆಂದು ನಮ್ಮ ಅಭಿಪ್ರಾಯವನ್ನು ಹೇಳಿದ್ದೇನೆ. ಒಂದು ಪತ್ರಿಕಾ ವಿಶ್ಲೇಷಣೆ ಬಗ್ಗೆ ಈ ಸಭೆಯ ಮತ್ತು ಮಾನ್ಯ

ಸಭಾನಾಯಕರ ಗಮನವನ್ನು ಸೆಳೆಯಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರ ಅಭಿವೃದ್ಧಿ ಯೋಜನೆ, ಬಳ್ಳಾರಿ ಜಿಲ್ಲೆಯಲ್ಲಿ ನಗೆಪಾಟಲು ಎನ್ನತಕ್ಕಂಥದ್ದು ಅಕ್ಟೋಬರ್ 27ನೇ ತಾರೀಖಿನ ಕನ್ನಡಪ್ರಭ ದಿನ ಪತ್ರಿಕೆಯಲ್ಲಿ ಬಂದಿದೆ. ತಾವು 3,300 ಕೋಟಿ ರೂಪಾಯಿಗಳ ಯೋಜನೆಯನ್ನು ಬಳ್ಳಾರಿ ಜಿಲ್ಲೆಯ ಜನತೆಗೆ ಕೊಟ್ಟಿರುವ ಬಗ್ಗೆ ನನಗೆ ಸಂತೋಷವಾಗಿದೆ. ಏಕೆಂದರೆ ಬಳ್ಳಾರಿ ಒಂದು ಹಿಂದುಳಿದ ಜಿಲ್ಲೆಯಾಗಿರುವುದರಿಂದ ಅಲ್ಲಿ ಅಭಿವೃದ್ಧಿ ಕೆಲಸಗಳು ತೀವ್ರವಾಗಿ ಆಗಬೇಕು. ಇದರ ಬಗ್ಗೆ ನಮ್ಮದೇನು ತಕರಾರು ಇಲ್ಲ. ಬಳ್ಳಾರಿ ಜನ ಬಹಳಷ್ಟು ನತದೃಷ್ಟರಾಗಿದ್ದಾರೆ. ಏಕೆಂದರೆ ನಾವು ಓಟು ಕೊಟ್ಟು ಮೋಸ ಹೋಗಿದ್ದೇವೆ ಎನ್ನತಕ್ಕಂಥ ಭಾವನೆ ಅವರಿಗೆ ಬಂದಿದೆ. ಸ್ವಾಮಿ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅದನ್ನು ನಿಮಗೆ ಹೇಳುವುದಕ್ಕಾಗಿಲ್ಲ, ಆದರೆ ಅದನ್ನು ಇವತ್ತು ಹೇಳುವ ಅವಶ್ಯಕತೆ ಏನು ಇತ್ತು ? 2000 ಇಸ್ವಿಯ ಮಾರ್ಚ್‌ನಲ್ಲಿ ಬಜೆಟ್ ಮಂಡನೆ ಮಾಡುವ ಸಂದರ್ಭದಲ್ಲಿ ತಾವು ಹೇಳಬಹುದಾಗಿತ್ತು. ಈ ಸದನದ ಇವತ್ತಿನ ಬಜೆಟ್‌ಗೆ ಮಂಜೂರಾತಿಯನ್ನು ಈಗಾಗಲೇ ನಾವು ಕೊಟ್ಟಿದ್ದೇವೆ. ಎಲ್ಲಿ ಇದೆ ಈ 3300 ಕೋಟಿ ರೂಪಾಯಿಗಳಿಗೆ ಅವಕಾಶ? ಬಳ್ಳಾರಿಯ ವಿಜಯನಗರ ವಿದ್ಯುತ್ ಶಾಖೋತ್ಪನ್ನದ ಕೇಂದ್ರ ಸ್ಥಾಪನೆ ಬಗ್ಗೆ ತಾವು ಹೇಳಿರತಕ್ಕಂಥದ್ದು; 2500 ಕೋಟಿ ರೂಪಾಯಿಗಳಿಗೆ ಈಗಾಗಲೇ ಅಡಿಗಲ್ಲು ಹಾಕಿ ಶ್ರೀಮಾನ್ ಜೆ.ಹೆಚ್.ಪಟೇಲ್‌ರು ಹಾಗೂ ಈಗ ಮಂತ್ರಿ ಮಹೋದಯರಾಗಿರತಕ್ಕಂಥ ಶ್ರೀಮಾನ್ ಅಲ್ಲಂ ವೀರಭದ್ರಪ್ಪನವರು ಮತ್ತೊಬ್ಬ ಮಂತ್ರಿಗಳಾಗಿರತಕ್ಕಂಥ ಶ್ರೀಮಾನ್ ದಿವಾಕರ್‌ವರು ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈಗಾಗಲೇ ಜಮೀನು ಕೊಟ್ಟಿರತಕ್ಕಂಥದ್ದು ಹಾಗೂ ಹಣಕಾಸಿನ ವ್ಯವಸ್ಥೆಯನ್ನು ಮಾಡಿರತಕ್ಕಂಥ 2500 ಕೋಟಿ ರೂಪಾಯಿಗಳಿಗೆ ನೀವು ಈಗ ಆ ಕ್ರೆಡಿಟ್‌ನ್ನು ತೆಗೆದುಕೊಳ್ಳುವುದಕ್ಕೆ ಹೊರಟಿರುತ್ತೀರಿ. ನಾಳೆ ಉಪ ಚುನಾವಣೆ ಬರುತ್ತದೆಂದು 3300 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ನಿಮ್ಮ ಕುತಂತ್ರವನ್ನು ಇಟ್ಟುಕೊಂಡು ಮಾಡುತ್ತಿದ್ದಿರೋ? ಯಾವ ಕಾರಣದಿಂದ ನೀವು ಮಾಡುತ್ತಿದ್ದೀರಿ? ಇದೊಂದು ಆಯಿತು, ಇದು ಆದಮೇಲೆ, ನೀವು ಮತದಾರರಿಗೆ ವಂಚಿಸತಕ್ಕಂಥ ಮೋಡಿ ಮಾಡುವ ಮಾತುಗಳು ಉಪಯೋಗವಾಗುವುದಿಲ್ಲ. ಇವರು ಕುಡಿಯುವ ನೀರಿನ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಕಳೆದ 6 ವರ್ಷಗಳ ಹಿಂದೆಯೇ ಸೊಂಡುರಿನ ಮಹಾರಾಜರಾದಂಥ ಶ್ರೀಮಾನ್ ಎಂ.ವೈ ಘೋರ್ಪಡೆಯವರು ಮಂತ್ರಿಗಳಾದಂಥ ಸಂದರ್ಭದಲ್ಲಿ ಸೊಂಡೂರಿನ ಕುಡಿಯುವ ನೀರಿನ ಯೋಜನೆಯ ಮಂಜೂರಾತಿಯನ್ನು ಮಾಡಿ, ನಮ್ಮ ಸರ್ಕಾರದಲ್ಲಿ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಂಥ ಶ್ರೀಮಾನ್ ಪ್ರಕಾಶ್‌ರ ಸಂದರ್ಭದಲ್ಲಿ ಬಿಡುಗಡೆಯಾಗಿ ಕೆಲಸ ಪ್ರಾರಂಭವಾಗಿ ಅದು ಮುಗಿಯುತ್ತಾ ಬಂದಿದೆ. ಅದನ್ನು ಇದರಲ್ಲಿ ಸೇರಿಸಿಕೊಂಡಿರುತ್ತೀರಿ. ಹಡಗಲಿ ಕುಡಿಯುವ ನೀರಿನ ಯೋಜನೆಯನ್ನು ಉದ್ಘಾಟನೆ ಮಾಡುವುದಕ್ಕೆ ಹೊರಟಿದ್ದೀರಾ? ಅದನ್ನು ಕೂಡ ನಿಮ್ಮ ಯೋಜನೆಯಲ್ಲಿ ಸೇರಿಸೀಕೊಂಡಿದ್ದೀರಿ, ಮಾನ್ಯ ಮುಖ್ಯ ಮಂತ್ರಿಗಳಿಗೆ ಯಾವ ಅಧಿಕಾರಿ ಈ ರೀತಿ ಬ್ರೀಫ್ ಮಾಡುತ್ತಾನೋ ನನಗೆ ಅರ್ಥವಾಗುತ್ತಿಲ್ಲ. ಅವರು ಹೇಳುತ್ತಾರೆಂದು ನೀವು ಏಕೆ ಕೇಳುವುದಕ್ಕೆ ಹೋಗುತ್ತೀರಿ? ಇದರಿಂದ ಜನರಿಗೆ ಏನು ಅರ್ಥ ಬರುತ್ತದೆ? ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕಂಥ ನೀವು ನಮ್ಮ ರಾಷ್ಟ್ರ ನಾಯಕರಾಗಿರತಕ್ಕಂಥ ಮಾನ್ಯ ಜ್ಯೋತಿಬಸುರವರ ಮಟ್ಟಕ್ಕೆ ಹೋಗಬೇಕು ಎನ್ನತಕ್ಕಂಥದ್ದು ನಮ್ಮ ಆಶೆ; ಆದರೆ ನೀವು ಮಾಡುತ್ತಿರುವುದು ಏನು? ಈ ರೀತಿ ಯಾರನ್ನೋ ಒಲಿಸಿಕೊಳ್ಳುವುದಕ್ಕೆ,

ಬೈ ಎಲೆಕ್ಷನ್ ಬರುತ್ತದೆ, ನಮ್ಮ ಪಾರ್ಟಿ ಅಭ್ಯರ್ಥಿ ಗೆಲ್ಲಬೇಕು, ಅಥವಾ ನಮ್ಮ ಸ್ಥಾನ ಹೊರಟು ಹೋಗಬಹುದು ಆದಕ್ಕೋಸ್ಕರವಾಗಿ ಈ ಸೆಕ್ಯುರಿಟಿ, ಯಾರೋ ಒಬ್ಬ ಎಕ್ಸ್-ವೈ-ಝಡ್ ಅನ್ನ ಪ್ಲೀಸ್ ಮಾಡಬೇಕೆಂದು ಹೇಳಿ 3300 ಕೋಟಿ ರೂಪಾಯಿಗಳ ವಚನೆ ಮಾಡತಕ್ಕಂಥ ಮಾತು ಇಲ್ಲಿ ಬೇಡ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕೆಂದು ನಾನು ಬಯಸುತ್ತೇನೆ. ಇದರಿಂದ ಏನೂ ಉಪಯೋಗವಾಗುವುದಿಲ್ಲ. ರಾಜ್ಯದ ಸಮಗ್ರತೆ ಮತ್ತು ರೀಜಿನಲ್ ಇಂಬ್ಯಾಲೆನ್ಸ್ ನಮ್ಮ ಕರ್ನಾಟಕದ ಉತ್ತರ ಭಾಗ, ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಜಿಲ್ಲೆಗಳಿಂದ ಬಂದಿರತಕ್ಕಂಥ ಗೌರವಾನ್ವಿತ ಸದಸ್ಯರುಗಳಿಗೆ ಬಹಳ ನೋವಾಗಿರುತ್ತದೆ. ಇದರಲ್ಲಿ ಸ್ಪೆಷಿಫಿಕ್ ಪ್ರೋಗ್ರಾಮ್‌ಗಳನ್ನು ಅನಾನ್ಸ್ ಮಾಡಿರುವುದಿಲ್ಲ. ಮಾನ್ಯ ನಂಜಯ್ಯನಮಠರವರು ಹೇಳಿರತಕ್ಕಂಥ ಪ್ರತಿಯೊಂದು ಶಬ್ದವು ಸರಿಯಾಗಿದೆ. ಮಾನ್ಯ ನಿಜಲಿಂಗಪ್ಪನವರ ಜೊತೆಯಲ್ಲಿ ಹೋರಾಟವನ್ನು ಮಾಡಿರತಕ್ಕಂಥ ಸಮಗ್ರ ಕರ್ನಾಟಕ ಐಕ್ಯತೆ ಮತ್ತು ಕರ್ನಾಟಕಕ್ಕೆ ಹೆಸರನ್ನು ಇಡಲಿಕ್ಕೆ ಮಾನ್ಯ ನಿಜಲಿಂಗಪ್ಪನವರು ಇರಬಹುದು, ಮಾನ್ಯ ದೇವರಾಜ್ ಅರಸು ಇರಬಹುದು, ಮಾನ್ಯ ರಾಮಕೃಷ್ಣ ಹೆಗಡೆಯವರು ಇರಬಹುದು, ಮಾನ್ಯ ಎಸ್.ಎಂ.ಕೃಷ್ಣರವರು ಇರಬಹುದು, ತಾವುಗಳು ಹೋರಾಟವನ್ನು ಮಾಡಿ ಕರ್ನಾಟಕದ ಸಮಗ್ರತೆಯನ್ನು ಕಾಪಾಡಿರತಕ್ಕಂಥವರು, ಇವತ್ತು ನಿಮಗೆ ಅವಕಾಶ ಸಿಕ್ಕಂಥ ಸಂದರ್ಭದಲ್ಲಿ ನೀವು ರೀಜಿನಲ್ ಬ್ಯಾಲನ್ಸ್ ಮಾಡುವ ದೃಷ್ಟಿಯಿಂದಾಗಿ ಸ್ಪೆಸಿಫಿಕ್ಕಾಗಿ ಏನು ಪ್ರೋಗ್ರಾಮ್‌ಗಳನ್ನು ಅನೌನ್ಸ್ ಮಾಡಿರುತ್ತೀರಿ? ಸುಮ್ಮನೆ ಹೇಳಿದರೆ ಅದರಿಂದ ಏನು ಉಪಯೋಗವಾಗುತ್ತದೆ? Our party is committed for this particular programme, ತಾವು ಏನೇ ಕಾರ್ಯಕ್ರಮಗಳನ್ನು ಮಾಡಿದರೂ ಸಹಿತ ಅದಕ್ಕೆ ನಾವು ನಮ್ಮ ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ನವೆಂಬರ್ ಒಂದನೇ ದಿನಾಂಕದಂದು Bangalore.IT.Com-99- one of the prestigeous programmes of Karnataka and also of the Country, ಇದರಲ್ಲಿ ಕೆಲವೊಂದು ರಿಯಾಲಿಟೀಸ್ ಬಗ್ಗೆ ನೀವು ಇಲ್ಲಿ ಹೇಳಲೇಬೇಕಾಗಿದೆ. ನೀವು ಏನು ಹೇಳಿದ್ದೀರೆಂದರೆ, I compliment my former colleague Mr.R.V.Deshpande. I do not expect any new Industrial policy from you, from the Hon'ble minister ಎಂದು ಹೇಳಿದ್ದೀರಿ ಮಾನ್ಯ ದೇಶಪಾಂಡೆಯವರು ಬಂದರು ಎಂದು ನಾನು ಮತ್ತೆ ಹೇಳುತ್ತಿದ್ದೇನೆ. ಮಾನ್ಯ ದೇಶಪಾಂಡೆಯವರು ಇಲ್ಲದೇ ಇರುವಾಗ ಮಾನ್ಯ ಸಿಂಧ್ಯರವರು ಏನೋ ಮಾತನಾಡಿದರೆಂದು ಆಗಬಾರದು. ಆದರೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಕರ್ನಾಟಕದಲ್ಲಿ ಕೆಲಸವನ್ನು ಮಾಡಿದೆ; ಬಹಳ ಜನ ಹೇಳಿಕೊಳ್ಳುವವರು ನಾವು ವೀಕ್ ಆಗಿದ್ದೇವೆ, ಪೊಲಿಟಿಕಲ್ ಆಗಿ ನಮ್ಮನ್ನು ಮುಗಿಸಬೇಕೆಂದು ಕಾನ್‌ಫರೆನ್ಸ್ ಮಾಡಿದಾಗ, ನಮ್ಮ ಪಾರ್ಟಿಯಲ್ಲಿ ಒಳಜಗಳಗಳು ಪ್ರಾರಂಭವಾದಾಗ, ಎಲ್ಲಾ ಐ.ಟಿ.ಕಾಮ್‌ನವರು ಹೈದರಾಬಾದ್‌ಗೆ ಹೊರಟು ಹೋಗುತ್ತಾರೆ ಎಂದು ಹೇಳುತ್ತಾರೆ. ಎಲ್ಲಿ ಹೋದರು ಅವರೆಲ್ಲಾ? ಅವರೂ ಯಾರು ಸಹ ಹೈದರಾಬಾದ್‌ಗೆ ಹೋಗಿಲ್ಲ. ಇವತ್ತು ಮಾನ್ಯ ಕೃಷ್ಣರವರು ಈ ವಿಚಾರವನ್ನು ಹೇಳಿ ವಾಸ್ತವಾಂಶವನ್ನು ಮಾತನಾಡಿದ್ದಾರೆ. ಆಂಧ್ರದವರು 400 ಕೋಟಿ ರೂಪಾಯಿಗಳ ಸಾಫ್ಟ್‌ವೇರ್‌ನ್ನು ಎಕ್ಸ್‌ಪೋರ್ಟ್ ಮಾಡಿದರೆ, 2600 ಕೋಟಿ ರೂಪಾಯಿಗಳ ಸಾಫ್ಟ್‌ವೇರ್‌ನ್ನು ನಾವು ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. It is a credit to kannadigas. ಇವತ್ತು ನಾವು ಸಾಫ್ಟ್ ವೇರ್‌ನ್ನು

ಎಕ್ಸ್‌ಪೋರ್ಟ್ ಮಾಡುತ್ತಿರುವಂತಹ ಸಂದರ್ಭದಲ್ಲಿ, ಇದು ಪ್ರತಿಯೊಬ್ಬ ಕನ್ನಡಿಗನೂ ಹೆಮ್ಮೆಪಡತಕ್ಕಂಥ ವಿಚಾರವಾಗಿದೆ ಇದು ನಮ್ಮ ಸರ್ಕಾರ ಮಾಡಿದ ಸಾಧನೆಯಾಗಿದೆ. ಇದನ್ನು ತಾವು ಕೂಡ ಒಪ್ಪುತ್ತೀರಿ ಇದನ್ನು ಯಾರು ಪ್ರಣಾಳಿಕೆಯಲ್ಲಿ ಬರೆದರು ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಇದರಲ್ಲಿ ತಾವು ಏನು ಹೇಳಿದ್ದೀರಿ, ಅವೆಲ್ಲಾ ಜನಗಳಿಗೆ ಮೋಸ ಮಾಡತಕ್ಕಂಥ ವಿಚಾರಗಳು ಎಂದು ಹೇಳುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಾವು ಅದೊಂದನ್ನೂ ಸಹಿತ ಪ್ರತಿಬಿಂಬಿಸದೆ, ಕೊನೆಗೆ ಒಂದು ಮಾತನ್ನು, ಖಜಾನೆ ಖಾಲಿಯಾಗಿದೆ ಎಂದು ಹೇಳುತ್ತೀರಿ. ನಾವು ನಮ್ಮ ನಮ್ಮಲ್ಲೇ ಜಗಳವನ್ನು ಮಾಡಿಕೊಂಡು ಅಧಿಕಾರವರನ್ನು ಕಳೆದುಕೊಂಡಿದ್ದೇವೆ. ನಾನು ಶ್ರೀಮಾನ್ ಜೆ.ಹೆಚ್.ಪಟೇಲ್‌ರನ್ನು ಹಾಗೂ ಶ್ರೀಮಾನ್ ಸಿದ್ಧರಾಮಯ್ಯರವನ್ನು ಈ ಸದನದ ಮೂಲಕ ಅಭಿನಂದಿಸಲಿಚ್ಚಿಸುತ್ತೇನೆ. ನಮ್ಮ ಖಜಾನೆ ಯಾವತ್ತು ಸಹಿತ ಖಾಲಿಯಾಗಿರಲಿಲ್ಲ. ಇವತ್ತು ಇಲ್ಲಿ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದಂಥ ಸಂದರ್ಭದಲ್ಲಿ ಇದೊಂದು ಶೋಕವಾಗಬಾರದು. "The treasury was empty", ಖಜಾನೆಯನ್ನು ಲೂಟಿ ಹೊಡೆದುಕೊಂಡು ಹೋದರು ಎಂದು ಹೇಳುವಂಥಾದ್ದು ಸರಿಯಲ್ಲ. ಶ್ರೀಮಾನ್ ಶ್ರೀಕಂಠಯ್ಯನವರೆ, ನೀವು ವಿರೋಧ ಪಕ್ಷದಲ್ಲಿದ್ದು ಕೊಂಡು ಕೆಲಸವನ್ನು ಮಾಡಿರುತ್ತೀರಿ. ಇದರಿಂದ ನಮ್ಮ ಬಗ್ಗೆ ಅಥವಾ ನಿಮ್ಮ ಬಗ್ಗೆ ಸಾಮಾನ್ಯವಾದ ಮತದಾರರಿಗೆ ಯಾವ ಅಭಿಪ್ರಾಯಬರುತ್ತದೆ? ಸಾಮಾನ್ಯವಾಗಿ ಇವತ್ತು ಚುನಾವಣೆಯ ಪದ್ಧತಿ ಏನು ಎನ್ನುವುದು ಎಲ್ಲರಿಗೂ ಗೊತ್ತಿದೆ. ಕೊಡಲಿ ಬಿಡ್‌ಲಾ ಕಾಸು ಎಂದು ಹೇಳುತ್ತಾರೆ.

ಶ್ರೀ ಡಿ.ಬಿ.ಚಂದ್ರೇಗೌಡಃ- ಮಾನ್ಯ ಶ್ರೀಕಂಠಯ್ಯನವರಿಗೂ ವಿರೋಧ ಪಕ್ಷಕ್ಕೂ ಯಾವುದೇ ಸಂಬಂಧ ಇಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಃ- ಮಾನ್ಯ ಶ್ರೀಕಂಠಯ್ಯನವರು ವಿರೋಧ ಪಕ್ಷದಲ್ಲಿ ಇದ್ದರು. ಚುನಾವಣೆಯಲ್ಲಿ ಗೆದ್ದು ಬರಲು ಅವರು ಬಹಳ ಕಷ್ಟವನ್ನು ಪಟ್ಟಿದ್ದಾರೆಂದು ನಾನು ಅವರ ಹೆಸರನ್ನು ಹೇಳಿದೆ. ಖಜಾನೆ ಖಾಲಿಯಾಗಿದೆ ಎಂದು ಹೇಳುವುದರಿಂದ, ಜನರಿಗೆ ಏನು ಅಭಿ ಪ್ರಾಯ ಬರುತ್ತದೆಂದರೆ, ರೂಲಿಂಗ್ ಪಾರ್ಟಿಯವರು ಅಥವಾ ವಿರೋಧ ಪಕ್ಷದಲ್ಲಿ ಸಾಫ್ಟ್ ಆಗಿರುವವರು ಖಜಾನೆಯ ಹಣವನ್ನು ಹಂಚಿಕೊಂಡಿದ್ದಾರೆಂದು ಅಭಿಪ್ರಾಯ ಬರುತ್ತದೆ. ಆದ್ದರಿಂದ ನಮ್ಮ ಸರ್ಕಾರದಲ್ಲಿ ಒಂದು ದಿನ ಕೂಡ ರಿಜರ್ವ್ ಬ್ಯಾಂಕಿನಿಂದ ಓವರ್ ಡ್ರಾಫ್ಟ್‌ನ್ನು ನಾವು ತೆಗೆದು ಕೊಂಡಿರುವುದಿಲ್ಲ. The Reserve Bank has appreciated in all its repotrs about the financial performance of the Karnataka Government, about Industrial Performance of the Karnataka Government. ಆದರೆ ತಾವು ಖಜಾನೆ ಖಾಲಿಯಾಗಿದೆ ಎಂದು ಹೇಳಿ ಜನಗಳನ್ನು ತಪ್ಪು ದಾರಿಗೆ ಎಳೆಯುವ ಕೆಲಸವನ್ನು ಮಾಡುತ್ತಿದ್ದೀರಿ? Therefore I am demanding-

ನೀವು ಶ್ವೇತ ಪತ್ರ ಎಂದಾದರೂ ಕರೆಯಿರಿ ಅಥವಾ ವೈಟ್ ಪೇಪರ್ ಎಂದಾದರು ಕರೆಯಿರಿ; ಒಟ್ಟಿನಲ್ಲಿ ಒಂದು ಪೇಪರ್; ಯಾವ್ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಬಾಕಿ ಇದೆ, ನಾವು ಏನೇನು ಅನ್ಯಾಯ ಮಾಡಿದ್ದೇವೆ; As you know government is a continous process. I am demanding to a white paper on this.

ಅಲ್ಲಿ ಹಣ ಬರುತ್ತದೆ, ಇಲ್ಲಿ ವೇತನ ಕೊಡುತ್ತೇವೆ. ಅಲ್ಲಿ ಹಣ ಬರುತ್ತದೆ, ಇಲ್ಲಿ ಅಭಿವೃದ್ಧಿ ಕೆಲಸಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆ. ನಾವು ಏನು ಮಹಾಪರಾಧ ಮಾಡಿದ್ದೇವೆ ಎನ್ನುವುದು ರಾಜ್ಯದ ಜನತೆಗೆ ಗೊತ್ತಾಗಬೇಕು. ಖಾಲಿ ಖಜಾನೆ ಎಂದು ತಾವು ಏನು ಹೇಳಿದ್ದೀರಿ.

(ಈ ಹಂತದಲ್ಲಿ ಛೇರಮನ್‌ರು ಪೀಠವನ್ನು ಅಲಂಕರಿಸಿದರು)

ತಾವು ಆ ರೀತಿ ಮಾತನಾಡಿರುತ್ತೀರಿ. ಆಮೇಲೆ ರಾಜ್ಯದಲ್ಲಿ ಬಿಗಿ ಆಡಳಿತವನ್ನು ಕೊಡುತ್ತೇನೆಂದು ತಾವು ಹೇಳಿದ್ದೀರಿ, ಇದಕ್ಕೆ ಸಹಕಾರವನ್ನು ಕೊಡಬೇಕಾದವರು ವಿರೋಧ ಪಕ್ಷದವರು ಅಲ್ಲ; ಇದರಲ್ಲಿ ಸಹಕಾರವನ್ನು ಕೊಡಬೇಕಾದಂಥವರು ಆಡಳಿತ ಪಕ್ಷದವರು. ಅಕೌಂಟಬಿಲಿಟಿ ಬಗ್ಗೆ ನಮ್ಮ ಮಾನ್ಯ ಜೆ.ಹೆಚ್.ಪಟೇಲ್‌ರವರು ಅನೇಕ ಸಂದರ್ಭದಲ್ಲಿ ಈ ಸದನದಲ್ಲಿ ಹೇಳಿದ್ದಾರೆ. ಶಾಸಕರ ಜೊತೆಗೆ ತಾಲ್ಲೂಕು ಮಟ್ಟದಲ್ಲಿರತಕ್ಕಂಥ 4-5 ಜನ, ನಾನು ಹೆಸರುಗಳನ್ನು ಹೇಳುವುದಿಲ್ಲ; ತಹಶೀಲ್ದಾರ, ಎ.ಇ.ಇ. ಕಾರ್ಯನಿರ್ವಾಹಕ ಅಧಿಕಾರಗಳು ಈ 5 ಜನ ಅಧಿಕಾರಿಗಳು ಸೇರಿಕೊಂಡು ಬಿಟ್ಟರೆ ಕತೆ ಮುಗಿದೇ ಹೋಗುತ್ತದೆಂದು ಹೇಳುತ್ತಿದ್ದರು. ನನ್ನ ಜಾತಿಯವರು ಬೇಕು, ನಮ್ಮವರು ಬೇಕು ಎಂದು ಹೇಳಿದಾಗ ತೊಂದರೆಯಾಗುತ್ತದೆ. ನಮ್ಮ ಸರ್ಕಾರದಲ್ಲಿ ಎಲ್ಲಾ ಸರಿಯಾಗಿರುತ್ತೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ತಾವು ಅಕೌಂಟಬಿಲಿಟಿ ಆಫ್ ದಿ ಅಡ್ಮಿನಿಸ್ಟ್ರೇಷನ್ ಎಂದು ಮಾತನಾಡಿರುವುದರಿಂದ All said and done, we have the best of bureaucrats, best of police officers ಇವತ್ತು ಎಲ್ಲಾ ಚುನಾವಣೆಗಳಲ್ಲಿ ಅವರು ಅದನ್ನು ಸಾಬೀತು ಮಾಡಿ ತೋರಿಸಿರುತ್ತಾರೆ ಆದ್ದರಿಂದ ಮಾನ್ಯ ಸಭಾನಾಯಕರಲ್ಲಿ ವಿನಂತಿ ಮಾಡುತ್ತೇನೆ; ಈ ಆಡಳಿತ ಸುಧಾರಣೆಯ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡುತ್ತೇನೆ ಎಂದು ತಮ್ಮ ಭಾಷಣದಲ್ಲಿ ಹೇಳಿರುತ್ತೀರಿ. ಮಾನ್ಯ ಕೆಂಗಲ್ ಹನುಮಂತಯ್ಯನವರು ಈ ಒಂದು ಆಡಳಿತ ಸುಧಾರಣೆ ಬಗ್ಗೆ ಎನು ಸಲಹೆ ಕೊಟ್ಟಿದ್ದಾರೆ ಅಂತಹ ಸಲಹೆಗಳನ್ನು, ಹಿಂದುಳಿದ ವರ್ಗದವರ ಬಗ್ಗೆ ಮಾನ್ಯ ದೇವರಾಜ್ ಅರಸುರವರು ಹೇಳಿರತಕ್ಕಂಥ ವಿಚಾರಗಳನ್ನು ಕಾರ್ಯಗತ ಮಾಡುತ್ತೇನೆ ಎನ್ನುವ ದಿಕ್ಕಿನಲ್ಲಿ ತಾವು ಏನು ಯೋಚನೆ ಮಾಡುವುದಕ್ಕೆ ಹೊರಟಿದ್ದೀರಿ ಅದು ಸರಿಯಾದ ದಿಕ್ಕು. ಅದಕ್ಕೆ ಆಡಳಿತ ಪಕ್ಷದ ಶಾಸಕರ ಸಹಕಾರ ತಮಗೆ ಎಷ್ಟರಮಟ್ಟಿಗೆ ಸಿಗುತ್ತದೆಯೋ ಅದು ನನಗೆ ಗೊತ್ತಿಲ್ಲ. ಅದರ ಬಗ್ಗೆ ನನಗೆ ಅನುಮಾನ ಇದೆ. ಅದನ್ನು ತುಳಿದು ಮೆಟ್ಟಿ ನಿಲ್ಲತಕ್ಕ ಧೈರ್ಯವನ್ನು ತಾವು ತೋರಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಅಂತು ಒಟ್ಟಾರೆ ಈ ರಾಜ್ಯದ ಅಭಿವೃದ್ಧಿಯ ರಥವನ್ನು ಮುಂದಕ್ಕೆ ಎಳೆದುಕೊಂಡು ಹೋಗುವಂತಹ ಜವಾಬ್ದಾರಿ ಆಡಳಿತ ಪಕ್ಷ ಮತ್ತು ವಿರೋಧಪಕ್ಷಗಳಿಗೆ ಇದೆ. ಈ ಕನ್ನಡಾಂಬಿಯ ಅಭಿವೃದ್ಧಿಯ ರಥವನ್ನು ನಾವೆಲ್ಲರೂ ಮುಂದಕ್ಕೆ ತೆಗೆದುಕೊಂಡು ಹೋಗಬೇಕಾಗಿದೆ. ಇದು ಈ ನಿಟ್ಟಿನಲ್ಲಿ ಬಹಳ ನಿರಾಶೆಯಿಂದ ಕೂಡಿದೆ ಎಂದು ಹೇಳಿದರೆ, there are no specific targets and time limit to the programmes. ಅದಕ್ಕೋಸ್ಕರ ತಾವು ನಮ್ಮನ್ನೆಲ್ಲಾ ಕರೆಸಿ ಚರ್ಚೆ ಮಾಡಿ. ನಮ್ಮ ನಮ್ಮ ಪಾರ್ಟಿಗಳ ಅಧ್ಯಕ್ಷರ ಜೊತೆಯಲ್ಲಿ ನಾವು ಬರುತ್ತೇವೆ. You should start a new precedent. ನಾವು ಮೊದಲು ಈ ನೀರಾವರಿ ಯೋಜನೆಗಳನ್ನು ಪೂರೈಸಬೇಕು. ಈಗ ಕಛೇರಿಯ ವಿಚಾರದಲ್ಲಿ

12.00 ಪಿ.ಎಂ.

ನಮ್ಮ ಪಕ್ಷ ಹಾಗೂ ನಮ್ಮ ಸರ್ಕಾರದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಜೆ.ಹೆಚ್.ಪಟೇಲರು ಮತ್ತು ನಾವೆಲ್ಲರೂ ಒಂದು ತೀರ್ಮಾನಕ್ಕೆ ಬಂದಿದ್ದೆವು. ನಾವು ಈ ರಾಜ್ಯದ ಜನತೆಗೆ, ರೈತರಿಗೆ ದ್ರೋಹವನ್ನು ಮಾಡತಕ್ಕಂತಹ ಕೆಲಸವನ್ನು ಆಗ ನಾವು ಮಾಡಲಿಲ್ಲ. ಅವತ್ತಿನ ರಾಜ್ಯದ ಹಿತದೃಷ್ಟಿಯಿಂದ ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೆವು. ಅದು ಬೇರೆ ಹೋಗತಕ್ಕಂಥದ್ದು ಎಂದು ತಾವು ಮಾತನಾಡಿದ್ದೀರಿ. ಇದು ಒಪ್ಪಂದದ ಮೂಲಕ ಹಾಗೂ ಸೌಹಾರ್ದಯುತವಾಗಿ ಪರಿಹಾರ ಆಗಬೇಕು. ನಮಗೂ ಮತ್ತು ಕೇಂದ್ರ ಸರ್ಕಾರಕ್ಕೂ ಇರುವ ಸಂಬಂಧದ ವಿಚಾರದಲ್ಲಿ, ಈ ನೀರನ್ನು ಹಂಚಿಕೊಳ್ಳುವಂತಹ ವಿಚಾರದಲ್ಲಿರತಕ್ಕಂಥದ್ದರ ಬಗ್ಗೆ ಯೋಚನೆಯನ್ನು ಮಾಡುವುದರ ಜೊತೆಗೆ ಈ ನೀರಾವರಿ ಯೋಜನೆಗಳನ್ನು ಮುಗಿಸುವುದಕ್ಕೆ ಒಂದು ಟೈಮ್‌ಬೌಂಡ್ ಪ್ರೋಗ್ರಾಮನ್ನು ಹಾಕುವುದಕ್ಕೆ ಆಗಲಿಲ್ಲ. ಮ್ಯಾನಿಫೆಸ್ಟೋದಲ್ಲಿ ಈಗಾಗಲೇ ನಾಗಾರ್ಜುನ ಸಾಗರದ ಬಗ್ಗೆ ಹೇಳಿಬಿಟ್ಟಿದ್ದೀರಿ; ಆದರೆ ಅದನ್ನು ಮಾಡುವುದಕ್ಕೆ ಆಗಲಿಲ್ಲ. ಈ ಮ್ಯಾನಿಫೆಸ್ಟೋದಲ್ಲಿ ನಾಗಾರ್ಜುನ ಸಾಗರ ಬಗ್ಗೆ ಹೇಳಿರುವ ಹಾಗೆ ಮಾಡಬೇಕಾದರೆ ನೀವೆಲ್ಲರೂ ನಮ್ಮ ಕೋ ಆಪರೇಷನ್ ಮತ್ತು ಕಾನ್‌ಫಿಡೆನ್ಸ್‌ನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ಏನೂ ಬಂಡವಾಳ ಇಲ್ಲದೆ ಇರುವಂಥದ್ದು ಇದೆ ಅದಕ್ಕೋಸ್ಕರವೇ ನಾನು ಹೇಳಿದ್ದು. ಈ ನೀರಾವರಿ ಯೋಜನೆಗಳನ್ನು ಮುಗಿಸಲಿಕ್ಕೆ 2002,2003,2004 ಎಂದು ಈ ಪ್ರಾಜೆಕ್ಟ್‌ಗೆ ಒಂದು ಟೈಮ್ ಫ್ರೇಮ್‌ನ್ನು ಹಾಕಿಕೊಳ್ಳಿ ಎಂದು ಹೇಳುತ್ತೇನೆ. IIಇನ್ನು ವಿದ್ಯುತ್‌ನ ಕೊರತೆಯನ್ನು ನೀಗಿಸುವಂತಹ ವಿಚಾರದಲ್ಲಿ ನಮ್ಮ ರಾಜ್ಯದಲ್ಲಿ ಇವತ್ತು 3000 ಮೆಗಾವ್ಯಾಟ್‌ನ ವಿದ್ಯುತ್ ಕೊರತೆ ಇದೆ. ನಾವು 300 ಮೆಗಾವ್ಯಾಟ್ ವಿದ್ಯುತ್‌ನ ಕೊರತೆಯನ್ನು ಇಟ್ಟುಕೊಂಡು, ರೈತರಿಗೆ ಉಚಿತವಾಗಿ ವಿದ್ಯುತ್‌ನ್ನು ಕೊಡುತ್ತೇವೆಂದು ಹೇಳಿದರೆ ಹೇಗೆ ಕೊಡುವುದಕ್ಕೆ ಸಾಧ್ಯ. It is all fooling the public. It is not possible.

ಈ ವಿಚಾರದಲ್ಲಿ ಇಷ್ಟೆ ಒಂದು ಟೈಮ್ ಪ್ರೋಗ್ರಾಮನ್ನು ಹಾಕಿಕೊಳ್ಳೋಣ. II ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಈ ರಸ್ತೆಗಳ ರಿಪೇರಿಯ ಬಗ್ಗೆ ಇದೊಂದು ವಿಚಾರದಲ್ಲಿ ನಾವು ನಬಾರ್ಡ್‌ನ ಸಹಕಾರದಿಂದ ಮಾಡುವುದಕ್ಕೆ ಹೊರಟ್ಟಿದ್ದೆವು. ಇದಕ್ಕಾಗಿ ಬೇರೆ ಬೇರೆ ಮೂಲಗಳಿಂದ ಹಣವನ್ನು ಸಂಗ್ರಹ ಮಾಡಬೇಕೆಂದು ಪ್ರಯತ್ನವನ್ನು ಮಾಡಿದೆವು. ಆದರೆ ನಮಗೆ ಫಲ ಸಿಗುವಷ್ಟರಲ್ಲಿ ನಾವು ಅಧಿಕಾರವನ್ನು ಕಳೆದುಕೊಂಡಿದ್ದೇವೆ. ಈ ರಸ್ತೆಗಳ ರಿಪೇರಿಯ ಬಗ್ಗೆ ತಾವು ಆದ್ಯತೆಯನ್ನು ಕೊಟ್ಟಿದ್ದೀರೆಂದು ನಾನು ಪತ್ರಿಕೆಗಳಲ್ಲಿ ಓದಿದೆ. ಬೆಂಗಳೂರು ಮೈಸೂರು ರಸ್ತೆಯಲ್ಲಿ ವಿಜಯದಶಮಿಯ ಹಬ್ಬಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೋಗುವಾಗ ರಸ್ತೆಯನ್ನು ಇನ್‌ಸ್ಪೆಕ್ಟ್ ಮಾಡುತ್ತಾರೆ; ಹಾಗೆಯೇ ಹೊಸೂರು ರೋಡನ್ನು ಸಹ ಇನ್‌ಸ್ಪೆಕ್ಟ್ ಮಾಡಿ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದಾರೆ ಎಂದು ಇವತ್ತಿನ ಪತ್ರಿಕೆಗಳಲ್ಲಿ ಬಂದಿದೆ. We are happy about it. ತಾವು ಇದನ್ನು ಮುಂದುವರಿಸುವುದರ ಜೊತೆಗೆ, ಮಾನ್ಯ ಧರ್ಮಸಿಂಗ್‌ರವರು ಬಹಳ ದಕ್ಷ ಆಡಳಿತಗಾರರು, ಅವರು ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಯಾಗಿ ಕೆಲಸ ಮಾಡಿರುವುದನ್ನು ನಾವು ಮರೆತಿಲ್ಲ. ಈಗ ತಮಗೆ ಬಹಳ ದೊಡ್ಡದಾದ ಗುರುತರವಾದ ಜವಾಬ್ದಾರಿ ಇದೆ. ನಮ್ಮ ರಾಜ್ಯಕ್ಕೆ ಬಹಳ ಜನ ಹೊರಗಡೆಯಿಂದ ವಿದೇಶದಿಂದ ಬರುತ್ತಿದ್ದಾರೆ. ಅವರೆಲ್ಲರೂ ನೋಡಿ ಮೆಚ್ಚುವಂತಾಗಬೇಕು. ನಮ್ಮ ರಸ್ತೆಗಳು ನಮ್ಮ ರಾಜ್ಯದ ಕೈಗೆ ಮುಖ ಎನ್ನುವುದು ನಮ್ಮ ಗಮನದಲ್ಲಿದೆ. ನಾವು ಇದರಲ್ಲಿ ಫೇಲಾಗಿದ್ದೇವೆ ಎಂದು ತಾವು ಸಹ ಫೇಲಾಗುವುದು ಬೇಡ.

I wish you all the best. ದಯವಿಟ್ಟು ಆ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಒಂದು ಟೈಮ್-ಬೌಂಡ್ ಪ್ರೋಗ್ರಾಮನ್ನು ಹಾಕಿಕೊಳ್ಳಬೇಕು. ಒಟ್ಟಿನಲ್ಲಿ ರಾಜ್ಯದಲ್ಲಿ ರಸ್ತೆಗಳು, ವಿದ್ಯುತ್‌ನ ಕೊರತೆ, ನೀರಾವರಿ ಯೋಜನೆಗಳು ಈ ಮೂರು ವಿಚಾರಗಳಲ್ಲಿ ಅಭಿವೃದ್ಧಿ ಕೆಲಸಗಳಿಗೆ ಒಂದು ಟೈಮ್‌ಬೌಂಡ್ ಲಿಮಿಟ್‌ನ್ನು ಹಾಕಿಕೊಳ್ಳದೆ ಹೋದರೆ ಅದು ಏನು ಉಪಯೋಗವಾಗುವುದಿಲ್ಲವೆಂದು ಹೇಳುತ್ತೇನೆ ಇವತ್ತು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ದಾರಿ ತಪ್ಪುತ್ತಿದೆ. ನೀವು ಕಾಂಗ್ರೆಸ್ ಇರಬಹುದು, ಆದರೆ ನೀವು ಹೋಗಿರುವುದು ತಪ್ಪಿದೆ ಎಂದು ನಾನು ಹೇಳುವುದಿಲ್ಲ. ನಿಮ್ಮ ಸರ್ಕಾರ, ಯಾವ ವರ್ಗದ ಜನರಿಂದ ಓಟನ್ನು ತೆಗೆದುಕೊಂಡಿದ್ದೀರಾ, ಇದರಲ್ಲಿ ಬಡವರು, ಹಿಂದುಳಿದ ವರ್ಗದವರು ಅಲ್ಪಸಂಖ್ಯಾತರು, ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ವರ್ಗದವರು, ಆ ವರ್ಗದ ಜನಗಳನ್ನು ಮಂತ್ರಿಗಳನ್ನಾಗಿ ಮಾಡುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ತಾವು ಆ ಜನಗಳಿಗೆ ಆರ್ಥಿಕ ಶಕ್ತಿಯನ್ನು ತುಂಬಬೇಕಾಗುತ್ತದೆ. ಆ ಕೆಲಸಗಳಿಗೆ ಆದ್ಯತೆಯನ್ನು ಕೊಡದೆ ಹೋದರೆ "ಮರಳಿ ಮಣ್ಣಿಗೆ" ಎನ್ನುವ ರೀತಿಯಲ್ಲಿ ಮತ್ತೇ ಅದೇ ದಾರಿಯನ್ನು ನೀವು ಸಹಿತ ಹಿಡಿಯಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಮಾನ್ಯ ರಾಜ್ಯಪಾಲರ ಬಗ್ಗೆ ನಮಗೆಲ್ಲಾ ಬಹಳ ಗೌರವವಿದೆ. ಅವರ ಮೂಲಕವಾಗಿ ಕಾಂಗ್ರೆಸ್ ಪಕ್ಷದ ನಾಯಕತ್ವದಲ್ಲಿ ಇರತಕ್ಕಂತಹ ಸರ್ಕಾರ ಮಾಡಿರತಕ್ಕಂತಹ ಭಾಷಣ ಇದು. ನಾನು ಮಾನ್ಯ ರಾಜ್ಯಪಾಲರಿಗೆ ಅಭಿನಂದಿಸಿ, ಈ ಒಂದು ಭಾಷಣವನ್ನು ವಿರೋಧ ಮಾಡಿ, ಈ ಭಾಷಣದಲ್ಲಿ ಯಾವುದೇ ಸತ್ವವಿಲ್ಲ; ಇದರಲ್ಲಿ ಯಾವುದೇ ಒಂದು ಅಂಶಗಳು ಸಹ ಇಲ್ಲ; ಇದರಲ್ಲಿ ಒಂದು ಗೊತ್ತುಗುರಿಯಿಲ್ಲ ಎಂದು ಹೇಳುತ್ತೇನೆ ಇದೇ ಸಂದರ್ಭದಲ್ಲಿ ನಮ್ಮ ಮಾನ್ಯ ರಾಜ್ಯಪಾಲರಾದ ಶ್ರೀ ಖುರ್ಷಿದ್ ಅಲಂಖಾನ್‌ರವರು ಈ ರಾಜ್ಯದ ದೀರ್ಘಾವಧಿಯ ರಾಜ್ಯ ಪಾಲರಾಗಿ ಬಹಳ ಒಳ್ಳೆಯ ರೀತಿಯಿಂದ ನಡೆದುಕೊಂಡಿದ್ದಾರೆ. ನಮ್ಮ ವಿಶ್ವವಿದ್ಯಾ ನಿಲಯದ ಕುಲಪತಿಗಳಾಗಿ ಕೆಲಸ ಮಾಡಿದಂತಹ ಅವರ ಕೈಯಲ್ಲಿ ಈ ಭಾಷಣ, ಶಕ್ತಿ ಇಲ್ಲದೆ ಇರುವಂತಹ ಇದು ಬಹುಶಃ ಅವರ ಕೊನೆಯ ಭಾಷಣವಾಗಿರಬಹುದು. ಹೊಸದಾಗಿ ಸರ್ಕಾರ ರಚನೆಯಾದ ಸಂದರ್ಭದಲ್ಲಿ ಜನಗಳಲ್ಲಿ ಲವಲವಿಕೆ ಇರುತ್ತದೆ. ಮಾನ್ಯ ಸಭಾನಾಯಕರು ಮತ್ತು ನಾವೆಲ್ಲಾ ಮೊನ್ನೆ ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ಸೇರಿದ್ದೆವು. ಎಲ್ಲಾ ಎಂಎಲ್‌ಎಗಳು ಅವರವರ ಕ್ಷೇತ್ರಕ್ಕೆ ಬೇಗಬೇಗ ಹೋಗಬೇಕೆಂದು ತಿಳಿಸಿದ್ದಾರೆಂದು ಹೇಳಿದರು. ಅವರು ಏತಕ್ಕಾಗಿ ಬೇಗ ಹೋಗ ಬೇಕೆಂದು ಹೇಳುತ್ತಿದ್ದಾರೆ? ನಮ್ಮ ಕ್ಷೇತ್ರದ ಜನಗಳು ಓಟು ಕೊಟ್ಟಿದ್ದಾರೆ, ಅವರಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಹೋಗಬೇಕೆಂದು ಹೇಳುತ್ತಿದ್ದಾರೆ. ಅಂದರೆ ಹೊಸದಾಗಿ ಏನೋ ಸರ್ಕಾರ ಅಧಿಕಾರಕ್ಕೆ ಬರುತ್ತದೆಂದು ಹೇಳಿ, ಅದನ್ನು ಈ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರತಿಬಿಂಬಿಸಲಿಲ್ಲ ಎನ್ನತಕ್ಕಂತಹ ಮಾತನ್ನು ಹೇಳಿ, ಇದನ್ನು ವಿರೋಧ ಮಾಡುತ್ತೇನೆ. ಮಾನ್ಯ ಛೇರ್ಮನ್‌ರವರೆ ಈ ಬಗ್ಗೆ ನಮಗೆ ಮಾತನಾಡಲು ಸಾಕಷ್ಟು ಸಮಯಾವಕಾಶವನ್ನು ಕೊಟ್ಟಿದ್ದೀರಿ, ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಸುಭಾಷ್ ಗುತ್ತೇದಾರ್ (ಅಳಂದ):- ಸನ್ಮಾನ್ಯ ಛೇರ್ಮನ್‌ರವರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ, ಮೊನ್ನೇ ನಡೆದಂತಹ ಚುನಾವಣೆಗಳು ನ್ಯಾಯಯುತವಾಗಿ, ಶಾಂತಿಯುತವಾಗಿ ನಡೆದಿದೆ ಎಂದು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಬಹಳಷ್ಟು ಅನ್ಯಾಯ, ಗೂಂಡಾಗಿರಿ ಇವತ್ತು ನಡೆದಿದೆ; ಕೊಲೆಗಡುಕರನ್ನು ತೆಗೆದುಕೊಂಡು ಬಂದು ಇವತ್ತು ಚುನಾವಣೆಯನ್ನು

ಮಾಡಿದ್ದಾರೆ; ಮತದಾರರಿಗೆಲ್ಲಾ ಬೆದರಿಕೆಯನ್ನು ಹಾಕಿದ್ದಾರೆ. ಊರೂಗೆ ಹೋಗಿ ಕೊಲೆಗಡುಕರನ್ನು ಸಂಘಟನೆ ಮಾಡಿಕೊಂಡು ಇವತ್ತು ಗುತ್ತೇದಾರ್ ಪರವಾಗಿ ಪ್ರಚಾರ ಮಾಡದರೆ ನಿನ್ನನ್ನು ಕೊಲೆ ಮಾಡುತ್ತೇವೆಂದು ಹೆದರಿಸಿ ಇವತ್ತು ಚುನಾವಣೆಯನ್ನು ಮಾಡಿದ್ದಾರೆ. ಇದಲ್ಲದೆ ಆ ಒಂದು ಭಾಗದ ಎಲ್ಲಾ ಹಳ್ಳಿಗಳಲ್ಲಿ ಇವತ್ತು ಸರಸಂಬ, ಸವಲೇಶ್ವರ ಮುಂತಾದ ಕೆಲವು ಹಳ್ಳಿಗಳಲ್ಲಿ ಭಯದ ವಾತಾವರಣವಿದೆ. ಇವತ್ತು ಆ ಊರಿಗೆ ಹೋದರೆ ಅಲ್ಲಿ ನನ್ನ ಮತದಾರರಿಗೆ ಬಹಳ ತೊಂದರೆಯನ್ನು ಕೊಡುತ್ತಿದ್ದಾರೆ ಎಂದು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ಹೇಳಬೇಕೆಂದರೆ ನಾನು ಚುನಾವಣೆಯಲ್ಲಿ ಆರಿಸಿ ಬಂದ ಬಳಿಕ ಆ ಕೊಲೆಗಡುಕರನ್ನು ತೆಗೆದುಕೊಂಡು ಇನ್ನು ಬಹಳ ದಿವಸಗಳ ಕಾಲ ಸುಭಾಷ್‌ಗುತ್ತೇದಾರ್ ಇರುವುದಿಲ್ಲ; ಮುಂದೆ ನಾವೇ ಎಂಎಲ್‌ಎಗಳಾಗುತ್ತೇವೆ, ನಾವು ಕೊಲೆಯನ್ನು ಕೂಡ ಮಾಡುತ್ತೇವೆ ಎಂಬ ಬೆದರಿಕೆಯನ್ನು ಕೂಡ ಇವತ್ತು ಹಾಕುತ್ತಿದ್ದಾರೆ. ಇವತ್ತು ನನ್ನ ಭಾಗದಲ್ಲಿ ಆ ಒಂದು ಭಯದವಾತಾವರಣವಿದೆ. ಹಿರಿಯರಾದ ಸನ್ಮಾನ್ಯ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆಯವರು ಇವತ್ತು ಗೃಹ ಮಂತ್ರಿಗಳಾಗಿದ್ದಾರೆ. ನನ್ನ ಕ್ಷೇತ್ರದ ಬಗ್ಗೆ ಅವರಿಗೆ ಎಲ್ಲಾ ತಿಳಿದಿದೆ. ನನ್ನ ಕ್ಷೇತ್ರಕ್ಕೆ ಈ ಒಂದು ನ್ಯಾಯವನ್ನು ಇನ್ನು ಮುಂದೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯವೇನೆಂದರೆ, ಮೊದಲು ಉಪಸಭಾಪತಿಗಳಾಗಿದ್ದಂತಹ ಸನ್ಮಾನ್ಯ ಶ್ರೀ ಬಿ.ಆರ್.ಪಾಟೀಲರಿಗೆ ವೈಡ್‌ಸ್ಕೇಲ್ ಸೆಕ್ಯೂರಿಟಿಯನ್ನು ಕೊಟ್ಟಿದ್ದಾರೆ. ಸುಮಾರು 14 ಜನ, ಅದರಲ್ಲಿ ಇಬ್ಬರು ಗಾರ್ಡ್, ಒಬ್ಬ ಜಮೇದಾರ್, 4ಜನ ಪೊಲೀಸ್, ಒಂದು ಫಾಲೋವ್ಯಾನ್‌ನ್ನು ಕೊಟ್ಟಿದ್ದಾರೆ. ಮಾನ್ಯ ಗೃಹಮಂತ್ರಿಯವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಈ ಸದನದಲ್ಲಿದ್ದಾರೆ, ಅವರು ಇದನ್ನು ಗಮನಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ; ಇದರಿಂದ ತಿಂಗಳಿಗೆ ಸರ್ಕಾರಕ್ಕೆ ಸುಮಾರು 60 ಸಾವಿರ ರೂಪಾಯಿಗಳ ಖರ್ಚುಬರುತ್ತದೆ. ಮೊದಲು ರಾಷ್ಟ್ರಪತಿಗಳ ಅವಧಿ ಮುಗಿದ ಬಳಿಕ ಅವರಿಗೆ 6 ತಿಂಗಳುಗಳ ಕಾಲ ಸೆಕ್ಯುರಿಟಿಯನ್ನು ಕೊಡುತ್ತಾರೆ. ಅಂತಹ ಒಂದು ಸೆಕ್ಯುರಿಟಿಯನ್ನು ಮಾನ್ಯ ಬಿ.ಆರ್.ಪಾಟೀಲರಿಗೆ ಕೊಟ್ಟಿದ್ದಾರೆ. ಅವರು ಒಂದು ಸೆಕ್ಯುರಿಟಿಯನ್ನು ತೆಗೆದುಕೊಂಡು, ಇವತ್ತು ಆ ಕೊಲೆಗಡುಕರನ್ನು ಬೆಂಬಲಕ್ಕೆ ತೆಗೆದುಕೊಂಡು ನನಗೆ ಹೆದರಿಕೆಯನ್ನು ಹಾಕಿಸುತ್ತಿದ್ದಾರೆ. ಇನ್ನು ಹೆಚ್ಚಿಗೆ ಇದರ ಬಗ್ಗೆ ನಾನು ಮಾತನಾಡಲಾರದೆ, ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕ ವಿಚಾರಗಳಿಗೆ ಹೆಚ್ಚು ಒತ್ತು ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತು ನನ್ನ ಕ್ಷೇತ್ರ ಆಳಂದದಲ್ಲಿ ಇರತಕ್ಕ ಆಸ್ಪತ್ರೆ ಏನಿದೆ ಅಲ್ಲಿನ ವಾತಾವರಣ ಕೆಟ್ಟು ಹೋಗಿದೆ. ಅದನ್ನು ಸುಧಾರಿಸುವ ದೃಷ್ಟಿಯಿಂದ ಮಾನ್ಯ ಆರೋಗ್ಯಮಂತ್ರಿಗಳು ಅದಕ್ಕೆ ಗಮನ ನೀಡಬೇಕು. ಬಹಳಷ್ಟು ಹಳ್ಳಿಗಳಲ್ಲಿ ಪಿ.ಎಚ್.ಸಿ.ಸೆಂಟರ್‌ಗಳಿವೆ. ಅಲ್ಲಿ ಡಾಕ್ಟರುಗಳು ಇಲ್ಲ. ಕೆಲವು ಊರುಗಳಲ್ಲಿ ಪಿ.ಎಚ್.ಸಿ. ಸೆಂಟರ್ಸ್ ತೆರೆದಿದ್ದೇವೆ. ಎರಡು ವರ್ಷಗಳಾಯಿತು ಅಲ್ಲಿ ಡಾಕ್ಟರುಗಳು ಇಲ್ಲ. ಹಳ್ಳಿಯ ಜನರಿಗೆ ಬಹಳಷ್ಟು ತೊಂದರೆಯಿದೆ; ಡಾಕ್ಟರುಗಳ ವ್ಯವಸ್ಥೆಯಾಗಬೇಕು. ಅವರಿಗೆ ಏನಾದರೂ ಖಾಯಿಲೆಯಾದರೆ ಪಟ್ಟಣಕ್ಕೆ ಬರಬೇಕು. ಅಲ್ಲಿ ಬಡವರು ಡಾಕ್ಟರ್‌ಗೆ ತೋರಿಸಬೇಕಾದರೆ ಅವರಿಗೆ ಅನುಕೂಲವಿಲ್ಲ. ಅದಕ್ಕೆ ಹಳ್ಳಿಗಳಿಗೆ ಹೆಚ್ಚು ಡಾಕ್ಟರುಗಳನ್ನು ಒದಗಿಸಬೇಕೆಂದು ಹೇಳುತ್ತೇನೆ. ಇವತ್ತು ನಮ್ಮವರೇ ಆದ ಮಾನ್ಯ ಮಲಕರೆಡ್ಡಿಯವರು ಆರೋಗ್ಯ ಮಂತ್ರಿಗಳಾಗಿದ್ದಾರೆ. ಅವರು ನಮ್ಮ ಆಳಂದ ಮತ್ತು ಸುತ್ತ ಮುತ್ತು ಹಳ್ಳಿಗಳ ಆಸ್ಪತ್ರೆಗೆ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ಸುಧಾರಿಸಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. IIಇನ್ನು ಕುಡಿಯುವ ನೀರಿನ

ಬಗ್ಗೆ ಹೇಳಿದ್ದಾರೆ. ನನ್ನ ಕ್ಷೇತ್ರ ಒಂದು ಮಳೆಯಾಧಾರಿತ ಒಂದು ಪ್ರದೇಶ. ಮಳೆ ಒಳ್ಳೆಯ ರೀತಿಯಿಂದ ಬಂದರೆ ಅಲ್ಲಿನ ಬೋರ್‌ವೆಲ್ ಮತ್ತು ಬಾವಿಗಳಲ್ಲಿ ನೀರು ಬರಲಿಕ್ಕೆ ಅನುಕೂಲವಾಗುತ್ತದೆ. ಮಳೆ ಬರಲಿಲ್ಲವೆಂದರೆ ಬಹಳಷ್ಟು ಊರುಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದ್ದ ಕಾರಣ, ಅಮಾತ್ಯ ಎಂದು ಹೇಳುವ ಒಂದು ಡ್ಯಾಮ್ ಆ ಡ್ಯಾಮ್‌ನಿಂದ ತಾವು ನೀರಿನ ಕೊರತೆಯಿರುವ ಪ್ರದೇಶಗಳಿಗೆ ನೀರನ್ನು ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ, ನಿಂಬರ್ಗ ಗ್ರಾಮದಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಿಗೆ ಇದೆಯೆಂದು ಡಾಕ್ಟರ್ ಸರ್ಟಿಫೈ ಮಾಡಿದ್ದಾರೆ. ನಿಂಬರ್ಗ ಗ್ರಾಮದಲ್ಲಿರುವ ಬಾವಿಗಳಲ್ಲಿ ಫ್ಲೋರೈಡ್ ಅಂಶ ಹೆಚ್ಚು ಇದೆ, ಆ ನೀರನ್ನು ಕುಡಿಯಬಾರದೆಂದು ಡಾಕ್ಟರ್ ಹೇಳಿದ್ದಾರೆ. ಫ್ಲೋರೆಸಸ್ ಎಂಬ ಒಂದು ರೋಗದಿಂದ ಆಳಂದದ ಜನರು ಬಳಲುತ್ತಿದ್ದಾರೆ. ಜನರಿಗೆ ಹಲ್ಲು, ವಸಡು, ಎಲುಬುಗಳ ರೋಗ ಬರುತ್ತದೆ. ಡಾಕ್ಟರ್ ಏನು ಹೇಳಿದ್ದಾರೆಂದರೆ, ಇನ್ನು ಹತ್ತು ವರ್ಷ ಇದೇ ನೀರು ಕುಡಿದರೆ ಅಲ್ಲಿ ಜನಸಂಖ್ಯೆ ಕಡಿಮೆಯಾಗುವ ಸಂಭವವಿದೆಯೆಂದು ಹೇಳಿದ್ದಾರೆ. ಅದರ ಸಲುವಾಗಿ ಈ ನಿಂಬರ್ಗ ಗ್ರಾಮಕ್ಕೆ ಅಮರ್ಜದಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರೈತರ ಬಗ್ಗೆ ಹೇಳುವುದಾದರೆ ನಮ್ಮದು ಮಳೆಯಾಧಾರಿತ ಪ್ರದೇಶ; ಇಲ್ಲಿ ನೀರಾವರಿ ಸೌಲಭ್ಯಗಳ ಹೇಳಿದ್ದಾರೆ; ಮಹಾರಾಷ್ಟ್ರದಲ್ಲಿರುವಂತೆ ಚೆಕ್‌ಡ್ಯಾಮ್, ನಾಲಾಡ್ಯಾಮ್ ಇವುಗಳನ್ನು ಹೆಚ್ಚಿನ ರೀತಿಯಲ್ಲಿ ಮಾಡಿಸಬೇಕೆಂದು ಹೇಳುತ್ತೇನೆ. ಏಕೆಂದರೆ ಮಳೆ ಬಿದ್ದು ನೀರೆಲ್ಲಾಹರಿದು ಹೋಗಿ ನಮ್ಮಲ್ಲಿ ಬಾವಿಯಲ್ಲಿ ನೀರು ಇರಲಾರದ ಹಾಗೆ ಆಗುತ್ತದೆ. ರೈತರಿಗೆ ಅನುಕೂಲ ಮಾಡಿಕೊಡಬೇಕಾದರೆ ಹೆಚ್ಚಿನ ರೀತಿಯಲ್ಲಿ ಸಣ್ಣ ಕೆರೆಗಳನ್ನು ಮಾಡಬೇಕು. ಮಹಾರಾಷ್ಟ್ರದ ರೀತಿಯಲ್ಲಿ ಚೆಕ್‌ಡ್ಯಾಮ್ ಮತ್ತು ನಾಲಾಡ್ಯಾಮ್‌ಗಳನ್ನು ಕಟ್ಟಿ ನೀರನ್ನು ಹಿಂಗಿಸುವ ಒಂದು ಪದ್ಧತಿಯನ್ನು ನಮ್ಮ ಏರಿಯಾದಲ್ಲಿ ಹೆಚ್ಚು ತರಬೇಕೆಂದು ಹೇಳುತ್ತೇನೆ. ರೈತ ಬೆಳೆ ಬೆಳೆದು ಇವತ್ತು ಮಾರಾಟ ಮಾಡಲಿಕ್ಕೆ ಹೋದಾಗ, ಒಳ್ಳೆಯ ಬೆಲೆ ಅವನಿಗೆ ಸಿಗುತ್ತಿಲ್ಲ. ಅಲ್ಲಿರತಕ್ಕ ಕಮಿಷನ್ ಏಜೆಂಟರು ಒಂದು ದಿವಸ ರೇಟ್ ಹೆಚ್ಚು ಮಾಡುತ್ತಾರೆ; ಬಡವರ ಎಲ್ಲಾ ದವಸ ಧಾನ್ಯಗಳು ಮಾರ್ಕೆಟ್‌ಯಾರ್ಡ್‌ನಲ್ಲಿ ಬಂದು ಬಿದ್ದ ಬಳಿಕ ರೇಟ್ ಕಡಿಮೆ ಮಾಡುತ್ತಾರೆ; ಈ ರೇಟನ್ನು ಅರ್ಧಕ್ಕಿಂತ ಹೆಚ್ಚು ಕಡಿಮೆ ಮಾಡುತ್ತಾರೆ. ಅವರೆಲ್ಲಾ ಬಡವರು ಇರುವುದರಿಂದ ರೈತರು ತಂದಂತಹ ಮಾಲನ್ನು ಮಾರಿ ಹೋಗುತ್ತಾರೆ. ನಮ್ಮ ಭಾಗದ ಎಲ್ಲಾ ದವಸಧಾನ್ಯಗಳು ಇವತ್ತು ಮಹಾರಾಷ್ಟ್ರದ ಲಾಥೋರ್ ಮಾರುಕಟ್ಟೆಗೆ ಹೆಚ್ಚು ಹೋಗುತ್ತದೆ. ಅದರ ಸಲುವಾಗಿ ಎಪಿಎಂಸಿಯವರು ಒಂದರ ರೇಟ್ ಫಿಕ್ಸ್ ಮಾಡಿದರೆ, ವ್ಯಾಪಾರಸ್ಥರು ಏನು ರೇಟ್ ಇರುತ್ತದೆ ಅದಕ್ಕಿಂದ ಹೆಚ್ಚಿನ ರೇಟಿಗೆ ಕೊಳ್ಳಬೇಕು, ಇಲ್ಲದಿದ್ದರೆ ಇರುವಂತಹ ರೇಟಿಗೆ ಎಪಿಎಂಸಿಗೆ ಹಾಕುವಂತಹ ವ್ಯವಸ್ಥೆಯನ್ನು ಮಾಡಬೇಕು. ಈ ರೀತಿ ಮಾಡಿದರೆ ನಮ್ಮ ಏರಿಯಾದ ರೈತರಿಗೆ ಬಹಳ ಅನುಕೂಲವಾಗುತ್ತದೆಂದು ಇಲ್ಲಿ ಹೇಳುತ್ತೇನೆ.

ಇನ್ನು ಕೆಇಬಿ ಬಗ್ಗೆ ಹೇಳುವುದಾದರೆ, ನಮ್ಮ ಪ್ರದೇಶಗಳಲ್ಲಿ ಕೆಇಬಿಯ ಸಬ್‌ಸ್ಟೇಷನ್‌ಗಳು ಬಹಳ ಕಡಿಮೆ ಇವೆ. ಇದರಿಂದ ರೈತರಿಗೆ ಬಹಳ ಅನಾನುಕೂಲವಾಗುತ್ತಿದೆ. ಈಗ ತಾನೇ ನಮ್ಮ ಮಾನ್ಯ ಸ್ನೇಹಿತರು ಹೇಳಿದಹಾಗೆ ಮೋಟಾರು ಇದ್ದ ಮನೆಯಲ್ಲಿ ಮಲಗಬೇಕಾಗುತ್ತದೆ,

ಏಕೆಂದರೆ ಕರೆಂಟ್ ಯಾವಾಗ ಬರುತ್ತದೆ ಆಗ ಚಾಲೂ ಮಾಡಬೇಕಾಗುತ್ತದೆ. ಅಂತಹ ಪರಿಸ್ಥಿತಿಯನ್ನು ಹೋಗಲಾಡಿಸುವ ಸಲುವಾಗಿ ಸಬ್-ಸ್ಟೇಷನ್‌ಗಳನ್ನು ಹೆಚ್ಚು ತೆರೆಯಬೇಕು. ನಮ್ಮಲ್ಲಿ ದೊಡ್ಡ ಗ್ರಾಮಗಳು, ಮಾದರಿ ಗ್ರಾಮಗಳಲ್ಲಿ ಒಂದು ಸಬ್‌ಸ್ಟೇಷನ್ ತೆರೆಯಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ರಸ್ತೆಯ ವ್ಯವಸ್ಥೆ, ನನ್ನ ಕ್ಷೇತ್ರದ ವಾರ್ಡ್ ಟು ರಿಬ್ಬನ್‌ಪಲ್ಲಿ ಮಹಾರಾಷ್ಟ್ರದಿಂದ ಬಾಂಬೆ, ಲಾಥೂರ ಮಹಾರಾಷ್ಟ್ರದ ಎಲ್ಲಾ ಲಾರಿಗಳು ನಮ್ಮ ಆಳಂದ ಕ್ಷೇತ್ರದ ಮೂಲಕ ಹಾದುಹೋಗುತ್ತವೆ. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಸಿಮೆಂಟ್ ಫ್ಯಾಕ್ಟರಿಗಳು ಬಹಳಷ್ಟು ಇವೆ. ಬಹಳಷ್ಟು ಲಾರಿಗಳು ಬಹಳ ಲೋಡ್ ತೆಗೆದುಕೊಂಡು ಆ ರೋಡ್‌ನಲ್ಲಿ ಹೋಗುತ್ತವೆ. ನಮ್ಮ ಕ್ಷೇತ್ರದಲ್ಲಿ ರೋಡ್ ಎಷ್ಟು ಕೆಟ್ಟುಹೋಗಿದೆ ಅಂದರೆ ಲೋಕೋಪಯೋಗಿ ಇಲಾಖೆಯ ರಸ್ತೆಗಳಲ್ಲಿ ಬಹಳ ಗುಂಡಿಗಳು ಬಿದ್ದಿರುವುದರಿಂದ ಆ ರಸ್ತೆಗಳನ್ನು ನೀವು ಹೊಸದಾಗಿಯೇ ಮಾಡಬೇಕು. ಮಹಾರಾಷ್ಟ್ರಕ್ಕೆ ಹೋಲಿಸಿ ನೋಡಿದರೆ ಅಲ್ಲಿನ ರೋಡಿಗೆ ನಮ್ಮ ರೋಡಿಗೆ ಬಹಳ ವ್ಯತ್ಯಾಸವಿದೆ. ಇದನ್ನು ಬಾರ್ಡರ್ ಇರುವುದರಿಂದ ಅಲ್ಲಿನ ಜನ ಲಾರಿಯವರು ಮಹಾರಾಷ್ಟ್ರ ಬಾರ್ಡರ್ ಮುಗಿಸಿ ಕರ್ನಾಟಕಕ್ಕೆ ಬಂದರೆ ಅವರು ಹಾಸ್ಯಾಸ್ಪದದ ಮಾತನ್ನು ಆಡುತ್ತಿದ್ದಾರೆ. ರೋಡ್ ಮಾಡುವಂತಹ ಪದ್ಧತಿಯನ್ನು ಇವತ್ತು ತಾವು ಬದಲಾಯಿಸಬೇಕು. ಏಕೆಂದರೆ ನಮ್ಮಲ್ಲಿ ರಸ್ತೆಗಳ ಡಾಂಬರೀಕರಣ ಮಾಡಬೇಕೆಂದರೆ ಬರೀ 3ಲಕ್ಷ ರೂಪಾಯಿಗಳು ನಮ್ಮ ಹತ್ತಿರ ಖರ್ಚು ಇರುತ್ತದೆ. ಅದೇ ಮಹಾರಾಷ್ಟ್ರದವರು ಒಂದು ಕಿಲೋಮೀಟರ್ ರಸ್ತೆಗೆ 20-25 ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಮೊರುಂಬೇಸ್ ಸೋಲಿಂಗ್, ಮೆಟಲಿಂಗ್ ಮತ್ತು ಡಾಂಬರೀಕರಣ ಇಷ್ಟು ಥಿಕ್‌ನೆಸ್ ಅವರು ಜಾಸ್ತಿಯಿಟ್ಟು ಇವತ್ತು ಅವರು ರೋಡ್ ಮಾಡುತ್ತಾರೆ. ನಮ್ಮಲ್ಲಿ ಸಹ ಅದೇ ಪದ್ಧತಿಯನ್ನು ಅಳವಡಿಸಬೇಕೆಂದು ಹೇಳುತ್ತೇನೆ. ಇವತ್ತು ಬಹಳಷ್ಟು ನನ್ನ ಕ್ಷೇತ್ರದಲ್ಲಿ ಆಳಂದ ಮಾದನಿಬರ್ಗ, ಆಳಂದ-ನಿಂಬರ್ಗ ಮತ್ತು ಅಲ್ಲಿ ದತ್ತಾತ್ರೇಯ ಟೆಂಪಲ್ ಇರುವುದರಿಂದ ಮಹಾರಾಷ್ಟ್ರದಿಂದ ಬಹಳಷ್ಟು ಜನ ಪ್ರವಾಸಿಗರು ಬರುತ್ತಾರೆ. ದೊಡ್ಡ ದೊಡ್ಡ ಲಾರಿಗಳು ಸಿಮೆಂಟ್ ಫ್ಯಾಕ್ಟರಿ ಇರುವುದರಿಂದ ಅಲ್ಲಿಗೆ ಬರುತ್ತವೆ. ಆದಕ್ಕೆ ತಾವು ನಮ್ಮ ಕಡೆಯಲ್ಲಿ ರೋಡನ್ನು ಒಳ್ಳೆಯ ರೀತಿಯಲ್ಲಿ ಮಾಡಿಸಿಕೊಡುತ್ತೀರಿ ಎಂದು ನಾನು ನಂಬಿದ್ದೇನೆ. ನನ್ನ ಕ್ಷೇತ್ರದಲ್ಲಿನ ಎರಡು ಊರಿಗೆ ರೋಡೇ ಇಲ್ಲ; ರೋಡಿನ ಸಂಪರ್ಕವೇ ಇಲ್ಲ. ಅಲ್ಲಿ ಏನಾದರೂ ಹಾವು ಕಚ್ಚಿದರೆ ಡಿಲಿವರಿ ಟೈಮ್‌ನಲ್ಲಿ ಅವರು ಬೇಗ ಆಸ್ಪತ್ರೆಗೆ ಹೋಗಬೇಕಾದರೆ ಆಗುವುದೇ ಇಲ್ಲ. ಬಸವಂತವಾಡಿ ಎಂದು ಹೇಳಿ ಒಂದು ಹಳ್ಳಿ, ಬೆಣ್ಣಿಶಿರೂರು ಅಂತ ಒಂದು ಹಳ್ಳಿ ಈ ಎರಡು ಹಳ್ಳಿಗಳಿಗೆ ರೋಡೇ ಇಲ್ಲ. ನಾನೊಂದು ಸಲ ಬಸವಂತವಾಡಿಗೆ ಹೋದಾಗ, ಅಲ್ಲಿನ ಒಬ್ಬ ಹೆಣ್ಣು ಮಗಳಿಗೆ ಹಾವು ಕಚ್ಚಿದಾಗ, ಬೇಗ ಆಸ್ಪತ್ರೆಗೆ ಹೋಗಬೇಕಾದರೆ ರಸ್ತೆಯಿಲ್ಲ; ಅಲ್ಲಿಯೆ ಸತ್ತು ಹೋಗಬೇಕಾಗಿತ್ತು, ನಾನು ಹೋದ ಜೀಪಿನಲ್ಲಿ ಆಸ್ಪತ್ರೆಗೆ ಕಳುಹಿಸಿದಾಗ ಆ ಹೆಣ್ಣುಮಗಳ ಜೀವ ಉಳಿಯಿತು. ಅರ್ಧ ಕಿಲೋಮೀಟರ್ ದೂರ ರಸ್ತೆ ಮಾಡಿದರೆ ಅದು ಮೈನ್ ರಸ್ತೆಗೆ ಮುಟ್ಟುತ್ತದೆ. ಆ ಹೊಲದವರು ರಸ್ತೆ ಮಾಡಲಿಕ್ಕೆ ಸ್ಟೇ ತಂದಿರುವುದರಿಂದ ರಸ್ತೆ ಮಾಡುವುದನ್ನು ಬಿಟ್ಟಿದ್ದಾರೆ; ಆ ರೋಡನ್ನು ಕಂಪ್ಲೀಟ್ ಮಾಡುತ್ತಿಲ್ಲ. ಇವತ್ತು ಗೌರ್ನಮೆಂಟ್‌ನಿಂದ ಅಕ್ವೈರ್ ಮಾಡಿ ಸಣ್ಣ ಹಳ್ಳಿಗಳಿಗೂ ರೋಡ್ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಬಸ್ಸಿನ ಸೌಕರ್ಯ ಕೂಡ ಬಹಳಷ್ಟು ಊರಿಗೆ ಇಲ್ಲ. ಎಲ್ಲ ಹಳ್ಳಿಗಳಿಗೆ ಬಸ್ ಸೌಕರ್ಯ ಕೊಡುತ್ತೇವೆಂದು ಹೇಳುತ್ತಿದ್ದೀರಿ. ರೋಡ್ ಇಲ್ಲದೆ ಬಸ್ ಹೋಗಲಾರದೆ ಅಂತಹ ಊರುಗಳಿಗೆ ರೋಡ್ ಮಾಡಿಸಿ ಬಸ್ ಸೌಕರ್ಯ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಇವತ್ತು ನಮ್ಮದು ಹಿಂದುಳಿದ ಪ್ರದೇಶ. ಮೊದಲು ಹೆಚ್.ಕೆ.ಡಿ.ಬಿ.ಯಲ್ಲಿ ಒಬ್ಬ ಎಂ.ಎಲ್.ಎ.ಗೆ 50 ಲಕ್ಷ ರೂಪಾಯಿಗಳನ್ನು ಒಂದು ವರ್ಷಕ್ಕೆ ಕೊಡುತ್ತಿದ್ದರು. ಇಲ್ಲಿ ಸನ್ಮಾನ್ಯ ಹಿರಿಯ ಮಂತ್ರಿಗಳು ಇದ್ದಾರೆ ನಮ್ಮ ಹೈದರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶವಾಗಿದ್ದು ಅದು ಸುಧಾರಿಸಬೇಕಾದರೆ ಇನ್ನೂ 50ಲಕ್ಷ ಹೆಚ್ಚು, ಒಂದು ಕೋಟಿ ರೂಪಾಯಿಗಳನ್ನು ಒಬ್ಬ ಎಂ.ಎಲ್.ಎ.ಗೆ ತಾವು ಕೊಡುವ ಹಾಗೆ ಮಾಡಬೇಕೆಂದು ಕೇಳಿಕೊಂಡು, ಇನ್ನು ಹೆಚ್ಚಿಗೆ ಮಾತನಾಡಲಾರದೆ ಇದೆಲ್ಲವನ್ನೂ ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚನ್ನಬಸಪ್ಪ ಶಿವಳ್ಳಿ (ಕುಂದಗೋಳ):- ಮಾನ್ಯ ಸಭಾಧ್ಯಕ್ಷರೇ, ನಮ್ಮ ಧಾರವಾಡ ಜಿಲ್ಲೆಯಲ್ಲಿ ಕಳೆದ ಹದಿನೈದು ದಿವಸಗಳಿಂದ ಸುರಿಯುತ್ತಿರುವಂಥ ಭಾರಿ ಮಳೆಯಿಂದಾಗಿ ಪ್ರಮುಖವಾಗಿ ನಮ್ಮ ಜಿಲ್ಲೆಯಲ್ಲಿ ಬೆಳೆಯುವಂಥ ಮೆಣಸಿನಕಾಯಿ ಬೆಳೆ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ನಿಜವಾಗಿಯೂ ಅಲ್ಲಿಯ ರೈತರ ಪರಿಸ್ಥಿತಿ ಗಂಭೀರವಾಗಿದೆ. ಹೊಲದಲ್ಲಿ ಬೆಳೆದಂಥ ಶೇಂಗಾ ಬೆಳೆಯಂತೂ ನೀರಿನಲ್ಲಿ ತೇಲಿಕೊಂಡು ಹೋಗಿದೆ, ಶೇಂಗಾಬೆಳೆಯ ಚೀಲಗಳು ಕೂಡ ತೇಲಿಹೋಗಿದ್ದು ರೈತರಿಗೆ ತುಂಬಾಲುಕ್ಸಾನು ಆಗಿದೆ. ಇದರಿಂದಾಗಿ ಯಾವ ರೈತರು ಸಾಲಸೋಲ ಮಾಡಿಕೊಂಡು, ಗೊಬ್ಬರದ ಅಂಗಡಿಯಲ್ಲಿ ಸಾಲಮಾಡಿ, ಬ್ಯಾಂಕಿನಲ್ಲಿ ಸಾಲಮಾಡಿ, ಏನು ಬೆಳೆ ಬೆಳೆದರೋ ಆ ಸಾಲದಿಂದ ರೈತರ ಕೈಗೆ ಏನೂ ಸಿಗದಹಾಗೆ ತುಂಬಾ ಹಾನಿಯಾಗಿದೆ. ಅದೂ ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಕುಂದುಗೋಳದ ಸುಮಾರು ಐದಾರು ತಾಲ್ಲೂಕುಗಳಲ್ಲಿ ಹರಿದುಹೋಗುವಂಥ ಬೆಣ್ಣೆ ಹಳ್ಳ ನಮ್ಮ ಮತಕ್ಷೇತ್ರದಲ್ಲಿ ಸುಮಾರು 38 ಕಿಲೋಮೀಟರ್ ನಷ್ಟು ಹಾದು ತುಂಬಾ ಲುಕ್ಸಾನು ಆಗಿದೆ. ಅಕ್ಕಪಕ್ಕದ ಹಳ್ಳಿಗಳಲ್ಲಿ ಕೂಡ ಆ ನೀರು ಹೊಕ್ಕು ಆ ಹಳ್ಳಿಗಳು ನೀರಲ್ಲಿ ನಿಂತು ಹಳ್ಳಿಗಳ ಅನೇಕ ಮನೆಗಳು ಕೂಡ ತೇಲಿಹೋಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ನಮ್ಮ ಜಿಲ್ಲೆಯಲ್ಲಿ ಮೆಣಸಿನಕಾಯಿ ಬೆಳೆ ಪ್ರಮುಖ ಹಣಕಾಸು ಬೆಲೆಯಾಗಿದ್ದು ಇದರಿಂದಾಗಿ ಅಲ್ಲಿಯ ರೈತರು ಬದುಕುತ್ತಿದ್ದಾರೆ. ಒಂದು ಎಕರೆಗೆ ಸುಮಾರು ನಾಲ್ಕು-ಐದು ಕ್ವಿಂಟಾಲ್ ಮೆಣಸಿನಕಾಯಿ ತೆಗೆಯುವಂಥ ಪದ್ಧತಿ ನಮ್ಮಲ್ಲಿದೆ. ಆದರೆ ಇವತ್ತು ಒಂದು ಎಕರೆಗೆ ಸುಮಾರು 20 ರಿಂದ 25ಸಾವಿರ ರೂಪಾಯಿಗಳ ಲುಕ್ಸಾನು ಆಗಿದೆ. ಸುಮಾರು 20 ಸಾವಿರಕ್ಕೂ ಹೆಚ್ಚು ಎಕರೆಯಲ್ಲಿ ಬೆಲೆ ಹಾಳಾಗಿದೆ. ನಿಜವಾಗಿಯೂ ನಮ್ಮ ತಾಲ್ಲೂಕಿನಲ್ಲಿ ರೈತರು ಆತ್ಮಹತ್ಯೆ ಮಾಡಿ ಕೊಳ್ಳುವಷ್ಟು ಪರಿಸ್ಥಿತಿ ಗಂಭೀರವಾಗಿದೆಯೆನ್ನುವ ಮಾತನ್ನು ತಮ್ಮ ನಜರಿಗೆ ತರುತ್ತಿದ್ದೇನೆ. ಏಕೆಂದರೆ ಅಲ್ಲಿ ನಿಜವಾಗಿಯೂ ಯಾವ ಬೆಳೆಯಿಂದ ರೈತರು ಬದುಕುತ್ತಿದ್ದರೋ ಅವರು ಬೆಳೆದ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಆದ್ದರಿಂದ ನನ್ನ ವಿನಂತಿ ಏನೆಂದರೆ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಬಾಬುನಾಯ್ಡು ಅವರು ಪ್ರತಿ ಎಕರೆಗೆ ಹೇಗೆ ಹಣ ಬಿಡುಗಡೆ ಮಾಡುತ್ತಾರೋ ಅದೇರೀತಿ ಹಿತದೃಷ್ಟಿಯಿಂದ ಯಾವಪ್ರಕಾರ ಒಂದು ಎಕರೆಗೆ 25 ಸಾವಿರದವರೆಗೆ

ನಷ್ಟವಾಗಿದೆಯೋ, ಅಲ್ಲಿ ಏನಿಲ್ಲವೆಂದರೂ ನಾನು ಹತ್ತು ಸಾವಿರ ರೂಪಾಯಿಗಳ ಪರಿಹಾರಧನಕ್ಕೆ ಒತ್ತಾಯ ಮಾಡಿದರೂ ಕೂಡ ಕನಿಷ್ಟಪಕ್ಷ ಐದು ಸಾವಿರ ರೂಪಾಯಿಗಳಾದರೂ ಪರಿಹಾರ ಕೊಡುವ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಷ್ಟೇ ಅಲ್ಲದೆ ಯಾವಾಗ ರೈತರಿಗೆ ಈ ಮುಂಗಾರು ಬೆಳೆಗೆ ಅವರು ಏನು ಮಾಡುವುದಕ್ಕೂ ಅವರ ಕೈಯಲ್ಲಿ ಹತ್ತು ಪೈಸೆಯೂ ಇಲ್ಲದೇ ಇರುವ ಪರಿಸ್ಥಿತಿ ಬಂದಿರುವುದರಿಂದ ಅವರಿಗೆ ಬೀಜ, ಗೊಬ್ಬರವನ್ನು ಪುಕ್ಕಟೆಯಾಗಿ ಕೃಷಿ ಇಲಾಖೆಯಿಂದ ಕೊಡುವಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತೇನೆ. ರೈತರಿಗೆ ಪರಿಹಾರ ಕೊಡುವ ವಿಚಾರದಲ್ಲಿ ಏನು ಅಭಿಪ್ರಾಯ ಇದೆಯೆಂದರೆ ಒಂದು ಹೆಕ್ಟೇರ್ ಅಂದರೆ ಎರಡೂವರೆ ಎಕರೆ ಬೆಳೆ ಹಾಳಾದರೆ ಮಾತ್ರ ಆ ಪರಿಹಾರ ಸಿಗುತ್ತದೆ ಎನ್ನುವಂಥ ಭಾವನೆ ಸರ್ಕಾರದಲ್ಲಿದೆ. ಒಂದು ಎಕರೆ ಜಮೀನು ಹಾಳಾದರೆ ಅವರು ಪರಿಹಾರ ಕೊಡುವುದಿಲ್ಲ. ಒಂದು ಎಕರೆ ಹಾಳಾದರೆ 25ಸಾವಿರ ರೂಪಾಯಿಗಳಷ್ಟು ಹಾಳಾಗಿರುತ್ತದೆ. ಆದರೆ ಎರಡೂವರೆ ಎಕರೆ ಹಾಳಾದರೆ ಮಾತ್ರ ಅದನ್ನು ಕನ್ಸಿಡರ್ ಮಾಡುತ್ತಾರೆ ಎನ್ನುವ ವಿಚಾರವನ್ನು ಸಂಬಂಧಪಟ್ಟ ಇಲಾಖೆಯವರು ತಿಳಿಸಿದರು. ಕಾರಣ ಅದನ್ನು ತಾವು ಪರಿಶೀಲನೆ ಮಾಡಬೇಕು; ಒಂದು ಎಕರೆ ಹಾಳಾದರೂ ಕೂಡ ಪರಿಹಾರ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಅತಿ ವೃಷ್ಟಿಯಲ್ಲಿ ಒಂದು ಗೋಡೆ ಬಿದ್ದರೂ ಕೂಡ ಐದು ನೂರು ರೂಪಾಯಿಗಳ ಪರಿಹಾರವಿದೆ. ಆದರೆ ಒಂದು ಎಕರೆ ಹಾಳಾದರೆ ಅವರಿಗೆ ಪರಿಹಾರ ಸಿಗುವುದಿಲ್ಲ. ಇದನ್ನು ಮನಗಂಡು ಒಂದು ಎಕರೆ ಹಾಳಾದರೂ ಕೂಡ ಪರಿಹಾರ ಕೊಡುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರ ಮಾಡಿದಾಗ ಯಾವ ಹಳ್ಳದ ದಂಡೆಯಲ್ಲಿ ಇಪ್ಪತ್ತು ಎಕರೆ ಜಮೀನು ಇದ್ದರೆ ಅಲ್ಲಿ ಅರ್ಧಕ್ಕಿಂತ ಹಾಳಾದರೆ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎನ್ನತಕ್ಕಂಥ ವಿಚಾರವನ್ನು ಅವರು ಹೇಳಿದರು. ಇದರಿಂದ ರೈತರಿಗೆ ತುಂಬಾ ಲುಕ್ಸಾನು ಆಗುತ್ತದೆ. ಇದನ್ನು ಮನಗಂಡು ಪ್ರತಿ ಎಕರೆಗೆ ಕನಿಷ್ಟ ಬೆಳೆಹಾನಿಯನ್ನು ಪರಿಶೀಲನೆ ಮಾಡಿ ಸರ್ಕಾರದವರು ಐದು ಸಾವಿರ ರೂಪಾಯಿಗಳಾದರೂ ಪರಿಹಾರ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಷ್ಟೇ ಅಲ್ಲದೆ ಮಳೆಯಿಂದಾಗಿ ಹಳ್ಳದಗುಂಟ ಬಣವೆಗಳು, ಚಕ್ಕಡಿಗಳು ನಮ್ಮ ತಾಲ್ಲೂಕಿನಲ್ಲಿ ತೇಲಿಹೋಗಿವೆ. ರೈತರು ಬೆಳೆದಂಥ ಈರುಳ್ಳಿ ಕೊಳೆತುಹೋಗಿದೆ. ಆಮೇಲೆ ಅವರಿಗೆ ಸರಿಯಾದ ರೇಟು ಕೂಡ ಇಲ್ಲ. ಹುಬ್ಬಳ್ಳಿ ಮಾರುಕಟ್ಟೆಯಲ್ಲಿ ಮಾರುವುದಕ್ಕೆ ಹೋದರೆ ಸುಮಾರು ನೂರು ರೂಪಾಯಿಗಳನ್ನು ಕ್ವಿಂಟಾಲ್‌ಗೆ ಕೊಟ್ಟು ಅವರು ಚೀಲವನ್ನು ಅಲ್ಲೇ ಬಿಟ್ಟು ಬಂದಂಥ ಪರಿಸ್ಥಿತಿ ರೈತರದ್ದಾಗಿದೆ. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಚಾರವಾಗುತ್ತದೆ. ನಾನು ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ; ಈರುಳ್ಳಿಗೆ ಆದಷ್ಟು ರಫ್ತು ಸೌಲಭ್ಯ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ನಂತರ ರೈತರಿಗೆ ಸರಿಯಾಗಿ ಒಳ್ಳೆಯ ಬೀಜ, ಗೊಬ್ಬರ ಕೊಟ್ಟರೆ ಒಂದು ಕ್ವಿಂಟಾಲ್‌ಗೆ ಒಂದು ಸಾವಿರ ರೂಪಾಯಿಗಳಾದರು ಅವರಿಗೆ ಸಿಗುವ ವ್ಯವಸ್ಥೆಯಾಗಬೇಕು. ಆದ್ದರಿಂದ ಕೇಂದ್ರಸರ್ಕಾರ ಇದನ್ನು ರಫ್ತು ಮಾಡುವ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಈ ಸದನದ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇದೇತರಹ ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಡೀಸಲ್ ರೇಟ್ ಹೆಚ್ಚುಮಾಡಿದ್ದರಿಂದ ಕೇವಲ ಲಾರಿಯವರಿಗೆ ಮಾತ್ರ ತೊಂದರೆಯಾಗಿಲ್ಲ. ಹೆಚ್ಚು ಪಡೆದುಕೊಳ್ಳಬೇಕೆಂದು ಹೇಳಿ

ಟ್ರಾಕ್ಟರ್‌ಗಳನ್ನು ರೈತರು ಬಳಸಿ ಏನು ಭೂಮಿಯನ್ನು ಉಳುಮೆ ಮಾಡುತ್ತಾರೆ, ಇವತ್ತು ಟ್ರಾಕ್ಟರ್ ಬಾಡಿಗೆ ದುಬಾರಿಯಾಗಿ ಹೆಚ್ಚಾಗಿದ್ದರಿಂದ ಸಣ್ಣ ರೈತರು ಟ್ರಾಕ್ಟರ್ ಮೂಲಕ ಭೂಮಿ ಉಳುಮೆ ಮಾಡುವುದು ತಪ್ಪುವಂಥ ಕಾರ್ಯವಾಗಿದೆ. ಇದೂ ಕೂಡ ಕೇಂದ್ರಸರ್ಕಾರಕ್ಕೆ ಒಳಪಟ್ಟಿದ್ದು; ಈ ಸದನದ ಮೂಲಕ ರೈತರ ಹಿತದೃಷ್ಟಿಯಿಂದ ಎಲ್ಲರೂ ಕೂಡ ಒಮ್ಮತವಾಗಿ ನಾವು ಒತ್ತಾಯ ಮಾಡೋಣವೆಂದು ಹೇಳುತ್ತಿದ್ದೇನೆ. ಡೀಸೆಲ್ ಬೆಲೆಯನ್ನು ಇಳಿಸಬೇಕು. ಶೇಕಡಾ 40 ರಷ್ಟು ಬೆಲೆಯನ್ನು ಏರಿಸಿದ್ದು ನಿಜವಾಗಿಯೂ ಕೂಡ ಸರಿಯಾದ ಕ್ರಮ ಅಲ್ಲ. ಇದನ್ನು ಕೂಡ ಇಳಿಸಬೇಕೆಂದು ನಾನು ಸದನದ ಮೂಲಕ ಒತ್ತಾಯ ಮಾಡುತ್ತೇನೆ. ಇದೇರೀತಿಯಾಗಿ ನಾನು ಹೇಳುವುದು ಏನೆಂದರೆ, ನನ್ನ ಮತಕ್ಷೇತ್ರದಲ್ಲಿ ಅಂದಾಜು ಹತ್ತು ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ. ರಸ್ತೆಗಳು ಹಾಳಾಗಿವೆ, ಕಿತ್ತುಹೋಗಿವೆ, ಸಾವಿರಾರು ಮನೆಗಳು ಕುಸಿದುಹೋಗಿ. ಇದನ್ನು ಮನಗಂಡು ನನ್ನ ಮತಕ್ಷೇತ್ರಕ್ಕೆ ಹತ್ತು ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡಬೇಕು; ಇದನ್ನು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ನಮ್ಮ ತಾಲ್ಲೂಕಿನಲ್ಲಿ ನಿಜವಾಗಿಯೂ ರೈತರು ಕಣ್ಣೀರು ಸುರಿಸುರ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಮನಗಂಡು ಪರಿಹಾರ ಮಾತ್ರ ಒಂದು ಎಕರೆಗೆ ಐದು ಸಾವಿರ ರೂಪಾಯಿಗಳ ಕನಿಷ್ಟ ಪ್ರಮಾಣದಲ್ಲಿ ಅವರಿಗೆ ಕೊಡಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡಿ ನನಗೆ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಹೆಚ್.ಹನುಮೇಗೌಡ(ಹಾಸನ):- ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ರಾಜ್ಯಸರ್ಕಾರದ ಮಂತ್ರಿಮಂಡಲದಲ್ಲಿ 43 ಜನ ಸದಸ್ಯರು ಇದ್ದಾರೆ. ಇನ್ನೂ 8-10 ಜನರನ್ನು ತೆಗೆದುಕೊಳ್ಳುವಹಾಗೆ ಕಾಣುತ್ತದೆ. ಇದರಿಂದ ರಾಜ್ಯದ ಜನಕ್ಕೆ 40-50 ಕೋಟಿ ರೂಪಾಯಿಗಳ ಮೇಲೆ ಖರ್ಚಾಗುವ ಹಾಗೆ ಕಾಣುತ್ತದೆ. ದಕ್ಷರಾದ, ಪ್ರಾಮಾಣಿಕರಾದ ಸ್ವಲ್ಪ ಉತ್ತಮವಾದ ಆಡಳಿತದ ಅನುಭವ ಹೊಂದಿರುವಂಥ ಮಂತ್ರಿಗಳು ಇದ್ದಾರೆ. ಪ್ರಾತಿನಿಧ್ಯ ಕೊಡದೇ ಇರತಕ್ಕಂಥ ನಾಲ್ಕೈದು ಜಿಲ್ಲೆಗಳಿಗೆ ಪ್ರಾತಿನಿಧ್ಯವನ್ನು ಕೊಡಬೇಕಾದದ್ದು ನಿಮ್ಮ ಧರ್ಮ ಕೂಡ; ಅವರಿಗೆ ಕೊಡಿ. ಆಗ ಈ ಸಂಖ್ಯೆ 50 ಅಥವಾ 52 ಆಗಬಹುದು. ಆದರೆ ಒಳ್ಳೆಯ ಮಾರ್ಗದರ್ಶನ ಮಾಡಿ ಉತ್ತಮವಾದ ಆಡಳಿತವನ್ನು ರಾಜ್ಯದ ಜನತೆಗೆ ಕೊಟ್ಟು ಮಾನ್ಯ ಕೆ. ಹನುಮಂತಯ್ಯನವರು, ಮಾನ್ಯ ಎಸ್.ನಿಜಲಿಂಗಪ್ಪನವರು, ಮಾನ್ಯ ವೀರೇಂದ್ರ ಪಾಟೀಲರ ಸಾಲಿಗೆ ನೀವು, ಒಬ್ಬ ಆದರ್ಶ ಮುಖ್ಯಮಂತ್ರಿ ಈ ದೇಶವನ್ನು ಆಳಿದರು ಎನ್ನುವ ಮಟ್ಟಿಗೆ ನೀವು ಕೀರ್ತಿಶಾಲಿಯಾಗಬೇಕೆಂದು ನಾವೆಲ್ಲರೂ ಇಚ್ಛೆಪಡುತ್ತೇನೆ. ಹಾಗೆ ಜನರ ಇಚ್ಛೆ ಕೂಡ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ನೋಡಿದೆ. ಕೆಲವು ವಿಚಾರಗಳಲ್ಲಿ ನಮ್ಮ ಸರ್ಕಾರ ಮುಂದೆ ಏನು ಮಾಡಬೇಕೆಂದು ತಾವು ತಿಳಿಸಿದ್ದೀರಿ. ಆದರೆ ಈ ರಾಜ್ಯದ ನೂರಕ್ಕೆ ಎಂಬತ್ತರಷ್ಟು ಭಾಗ ಇರತಕ್ಕಂಥ ರೈತರ ಬವಣೆ ಬಗ್ಗೆ ತಾವು ಹೆಚ್ಚಿನ ಗಮನ ಹರಿಸಿಲ್ಲ

12.30 ಪಿ.ಎಂ.

ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯದ ನಾಲ್ಕನೇ ಒಂದು ಭಾಗದಲ್ಲಿ ಪ್ರತಿವರ್ಷ ಬರಗಾಲ ಉಂಟಾಗಿ ಆ ಭಾಗದ ಜನರು ಕ್ಷಾಮದ

ದವಡೆಗೆ ತುತ್ತಾಗುತ್ತಾರೆ. ಅಲ್ಪಾವಧಿ ಸಾಲ ತೆಗೆದುಕೊಳ್ಳುತ್ತಾರೆ. ಮನೆಯಲ್ಲಿದ್ದ ಒಡವೆ ವಸ್ತುಗಳನ್ನೆಲ್ಲಾ ತೆಗೆದುಕೊಂಡು ಹೋಗಿ ಬ್ಯಾಂಕಿನಲ್ಲಿಟ್ಟು ವ್ಯವಸಾಯವನ್ನು ಪ್ರಾರಂಭ ಮಾಡುತ್ತಾರೆ. ಸ್ವಲ್ಪ ಮಳೆ ಬರುತ್ತೆ. ಮಧ್ಯೆ ಎರಡು ತಿಂಗಳು, ಮೂರು ತಿಂಗಳು ಮಳೆ ಹೋಗುತ್ತೆ. ಎಲ್ಲಾ ಬೆಳೆ ಸರ್ವನಾಶವಾಗಿ ಹೋಗುತ್ತೆ. ಆ ಜನಗಳ ಸ್ಥಿತಿ, ಈ ಸಂದರ್ಭದಲ್ಲಿ ಆ ರೈತರ ಕಷ್ಟವನ್ನು ನೋಡಿದರೆ ಎಂಥವರಿಗೂ ಕರುಳು ಕಿತ್ತು ಬರಬೇಕು, ಅಂತಹ ಪರಿಸ್ಥಿತಿಯಲ್ಲಿ ಅವರು ಇರುತ್ತಾರೆ. ಕಳೆದ ಹತ್ತಾರು ವರ್ಷಗಳಿಂದ ಈ ಸರ್ಕಾರ ಕೋಟಿಗಟ್ಟಲೆ ಹಣವನ್ನು ಜನಗಳಿಗೆ ಊಟಕ್ಕೆ ಸ್ವಲ್ಪ ವ್ಯವಸ್ಥೆ ಮಾಡಿಕೊಡುತ್ತಾರೆ. ಪ್ರತಿ ವರ್ಷವೂ ಖರ್ಚಾಗುತ್ತಾ ಇದೆ. ಆದರೆ ಆ ಬಡ ಜನತೆಯ ಶಾಶ್ವತ ಪರಿಹಾರ ಕ್ರಮಕ್ಕೆ ಈ ಸರ್ಕಾರ ಏನು ಕಾರ್ಯಕ್ರಮವನ್ನು ಕೈಗೊಳ್ಳುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಿರಂತರವಾಗಿ ಯಾರು ಈ ದೇಶಕ್ಕೋಸ್ಕರ ಅನ್ನ ಬೆಳೆಯುತ್ತಾನೋ, ದೇಶಕ್ಕೋಸ್ಕರ ತೆರಿಗೆಯನ್ನು ಕೊಟ್ಟು ಎಲ್ಲರಿಗೂ ಕೂಡ ಹಣವನ್ನು ಒದಗಿಸುತ್ತಾರೋ ಅಂತಹ ನಿರ್ಭಾಗ್ಯ ಜೀವಿಗಳನ್ನು ಹೆಚ್ಚು ಶತಮಾನಗಳ ಕಾಲ ಶೋಷಣೆಗೆ ಒಳಪಟ್ಟು ಇದೇತರಹ ಕಾಲವನ್ನು ಕಳೆಯಬೇಕೆಂಬ ಭಾವನೆ ಸರ್ಕಾರಕ್ಕೆ ಇದೆ ಎಂಬುದನ್ನು ತಿಳಿಯುವುದಕ್ಕೆ ನಾನು ಇಚ್ಛಿಪಡುತ್ತೇನೆ. ನಮ್ಮ ಭಾಗದಲ್ಲಿ ಮಳೆ ಆಗುತ್ತೆದೆ. ಸುಮಾರು ಶಿವಮೊಗ್ಗದಿಂದ ಹಿಡಿದು 3-4 ಜಿಲ್ಲೆಗಳು ಮಳೆ ನೆರಳಿನ ಪ್ರದೇಶ ಪಶ್ಚಿಮಘಟ್ಟಗಳಲ್ಲಿ ಹೆಚ್ಚು ಮಳೆಯಾಗುತ್ತೆ. ಈ ಪಶ್ಚಿಮ ಘಟ್ಟಗಳನ್ನು ಬಿಟ್ಟು ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಮೈಸೂರಿನ ಭಾಗಗಳಲ್ಲಿ ಮಳೆ ನೆರಳಿನ ಪ್ರದೇಶ. ಅಲ್ಲಿಗೆ ಮಳೆ ಆಗುವುದಿಲ್ಲ. ಏನಾದರೂ ಅರಬ್ಬೀ ಸಮುದ್ರದಲ್ಲಿ ತಪ್ಪಿದರೆ ಬಂಗಾಳ ಕೊಲ್ಲಿಯಲ್ಲಿ ಡಿಪ್ರೆಷನ್ ಆದರೆ ನಮ್ಮ ಕಡೆಗೆ ಹೆಚ್ಚು ಮಳೆ ಬರುತ್ತದೆಯೇ ವಿನಹ ಇಲ್ಲದೇಹೋದರೆ ಮಳೆ ಬರುವುದೇ ಇಲ್ಲ. ಇದ್ದಬದ್ದ ಮಳೆಯೆಲ್ಲಾ ಪಶ್ಚಿಮಘಟ್ಟಗಳು ತಡೆದು, ಸುರಿದು ಅರಬ್ಬೀಸಮುದ್ರ ಸೇರುತ್ತೆ. ಈ ಭಾಗದ ರೈತರು ಹೇಳತೀರದ ತೊಂದರೆಗೆ ಒಳಗಾಗುತ್ತಾರೆ. ಮಾನ್ಯ ಅಧ್ಯಕ್ಷರೆ. ಮಾನ್ಯ ಅಧ್ಯಕ್ಷರೇ, ಕನ್ನಂಬಾಡಿ ಕಟ್ಟುವುದಕ್ಕೆ ಮುಂಚೆ ನಮ್ಮ ಪೂರ್ವಿಕರು ಹೇಳುತ್ತಾ ಇದ್ದರು; ನಮ್ಮ ಹೊಲಗಳನ್ನು ಕೊಯ್ಯುವುದಕ್ಕೆ ಮಂಡ್ಯದ ಕಡೆಯಿಂದ ಜನ ಈ ಕಡೆ ಬರುತ್ತಾ ಇದ್ದರು ಎಂದು. ಅಷ್ಟೊಂದು ಕಷ್ಟ ಪರಿಸ್ಥಿತಿಯಲ್ಲಿದ್ದಂಥ ಭಾಗ ನಮ್ಮದು. ಮೈಸೂರಿನ ಕೆಳಭಾಗ ಮತ್ತು ಮಂಡ್ಯದ ಭಾಗ. ಈಗೇನಾಗಿದೆ ಪರಿಸ್ಥಿತಿ ಎಂದರೆ ನಮ್ಮ ಕಡೆಯವರು ಮಳೆ ಇಲ್ಲದೆ ತೊಂದರೆಯಾಗಿ ಮಂಡ್ಯ ಮತ್ತು ಮೈಸೂರು ಕಡೆಗೆ ಗದ್ದೆ ನಾಟಿ ಹಾಕುವುದಕ್ಕೆ, ಭತ್ತವನ್ನು ಕೊಯ್ಯುವುದಕ್ಕೆ ಹೋಗುವುಂಥ ಪರಿಸ್ಥಿತಿ ಬಂದು ಕೂತಿದೆ. ಇದಕ್ಕೆ ಮಾನ್ಯ ದಿವಂಗತ ವಿಶ್ವೇಶ್ವರಯ್ಯನವರು ದೂರದೃಷ್ಟಿಯಿಂದ ಕನ್ನಂಬಾಡಿ ಕಟ್ಟಿದ್ದರಿಂದ ಆ ಭಾಗದ ಜನರಿಗೆ ಕಷ್ಟ ಪರಿಹಾರವಾಗಿ ಇವತ್ತು ಜನ ನೆಮ್ಮದಿಯಿದ ಜೀವನ ಮಾಡುತ್ತಾ ಇದ್ದಾರೆ. ಹಿಂದೆ ದಿವಂಗತ ವಿರೇಂದ್ರಪಾಟೀಲರ ಕಾಲದಲ್ಲಿ ಹೇಮಾವತಿ ಮತ್ತು ಹಾರಂಗಿ ಡ್ಯಾಮ್‌ಗಳನ್ನು ಕಟ್ಟಿದರು. ಇದಕ್ಕೆ ಕೇಂದ್ರಸರ್ಕಾರದವರು ಇದುವರೆಗೂ ಒಪ್ಪಿಗೆ ಕೊಟ್ಟಿಲ್ಲವೆಂದು ಅನಿಸುತ್ತದೆ. ಆಗ, ಹೀಗೇ ಬಿಟ್ಟುಹೋದರೆ ಇದ್ದಬದ್ದ ನೀರನ್ನೆಲ್ಲಾ ಮದ್ರಾಸಿನವರು ಉಪಯೋಗಿಸಿಕೊಂಡು ರೊಕ್ಕ ಬಂದು, ಕರ್ನಾಟಕಕ್ಕೆ ನೀರಿಗೆ ತೊಂದರೆಯಾಗುತ್ತದೆಂದು, ಕರ್ನಾಟಕದ ದುಡ್ಡಿನಲ್ಲಿಯೇ ಈ ಜನ ಕೊಟ್ಟಂಥ ತೆರಿಗೆ ಹಣದಲ್ಲಿಯೇ ಹೇಮಾವತಿ ಮತ್ತು ಹಾರಂಗಿ ಡ್ಯಾಮ್‌ಗಳನ್ನು ಕಟ್ಟಿದರು. ನನಗೆ ಜ್ಞಾಪಕ ಇದೆ. 1972ನೇ ಇಸವಿಯಲ್ಲಿ ಈ ಕಾವೇರಿ ಕಣಿವೆಯಲ್ಲಿ ಸುಮಾರು ಮೂರುವರೆ ಲಕ್ಷ ಎಕರೆಯಲ್ಲಿ ನೀರಾವರಿಯಾಗುತ್ತಾ ಇತ್ತು. ಆ ಸಂದರ್ಭದಲ್ಲಿ ತಮಿಳುನಾಡಿನಲ್ಲಿ 6-7 ಲಕ್ಷ ಎಕರೆ ನೀರಾವರಿಯಾಗುತ್ತಾ ಇತ್ತು. ಅಲ್ಲಿಂದ

ಇಲ್ಲಿಯವರೆಗೂ ಕೂಡ ಎಷ್ಟು ನೀರಾವರಿಯಾಗಿದೆ ಎಂಬುದನ್ನು ಯೋಚನೆ ಮಾಡಿದರೆ, ತಮಿಳುನಾಡಿನಲ್ಲಿ ಪ್ರತಿವರ್ಷವೂ ರಾಜಕೀಯ ಮಾಡಿಗಲಾಟೆ ಮಾಡಿ ನೀರನ್ನು ತೆಗೆದುಕೊಂಡು, ನೀರಾವರಿಯನ್ನು ಹೆಚಿಸುತ್ತಾ ಹೋಗಿ ಇವತ್ತು ಅವರಿಗೆ ಸುಮಾರು 36 ಲಕ್ಷ ಎಕರೆಗೆ ನೀರಾವರಿಯಾಗುತ್ತಾ ಇದೆ. ಆದರೆ, ಕರ್ನಾಟಕದಲ್ಲಿ ಕೇವಲ 6-7 ಲಕ್ಷ ಎಕರೆಗೂ ನೀರಾವರಿಯಾಗುತ್ತಾ ಇಲ್ಲ. ಇದಕ್ಕೆ ಕಾರಣವೇನೆಂದರೆ, ಅಧಿಕಾರ ಮಾಡಿದಂಥ ರಾಜಕೀಯ ಜನಗಳು ಮುತುವರ್ಜಿ ವಹಿಸಿ, ಈ ಭಾಗದ ಜನಗಳ ಕಷ್ಟವನ್ನು ತಿಳಿದುಕೊಂಡು, ನೀರಿನ ಹಕ್ಕು ತಮಿಳುನಾಡಿಗೆ ಹೋದರೆ ನಮಗೆ ಕಷ್ಟವಾಗುತ್ತೆ ಎಂಬುದನ್ನು ಮರೆತು ಯಾವಯಾವುದೋ ಕಾರಣಕ್ಕೆ ಮೇಲ್ಪಟ್ಟು ಇದ್ದಂಥ ಡ್ಯಾಮ್‌ಗಳನ್ನು, ಕೆಲಸವನ್ನು ಸರಿಯಾಗಿಮಾಡದೇ, ಡ್ಯಾಮ್ ಕಟ್ಟಿದರೂ ಕೂಡ ನೀರಾವರಿ ವಿತರಣಾ ಚಾನಲ್‌ಗಳನ್ನು ತತ್‌ಕ್ಷಣದಲ್ಲಿ ಮಾಡದೇ ಹಾಗೆಯೇ ಬಿಟ್ಟು ನೀರು ಸ್ಟೋರ್ ಮಾಡುವುದು, ಪ್ರತಿವರ್ಷವೂ ತಮಿಳುನಾಡಿನವರು ಗಲಾಟೆ ಮಾಡಿದಾಗ ನೀರು ಬಿಟ್ಟು ಕೊಡುವುದು; ಈ ರೀತಿ ಮಾಡಿ, ಕರ್ನಾಟಕದ ಈ ಭಾಗದ ಜನತೆಗೆ ಹೇಳತೀರದ ನೋವನ್ನುಂಟುಮಾಡಿದ್ದಾರೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಲೂ ಕೂಡ ಸರ್ಕಾರ ಮನಸ್ಸು ಮಾಡಿ, ಈ ಕಾವೇರಿ ಬೇಸಿನ್ ಮೇಲಿರತಕ್ಕ ಭಾಗಗಳಿಗೆ ನೀರಾವರಿ ಅನುಕೂಲಗಳನ್ನು ಮಾಡಬೇಕೆಂದು ಹೇಳಿ, ಮಾನ್ಯ ಕೃಷ್ಣಾರವರನ್ನು ನಾನು ಒತ್ತಾಯ ಮಾಡುತ್ತೇನೆ. ಅವರು ಈ ರೈತರ ಮನೆಯಿಂದ ಬಂದವರು; ಕಷ್ಟವನ್ನು ಅರಿತವರು ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ನಾನು ಇಚ್ಛಿಪಡುತ್ತೇನೆ. ಈಗೇನಾಗಿದೆ ಹೇಮಾವತಿ ಮತ್ತು ಹಾರಂಗಿ ಡ್ಯಾಮ್‌ಗಳನ್ನು ನಮ್ಮ ಕರ್ನಾಟಕ ಖರ್ಚಿನಿಂದ ಕಟ್ಟಿದ್ದರೂ ಕೂಡ ಸ್ಟೋರೇಜ್ ಟ್ಯಾಂಕ್ ತಮಿಳುನಾಡಿನವರಿಗೆ; ಇಲ್ಲಿ ನೀರು ನಿಲ್ಲುತ್ತೆ, ಆ ಸಂದರ್ಭದಲ್ಲಿ ಅವರು ಕೇಳುತ್ತಾರೆ, ನಮ್ಮವರು ನೀರನ್ನು ಬಿಟ್ಟುಕೊಡುತ್ತಾರೆ; ಈ ವರ್ಷ ಇವರು ಒಂದು ಲಕ್ಷ ಎಕರೆಗೆ ನೀರನ್ನು ಬಿಟ್ಟುಕೊಟ್ಟರೆ ಮುಂದಿನ ವರ್ಷ ಅವರಿಗೆ ಹಕ್ಕು ಬರುತ್ತೆ. ಹೀಗಾಗಿ 36 ಲಕ್ಷ ಎಕರೆಯವರೆಗೆ ಅವರು ನೀರನ್ನು ಪಡೆದುಕೊಳ್ಳುತ್ತಿದ್ದಾರೆ. ಕರ್ನಾಟಕದ ಈ ಭಾಗದಲ್ಲಿ ನೀರಾವರಿ ಯೋಜನೆಗಳನ್ನು ಆಗುವುದನ್ನು ಕೈಬಿಟ್ಟು ಹೆಚ್ಚು ಮುತುವರ್ಜಿ ವಹಿಸಿ, ಹೆಚ್ಚು ಹಣವನ್ನು ಕೊಟ್ಟು ಮಾಡದೇ ಇರುವುದರಿಂದ ಈ ಭಾಗದ ಜನರಿಗೆ ತೊಂದರೆಯಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ ಹಾಸನ ಜಿಲ್ಲೆಯಲ್ಲಿ ಹಿಂದಿನ ಸರ್ಕಾರ ಶಾಶ್ವತ ಪರಿಹಾರ ಕ್ರಮವಾಗಿ ಸುಮಾರು 29 ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿತ್ತು. ಆ ಮಾನ್ಯ ಸ್ನೇಹಿತರುಗಳು ಇಲ್ಲಿ ಇಲ್ಲ. ಯೋಜನೆಗಳನ್ನು ಮಾತೆತ್ತಿದರೆ ಸಾವಿರ ಸಾವಿರಗಟ್ಟಲೆ ಮಾತನಾಡುತ್ತಾರೆ. ಮಾತೆತ್ತಿದರೆ ಸಾವಿರ ಕೋಟಿ ಐದು ನೂರು ಕೋಟಿ, ಎಂಟು ನೂರು ಕೋಟಿ ಎಂದು ಹೇಳುತ್ತಾರೆ. ಅವರಿಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಹಿಂದಿನ ಸರ್ಕಾರದಲ್ಲಿ ಮಂಜೂರಾಗಿದ್ದಂಥ ಹಾಸನ ಜಿಲ್ಲೆ ನೆರಳಿನ ಪ್ರದೇಶದಕ್ಕೆ ಮತ್ತು ಆಗಾಗ್ಗೆ ಬರಗಾಲಕ್ಕೆ ತುತ್ತಾಗತಕ್ಕೆ ಭಾಗಕ್ಕೆ ಶಾಶ್ವತ ಪರಿಹಾರ ಕ್ರಮವಾಗಿ ಸುಮಾರು 29 ಯೋಜನೆಗಳನ್ನು ಮಂಜೂರು ಮಾಡಿದ್ದರು. ಅವರು ಭಾರಿ ಮಾತನಾಡಿದರು. ಅದೇನೋ ಮಣ್ಣಿನ ಮಗ, ಅವರ ಮಗ, ಇವರ ಮಗ ಎಂಥೆಂಥ ಮಣ್ಣೋ. ಆದರೆ, ಅವರು ಮಾಡಿದ್ದೇನು ಎಂದರೆ ಆ ಭಾಗದ ಜನರಿಗೆ ಬಾಯಿಗೆ ಮಣ್ಣು ಹಾಕಿದ್ದೇ ವಿನಹ ನಿಜವಾಗಿಯೂ ಒಂದು ಒಳ್ಳೆಯ ಕಾರ್ಯವನ್ನು ಮಾಡಲಿಲ್ಲ. ಪಾಪ, ಅವರು ಈಗ ನೆಮ್ಮದಿಯಾಗಿ ಮನೆಯಲ್ಲಿದ್ದಾರೆ. ಹೋಗಲಿ, ಅವರು ಏನಾದರೂ ಮಾಡಿಕೊಳ್ಳಲಿ. ಈ ಕಡೆ ಇರತಕ್ಕ ಸ್ನೇಹಿತರನ್ನು ನಾನು ಕೇಳುತ್ತೇನೆ. 29 ಏತ ನೀರಾವರಿ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರದಲ್ಲಿ ಮಂಜೂರಾಗಿದ್ದರೂ ಕೂಡ, ಇವರ ಕಾಲದಲ್ಲಿ ಅವು ಕಾರ್ಯಗತವಾಗಲಿಲ್ಲ. ನಾವೆಲ್ಲಾ ಬೇಕಾದಷ್ಟು ಮಾಡಿದೆವು, ಆದಾಯಿತು,

ಇದಾಯಿತು. ಅದಕ್ಕೆ ಸಾವಿರ ಕೋಟಿ, ಇದಕ್ಕೆ ಎರಡು ಸಾವಿರ ಕೋಟಿ ಎಂದು ಹೇಳುತ್ತಾರೆ. ಆದರೆ, ಇವತ್ತು ಸಂಬಂಧಪಟ್ಟವರು ಈ ಸದನದಲ್ಲಿ ಇಲ್ಲ.

ಶ್ರೀ ಪಿ ಜಿ ಆರ್ ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಹಾಸನದವರು ಮಾತನಾಡುತ್ತಾರೆಂದು ಗೊತ್ತಾದ ತಕ್ಷಣವೇ ನಾವು ಹೊರಗಡೆಯಿಂದ ಒಳಗೆ ಬಂದು ಕುಳಿತಿದ್ದೇವೆ.

ಶ್ರೀ ಕೆ.ಹೆಚ್.ಹನುಮೇಗೌಡ:- ಅವರು ಎಂತಹ ದ್ರೋಹ ಮಾಡಿದರೆಂದರೆ, ಅವರು ಹಾಕಿರತಕ್ಕ ಶಾಪದಿಂದ ಎಂದೂ ಕೂಡ ಬಿಡುಗಡೆ ಹೊಂದಲಾರರು. ಅಂತಹ ದ್ರೋಹವನ್ನು ನಮ್ಮ ಹಾಸನ ಜಿಲ್ಲೆಗೆ ಇವರ ಮುಖಂಡರ ಕಾಲದಲ್ಲಿ ನಡೆದುಹೋಯಿತು. ಜನರು ಸಹಿಸಿಕೊಂಡೇ ಇದ್ದರು. ಅದೇನೋ ಮಣ್ಣಿನ ಮಗ ಎಂದು ಹೇಳುತ್ತಾರೆ. ಕಳೆದ ಮೂರು ತಿಂಗಳ ಹಿಂದೆ ನಾನು ರೈಲ್ವೆ ಸ್ಟೇಷನ್ ಕಡೆ ಹೋಗುತ್ತಿದ್ದೆ. ಪೋಲೀಸಿನವರು ಬಂದು ನನ್ನನ್ನು ನಿಲ್ಲಿಸಿದರು. ನಾನು ಅವರನ್ನು ಏಕೆ ಎಂದು ಕೇಳಿದೆ. ಅವ ಸ್ವಾಮಿಗಳು ಬರುತ್ತಾ ಇದ್ದಾರೆ ಎಂದ. ನಾನು ಯಾವ ಸ್ವಾಮಿಗಳಪ್ಪ ಎಂದೆ. ಮತ್ತು ಅವರು ಬಂದರೆ ನನಗೇನು ಎಂದೆ. ಇಲ್ಲ, ನೀವು ಹೋಗಕೂಡದು ಎಂದ. ಎಷ್ಟೊತ್ತು ಹೋಗಕೂಡದು, ಅವರು ಯಾರು ಹೇಳು ಎಂದೆ. ಅದೇ ನಮ್ಮ ಮಣ್ಣಿನ ಮಕ್ಕಳು ಎಂದರು. ಯಾವ ಮಣ್ಣಿನ ಮಗ, ಹಾಗೆಂದರೆ ಏನು ಎಂದು ಕೇಳಿದೆ. ನಮ್ಮ ದೊಡ್ಡವರು ಸ್ವಾಮಿ.

ಶ್ರೀ ಸಿ.ಭೈರೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರು ದಯವಿಟ್ಟು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಲಿ.

-ಗೊಂದಲ-

ಶ್ರೀ ಕೆ.ಹೆಚ್.ಹನುಮೇಗೌಡ-ಸ್ವಾಮಿ, ನೀರಾವರಿ ಬಗ್ಗೆ ಇದರಲ್ಲಿ ನಮೂದು ಮಾಡಿದ್ದಾರೆ. ನಮ್ಮ ಜಿಲ್ಲೆಗೆ ಆಗಿರತಕ್ಕ ನೋವನ್ನು ನಾನು ಹೇಳಿಕೊಳ್ಳುತ್ತಾ ಇದ್ದೇನೆ. ಇವರು ಅಗ್ರಿಕಲ್ಚರ್ ಮಂತ್ರಿಯಾಗಿದ್ದರು...

ಶ್ರೀ ಚೆನ್ನಿಗಪ್ಪ:- ಜನ ಅವರನ್ನು ಗೆಲ್ಲಿಸಿದ್ದರಿಂದ, ಅವರು ಅಗ್ರಿಕಲ್ಚರ್ ಮಂತ್ರಿಯಾಗಿದ್ದರು. ನೀವು ಯಾರನ್ನೂ ವೈಯಕ್ತಿಕವಾಗಿ ಟೀಕೆ ಮಾಡುವುದು ಬೇಡ.

ಶ್ರೀ ಸಿ.ಭೈರೇಗೌಡ:- ನೀವು ಅದನ್ನು ಬಿಟ್ಟು ಮಾನ್ಯ ರಾಜ್ಯಪಾಲರ ಮೇಲೆ ಪ್ರಸ್ತಾಪ ಮಾಡಿ.

ಶ್ರೀ ಕೆ.ಹೆಚ್.ಹನುಮೇಗೌಡ:- ಇದು ವೈಯಕ್ತಿಕವಾಗಿ ಅಲ್ಲ. ಸ್ವಾಮಿ ಹದಿನೈದು ದಿನಕ್ಕೊಂದು ಸಾರಿ, ಗಂಟೆಗಟ್ಟಲೆ ಈ ಪೋಲೀಸಿನವರು ಅವರು ಎಲ್ಲಾ ಸೇರಿಕೊಂಡು, ಅಲ್ಲಿಯ ಜನಗಳ ನೆಮ್ಮದಿ ಹಾಳಾಗಿ ಹೋಯಿತು. ಆಯಿತು, ಇವತ್ತು, ಬಿಟ್ಟು, ಇನ್ನೊಂದು ದಿನ ವಿವರವಾಗಿ ತೆಗೆದುಕೊಳ್ಳುತ್ತೇನೆ. ನನಗೆ ಎಷ್ಟು ನೋವಾಗಿದೆ, ಈಗಲಾದರೂ ಅವರಿಗೆ ಬುದ್ದಿ ಬಂತಲ್ಲ ಸಂತೋಷ. ಎಷ್ಟು ಅನ್ಯಾಯವಾಗಿದೆ ಎಂಬುದು ಇವರಿಗೆ ಗೊತ್ತೇ? ಹಿಂದಿನ ಸರ್ಕಾರದವರು ಮಂಜೂರ್ಮಾಡಿದ ಯೋಜನೆಗಳು, ನೀವು ಅಗ್ರಿಕಲ್ಚರ್ ಮಂತ್ರಿಯಾಗಿದ್ದಿರಿ. 80 ಭಾಗ ರೈತರ ಪ್ರತಿನಿಧಿಯಾಗಿದ್ದಿರಿ. ಏಕೆ ಮಾಡಲಿಲ್ಲವೆಂದು ಕೇಳುವುದು ತಪ್ಪೇ? ಇವರು ಇಲ್ಲಿ ಕುಳಿತು ಕೊಂಡು ಸುಮ್ಮನೆ ಕೆಣಕುತ್ತಾರೆ. ಇವರು ರೈತರನ್ನು ಉದ್ಧಾರ ಮಾಡಿದರಂತೆ. ಹಾಸನ

ಜಿಲ್ಲೆ ರೈತರು ಸರ್ವನಾಶವಾಗಿ ಹೋದರು. ಹೇಳುವುದಕ್ಕಾಗಲಿಲ್ಲ, ಮಾಡುವುದಕ್ಕಾಗಲಿಲ್ಲ. ಇವರು ಮಂತ್ರಿಯಾಗಿದ್ದರಂತೆ ನಾನು ಓದಿಲ್ಲವೆಂದು ಇವತ್ತು ನನಗೆ ಪಾಠ ಹೇಳಿಕೊಡುವುದಕ್ಕೆ ಬಂದಿದ್ದಾರೆ. ನಾನು ರಾತ್ರಿಯೇ ಇದನ್ನು ಓದಿದ್ದೇನೆ. ಸ್ವಾಮಿ ಈಗ ಇದರಲ್ಲಿ ನಮಗೆ ಅನ್ಯಾಯವಾಗಿದೆ. ನಾನು ಈ ಬಗ್ಗೆ ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಅದೆಲ್ಲ ಗೊತ್ತಿದೆ. ನಿಮ್ಮ ಕಾಲದಲ್ಲಿ ಮಂಜೂರಾಗಿರುವಂತಹ ಯೋಜನೆಗಳು ನೀವು ಇರಿಗೇಶನ್ ಮಂತ್ರಿಗಳಾಗಿದ್ದಾಗ ಮಂಜೂರಾಗಿದ್ದಂತಹ 29 ಯೋಜನೆಗಳನ್ನು, ನೀರಾವರಿ ಯೋಜನೆಗಳನ್ನು ಇವರು ನಿಲ್ಲಿಸಿದರು. ಏಕೆ? ಇವರು ದುಡ್ಡನ್ನು ಇವರ ತಾತಾನ ಮನೆಯಿಂದ ಕೊಡುತ್ತಿದ್ದರೇ? ನಾನು ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ; ಈ ಆಂಜನೇಯಪುರ ಲಿಫ್ಟ್ ಇರಿಗೇಶನ್ ಸೀಮ್; ಸುಮಾರು ಮೂರುವರೆ ಸಾವಿರ ಎಕರೆ ಜಮೀನು ನನ್ನ ಕ್ಷೇತ್ರದಲ್ಲಿ ಮುಳಗಡೆಯಾಗಿದೆ. ಹಾಸನ ತಾಲ್ಲೂಕಿನ ಮೂರುವರೆ ಸಾವಿರ ಎಕರೆ ಜಮೀನು ಹೇಮಾವತಿ ಡ್ಯಾಮ್‌ನಲ್ಲಿ ಮುಳಗಡೆಯಾಗಿದೆ ಫಲವತ್ತಾದ ಗದ್ದೆ, ಅಡಿಕೆ ತೋಟ, ಒಳ್ಳೆಯ ಭೂಮಿ ಮುಳಗಡೆಯಾಗಿದೆ. ಜನರು ಅದನ್ನು ಒಪ್ಪಿಕೊಂಡರು. ತುಮಕೂರು, ಮಂಡ್ಯ ಬೇರೆ ಕಡೆ ಇರತಕ್ಕಂಥ ಕೋಟ್ಯಾಂತರ ರೈತರ ಶ್ರೇಯೋಭಿವೃದ್ಧಿಗೆ ಅವರು ಬಲಿಯಾದರೂ ಸಂತೋಷ; ಬಿಟ್ಟು ಕೊಟ್ಟರು ಸಂತೋಷ. ಆ ಡ್ಯಾಮ್ ಪಕ್ಕದಲ್ಲಿ ಸುತ್ತಾ ಬಡ ರೈತರಿಗೆ ಎರಡೆರಡು ಎಕರೆ ಜಮೀನು ಕೊಟ್ಟರು. ಕೋರೆ, ಕಲ್ಲುಮಟ್ಟಿ, ಗಿಡ-ಗೆಂಟೆ ಇದ್ದಂತಹ ಜಾಗ ಕೊಟ್ಟರು. ಅದರಲ್ಲಿ ಅವರು ಜೀವನ ಮಾಡುವುದಕ್ಕೆ ಆಗುತ್ತದೆಯೇ? ಅದಕ್ಕೆ ಪರಿಹಾರ ಎರಡು ಸಾವಿರ, ಮೂರು ಸಾವಿರ ಎಷ್ಟೋ ಅವತ್ತು ಕೊಟ್ಟರು. ಸ್ವಾಮಿ, ಎಲ್ಲಾ ಕಡೆಗೂ ನೀರು ಕೊಡುವುದಕ್ಕೆ ಆಗುತ್ತದೆ; ಇಲ್ಲಿ ಈ ಜನರಿಗೆ ನೀರು ಇಲ್ಲ. ಅವರನ್ನು ಪುನರ್‌ವಸತಿ ಮಾಡುವುದು ಸರ್ಕಾರದ ಮೊದಲ ಆಧ್ಯಕರ್ತವ್ಯ. ಆ ಬಡ ರೈತರಿಗೆ ನೀರು ಕೊಡಿ ಅಂತ ಹೇಳಿ ಸರ್ಕಾರದ ಗಮನಕ್ಕೆ ತಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಇಂದಿನ ಮುಖ್ಯಮಂತ್ರಿಗಳೇ ಅಂದಿನ ಇರಿಗೇಷನ್ ಮಂತ್ರಿಗಳು. ಅದನ್ನು ಅವರು ನೋಡಿ ಅನ್ಯಾಯವಾಗಿದೆ ಅಂತ ಪರಿಗಣಿಸಿ ಪಾಪ ಅವರು ಜಮೀನು, ಗದ್ದೆ ತೋಟವನ್ನು ಕಳೆದುಕೊಂಡಂತಹ ರೈತರು ಡ್ಯಾಮ್ ಪಕ್ಕದಲ್ಲಿ ಎರಡೆರಡು ಎಕರೆ ಜಮೀನು ಕೊಟ್ಟಿದ್ದಾರೆ. ಅವರಿಗೆ ನೀರು ಕೊಡಬೇಕಾದುದು ನ್ಯಾಯ ಇದೆ ಅಂತ ಹೇಳಿ ಧರ್ಮ ಇದೆ ಅಂತ ಹೇಳಿ ಅವತ್ತು ಅವರು ಮಂಜೂರು ಮಾಡಿಕೊಟ್ಟರು. ಕೆಲಸ ಶುರು ಆಯಿತು. ಒಂದೂವರೆ ಕೋಟಿ ಖರ್ಚಾಗಿದೆ. ಕಾಂಗ್ರೆಸ್ ಸರ್ಕಾರ ಇದ್ದಾಗ ಒಂದೂವರೆ ಕೋಟಿ ರೂಪಾಯಿಗಳು ಖರ್ಚಾಯಿತು. ಜನತಾದಳದ ಸರ್ಕಾರ ಬಂತು. ಅದನ್ನು ಅವರು ನಿಲ್ಲಿಸಿದರು. ಯಾರೂ ಸ್ವಾಮಿ ಇವರಿಗೆ ಅಧಿಕಾರ ಕೊಟ್ಟವರು? ಒಂದೂವರೆ ಕೋಟಿ ರೂಪಾಯಿಗಳು ಯಾರ ಅಪ್ಪನ ಮನೆ ದುಡ್ಡು? ಎಷ್ಟು ಜನ ಬಡ ರೈತರ ದುಡ್ಡು ಅದು; ಇದನ್ನು ಹೇಳುವವರು ಇಲ್ಲ ಕೇಳುವವರು ಇಲ್ಲ. ಇವರು ಇವತ್ತು ಇಲ್ಲಿ ಕುಳಿತುಕೊಂಡು ಭಾಷಣ ಮಾಡುತ್ತಾರೆ. ನಾವು ಸ್ಟೇಟ್‌ಮೆಂಟ್ ಕೊಟ್ಟೆವು. ಜನರಿಗೆ ಹೇಳಿದೆವು. ಆ ಸರ್ಕಾರ ನಮೋ ಅಂತ ಅನ್ನಲಿಲ್ಲ. ಒಂದು ನಯಾಪೈಸೆ ಖರ್ಚು ಮಾಡಲಿಲ್ಲ. ಒಂದೂವರೆ ಕೋಟಿ ಹಣ ಖರ್ಚಾಗಿದ್ದು ಯಾರ ಮನೆ ದುಡ್ಡು? ಇರಿಗೇಷನ್ ಎಕ್ಸ್‌ಪರ್ಟ್ಸ್ ವೆರಿಫೈ ಮಾಡಿ ಇದೆ ಅಂತ ಹೇಳಿ, ತಾಂತ್ರಿಕ ಒಪ್ಪಿಗೆಯನ್ನು ಕೊಟ್ಟು ಮಂಜೂರಾಗಿ ಒಂದೂವರೆ ಕೋಟಿ ರೂಪಾಯಿಗಳ ಕೆಲಸ ಆದ ಮೇಲೆ ಇದನ್ನು ಏಕಾಏಕಿ ನಿಲ್ಲಿಸಿಬಿಟ್ಟು ಬೇರೆ ಕೆಲಸ ತೆಗೆದುಕೊಂಡರು. ನಾನು

ಕೇಳುತ್ತೇನೆ ನೂರು ರೂಪಾಯಿಗಳ ಸಾಲ ಕಟ್ಟಬೇಕಾದರೆ, ಸ್ವಲ್ಪ ಲೇಟಾದರೆ ಅವರ ಮನೆಯಲ್ಲಿರುವ ಸಾಮಾನುಗಳನ್ನೆಲ್ಲಾ ಹೊತ್ತುಕೊಂಡು ಬಂದು ಹರಾಜು ಹಾಕುತ್ತಾರೆ. ಇನ್ನೂ ಎನೂ ಸಿಗದೇ ಹೋದರೆ ಹೆಂಗಸರ ತಾಳಿಯನ್ನಾದರೂ ಕಿತ್ತು, ಅವರು ಸಾಲಕ್ಕೆ ದುಡ್ಡು ಜಮಾ ಮಾಡಿ ಕೊಳ್ಳುತ್ತಾರೆ. ಇಂತಹ ಕಷ್ಟ ಪರಿಸ್ಥಿತಿಯಲ್ಲಿ ನೀವು ವಸೂಲಿ ಮಾಡಿದಂತಹ ಹಣವನ್ನು, ತೆರಿಗೆ ಹಣವನ್ನು ಯಾರೋ ಮನಸ್ಸಿಗೆ ಬಂದ ಹಾಗೆಬಂದು ನಿಲ್ಲಿಸು ಅಂತ ಹೇಳಿದರೆ ನೀವು ನಿಲ್ಲಿಸಿದ್ದೀರಲ್ಲ ನಾಚಿಕೆಯಾಗುವುದಿಲ್ಲವೇ ಇವರಿಗೆ. ಇವರು ರೈತರೇ? ಇವರು ರೈತರ ಮಕ್ಕಳಾ? ಇವರು ನಮಗೆ ನ್ಯಾಯ-ನೀತಿ ಭೋದನೆ ಮಾಡುತ್ತಾರೆ; ಮೊದಲು ಇದಕ್ಕೆ ಜವಾಬು ಹೇಳಬೇಕು; ಒಂದೂವರೆ ಕೋಟಿ ರೂಪಾಯಿಗಳ ದುಡ್ಡು ಖರ್ಚು ಮಾಡಿ ಆರು ವರ್ಷಗಳಾದರೂ ಸಹ ಎಕೆ ಕೆಲಸ ಶುರು ಮಾಡಲಿಲ್ಲ? ಅದು ಯಾರ ಮನೆ ದುಡ್ಡು? ಇವರ ತಾತನ ಮನೆ ಮಾರಿ ಕಟ್ಟಿದಂತಹ ದುಡ್ಡಾ ಅದು? ಯೋಚನೆ ಮಾಡಿ ಎಷ್ಟು ಆ ನ್ಯಾಯಗಳು ? ಎಷ್ಟು ಹೇಳಿ ಅನ್ಯಾಯಗಳನ್ನು? ಸ್ವಾಮಿ ಅಲ್ಲಿ ಒಂದು ಡೈರಿ ಹಾಸನದಲ್ಲಿ. ಅದು ಮಾನ್ಯ ಚಿಕ್ಕೇಗೌಡರ ಕಾಲದಲ್ಲಿ ಮಂಜೂರಾಯಿತು. ನಾನು ಸಹ ಅಧ್ಯಕ್ಷನಾಗಿದ್ದೆ. ಅಪಾಯಿಂಟ್‌ಮೆಂಟ್ಸ್ ಬಗ್ಗೆ ರಿಜಿಸ್ಟ್ರಾರ್‌ರಿಂದ 16 ಜನಕ್ಕೆ ಅಪ್ರೂವಲ್, 29 ಜನರಿಗೆ ಅಪಾಯಿಂಟ್‌ಮೆಂಟ್ ಸಿಕ್ಕಿತು ರೋಸ್ಟರ್ ಪ್ರಕಾರ ಇಲ್ಲ. ಇಂಟರ್‌ವ್ಯೂ ಇಲ್ಲ; ಹೇಳುವವರು ಇಲ್ಲ, ಕೇಳುವವರಿಲ್ಲ. ಯಾರ ಮನೆ ದುಡ್ಡು ಸ್ವಾಮಿ ಇದು? ಕಾನೂನು ಕಟ್ಟಲೆ ಎನೂ ಇಲ್ಲವೇ? ಆಮೇಲೆ ಹಾಸನದಲ್ಲಿ ಒಂದು ಸಾಹಿತ್ಯ ಸಮ್ಮೇಳನ ನಡೆಯಿತು. ಆ ಸಾಹಿತ್ಯ ಸಮ್ಮೇಳನ ನಡೆದಾಗ ಆ ಫಂಡ್‌ನಿಂದ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟರು ಹಾಸನ ಪಟ್ಟಣದ ರಸ್ತೆಗಳಿಗೆ ಟಾರ್ ಹಾಕುವುದಕ್ಕೆ. ನಾನು ಚಾಲೇಂಜ್ ಮಾಡುತ್ತೇನೆ. ಇಲ್ಲದಿದ್ದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ. ನನ್ನ ಮಾತು ಸುಳ್ಳಾದರೆ ನನ್ನನ್ನು ಶೂಟ್ ಮಾಡಿ ನನ್ನ ಹೆಣವನ್ನು ಆ ಸರ್ಕಲ್‌ನಲ್ಲಿ ನೇತಾಕಲಿ. ಒಂದು ರಸ್ತೆಗೆ ಟಾರ್ ಹಾಕಿರುವುದನ್ನು ತೋರಿಸುತ್ತಾರಾ ಅವರು? ಅವರೇ ಎದ್ದು ನಿಂತಿದ್ದವರು ಅವರ ಪರವಾಗಿ ಮಾನ್ಯ ಭೈರೇಗೌಡರು.

ಶ್ರೀ ಸಿ ಭೈರೇಗೌಡ:- ನಿಮಗೆ ತಲೆ ಗಿಲೆ ತಿರುಗುತ್ತಿದೆ ಎನ್ರಿ? ಎಲ್ಲೋ ಮಾತನಾಡುವುದನ್ನು ಇಲ್ಲಿ ಬಂದು ಮಾತನಾಡುತ್ತಿದ್ದೀರಿ.

ಶ್ರೀ ಕೆ.ಎಚ್ ಹನುಮೇಗೌಡ:- ಮಾನ್ಯ ಅಧ್ಯಕ್ಷರೇ.

ಅಧ್ಯಕ್ಷರು:- ಮಾನ್ಯ ಹನುಮೇಗೌಡರೇ ಸ್ವಲ್ಪ ದಯಮಿಟ್ಟು ಉದ್ವೇಗವನು ಕಡಿಮೆ ಮಾಡಿಕೊಳ್ಳಿ.

ಶ್ರೀ ಸಿ. ಚನ್ನಿಗಪ್ಪ:- ಮಾನ್ಯ ಅಧ್ಯಕ್ಷರೇ, ಇಲ್ಲಿ ವೈಯುಕ್ತಿಕವಾಗಿ ಯಾರ ಬಗ್ಗೆಯೂ ಮಾತನಾಡಬಾರದು.

ಶ್ರೀ ಕೆ.ಎಚ್.ಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ಅವರು ರೈತರ ಲೀಡರ್‌ಗಳಾಗಿ ಬಂದಿದ್ದಾರೆ, ಅದಕ್ಕೆ ನಾನು ಅವರನ್ನು ಕೇಳುತ್ತಿದ್ದೇನೆ. ವೈಯುಕ್ತಿಕವಾಗಿ ನನಗೂ ಮಾನ್ಯ ಭೈರೇಗೌಡರಿಗೂ ಎನೂ ದ್ವೇಷ ಇಲ್ಲ. ಅವರು ನಮ್ಮ ಜೊತೆಯಲ್ಲಿಯೇ ಇದ್ದರು, ಕುಳಿತು ಮಾತನಾಡುತ್ತಿದ್ದರು.

ಶ್ರೀ ಕೆ.ಎಂ.ಕೃಷ್ಣಮೂರ್ತಿ:- ಮಾನ್ಯ ಅಧ್ಯಕ್ಷರೇ ಇದು ವಿಧಾನ ಸಭೆ. ಅವರು ಇಲ್ಲಿ ಮಾತನಾಡಬೇಕಾದರೆ ಶಾಂತಿಯಿಂದ ಮಾತನಾಡಬೇಕು. ಅವರಿಗೆ ವಯಸ್ಸಾಗಿದೆ. ಅವರು ಬಹಳ ಗೌರವದಿಂದ ನಡೆದುಕೊಳ್ಳಬೇಕು. ನಾವು 4ಜನ ಇದ್ದೇವೆಯೋ 5 ಜನ ಇದ್ದೇವೆಯೋ ಅದು ಬೇರೆ ಮಾತು.

ಶ್ರೀ ಕೆ.ಎಚ್.ಹನುಮೇಗೌಡ:- ಹೋಗಲಿ ಬಿಡಿ. ಅದು ಏನಾದರೂ ತಪ್ಪಾಗಿದ್ದರೆ ಕ್ಷಮಿಸಿ. ಮಾನ್ಯ ಮುಖ್ಯಮಂತ್ರಿಗಳೇ ಅವರು ಒಂದು ರಸ್ತೆಯಲ್ಲಿ ಟಾರ್ ಹಾಕಿದ್ದಾರೆಂದು ತೋರಿಸಿದರೆ ನಾನು ತಕ್ಷಣ ರಾಜೀನಾಮೆಯನ್ನು ಕೊಡುತ್ತೇನೆ. ದೇಶವನ್ನು ಲೂಟಿ ಹೊಡೆಯುವುದು ಅಂದ್ರೆ ಅವರ ಕಡೆಯವರಿಗೆ ಕಂಟ್ರಾಕ್ಟ್ ಕೊಟ್ಟುಕೊಂಡು ಯಾರೂ ಹೇಳುವವರಿಲ್ಲ, ಕೇಳುವವರಿಲ್ಲ ಅಂತ ಅಷ್ಟು ಲೂಟಿ ಹೊಡೆಯುವುದು. ತೋರಿಸಲಿ ಬಂದು ನೋಡೋಣ ಅವರು ಎಲ್ಲಿ ಟಾರ್ ಹಾಕಿದ್ದಾರೆಂದು. ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ. ಆ ಡಯಾಸ್ ಕಟ್ಟಿದರು. ಆಗ ಅಲ್ಲಿ ಒಬ್ಬ ದಕ್ಷ ಜಿಲ್ಲಾಧಿಕಾರಿಗಳು ಇದ್ದರು. 17 ಲಕ್ಷ ರೂಪಾಯಿಗಳಿಗೆ ಬಿಲ್. ಅದಕ್ಕೆ ಆಕೆ ಹೇಳಿದಂತೆ ಸ್ಟೀಲ್‌ನಲ್ಲಿಯೇ ಕಟ್ಟಿಬಿಡುತ್ತೇನೆ 17 ಲಕ್ಷ ಬೇಡ 15 ಲಕ್ಷ ಕೊಡಿ ಸಾಕು ಅಂತ. ಇದನ್ನು ಹೇಗೆ ಬಿಲ್ ಪಾಸ್ ಮಾಡುವುದು ಇದೂ ಉಂಟೇ? ಈ ತರಹ ದರೋಡೆ ಮಾಡುವುದೇ ಅಂತ ಕೇಳಿದರಂತೆ. ಬೆಳಿಗ್ಗೆ ಟೆಲಿಗ್ರಾಂ, ಬೇರೆ ಕಡೆ ಟ್ರಾನ್ಸ್‌ಫರ್. ಅವರು 17 ಲಕ್ಷಕ್ಕೆ ಈ ರೀತಿ ಆಗಿದೆಯೇ ಅಂತ ಕೇಳಿದ್ದಕ್ಕೆ ಅವರನ್ನು ವರ್ಗಾವಣೆ ಮಾಡಿದರು. ನಾನು ಬೇರೆ ಜಿಲ್ಲೆ ಬಗ್ಗೆ ಮಾತನಾಡುವುದಿಲ್ಲ. ಬೇರೆ ವಿಷಯಗಳ ಬಗ್ಗೆ ನಾನು ಮಾತನಾಡುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಎಷ್ಟು ಅನ್ಯಾಯವಾಯಿತು ಇವರ ಸರ್ಕಾರದಲ್ಲಿ? ಎಷ್ಟು ಜನ ರೈತರು ಇವರಿಗೆ ಶಾಪ ಹಾಕಿದರು? ಎಷ್ಟು ಜನ ರೈತರನ್ನು ಇವರು ಹುಳು ಮಾಡಿದರು? ಇದಕ್ಕೆ ಒಂದು ಕೊನೆ ಬೇಡವೇ? ಹೊಳೆನರಸಿಪುರ ತಾಲ್ಲೂಕಿಗೆ ಒಂದೇ ಕ್ಷೇತ್ರಕ್ಕೆ 17 ಲಿಫ್ಟ್ ಇರಿಗೇಶನ್, ಬೇರೆ ಕಡೆ ಇದ್ದವುಗಳನ್ನು ವಜಾ ಮಾಡಿ ಎಲ್ಲರ ಬಾಯಿಗೆ ಮಣ್ಣು ಹಾಕಿ ಅಲ್ಲಿ ಕೊಟ್ಟರು. ಇದನ್ನೆಲ್ಲಾ ಯಾರು ಮಾಡಿದವರು? ಇದು ಆಗಬಹುದೇ? ಇದು ನ್ಯಾಯವೇ? ಯಾರೂ ಹೇಳುವವರು ಕೇಳುವವರು ಇಲ್ಲ ಅಂತ ಇದ್ದವರನ್ನೆಲ್ಲಾ ಅಲ್ಲಲ್ಲಿಯೇ ಮ್ಯಾನೇಜ್ ಮಾಡಿಕೊಂಡು ಈ ರೀತಿ ದುಡ್ಡು ಹೊಡೆದುಕೊಂಡು ಮೋಸ ಮಾಡುವುದೇ? ಆ ರೈತರು ಎಷ್ಟು ತೊಂದರೆ ಪಟ್ಟರು ? ಡ್ಯಾಮ್ ಕಟ್ಟಿ ಅವರ ಜಮೀನು ಮುಳುಗಡೆಯಾದವರಿಗೆ ಅವರಿಗೆ ನೀರು ಕೊಡುವುದಕ್ಕೆ ಅಂತ ಹೇಳಿ ಒಂದು ಸಣ್ಣ ಏತ ನೀರಾವರಿ ಯೋಜನೆಯನ್ನು ಮಾಡಿದರೆ ಅದಕ್ಕೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ ಅದನ್ನು ತಕ್ಷಣ ನಿಲ್ಲಿಸಿ ಅಂದ್ರೆ ಇದು ನ್ಯಾಯವೇ? ನೀವಾದರೆ ಸುಮ್ಮನಿರುತ್ತಿದ್ದಿರೇ? ಆ ಜನ ಯಾರಿಗೆ ಹೇಳುಬೇಕು? ನಾನು ಹಿಂದೆ ಒಂದು ಸಲ ಹೇಳಿದ್ದೆ, ಯಾವ ರೈತನಿಗೆ ಆಗಲಿ ಅಯ್ಯೋ ಅಂತ ಅನಿಸಿದರೆ ಒಂದು ಅಟಂಬಾಂಬ್ ಬಿದ್ದಂತೆ. ಅವನಿಂದ ಹೊರಟು ಸಂಬಂಧಪಟ್ಟವರಿಗೆ ಹೋಗಿ ತಗಲುತ್ತದೆ ಅಂತ. ಸಾವಿರಾರು ಆಟಂಬಾಂಬ್‌ಗಳು ಆಗಿ ಅವರ ಸರ್ವ ನಾಶಕ್ಕೆ ಕಾರಣವಾದರೆ ಅದರಲ್ಲಿ ತಪ್ಪೇನು? ಹಿಂದೆ ಯಾರು ಅನ್ಯಾಯ ಮಾಡಿದರೋ, ಯಾರು ತಪ್ಪು ಮಾಡಿದರೋ ರೈತರಿಗೆ ಯಾರು ದ್ರೋಹ ಮಾಡುತ್ತಾರೋ ಅವರು ಯಾರಿಗೂ ಕೂಡ ಇದು ತಪ್ಪಿದ್ದಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. IIಇನ್ನು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಅಪಾಯಿಂಟ್‌ಮೆಂಟ್ಸ್ ಬಗ್ಗೆ ಇಂಟರವ್ಯೂ ನಡೆಯಿತು. ಪ್ರತಿಯೊಂದು ಅಪಾಯಿಂಟ್‌ಮೆಂಟ್

ಲಿಸ್ಟ್‌ನಲ್ಲಿ ಇದ್ದವರನ್ನು ಆ ಸಂಬಂಧಪಟ್ಟ ಜಿಲ್ಲಾ ಮಂತ್ರಿಗೆ ತೋರಿಸಿ ಅವರ ಅಪ್ರೂವಲ್ ತೆಗೆದುಕೊಳ್ಳಬೇಕು. ಹೀಗೆ ಮಾಡಿದ 85ಜನರ ನೇಮಕಾತಿಯಲ್ಲಿ 65 ಜನರು ಹೊಳೆನರಸೀಪುರದವರು; ಬೇರೆ ಕಡೆಯವರು ಯಾರೂ ಇಲ್ಲ. ಹೀಗೆ ಒಂದು ರೀತಿಯಲ್ಲಿ ಹಾಸನ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಎಲ್ಲವೂ ಕಂಟ್ರಾಕ್ಟ್ ಓರಿಯೆಂಟೆಡ್ ರೀತಿಯಲ್ಲಿ ನಡೆಯುತ್ತಿತು. ಒಟ್ಟಿನಲ್ಲಿ ಅವರು ಅವರ ಸಂಬಂಧಪಟ್ಟವರು ಆಧ್ಯತೆ ಪಡೆಯುತ್ತಿದ್ದರು. ಯಾರೂ ಅವರನ್ನು ಕೇಳುವ ಹಾಗಿಲ್ಲ. ಯಾವ ಕಂಟ್ರಾಕ್ಟ್‌ರ ಕೆಲಸ ಮಾಡಿದ್ದರೂ ಯಾವ ಇಂಜಿನೀಯರ್ ಕೂಡ ಹೋಗಿ ಹಿಡಿಯುವ ಹಾಗಿಲ್ಲ. ಕಂಟ್ರಾಕ್ಟ್‌ರ್ ಕೊಟ್ಟ ಬಿಲ್ ಯಾವುದಿದೆ ಅದು ಪಾಸ್ ಆಗುತ್ತಿತ್ತು.

ಶ್ರೀ ಎ.ದೊಡ್ಡೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ, ಹೊಳೆನರಸೀಪುರದವರಿಗೆ ಅಂದರೆ ಅದು ಎಲ್ಲರಿಗೂ ಅಲ್ಲ; ಅವರಿಗೆ ಬೇಕಾಗಿರುವ ಕಡೆ ಲಿಫ್ಟ್ ಇರಿಗೇಶನ್ ಆಗಿರುವಂಥಾದ್ದು, ಒಟ್ಟು ಹೊಳೆನರಸೀಪುರದ ಎಲ್ಲ ಕಡೆಗಳಲ್ಲಿ ಯೂ ನೀರು ಹರಿದು ಹೋಯಿತು. ಆದರೆ ಕೆಲವು ಭಾಗಗಳಿಗೆ ಅನ್ಯಾಯವೂ ಆಗಿದೆ. ಅವರಿಗೆ ಎಲ್ಲಿ ಬೇಕು, ಯಾರು ಬೇಕು, ಅವರಿಗೆ ಎಲ್ಲ ಸೌಲಭ್ಯಗಳು ಆಗಿದೆ ಅದು ಕೆಲಸ ಕೊಡಿಸುವುದೇ ಆಗಿರಲಿ, ಇನ್ನಾವುದೇ ಆಗಿರಲಿ, ಆದು ಆಗಿದೆ. ಹೀಗೆ 30-40 ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಅನ್ಯಾಯಗಳು ಜನರಿಗೆ ಅರ್ಥವಾಗಿದೆ. ಹೊಳೆನರಸೀಪುರ ಅಂದರೆ ಎಲ್ಲರಿಗೂ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಕೆಲವು ಜನರಿಗೆ, ಮತ್ತು ಕೆಲವು ಭಾಗಗಳಿಗೆ ಎಂದು ಹೇಳಿದರೆ ಅದನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಕೆ.ಹೆಚ್.ಹನುಮೇಗೌಡ:- ನಾನು ಹೊಳೆನರಸೀಪುರದಲ್ಲಿ ಆಗಿರುವಂಥ ಅನ್ಯಾಯಗಳನ್ನು ಮಂಡ್ಯದಲ್ಲಿ ಆಯಿತು ಎಂದು ಹೇಳಲೆ? ಗುಲ್ಬರ್ಗದಲ್ಲಿ ಆಯಿತು ಎಂದು ಹೇಳಲೆ? ಹೊಳೆನರಸೀಪುರದಲ್ಲಿ ಈ ರೀತಿಯಾಗಿ ಅವರು ಮಾಡಿದ್ದಾರೆ ಎಂದು ಹೇಳುತ್ತಾ ಇದ್ದೇನೆ. ನಾನು ವೈಯಕ್ತಿಕವಾಗಿ ಈ ಮಾತನ್ನು ಹೇಳುತ್ತಾ ಇಲ್ಲ. ಅವರುಗಳು ಅಧಿಕಾರದಲ್ಲಿದ್ದಾಗ ಎಷ್ಟರಮಟ್ಟಿಗೆ ಅನ್ಯಾಯ ಮಾಡಿದ್ದಾರೆ ಎಂದು ಹೇಳಿದೆ. ನ್ಯಾಯ, ನೀತಿ, ಧರ್ಮ, ಮುಂತಾಗಿ ಬಹಳವಾಗಿ ಹೊರಗಡೆ ಭಾಷಣ ಮಾಡುತ್ತಾ ಬಂದಿದ್ದಾರೆ. ನಾನು ಹೆಚ್ಚು ಮಾತನ್ನು ಇಲ್ಲಿ ಆಡಬಯಸುವುದಿಲ್ಲ. ಈಗ ದೇಶದಲ್ಲಿ ತಾಂಡವವಾಡುತ್ತಾ ಇರುವುದು ಭ್ರಷ್ಟಾಚಾರ. ನೀವು ಎಲ್ಲಿ ಹೋದರೂ ಕೂಡ ಭ್ರಷ್ಟಾಚಾರದ ಮಾತುಗಳು ಕೇಳಿ ಬರುತ್ತವೆ. ಬಸ್‌ನಲ್ಲಿ, ಹೋಟೆಲ್‌ನಲ್ಲಿ, ಮುಂತಾಗಿ ಎಲ್ಲಿ ಕುಳಿತರೂ ಈ ಮಾತುಗಳು ಕೇಳಿ ಬರುತ್ತವೆ. ಸಾಮಾನ್ಯವಾಗಿ ಹಿಂದಿನ ರಾಜ್ಯಪಾಲರುಗಳ ಭಾಷಣದಲ್ಲಿ ಸ್ವಚ್ಛ, ಧಕ್ಷ, ಆಡಳಿತವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅಂಥ ಭಾಷಣಗಳನ್ನು ನಾನು ಕೂಡ ಬಹಳ ಸಾರಿ ಓದಿದ್ದೇನೆ. ಆದರೆ ಈ ಸಾರಿ ಆ ಪದಗಳು ಇಲ್ಲ. ಅದು ನಿಮಗೆ ಮರೆತು ಹೋಯಿತೋ ಏನೋ ಅದು ನನಗೆ ಗೊತ್ತಿಲ್ಲ. ಆ ಪದಗಳು ಇರಲಿ, ಇಲ್ಲದಿರಲಿ. ಒಟ್ಟಿನಲ್ಲಿ ನೀವು ಭ್ರಷ್ಟಾಚಾರ ನಿರ್ಮೂಲನೆಗಾಗಿ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ? ಅದರ ಬಗ್ಗೆ ದಯವಿಟ್ಟು ನೀವು ವಿವರಣೆ ಕೊಡಬೇಕು. ನಾನು ಚುನಾವಣೆ ಸಮಯದಲ್ಲಿ ಕೆಲವು ಹಳ್ಳಿಗಳಿಗೆ ಹೋಗಿದ್ದೆನು. ಹಣ್ಣುಹಣ್ಣು ಮುದುಕಿಯರು ಇಬ್ಬರು ಸಿಕ್ಕಿದರು. ಅವರಿಗೆ ಸರಕಾರದವರು ಏನೋ ವಿಧವಾ ವೇತನ ಎಂದು ಅವರ ಗಂಜಿಗೆ ಸ್ವಲ್ಪ ಹಣವನ್ನು

ಕೊಡುತ್ತಿದ್ದರು. ಅದರಲ್ಲಿಯೂ ಪೋಸ್ಟ್‌ಮ್ಯಾನ್ 20ರೂಪಾಯಿಗಳನ್ನು ಮುರಿದುಕೊಂಡು ಉಳಿದುದನ್ನು ಕೊಡುತ್ತಾನೆ ಎಂದು ಅವರು ಹೇಳಿದರು. ಆ ಮುದುಕಿಯರು ಕೂಡ ತಮ್ಮಲ್ಲಿ ಶಕ್ತಿ ಇದ್ದಾಗ, ಪ್ರಾಯ ಇದ್ದಾಗ ದೇಶಕ್ಕೋಸ್ಕರವಾಗಿ ದುಡಿದವರು. ಈಗ ಅವರು ಜೀವನದ ಸಂಧ್ಯಾಕಾಲದಲ್ಲಿ ಅಸಹಾಯಕರಾಗಿದ್ದಾರೆ. ಅವರುಗಳು ಮುಪ್ಪಿನಲ್ಲಿ ಒಂದಿಷ್ಟು ಗಂಜಿ ಕುಡಿದು ಇರಲಿ ಎಂದು ಸರಕಾರದವರು ಸ್ವಲ್ಪ ಹಣ ಕೊಟ್ಟರೆ ಅದರಲ್ಲಿಯೂ 20 ರೂಪಾಯಿಗಳನ್ನು ಮುರಿದು ಕೊಳ್ಳುತ್ತಾರಲ್ಲ? ಇವರಿಗೆ ಏನು ಹೇಳಬೇಕು? ಇಷ್ಟೇಅಲ್ಲ, ಇಂಥ ಓಲ್ಡ್‌ಏಜ್ ಪೆನ್‌ಶನ್ ಮಂಜೂರು ಮಾಡಲು ಕೂಡ ಹಣವನ್ನು ತೆಗೆದುಕೊಳ್ಳುತ್ತಾರಂತೆ. ಎಲ್ಲರೂ ತೆಗೆದು ಕೊಳ್ಳುತ್ತಾರೆಂದು ನಾನು ಹೇಳುವುದಿಲ್ಲ. ಹೀಗಾದರೆ ಜನರ ಗತಿ ಏನು? ನಾನು ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ; ಒಬ್ಬ ಹಳ್ಳಿಯ ರೈತನ ಕೆಲವು ವರ್ಷಗಳ ಹಿಂದಿನ ಮಾತು ಇದು. ಒಮ್ಮೆ ಅವನನ್ನು ಸಬ್‌ಇನ್ಸ್‌ಪೆಕ್ಟರ್ ಒಬ್ಬರು ಹಿಡಿದು ಹೊಡೆದು ಅವನಿಂದ ಹಣವನ್ನು ಕಿತ್ತುಕೊಂಡರಂತೆ. ನಾನು ತಿಳಿದ ಮಟ್ಟಿಗೆ ಆತನು ಯೋಗ್ಯವ್ಯಕ್ತಿ. ಆತನು ನನ್ನ ಹತ್ತಿರ ಬಂದು ತನ್ನ ಕಷ್ಟವನ್ನು ಹೇಳಿಕೊಂಡನು. ವಿಷಯ ನಿಜವೇನಯ್ಯ ಒಂದು ಕೇಳಿದ್ದಕ್ಕೆ ಹೌದು ಏಂದು ಉತ್ತರಿಸಿದ. ನಾನು ಪೋಲೀಸ್ ಸ್ಟೇಶನ್‌ಗೆ ಹೋಗಿ ಈತನಿಂದ ತೆಗೆದುಕೊಂಡಿದ್ದು ಹೌದೆ? ಎಂದು ಕೇಳಿದ್ದಕ್ಕೆ ಎಸ್‌ಐ ಹೌದು ಎಂದ. ಅದನ್ನು ಕೇಳಿ ನನಗೆ ಶಾಕ್ ಆಯಿತು. ನಾಚಿಕೆ ಇಲ್ಲದೆ ಹಣವನ್ನು ತೆಗೆದುಕೊಂಡಿದ್ದೇನೆ ಎಂದು ಹೇಳುತ್ತಿದ್ದೀಯಲ್ಲ ಎಂದು ಕೇಳಿದಾಗ ಪುನ: ಹೌದು ಎಂದು ಉತ್ತರಿಸಿದ. ನಾಚಿಕೆಯಾಗುವುದಿಲ್ಲವೆ ಎಂದರೆ ಆತನು ನನಗೆ ಏತಕ್ಕೆ ನಾಚಿಕೆಯಾಗಬೇಕು? ತೆಗೆದುಕೊಂಡಿರುವುದು ನಿಜ, ಅದನ್ನು ಹೇಳಿದ್ದೇಸಿ ಎಂದು. ನಾನು ಏತಕ್ಕೆ ತೆಗೆದುಕೊಂಡೆ ಎಂದು ನಿಜವನ್ನು ಹೇಳಲೆ? ಎಂದು ಕೇಳಿದಾಗ, ಹೇಳು ಎಂದು ನಾನು ಹೇಳಿದೆ. ಒಬ್ಬರು ಮಂತ್ರಿಗಳು, ಎಂಪಿ, ಹಾಗೂ ಇನ್ನೊಬ್ಬರು ಸೇರಿಕೊಂಡು ಟಿವಿಯಲ್ಲಿ ಕುಳಿತುಕೊಂಡು ರಾತ್ರಿ 10 ರಿಂದ 2 ಗಂಟೆಯವರೆಗೂ ಕುಡಿದರಂತೆ. ಕುಡಿದು ಎದ್ದು ಹೋಗುವಾಗ 700 ರೂ.ಗಳ ಬಿಲ್‌ನ್ನು ಎಸ್‌ಐ ಕೈಗೆ ಕೊಟ್ಟು ಕುಡಿದರಂತೆ. ಸರಿ, ಅವರು ಹೋದರೆ ರೈತನ ಹತ್ತಿರ ನೀನು ಏತಕ್ಕೆ ಬಡಿದು ದುಡ್ಡು ಕಿತ್ತುಕೊಂಡೆ? ಎಂದು ಕೇಳಿದೆ. ನಾನೇನು ಮಾಡಲಿ? ನಾನು ಈ ಹೊತ್ತಿನವರೆಗೂ ಒಬ್ಬ ಆನೆಸ್ಟ್ ಆಫೀಸರ್ ಆಗಿದ್ದವನು. ನಾನು ಬಹಳ ಯೋಚನೆ ಮಾಡಿದೆ. 50-100ರೂ.ಗಳು ಆಗಿದ್ದರೆ ನಾನೇ ಕೈಯಿಂದ ಕೊಡುತ್ತಿದ್ದೆ. ನನಗೆ ಬರುವ ಸಂಬಳ ಬಹಳ ಕಡಿಮೆ. ನನಗೂ ಎರಡು ಮಕ್ಕಳಿದ್ದಾರೆ. ನಾನು ಮತ್ತು ನನ್ನ ಸಂಸಾರದೊಂದಿಗೆ ಇದ್ದೇನೆ. ಈ ಸಮಯದಲ್ಲಿ 50ರೂ.ಗಳು ಮಾತ್ರ ಇತ್ತು. ಕುಡಿದವರು ಮೂರು ಸಾರಿ ಹೋಟೆಲ್‌ಗೆ ಹೋಗಿ ಹಣ ಪಾವತಿ ಮಾಡಿಬಾ ಎಂದು ಹೇಳುತ್ತಿದ್ದರು. ಹೀಗಾಗಿ ಸ್ಟೇಶನ್‌ಗೆ ಒಬ್ಬ ಬಂದಾಗ ಅವನಿಗೆ ಎರಡು ಬಿಗಿದಾಗ ಆತನು 200ಕೊಟ್ಟ, ಎರಡು ಗಂಟೆಯ ಮೇಲೆ ಬಂದ ಇಬ್ಬರಿಗೆ ಎರಡು ಬಿಟ್ಟ ಮೇಲೆ 200ಕೊಟ್ಟರು. ಆ ಮೇಲೆ ಸಾಯಂಕಾಲದ ಹೊತ್ತಿಗೆ ಇನ್ನೊಬ್ಬ ಬಂದ. ಆತನನ್ನು ನೋಡಿದರೆ ಸ್ವಲ್ಪ ಹಣ ಇರುವಂತೆ ಕಂಡ. ಇವನಿಗೆ ಐದಾರು ಬಿಗಿದ ಮೇಲೆ 250ಕೊಟ್ಟ. ಹೀಗೆ ಒಟ್ಟು 650ರೂಪಾಯಿಗಳು ಆದ ಮೇಲೆ ಹತ್ತಿರ ಇದ್ದ 50ರೂಪಾಯಿಗಳನ್ನು ಸೇರಿಸಿ ಹೋಟೆಲ್‌ನವರಿಗೆ ಕೊಟ್ಟೆ ಎಂದು ಹೇಳಿದ. ಪರಿಸ್ಥಿತಿ ಹೀಗಿರಬೇಕಾದರೆ ಇದಕ್ಕೆ ಏನು ಮಾಡಬೇಕು? ನೀವೇ ಹೇಳಿ ಎಂದ ನಿನ್ನ ಕೈಯಲ್ಲಿ ಬಿಲ್ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಬಹುದಿತ್ತಲ್ಲ ಎಂದು ಕೇಳಿದರೆ, ನನ್ನನ್ನು ಎತ್ತಿ ಗುಲ್ಬರ್ಗಕೆ ಹಾಕಿದರೆ ನಾನೇನು ಮಾಡಲಿ?

ನನ್ನ ಮಕ್ಕಳನ್ನು ಇಲ್ಲಿ ಸ್ಕೂಲ್‌ಗೆ ಸೇರಿಸಿದ್ದೇನೆ. ನಾನು ಬಂದು ಒಂದೂವರೆ ವರ್ಷವಾಗಿದೇ ಮುಂತಾಗಿ ಏನೇನೊ ಹೇಳಿಕೊಂಡ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ, ಎಲ್ಲಿ ಕರೆಪ್ಶನ್ ಪ್ರಾರಂಭ ಆಗುತ್ತದೆ? ಇದರಿಂದ ಹೇಗೆ ಬಡಜನರು, ರೈತರು ಬಲಿಯಾಗುತ್ತಾರೆ ಎಂಬ ಬಗ್ಗೆ ಉದಾಹರಣೆ ಹೇಳಿದ್ದೇನೆ. ನೀವು ದಯವಿಟ್ಟು ಕರೆಪ್ಶನ್‌ನ್ನು ತಪ್ಪಿಸಬೇಕಾದರೆ, ಅದು ಎಲ್ಲಿ ಪ್ರಾರಂಭವಾಗುತ್ತದೆ, ಎಂಬುದನ್ನು ತಿಳಿದುಕೊಂಡು ಅದನ್ನು ಸರಿಪಡಿಸಬೇಕು. ಈ ರಾಜ್ಯವನ್ನು ತಾವುಗಳು ಸುಖೀರಾಜ್ಯವನ್ನಾಗಿ ಮಾಡಬೇಕೆಂದು ಹೇಳಯಸುತ್ತೇನೆ. ನನಗೆ ಮಹಾಭಾರತದಲ್ಲಿ ಬಂದು ಕಡೆ ಓದಿದ ಜ್ಞಾಪಕವಿದೆ. ನಾನು ಐದು ವರ್ಷಗಳ ಕಾಲ ಮನೆಯಲ್ಲಿದಾಗ ಪುಸ್ತಕಗಳನ್ನು ಓದಿದ್ದೇನೆ. ಪಾಂಡವರಿಗೆ ಅಧಿಕಾರ ಮುಗಿಯುವ ಸಮಯ. ಧರ್ಮರಾಯನು ತನ್ನ ಮಂತ್ರಿಗಳನ್ನು ಕರೆದುಕೊಂಡು ರಾಜ್ಯದಲ್ಲಿ ಜನರು ಏನು ಮಾತನಾಡಿಕೊಳ್ಳುತ್ತಾರೆ ಎಂದು ನೋಡಿಬರಲು ಹೋಗಿದ್ದಾನೆ. ಹಿಂದಿನ ಕಾಲದಲ್ಲಿ ಮಹಾರಾಜರುಗಳು ಹಾಗೆ ಮಾಡುತ್ತಿದ್ದರು. ಹೀಗೆ ತಿಳಿದುಕೊಳ್ಳಲು ತಮ್ಮ ವೇಷ ಬದಲಾಯಿಸಿಕೊಂಡು ಬಂದರಂತೆ. ಊರಿನಲ್ಲಿಯ ಒಬ್ಬ ವಿಧವೆಯ ತನ್ನ ಮನೆಯ ಬೀಗವನ್ನು ತೆಗೆಯುತ್ತಿದ್ದಳಂತೆ. ಆಗ ಯಾಕಮ್ಮ ಮನೆಗೆ ಬೀಗ ಹಾಕಿದ್ದೀಯಾ? ಎಂದು ಧರ್ಮರಾಯ ಕೇಳಿದಾಗ ಆ ಮುದುಕಿಯು ಸ್ವಾಮಿ, 15 ದಿನಗಳ ಹಿಂದೆ ನಮ್ಮ ಮನೆಯ ಪಕ್ಕದಲ್ಲಿ ಕಳ್ಳತನವಾಯಿತು, ನನ್ನ ಮನೆಯಲ್ಲಿಯೂ ಸ್ವಲ್ಪ ಸಾಮಾನು ಇದೆ, ಅದನ್ನು ಯಾರಾದರೂ ಕದ್ದುಬಿಡುತ್ತಾರೆಂದು ಬೀಗ ಹಾಕಿದ್ದೇನೆ ಎಂದು ಹೇಳಿದಳಂತೆ. ಅದನ್ನು ಕೇಳಿ ಧರ್ಮರಾಯ ನಡುಗಿದನಂತೆ. ನನ್ನ ರಾಜ್ಯದಲ್ಲಿನ ಒಬ್ಬ ವಿಧವೆಯ ಆಸ್ತಿಯನ್ನು ರಕ್ಷಣೆ ಮಾಡುವ ಶಕ್ತಿ ನನಗೆ ಇಲ್ಲದಿದ್ದ ಮೇಲೆ, ನಾನು ಅಧಿಕಾರದಲ್ಲಿರುವುದಿಲ್ಲ ಎಂದು ನಿರ್ಣಯವನ್ನು ಧರ್ಮರಾಯನು ತೆಗೆದುಕೊಂಡನಂತೆ. ಹೀಗೆ ಕಥೆಯಲ್ಲಿ ಬರುತ್ತದೆ. ಅದನ್ನು ವಿವರವಾಗಿ ನಾನು ಹೇಳುವುದಿಲ್ಲ. ಇದನ್ನು ನಾನು ಏತಕೆ ಹೇಳುತ್ತಿದ್ದೇನೆ ಅಂದರೆ, ರಾಜ್ಯಭಾರ ಮಾಡುವವರು ಎಷ್ಟರಮಟ್ಟಿಗೆ ಆದರ್ಶ ವ್ಯಕ್ತಿಗಳಾಗಿರುತ್ತಾರೋ, ಅಷ್ಟರಮಟ್ಟಿಗೆ ಜನರು ಅವರಿಗೆ ಮನ್ನಣೆಯನ್ನು ಕೊಡುತ್ತಾರೆ ಎಂಬ ಮಾತನ್ನು ನಾನಿಲ್ಲಿ ಹೇಳಬಯಸುತ್ತೇನೆ. ತಮ್ಮ ಸರಕಾರದಲ್ಲಿ ಒಳ್ಳೆಯ ಮೇಧಾವಿ ಮಂತ್ರಿಗಳಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಧಕ್ಷರು ಮತ್ತು ಸಹೃದಯಿಗಳು. ಎಲ್ಲಾ ವರ್ಗದ ಜನರ ಬಗ್ಗೆ, ಬಡವರ ಬಗ್ಗೆ ಅನುಕಂಪವ ಇರತಕ್ಕಂಥವರು ತಾವುಗಳು. ಎಲ್ಲಾ ಉತ್ತಮವಾದಂಥ ಗುಣಗಳನ್ನು ತಾವುಗಳು ಹೊಂದಿದ್ದೀರಿ. ಆದುದರಿಂದ ತಾವುಗಳು ಎಲ್ಲಿಯೂ ತಾರತಮ್ಯ ಮಾಡಬೇಡಿ;

1.00 ಪಿ.ಎಂ.

ಆ ಬಾಗ, ಈ ಭಾಗ, ಅವನು, ಇವರು ಎಂದು ಮಾಡಲೇ ಬೇಡಿ. ತಮ್ಮ ಪುಣ್ಯವೋ ಏನೋ? ತಾವುಗಳು ಅಧಿಕಾರ ತೆಗೆದುಕೊಂಡ ತತ್‌ಕ್ಷಣ ರಾಜ್ಯದ ಎಲ್ಲಾ ಕೆರೆಗಳು ತುಂಬಿದವು. ನಾನು 15 ದಿನಗಳ ಹಿಂದೆ ಒಂದು ಊರಿಗೆ ಹೋಗಿದ್ದೆ. ಅಲ್ಲಿನ ಒಬ್ಬ ಮುದುಕ ಹೇಳಿದ, ಹನುಮೇಗೌಡ ಯಾವ ಪಕ್ಷ ಎಂದು ಕೇಳಿದ್ದಕ್ಕೆ ನಾನು ಬಿಜೆಪಿ ಎಂದು ಹೇಳಿದೆ. ಕಾಂಗ್ರೆಸ್‌ನ ಯಾರೋ ಒಬ್ಬ ಪುಣ್ಯಪುರುಷ ರಾಜ್ಯದ ಮುಖ್ಯಮಂತ್ರಿಯಾದರೂ ಎಂದು ಕಾಣುತ್ತದೆ, ಕಳೆದ 23ವರ್ಷಗಳಿಂದ ನಮ್ಮ ಭಾಗದ ಕೆರೆಗಳು ತುಂಬಿರದೇ ಇದ್ದವುಗಳು ಈಗ ತುಂಬಿವೆ, ಮುಖ್ಯಮಂತ್ರಿಗಳ ಒಳ್ಳೆಯ ಕಾಲ ಬಂದ ಅವರು ಒಳ್ಳೆಯ ಕೆಲಸ ಮಾಡುವಂತೆ ಕಾಣುತ್ತದೆ

ಎಂದು ಮನಃಪೂರ್ವಕವಾಗಿ ಹೇಳಿದ. ಅಂಥ ಲಕ್ಷಗಟ್ಟಳೆ ಮುಗ್ಧಜೀವಿಗಳು ನಿಮ್ಮ ಕಡೆ ನೋಡುತ್ತಿದ್ದಾರೆ. ನಿಮ್ಮ ಸರಕಾರದ ಕಡೆಗೆ ಅವರು ನೋಡುತ್ತಿದ್ದಾರೆ. ಒಳ್ಳೆಯ ಸರಕಾರ ಬಂದಿದೆ, ಉತ್ತಮವಾದಂಥ ಮುಖ್ಯಮಂತ್ರಿಗಳು ಇದ್ದಾರೆ ಯೋಗ್ಯರಾದಂಥ ಮಂತ್ರಿಗಳು ಇದ್ದಾರೆ, ಇವರ ಕಾಲದಲ್ಲಿ ದೇಶಕ್ಕೆ ಒಳ್ಳೆಯದಾಗುತ್ತದೆ ಎಂಬ ಒಂದು ಭಾವನೆಯನ್ನು ಅವರುಗಳು ಇಟ್ಟುಕೊಂಡಿದ್ದಾರೆ. ಹೀಗೆ ಹಳ್ಳಿಗಳ ಕಡೆಯಲ್ಲಿ ಜನರು ಮಾತನಾಡುತ್ತಿದ್ದಾರೆ. ನನಗೆ ಯಾರ ಮೇಲೆಯೂ ದ್ವೇಷ ಇಲ್ಲ. ನಾನು ಈ ಉದಾಹರಣೆಗಳನ್ನು ಏತಕ್ಕೆ ಹೇಳಿದೆ ಅಂದರೆ, ಉದಾಹರಣೆಗಳನ್ನು ಕೊಟ್ಟು ನೀವು ಕೂಡ ತಪ್ಪನ್ನು ಮಾಡಬಾರದು ಎಂಬುದನ್ನು ತಿಳಿದುಕೊಳ್ಳಬೇಕು, ಜನರ ಶಾಪಕ್ಕೆ ಯಾರೂ ಒಳಗಾಗಬಾರದು, ಅಧಿಕಾರದ ದುರುಪಯೋಗವನ್ನು ಯಾರೂ ಮಾಡಬಾರದು, ಅದರಿಂದ ಜನರಿಗೆ ತೊಂದರೆಯಾಗುತ್ತದೆ ಎಂಬುದನ್ನು ತಿಳಿಸಲು ನಾನು ಹೇಳಿದ್ದೇನೆ. ಅವರಿಗೆ ಬಂದ ಪರಿಸ್ಥಿತಿ ಇನ್ನ್ಯಾರಿಗೂ ಬರಬಾರದೆಂದು ನೊಂದು ಉದಾಹರಣೆ ಕೊಟ್ಟೇನೆ ವಿನಾಹ ಅವರನ್ನು ಕಟ್ಟಿಕೊಂಡು ನನಗೇನಾಗಬೇಕಾಗಿದೆ? ಪಾಪ ಅವರು ಮಾಡಬಾರದ್ದೆಲ್ಲ ಮಾಡಿದರು, ಅದರ ಬಗ್ಗೆ ನನಗೆ ಯೋಚನೆ ಇಲ್ಲ. ಏನು ಮಾಡಿದರೆ ಹೇಗೆ ತಟ್ಟುತ್ತದೆ ಅನ್ನುವ ಉದಾಹರಣೆಗಾಗಿ ನಾನು ಈ ಮಾತು ಹೇಳಿದೆನೇ ಹೊರತು ಇನ್ನೇನೂ ಅಲ್ಲ; ನಿಮಗೋಸ್ಕರ, ನೀವೊಬ್ಬ ಆದರ್ಶ, ದಕ್ಷ ಪ್ರಾಮಾಣಿಕ ಜನಾನುರಾಗಿ ಮುಖ್ಯಮಂತ್ರಿಗಳಾಗಿ ಕೀರ್ತಿಶಾಲಿಗಳಾಗಲಿ ಅಂತ ಹೇಳಿದೆ. ಅವರ ಜೊತೆಯಲ್ಲಿದ್ದ ಇವರು ಇಲ್ಲಿ ಮೇಜು ತಟ್ಟಿಕೊಳ್ಳುತಿದ್ದಾರೆ. ಅವರು ಹೋದೋರು ಹೋದರು, ಇವರ ಆರ್ಭಟ ಇಲ್ಲಿ ತಡೆಯೋಕೆ ಆಗುತ್ತಿಲ್ಲ.

ಶ್ರೀ ಸಿ.ಭೈರೇಗೌಡ: ಎರಡನೇ ಅಥವಾ ಮೂರನೇ ಸಾರಿನೋ ಇಲ್ಲಿಗೆ ಆರಿಸಿಬರುತ್ತಿದ್ದೀರಿ ತಾವು, ಇನ್ನೂ ಕೂಡ ಕಲೀಲಿಲ್ವಲ್ಲ, ಏನೂ ಕಲಿಲಿಲ್ವಲ್ಲ; ನಿಮಗೆ ಯಾವಾಗಲೂ ಒಂದೇ ಚಿಂತೆ.

ಶ್ರೀ ಕೆ.ಎಚ್.ಹನುಮೇಗೌಡ: ಅವರ ಜೊತೆಯಲ್ಲಿ ನಿಮಗೆ ಸಮಾನರಿಲ್ಲ, ಅಂಥೋರು ಇಂಥೋರು ಅಂತ ಹೊಗಳಿ ಅವರನ್ನು ತಗೊಂಡೋಗಿ ಕಾಡಿನಲ್ಲಿ ಕೆಡವಿ ಈಗಿಲ್ಲಿ ಕುಳಿತುಕೊಂಡು ಮೇಜು ತಟ್ಟುತ್ತಿದ್ದಾರೆ. ಮೂರು ಮತ್ತೊಂದು ಜನ ಬಂದು ಬೇಕಾದಷ್ಟು ಮಾಡಿದರೆಂತೆ ಹಂಗಾದರೆ ಇವರು ನಾಲ್ಕು ಜನ ಯಾಕೆ ಬಂದರು? ಜನ ದಡ್ಡರೆ? ಅಲ್ಲ ನೀವು ತಿಳ್ಕಳಿ ಹೇಳುತ್ತೇನೆ.

ಶ್ರೀ ಸಿ ಭೈರೇಗೌಡ: ಈಗ ಯಾರು ದಡ್ಡರು ಅಂತ ನಿಮ್ಮೆದುರಿಗೆ ಹೇಳಬೇಕಾಗುತ್ತದೆ

ಶ್ರೀ ಕೆ.ಎಚ್.ಹನುಮೇಗೌಡ: ನಾನೇ ದಡ್ಡ, ಆಯಿತು, ನೀವು ಭಾರಿಯವರು; ಯಾಕೆಂದರೆ ಇಡೀ ಹಡಗೇ ಮುಳುಗಿಹೋಗಿದೆ. ಎಲ್ಲೋ ಬೈಚಾನ್ಸ್ ನಾಲ್ಕು ಜನ ದಡಕ್ಕೆ ಬಂದು ಕೂತು ಜಂಬ ಹೊಡಿತಾಯಿದ್ದೀರಾ, ಕೂತುಕೊಳ್ಳಿ. ಇನ್ನು ಒಂದು ಸಣ್ಣ ಉದಾಹರಣೆ ಹೇಳಿ ನನ್ನ ಮಾತು ಮುಗಿಸುತ್ತೇನೆ, ಅದು ಬಿಡಿ ಹೋಗಲಿ ಅತ್ಲಾಗೆ. ಮಾನ್ಯ ಭೈರೇಗೌಡರಿಗೋಸ್ಕರ ಈ ಕತೆ ಹೇಳುತ್ತೇನೆ. ನಮ್ಮ ಕಡೆ 60-70-100 ವರ್ಷದ ಹಿಂದೆ ಒಬ್ಬ ಗೌಡರು ಹರಿಕಥೆ ಕೇಳುವುದಕ್ಕೆ ಹೋದರು, ಗೌಡರು ಅಂದರೆ ನಾನು ಮಾತಾಡಿದೆನಲ್ಲ ಆ ಗೌಡರ ಟೈಪೇ;

ಶ್ರೀ ಸಿ ಭೈರೇಗೌಡ: ಅಥವಾ ಅವರು ನಿಮ್ಮ ಟೈಪೇ;

ಶ್ರೀ ಕೆ.ಎಚ್.ಹನುಮೇಗೌಡ ಹೌದು ನನ್ನ ಟೈಪೇ, ನಾನು ಅಂಥ ಕೆಲಸ ಮಾಡಿದ್ದರೆ ನನ್ನ ಟೈಪೇ. ನನಗೆ ಆ ಅವಗುಣಗಳು ಯಾವುದೂ ಇಲ್ಲ. ಏನಾದರೂ ಸಿಟ್ಟು ಹತ್ತಿದರೆ ಹಿಂಗೆ ಮಾತನಾಡುವುದು ಆಮೇಲೆ ಮನೆಗೆ ಹೋಗುವುದು ಅಷ್ಟೇನೆ ನನ್ನದು. ಅಲ್ಲಿ ಹರಿಕಥೆ ನಡೆಯುತ್ತಿತ್ತು, ಆ ಗೌಡ ಕುಳಿತಿದ್ದ, ಸೀತಾದೇವಿ ಅಗ್ನಿಪ್ರವೇಶ ಮಾಡಿದ್ದನ್ನು ಕೇಳಿದ, ಇವನಿಗೆ ಹುಮ್ಮಸ್ಸು ಬಂದುಬಿಡ್ತು, ಸೀದಾ ಮನೆಗೆ ಬಂದ ಬಾಗಿಲು ತಟ್ಟಿದ ಮೂರ್ನಾಲ್ಕುಸಲ. ಈ ಹಳ್ಳಿಗಳ ಕಡೆ ಹೆಂಗಸರು ಗಂಡನನ್ನ ಬೈಯಬೇಕಾದರೆ ಮೂದೇವಿ ಅಂತಾರೆ, ಹಂಗೆ, ಏನಾಯ್ತು ನಿಂಗೆ ಯಾಕಿಂಗಾಡ್ತಿದೀಯ, ದಿನಾ ಸುಮ್ನೆ ಬಂದು ಬಿದ್ಕೋತಿದ್ದೆ ಅಂದಳು. ಅದಕ್ಕೆ ಇವನು ಹೇಳಿದನಂತೆ ಏನೇ, ಹರಿಕಥೆ ಕೇಳ್ಕೊಂಡು ಬಂದೆ, ಸೀತಾದೇವಿ ಎಂಥಾ ಪತಿವ್ರತೆ, ಎಷ್ಟು ಶುದ್ಧ ಹೆಂಗಸು, ಬೆಂಕಿಯೊಳಕ್ಕೆ ಬಿದ್ದರೂ ಅಗ್ನಿದೇವ ಪ್ರತ್ಯಕ್ಷನಾಗಿ ಆಯಮ್ಮನ್ನು ಈಚೆ ತಂದುಬಿಟ್ಟ, ನೀಯಾಕೇ ಹಂಗೆ ಆಗಬಾರದು ಅಂದನಂತೆ. ಅದಕ್ಕೆ ಅವಳು ಹೇಳಿದಳಂತೆ ನೀನು ಮೊದಲು ರಾಮಚಂದ್ರ ಆಗು, ಆಮೇಲೆ ನಾನು ಸೀತೆ ಆಯ್ತೀನಿ, ಎಲ್ಲೆಲ್ಲೋ ಹೋಗಿ ಎಲ್ಲೆಲ್ಲೋ ಬಂದು, ದಿನಾ ಬರುವುದು ಎರಡು ಗಂಟೆಗೆ, ಸೀತೆ ಆಗು ಅಂತ ಬಂದಿದೀಯಾ? ಹಾಗಂತ ಹೇಳಿದಳಂತೆ. ಮಾನ್ಯ ಭೈರೇಗೌಡರಿಗೆ ನಾನು ಹೇಳುತ್ತೇನೆ, ನಾವು ಇನ್ನೊಬ್ಬರಿಗೆ ಮಾದರಿಯಾಗಿ, ತಪ್ಪುದಾರಿಗೆ ಹೋಗುವವರನ್ನು ತಿದ್ದಿ ವಿವೇಕ ಹೇಳದೆ ಇರುವುದು ನಮ್ಮ ತಪ್ಪೂ ಇದೆ. ಇವತ್ತು ಏನಾದರೂ ಅನಾಹುತ ಆಗಿದ್ದರೆ ಹೊಳೆನರಸೀಪುರದ ಸ್ವಾಮಿಗಳಿಂದ, ಇವರಿಂದ; ಈ ಮೇಜು ಕುಟ್ಟುತ್ತಾರಲ್ಲ, ಒಳ್ಳೊಳ್ಳೆ ಖಾತೆ ಪಡೆಯೋಕೋ ಏನೋ; ಒಟ್ಟಿನಲ್ಲಿ ಕೆಲಸ ಮಾಡುವುದಕ್ಕೆ. ಮಾಡಬಾರದ್ದೆಲ್ಲ ಮಾಡಿ ಅವರಿಗೆ ಹಳ್ಳ ಹತ್ತಿಸಿ ಹೋಗಲಿ ಇವರು ಸಂತೋಷಪಡಬೇಕು, ನಾವಂತೂ ಹೇಳುವುದಕ್ಕೆ ಆಗಲಿಲ್ಲ, ಹನುಮೇಗೌಡರು ವಿರೋಧಪಕ್ಷದಲ್ಲಿದ್ದರೂ ಕೂಡ ಇರೋ ವಿಚಾರ ಹೇಳುತ್ತಾರೆ ಅನ್ನುವುದು ಬಿಟ್ಟು ಕುಸ್ತಿಗೆ ಬರ್ತಾ ಇದ್ದಾರೆ ಮೇಲೆ. ಇವರು ನನ್ನನೇನು ಮಾಡುತ್ತಾರೆ? ನಾನು ಗೆದ್ದಾಯ್ತು, ಇನ್ನು ಕೃಷ್ಣರವರಲ್ಲಿ ಕೈಮುಗಿದು ಒಂದು ಕೇಳಿಕೊಳ್ಳುತ್ತೇನೆ ಎಡವಟ್ಟು ಮಾಡಿಕೊಂಡು ಬಿಟ್ಟೀರ ಮಧ್ಯೆ, ಇನ್ನೊಂದಾರೇಳು ಜನ ಬೇಕಾದರೆ ತಗೊಳ್ಳಿ, ಐದು ವರ್ಷ ನಿರಂತರವಾಗಿ ಆಳಿ, ಯಾಕೆಂದರೆ ಚುನಾವಣೆಗೆ ನಿಂತರೆ ಮಾನ್ಯ ಭೈರೇಗೌಡ ಬರ್ತಾರೋ ಏನೋ, ನಾನಂತೂ ಹೇಗೂ ಬರುವುದಿಲ್ಲ. ಐದು ವರ್ಷ ಸರ್ಕಾರವನ್ನು ನೀವು ಚೆನ್ನಾಗಿ ನಡೆಸಿ ಎಲ್ಲರ ಪ್ರೀತಿ ವಿಶ್ವಾಸವನ್ನೂ ಗಳಿಸಿ, ಈ ಹಿಂದೆ ಮಾನ್ಯ ಕೆಂಗಲ್ ಹನುಮಂತಯ್ಯ, ಮಾನ್ಯ ಎಸ್.ನಿಜಲಿಂಗಪ್ಪ ಮತ್ತು ಮಾನ್ಯ ವೀರೇಂದ್ರಪಾಟೀಲರ ಶ್ರೇಣಿಗೆ ಸೇರಿದ ಉತ್ತಮ ಆಡಳಿತಗಾರರಾಗಿ ಎಂದು ಈ ಸಂರ್ಭದಲ್ಲಿ ತಿಳಿಸಿ, ಬೇಕಾದರೆ ದೊಡ್ಡದೊಡ್ಡವರ ಉದಾಹರಣೆ ತಗೊಳ್ಳಿ, ಹೊಳೆನರಸೀಪುರದವರದ್ದುತಗೋಬೇಡಿ, ಅವರನ್ನು ತಗೊಂಡು, ಕೆಟ್ಟುಬಂದು ಇಲ್ಲಿ ಕೂತಿದ್ದಾರೆ; ಅವರದು ವಾರಕ್ಕೊಂದಿನ ಕಿಯ್ಯೋ ಕಿಯ್ಯೋ ಊರೋಳಗೆಲ್ಲ, ಹಿಂದೆ 15, ಮುಂದೆ 15, ಅಧಿಕಾರಿಗಳನ್ನು ಕೆಲಸ ಮಾಡುವುದಕ್ಕೆ ಬಿಡಲಿಲ್ಲ ಸ್ವಾಮಿ ಎರಡು ವರ್ಷ. ಆದ್ದರಿಂದ ಹಾಸನ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಳನ್ನು ನಿಂತು ಹೋಗಿದ್ದಾವಲ್ಲ ಅವೆಲ್ಲ ಬಡವರಿರುವ ಪ್ರದೇಶ, ಆ 29 ಯೋಜನೆಗಳನ್ನೂ ನಿಮ್ಮ ಕಾಲದಲ್ಲೇ ಮುಗಿಸಿಬಿಟ್ಟು ನೀವೇ ಓಪನ್ ಮಾಡಿಬಿಡಿ; ನಮ್ಮ ಕ್ಷೇತ್ರದಲ್ಲಿ ಯೋಜನೆಗಳನ್ನು ಮಂಜೂರು ಮಾಡಿಕೊಟ್ಟಿದ್ದಿರಿ ನೀವು, ಆ ಏಳನ್ನೂ ನಿಲ್ಲಿಸಿ ಬಿಟ್ಟಿದ್ದಾರೆ, ಆ ಏಳನ್ನೂ ಕಾರ್ಯಗತ ಮಾಡಿದ ಬೆಳಿಗ್ಗೇನೇನನಗಿನ್ನು ಸಾಕು, ನನಗೆ ಅದೊಂದೇ ಆಸೆ ಇರುವುದು, ಆ ಕೆಲಸ ಆದಮೇಲೆ ಆ ಗಳಿಗೇಲಿ ನಾನು ರಾಜೀನಾಮೆ ಕೊಡುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಹನುಮೇಗೌಡರೇ ನೀವೂ ಈ ಸದನಕ್ಕೆ ಬರಬೇಕು ಏತ ನೀರಾವರಿಗಳೂ ಆಗ ಬೇಕು, ಅಂತಹ ಮಾರ್ಗ ಹುಡುಕಿ.

ಶ್ರೀ ಕೆ.ಎಚ್.ಹನುಮೇಗೌಡ: ನಾನು ಪ್ರಮಾಣಪೂರ್ವಕವಾಗಿ ಹೇಳುತ್ತೇನೆ; ಹನುಮೇಗೌಡರೇ ನೀವು ರಾಜೀನಾಮೆ ಕೊಟ್ಟರೆ ನಾನು ಮಂಜೂರು ಮಾಡಿಕೊಡುತ್ತೇನೆ ಅಂದರೆ ಮಂಜೂರು ಮಾಡಿದ ಈ ಕ್ಷಣದಲ್ಲೇ ನಾನು ರಾಜೀನಾಮೆ ಕೊಡುತ್ತೇನೆ. ಏಕೆಂದರೆ ಆ ಬಡವರ ಕಷ್ಟ ನೋವು ಹೇಳತೀರದು. ಆಲೂಗೆಡ್ಡೇದು ಈ ಸಲ ರೇಟೂ ಬರಲಿಲ್ಲ, ಎಲ್ಲಾ ಹಾಳಾಗಿಹೋಯಿತು, ಆ ಹಳ್ಳಿಗೆ ಹೋದರೆ ಕಣ್ಣೀರು ಬರುತ್ತದೆ. ಬೇರೆ ಜನರಂತೆ ಅವರ ಹೆಂಗಸರೂ ನಾಲ್ಕು ಒಳ್ಳೆಯ ಬಟ್ಟೆ ಹಾಕಿಕ್ಕೊಂಡು ಮಕ್ಕಳನ್ನೂ ಕರೆದುಕೊಂಡು ಯೋಗ್ಯರಾಗಿ ತಿರುಗುವಂತಹ ಅವಕಾಶ ಕಲ್ಪಿಸಬ್ಯಾಡವಾ ಸ್ವಾಮಿ? ನೀವೇ ಹೇಳಿ. ನಾನು ಬಹಳ ಸಂಕಟಪಟ್ಟು ಈ ಮಾತು ಹೇಳುತ್ತಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಹನುಮೇಗೌಡರು, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದರೋ ಅಥವಾ ಗೌಡರ ನಿಂದನಾ ಭಾಷಣ ಮಾಡಿದರೋ?

ಶ್ರೀ ಬಿ.ಎಚ್.ಹನುಮೇಗೌಡ: ನಾನು ಗೌಡರ ಹೆಸರೂ ಹೇಳಿಲ್ಲ, ನಿಂದನೆಯನೂ ಮಾಡಿಲ್ಲ ಅವರು ಮಾಡಿದ ಘನ ಕಾರ್ಯಗಳನ್ನು ಹೇಳಿದ್ದೇನೆ, ಬೇರೆಯವರಿಗೆಲ್ಲ ಅದು ಮಾದರಿ ಆಗಲಿ ಅಂತ. ಹೋದವರ್ಷ ಆಲೂಗೆಡ್ಡೆ ಬೆಲೆ ಕಮ್ಮಿಯಾಗಿ ಹೋಯಿತು, ಸರ್ಕಾರ ಬೆಂಬಲ ಬೆಲೆ ಅಂತ 90 ಲಕ್ಷ ರೂಪಾಯಿಗಳನ್ನು ಕೊಟ್ಟಿತು, ಅಷ್ಟರಲ್ಲಿ ಒಂದಾಣೆಯನ್ನೂ ವಾಪಸ್ ಕೊಡಲಿಲ್ಲ. 90 ಲಕ್ಷವನ್ನೂ ಸರಿಮಾಡಿ ಎಲಾ ಅಕೌಂಟಿಗೆ ಹೋಯಿತು ಅಂದರು, ಹೀಗೆ ಹಾಸನ ಜಿಲ್ಲೆಗೆ ಆಗಿರುವ ಅನ್ಯಾಯಗಳನ್ನೆಲ್ಲ ಹೇಳಿದ್ದೇನಲ್ಲ ಅದನ್ನು ಸರಿಪಡಿಸಬೇಕಾದ್ದು ಅಲ್ಲಿ ಕೂತಿರುವ ಮಾನ್ಯ ಸಚಿವರ ಮಾನ್ಯ ಮುಖ್ಯಮಂತ್ರಿಗಳ ಜವಾಬ್ದಾರಿ ಅನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಾನು ಆ ಭಾಗದಿಂದ ಬಂದಿರತಕ್ಕಂಥ ಪ್ರತಿನಿಧಿ. ನನಗೆ ಹೇಳುವುದಕ್ಕೆ ಹಕ್ಕು ಇದೆ. ಇದರಲ್ಲಿ ನೀರಾವರಿಯಾದೂ ಕೂಡ ಸೇರಿಲ್ಲವೇ? 90 ಲಕ್ಷ ರೂಪಾಯಿಗಳನ್ನು ವ್ಯಾಪಾರ ಮಾಡಿ ಎಂದು ಕೊಟ್ಟರೆ ಒಂದು ನಯಾಪೈಸೆ ವಾಪಸ್ ಕೊಟ್ಟಿಲ್ಲ. ಇವರು ಏನೋ ಮಾತನಾಡುತ್ತಾರೆ; ಅದನ್ನು ಎಲ್ಲಾ ತಿಂದುಹಾಕಿದರು. ನಾನು ಈ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಮೀರಿ ಮಾತನಾಡಿದ್ದೇನೆ ಎಂದು ನನಗೆ ಅನಿಸುತ್ತಿದೆ. ನನ್ನ ನೋವು ಅಷ್ಟಿತ್ತು. ನಾನು ಇನ್ನು ಸಮಾಧಾನವಾಗಿಬಿಡುತ್ತೇನೆ. ನನ್ನನ್ನು ಹಿಡಿದು ಎರಡು ಬಡಿದರೂ ನಾನು ಮಾತನಾಡುವುದಿಲ್ಲ. ಆಗಿರುವ ಅನ್ಯಾಯವೆಲ್ಲಾ ಈ ಸದನಕ್ಕೆಲ್ಲಾ ಗೊತ್ತಾಗಬೇಕೆಂದು ಹೇಳಿದ್ದು. ಮೊನ್ನೆ ದಿನ ಅಲ್ಲಿ ಕಾಫಿ ಕುಡಿಯುತ್ತಾ ಕುಳಿತಿದ್ದಾಗ ಒಬ್ಬರು ಸಿಕ್ಕಿದರು. ಹನುಮೇಗೌಡರೇ ಚೆನ್ನಾಗಿದ್ದೀರಾ ಎಂದು ಕೇಳಿದ್ದಕ್ಕೆ ಹೂಂಕಣಪ್ಪ ಎಂದೆ. ಮತ್ತೋಬ್ಬರು ಇವರ್ಯಾರು ಎಂದಾಗ ಅವನು ಇವರು ಹಾಸನದ ಎಂಎಲ್ಎ ಎಂದು ಹೇಳಿದ. ಅದಕ್ಕೆ ಅವನು ಯಾರ ಪಾರ್ಟಿ ಎಂದಿದ್ದಕ್ಕೆ ಬಿಜೆಪಿ ಎಂದೆ. ಅದಕ್ಕೆ ನಿಮಗೆ ಓಟು ಕೊಟ್ಟರಾ ಬಿಜೆಪಿಯವರು ಎಂದು ಕೇಳಿದ. ಏನು ಸ್ವಾಮಿ ಹಾಗೆಂದರೆ? ನಿಮಗೆ ಹೇಗೆ ಓಟನ್ನು ಕೊಟ್ಟರು? ನಮ್ಮ ಗೌಡ ಹೇಗೆ ಸೋತ? ತಮಗೆ ಎಷ್ಟು ತಲೆನೋವು ಗೊತ್ತಾ ನಿಮಗೆ?

ಶ್ರೀ ಸಿ.ಭೈರೇಗೌಡ:- ಆ ತಲೆನೋವಿಗೆ ಔಷಧಿಯೇ ಇಲ್ಲ. ನಾವೇನು ಮಾಡೋಣ?

ಶ್ರೀ ಕೆ.ಎಚ್.ಹನುಮೇಗೌಡ: ನೀವು ಔಷಧಿ ತೆಗೆದುಕೊಂಡು ಬಂದು ಇಲ್ಲಿ ಕುಳಿತಿದ್ದೀರಲ್ಲ, ಅಷ್ಟೇಸಾಕು. ಅದು ಹೋಗಲಿ ಬಿಡಿ. ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ನಾನು ಅವನಿಗೆ ಹೇಳಿದೆ, ನೀನು ಹಾಸನದಲ್ಲಿ ಹೋಗಿ ಕೇಳು ಏನಾಯಿತು, ಎಂತಾಯಿತು? ಜನರು ಹೇಗೆ ಸರ್ವನಾಶವಾಗಿ ಹೋದರು? ಎಷ್ಟೊಂದು ಪೀಡೆ ಕಾಟ ನಮಗೆ ಇತ್ತು ಎಂದು ಹೋಗಿ ಅಲ್ಲಿ ಕೇಳು ಎಂದು ಹೇಳಿದೆ. ಜನರು ಏನು ತಿಳಿದುಕೊಂಡಿದ್ದಾರೆಂದರೆ ಸೂಪರ್‌ಶಕ್ತಿ ಎಂದು ತಿಳಿದುಕೊಂಡು ಹಾಗೆಲ್ಲಾ ಮಾತನಾಡುತ್ತಾರೆ. ಅದು ಬಿಡಿ ಹೋಗಲಿ. ನಮಗೆ ಇಲ್ಲಿ ಕುಳಿತು ಕೊಂಡು ಇವರು ಹೇಳುವುದಕ್ಕೆ ಬಂದಿದ್ದಾರೆ. ಇವರು ಸಂತೋಷಪಡ ಬೇಕು, ಕೊನೆಯಪಕ್ಷ ಹನುಮೇಗೌಡರಾದರೂ ಹೇಳಿದರಲ್ಲ ಎಂದು. ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಬರಗಾಲ ಪ್ರದೇಶ ಇದೆಯೋ, ನೀರು ಅವೈಲಬಿಲಿಟಿ ಇದೆಯೋ, ಅಲ್ಲಿ ಫಸ್ಟ್ ಪ್ರಯಾರಿಟಿಮೇಲೆ ಆ ಪ್ರಾಜೆಕ್ಟ್‌ಗಳನ್ನು ಸ್ಯಾಂಕ್ಷನ್ ಮಾಡಿಸಿ ಜನಗಳನ್ನು ಕ್ಷಾಮದ ದವಡೆಯಿಂದ ಬಿಡುಗಡೆ ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ. ನಾನೇನು ಇಲ್ಲಿ ಆವೇಶದಲ್ಲಿ ಮಾತನಾಡಿದ್ದರೆ ಆ ಜನಗಳ ನೋವನ್ನು ನಾನು ಎಕ್ಸ್‌ಪ್ರೆಸ್ ಮಾಡಿದ್ದೇನೆಯೇ ವಿನಹಾ ಇದು ನನ್ನ ಸ್ವಂತದ್ದಲ್ಲ. ನನಗೇನೂ ಆಗಬೇಕಾಗಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್:- ಈಗ ಸದನವನ್ನು ಮುಂದೂಡುತ್ತೇನೆ ಮತ್ತೆ ಸದನ 2-30 ಗಂಟೆಗೆ ಸೇರುತ್ತದೆ. (ಸಭೆಯು 1-13ಗಂಟೆಗೆ ಮು8ಕ್ತಾಯಗೊಂಡಿತು. ಮತ್ತೆ ಸದನವು 2-30 ಗಂಟೆಗೆ ಸಮಾವೇಶಗೊಳ್ಳಲಿದೆ)

:ಸಭೆಯು ಪುನಹ 2-50 ಕ್ಕೆ ಸಮಾವೇಶಗೊಂಡಿತು:

ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು:

ಪ್ರ ಕ ಟ ಣೆ

ಅಧ್ಯಕ್ಷರು: ದಿನಾಂಕ: 29-10-1999ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ವಿಧಾನ ಸಭೆಯ ಕಾರ್ಯಕಲಾಪಗಳನ್ನು ದಿನಾಂಕ:30-10-1999ರಂದು ನಡೆಸಿ ತದ ನಂತರ ದಿನಾಂಕ: 11 ಮತ್ತು 12ನೇ ನವೆಂಬರ್ 1999 ರಂದು ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಗಿರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಬಿ.ಎಸ್.ಸಿ. ಸಭೆಯು ಇಂದು ಇದ್ದ ಬಗ್ಗೆ ವಿರೋಧ ಪಕ್ಷದ ನಾಯಕರಿಗೆ ಯಾವುದೇ ಸ್ಪಷ್ಟವಾದ ಮಾಹಿತಿಯನ್ನು ಕೊಟ್ಟಿಲ್ಲ. ನನ್ನ ಸಹಿಯನ್ನು ಸಹ ತೆಗೆದುಕೊಂಡಿಲ್ಲ. ಇನ್ನು ಮುಂದೆ ಆ ರೀತಿ ಲೋಪ ಆಗಬಾರದು.

ಅಧ್ಯಕ್ಷರು: ತಮಗೆ ಹೇಳಿತ್ತಲ್ಲವೆ ತಮ್ಮ ಪಕ್ಷದ ಉಪನಾಯಕರಾದ ಮಾನ್ಯ ಸದಾನಂದಗೌಡರು ಬಂದಿದ್ದರಲ್ಲ.

ಶ್ರೀ ಜಗದೀಶ್ ಶೆಟ್ಟರ್: ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ. ಇಂಥ

ಲೋಪ ಯಾವಾಗಲೂ ಆಗಬಾರದು.

ಅಧ್ಯಕ್ಷರು: ಅದರ ಬಗ್ಗೆ ಗಮನ ಹರಿಸುತ್ತೇನೆ. ಈಗ ಮಾನ್ಯ ಬನ್ನಿ ಕೋಡ್‌ರವರು ಮಾತನಾಡಿ. ಮಾನ್ಯ ರಾಜ್ಯ ಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪದ ಮೇಲಿನ ಚರ್ಚೆ.

ಶ್ರೀ ಬಿ.ಹೆಚ್. ಬನ್ನಿ ಕೋಡ್: (ಹಿರಿರೆರೂರು) ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣವನ್ನು ನಾನು ವಿರೋಧಿಸುತ್ತೇನೆ, ಮಾನ್ಯ ರಾಜ್ಯಪಾಲರ ಭಾಷಣ ಏನಿದೆ ಇದರಲ್ಲಿ ಎಲ್ಲಾ ವಿಷಯಗಳಲ್ಲೂ ಸಹ ಎಲ್ಲರಿಗೂ ಒಳ್ಳೆಯದನ್ನೇ ಮಾಡುತ್ತೇವೆಂದು ಹೇಳಿದ್ದಾರೆ; ನೀರಾವರಿ, ವಿದ್ಯುತ್, ರಸ್ತೆ, ಹರಿಜನ ಮತ್ತು ಗಿರಿಜನ, ಬಡವರು ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅವರಿಗೆ ನಿರ್ಧಿಷ್ಟವಾದಂಥ, ನಿಖರವಾದಂಥ, ಸ್ಪಷ್ಟವಾದಂಥ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಡೀಕರಿಸಿ ನಿಗಧಿತವಾದ ವೇಳೆಯಲ್ಲಿ ಯಾವ್ಯಾವ ಕಾರ್ಯಕ್ರಮಗಳಿಗೆ ಆಧ್ಯತೆಯನ್ನು ಕೊಟ್ಟು ಮಾಡಬೇಕು ಎಂಬ ನಿರ್ಣಯಕ್ಕೆ ಅವರು ಬಂದಂತೆ ಕಾಣುವುದಿಲ್ಲ. ಏಕೆಂದರೆ ಮಾಡುತ್ತೇವೆ, ಬಡವರು, ಕೂಲಿ ಕಾರ್ಮಿಕರು, ರೈತರು, ಕೊಳಚೆ ನಿವಾಸಿಗಳು ಎಲ್ಲರ ಬಗ್ಗೆ ಪ್ರತಿಯೊಂದನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ ಆದ್ಯತ್ಯ ಎಂಬುದೇ ಇಲ್ಲ. ಬಳ್ಳಾರಿ ಜಿಲ್ಲೆಗೆ 3300 ಕೋಟಿ ರೂಪಾಯಿಗಳ ಯೋಜನೆ ಕೊಡುತ್ತೇವೆಂದು ಏನು ಹೇಳಿದ್ದಾರೆ ಅದೇ ರೀತಿ ಇದರಲ್ಲೂ ಸಹ ನಿಗಧಿತವಾದ ವೇಳೆಯಲ್ಲಿ ಮಾಡಬೇಕಾದ ನೀರಾವರಿ ಕೆಲಸಗಳು, ಎರಡು ಸಾವಿರ ಇಸವಿಯೊಳಗೆ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರತಕ್ಕಂಥ ನೀರಾವರಿ ಯೋಜನೆಯನ್ನು ಪೂರ್ಣ ಮಾಡತಕ್ಕದ್ದು ಸರ್ಕಾರ ಬದ್ಧವಾಗಿದೆಯೇ? ಹಾಗೆ ಬದ್ಧವಾಗಿದ್ದರೆ ಅದಕ್ಕೆ ಹಣಕಾಸಿನ ಕೊರತೆ ಇದ್ದರೆ ಯಾವ ರೀತಿಯಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು? Mobilisation of resources ಬಗ್ಗೆ ಏನು ಮಾಡುತ್ತೀರಿ? ಎಷ್ಟು ಹಣವನ್ನು ಖರ್ಚು ಮಾಡಿ ಯಾವ ಅವಧಿಯಲ್ಲಿ ಅತ್ಯಂತ ಅವಶ್ಯಕವಾಗಿರತಕ್ಕ, ಇಡೀ ರಾಜ್ಯದ ಸಮಸ್ಯೆಯಾಗಿರುವ ನೀರಾವರಿ ಯೋಜನೆಗೆ ಈ ಸರ್ಕಾರದ ಆದ್ಯತೆ ಏನು? ಅನಂತರ ವಿಕೇಂದ್ರೀಕರಣದ ಬಗ್ಗೆ ಆದ್ಯತೆಯನ್ನು ಕೊಡುತ್ತೇವೆ, ಸಂಪೂನ್ಮೂಲವನ್ನು ಕ್ರೋಢೀಕರಿಸುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಚಿವರುಗಳು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಏನೇನು ಹೇಳಿದ್ದರೋ, ಚುನಾವಣಾ ಪ್ರಣಾಳಿಕೆಯಲ್ಲಿ ಏನೇನು ಹೇಳಿದ್ದರೋ ಆ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣ ತಯಾರು ಮಾಡುವಾಗ ಅವರಿಗೆ ಸಂಕೋಚದ ಮನೋಭಾವ ಅಲ್ಲಿ ಬಂದಿರಬೇಕು; ನಾವು ಯಾವುದಾದರೂ ಕಾರ್ಯಕ್ರಮದ ಬಗ್ಗೆ ಹೇಳುವುದನ್ನು ಬಿಟ್ಟರೆ, ಆದ್ಯತೆ ವಿಷಯ ಇಲ್ಲ, ಆ ವಿಷಯವನ್ನು ಬಿಟ್ಟುಹೋದರೆ ನಾವು ಇನ್ನೂ ಮೊನ್ನೆ ಮೊನ್ನೆ ವಿರೋಧ ಪಕ್ಷದಲ್ಲಿ ಕುಳಿತು ಟೀಕೆ ಮಾಡಿದ್ದೇವೆ; ಈ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲವೆಂದರೆ ಹೇಗೆ ಎಂಬ ಮಾನಸಿಕವಾದಂಥ ಒತ್ತಡದ ಮೇಲೆ ಮಾನ್ಯ ರಾಜ್ಯಪಾಲರ ಭಾಷಣವನ್ನು ತಯಾರು ಮಾಡಿದ್ದಾರೆ ಎಂದು ಅನ್ನಿಸುತ್ತದೆ. ಈ ಸರ್ಕಾರಕ್ಕೆ ತನ್ನದೇ ಆದಂತಹ ಕಾರ್ಯಕ್ರಮ ಇಲ್ಲ. ನಿಶ್ಚಿತವಾದಂತಹ ಅವಧಿಯಲ್ಲಿ ಅದಕ್ಕೇನು ಹಣಕಾಸು ಬೇಕೋ ಅದನ್ನು ಕ್ರೋಢೀಕರಿಸುತ್ತೇವೆ ಎಂಬ ಬಗ್ಗೆ ಯಾವುದರಲ್ಲೂ ಸ್ಪಷ್ಟವಾಗಿ ಹೇಳಿಲ್ಲ. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆ ಮಾತಿನಂತೆ ನಾವು ಎಲ್ಲವನ್ನೂ ಮಾಡುತ್ತೇವೆ ಎಂದು ಹೇಳಿದ್ದಾರೆ. Jack of all, master

of none ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಯಾವುದು ಅತೀ ಅವಶ್ಯಕವಾದುದು ಅದನ್ನು ಇಲ್ಲಿ ಹೇಳಿಲ್ಲ. ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಎರಡು ಸಾವಿರ ಇಸವಿಯೊಳಗಾಗಿ ರಾಜ್ಯದ ಪಾಲಿನ ನೀರಿನ ಮೇಲಿರುವ ಹಕ್ಕನ್ನು ನಾವು ಬಳಸಿಕೊಂಡು ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಇದರ ಬಗ್ಗೆ ಸರ್ಕಾರದ ಆದ್ಯತೆಯೇನು? ಎಂಬ ಬಗ್ಗೆ ಹೇಳಿಲ್ಲ. ಕೆಲವೊಂದು ಕಾರ್ಯಕ್ರಮಗಳನ್ನು ಸ್ವಲ್ಪ ಸಮಯ ಮುಂದಕ್ಕೆ ಹಾಕಿದರೂ ನಡೆಯುತ್ತದೆ. ಅಂತಹವುಗಳನ್ನು ಮುಂದೆ ಮಾಡುತ್ತೇವೆ. ನೀರಿನ ಉಪಯೋಗದ ವಿಷಯ ಅತಿ ಮಹತ್ವದ್ದಾಗಿದೆ. ರಾಜ್ಯದ ರೈತರ ಭೂಮಿಗೆ ನೀರು ಒದಗಿಸತಕ್ಕದ್ದು ನಮ್ಮ ಹಕ್ಕಿನ ನೀರನ್ನು ಬಳಸಿಕೊಳ್ಳತಕ್ಕದ್ದು ಪ್ರಮುಖವಾದುದು. ಇದರಲ್ಲಿ ನಾವು ವಿಫಲವಾದರೆ ರಾಜ್ಯದ ಸಮಗ್ರ ರೈತರಿಗೆ ಅನ್ಯಾಯವಾಗುತ್ತದೆ, ಅದಕ್ಕಾಗಿ ನಾವು ಕೆಲವೊಂದು ಕಾರ್ಯಕ್ರಮಗಳನ್ನು ಒಂದೆರಡು ವರ್ಷಗಳ ಕಾಲತಡೆದು ಮಾಡುತ್ತಿದ್ದೇವೆ ಅಥವಾ ಮಂದಗತಿಯಿಂದ ಮಾಡುತ್ತೇವೆ, ಆದ್ಯತೆ ಮೇರೆಗೆ ನೀರಾವರಿಯಂತಹ ಕೆಲಸಗಳನ್ನು ಪೂರ್ಣಗೊಳಿಸತಕ್ಕದ್ದು ಸರ್ಕಾರದ ಜವಾಬ್ದಾರಿ, ಇಡೀ ರಾಜ್ಯದ ಪಾಲಿನ ನೀರಿನ ಮೇಲಿನ ಹಕ್ಕನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿದೆ ಎಂಬ ಮಾತನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಲಿಕ್ಕೆ ಸರ್ಕಾರ ಏಕೆ ಹಿಂದು ಮುಂದು ನೋಡಿದೆ ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಕಾಂಗ್ರೆಸ್‌ನವರು ವಿರೋಧ ಪಕ್ಷದಲ್ಲಿದ್ದಾಗ ಟೀಕೆಯನ್ನು ಮಾಡಿರಬಹುದು. ಅದು ಈ ದೇಶದ ಪ್ರಜಾಪ್ರಭುತ್ವದ ಪರಂಪರೆಯ ಲಕ್ಷಣ. ಆ ಒಂದು ಮನಸ್ಸಿನಲ್ಲಿರತಕ್ಕಂಥ ಸಂಶಯವನ್ನು ಇಟ್ಟುಕೊಂಡು ನಾವುಮಾಡುತ್ತಾ ಹೋದರೆ ಯಾವ ಕೆಲಸವೂ ಕೂಡ ಪರಿಪೂರ್ಣ ವಾಗುವುದಿಲ್ಲ, ಯಾವುದೂ ಸಹಿತ ಲಾಭದಾಯಕವಾಗ ಫಲಪ್ರದವಾಗುವುದಿಲ್ಲ. ಆ ಕಾರಣಕ್ಕಾಗಿ ನಾನು ತಮ್ಮ ಮೂಲಕ ಮಾನ್ಯ ಸಭಾನಾಯಕರಿಗೆ ಕೋರತ್ತಿದ್ದೇನೆ, ಸರ್ಕಾರವು ಮಾನ್ಯಯ ರಾಜ್ಯಪಾಲರ ಭಾಷಣದಲ್ಲಿ ನೀರಾವರಿಯ ಬಗ್ಗೆ 'ಕಾವೇರಿ ಮತ್ತು ಕೃಷ್ಣಾ ನದಿ ಕಣಿವೆ ಪ್ರದೇಶದ ರೈತರ ಹಿತಾಸಕ್ತಿಗಳನ್ನು ನನ್ನ ಸರ್ಕಾರವು ಸಂಪೂರ್ಣವಾಗಿ ರಕ್ಷಿಸುತ್ತದೆ' ಎಂಬ ಮಾತನ್ನು ಮಾತ್ರ ಹೇಳಿದೆ. ಯಾರ ರೀತಿ ಸರ್ಕಾರ ರೈತರ ಹಿತಾಸಕ್ತಿರಕ್ಷಿಸುತ್ತದೆ, ಯಾವ ಯಾವ ಯೋಜನೆಗಳನ್ನು ಸರ್ಕಾರ ಕೈಗೊಳ್ಳುತ್ತದೆ, ಯಾವ ಯೋಜನೆಗಳು ಪ್ರಾರಂಭವಾಗಿದೆ, ಯಾವುದು ಅಪೂರ್ಣವಾಗಿದೆ, ಅಪೂರ್ಣವಾದವುಗಳನ್ನು ಮುಗಿಸಲು ಸರ್ಕಾರದ ಕ್ರಮವೇನು? ಇನ್ನೂ ಪ್ರಾರಂಭಿಸಬೇಕಾದಂತಹ ಯೋಜನೆಗಳೇನು? ಒಟ್ಟು ಅದಕ್ಕೆ ಅವಶ್ಯಕವಾಗಿರತಕ್ಕ ಹಣ ಎಷ್ಟು? ಈ ಹಣವನ್ನು ನೀವು ಯಾರ ಮೂಲದಿಂದ ಸಂಗ್ರಹಿಸಲು ಉದ್ದೇಶಿಸಿದ್ದೀರಿ? ಸರ್ಕಾರದಿಂದ ಆ ರೀತಿ ಹಣವನ್ನು ಮೊಬಲೈಸ್ ಮಾಡಲಿಕ್ಕೆ ಸಾಧ್ಯವೇ? ಅಥವಾ ಬಾಂಡ್‌ಗಳ ಮೂಲಕ ಈಗಾಗಲೇ ಕೃಷ್ಣ ನಿಗಮದ ವತಿಯಿಂದ ಹಣವನ್ನೇನು ಸಂಗ್ರಹಿಸಿದ್ದಾರೋ ಅದನ್ನು ಇನ್ನೂ ಮಾಡಲು ಸರ್ಕಾರ ಉದ್ದೇಶಿಸಿದೆಯೇ? ಕರ್ನಾಟಕ ನೀರಾವರಿ ನಿಗಮವನ್ನು ಈಗ ಸ್ಥಾಪಿಸಲಾಗಿದೆ. ಇದರ ಮೂಲಕ ಏನಾದರೂ ಕೈಗೊಳ್ಳುವ ನಿಗದಿಯಾದಂತಹ ಕಾರ್ಯಕ್ರಮಗಳೇನಾದರೂ ಸರ್ಕಾರದ ಮುಂದೆ ಇದೆಯೇ? ಇಲ್ಲವೇ? ಎಂಬುದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನೋಡಿದರೆ ರಾಜ್ಯದ ಬಹುತ್ತೇಕ ಜನ ನಿರಾಸ ಪಡತಕ್ಕ ಒಂದು ಸಮಯ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲವನ್ನು ಮಾಡಲಿಕ್ಕೆ ಸಾಧ್ಯವಿಲ್ಲದಿದ್ದರೂ, ಕೆಲವು ವಿಷಯಗಳನ್ನು ಕೆಲವು ಕಾಲ ಮುಂದೂಡಿದರೂ ಸರಿಯೇ, ಅತೀ ಅವಶ್ಯಕವಾಗಿರತಕ್ಕ ನೀರಾವರಿಯಂತಹ ಕೆಲವು ಮಹತ್ವದ ಯೋಜನೆಗಳ ಬಗ್ಗೆ ನಿಗದಿತ ವೇಳೆಯಲ್ಲಿ ಹಣಕಾಸನ್ನು

ಕ್ರೋಢೀಕರಿಸುವ ಕಾರ್ಯಕ್ರಮವನ್ನು ಈ ಸರ್ಕಾರ ಮಾಡಿ ಇಡೀ ರಾಜ್ಯದ ಭೂಮಿಗೆ ಎಲ್ಲೆಲ್ಲಿ ನೀರು ಕೊಡಲಿಕ್ಕೆ ಸಾಧ್ಯವಿದೆಯೋ ಅಲ್ಲಿಗೆ ನೀರನ್ನು ಕೊಟ್ಟರೆ ರಾಜ್ಯದ ಒಂದು ಸಂಪತ್ತನ್ನು ಹೆಚ್ಚಿಸಿದಂತಾಗುತ್ತದೆ. ಈ ವ್ಯವಸ್ಥೆಯಿಂದಾಗಿ ಬರಗಾಲದ ದವಡೆಯಲ್ಲಿ ಇರತಕ್ಕಂತಹ ರೈತರ ರಕ್ಷಣೆ ಮಾಡಿದಂತಾಗುತ್ತದೆ. ಆ ಕಾರಣಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ನೀರಾವರಿ ಮಂತ್ರಿಗಳು ನಾನು ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ತಮ್ಮ ಉತ್ತರದಲ್ಲಿ ಕಾಲಮಿತಿಯನ್ನು ಇಟ್ಟುಕೊಂಡು ಈ ನೀರಾವರಿ ಯೋಜನೆಗಳನ್ನು ಮುಗಿಸುವ ಬಗ್ಗೆ ತಮ್ಮ ನಿಲುವನ್ನು ವಿವರವಾಗಿ ಈ ಸದನಕ್ಕೆ ಹೇಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೋರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ನೀರಾವರಿ ಸಚಿವರಾಗಿದ್ದಾಗ ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ಬಗ್ಗೆ ಅವರಿಗೆ ನಾನು ಈ ಸದನದಲ್ಲಿ ಹೇಳಿದ್ದೆ. ಆದರೆ ಆ ಯೋಜನೆ ಇನ್ನೂ ಪೂರ್ಣವಾಗಿ ಕಾರ್ಯಗತವಾಗಿಲ್ಲ. ಇನ್ನೂ ಅದು ಪ್ರಾರಂಭದ ಹಂತದಲ್ಲಿದೆ. ತಂಗಾ ಮೇಲ್ದಂಡೆ ನೀರಾವರಿ ಯೋಜನೆ ಶಿವಮೊಗ್ಗ ಹಾಗೂ ಹಾವೇರಿ ಜಿಲ್ಲೆಯ ಶಿವಮೊಗ್ಗ, ಹೊನ್ನಾಳಿ, ಹಿರೇಕೆರೂರು, ರಾಣೆಬೆನ್ನೂರು, ಹಾವೇರಿ ಮತ್ತು ಹಾನಗಲ್ ತಾಲ್ಲೂಕುಗಳ 2 ಲಕ್ಷ 34 ಸಾವಿರ ಎಕರೆಗಳಷ್ಟು ಜಮೀನನ್ನು ನೀರಾವರಿಗೆ ಒಳಪಡಿಸುವ ಮಹತ್ತರರಾದ ಯೋಜನೆಯಾಗಿದೆ. ಈ ಯೋಜನೆ ಬಗ್ಗೆ ಸರ್ಕಾರ ಏನೇನು ಮಾಡಲಿಕ್ಕೆ ಸಾಧ್ಯವಿದೆ? ಈಗ ಇನ್ನೂ ಅದು ಪ್ರಾರಂಭದ ಹಂತದಲ್ಲಿದೆ, ಅದಕ್ಕೆ ಸ್ವಲ್ಪ ಹಣ ಕೊಟ್ಟಿದ್ದಾರೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಗಮನ ಹರಿಸಬೇಕು. ಇದೂ ಸಹಾ ಕೃಷ್ಣಾ ಕಣಿವೆ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಇದನ್ನು ಮುಗಿಸದಿದ್ದರೆ ಇಲ್ಲಿಯೂ ಕೂಡ ಎರಡು ಸಾವಿರ ಇಸವಿಯೊಳಗಾಗಿ ನೀರಿನ ಲಭ್ಯತೆ ಏನಿದೆ ಅದು ನಮಗೆ ಸಿಗಂತಾಗುವ ಸಾಧ್ಯತೆ ಇದೆ. ಅದಕ್ಕಾಗಿ ತುಂಗಾ ಮೇಲ್ದಂಡೆ ನೀರಾವರಿ ಯೋಜನೆಗೆ ಅತ್ಯಂತ ಪ್ರಾಮುಖ್ಯತೆಯನ್ನು ಕೊಟ್ಟು ಆ ಭಾಗದ ಜನರ ಕನಸನ್ನು ನನಸು ಮಾಡಬೇಕೆಂದು ಕೋರುತ್ತೇನೆ. ಇದು ಆ ಭಾಗದ ರೈತರ ಬಹಳ ದಿನಗಳ ಒಂದು ಬೇಡಿಕೆಯಾಗಿದೆ. ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಿಕ್ಕೆ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂಬ ಬಗ್ಗೆ ಸರ್ಕಾರ ವಿವರಗಳನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ. IIಇನ್ನು ಪಂಚಾಯತ್ ರಾಜ್ ಬಗ್ಗೆ ಹಿಂದಿನ ಸರ್ಕಾರ ಮಂಡಲ ಪಂಚಾಯಿತಿಯನ್ನು ಮಾಡಬೇಕೆಂದು ಕಾನೂನು ತಿದ್ದುಪಡಿ ಮಾಡಿದೆ. ಕಾಂಗ್ರೆಸ್ ಸರ್ಕಾರ ಹಿಂದೆ ಇದ್ದಾಗ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳನ್ನು ಮಾಡಿದ್ದರು., ಈಗ ಮತ್ತೆ ಅದೇ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈಗ ಮತ್ತೆ ಏನೇನು ವಿಕೇಂದ್ರೀಕರಣ ಮಾಡುತ್ತೀರಿ? ಇದುವರೆವಿಗೂ ಗ್ರಾಮೀಣ ಜನತೆಯ ಮೇಲೆ ಸರ್ಕಾರಗಳು ಕೇವಲ ಪ್ರಯೋಗವನು ನಡೆಸುತ್ತಾ ಬಂದಿವೆ. ಈ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸರ್ಕಾರ ಹಣವನ್ನು ಹೆಚ್ಚಾಗಿ ಕೊಟ್ಟು ಆ ಸಂಸ್ಥೆಗಳನ್ನು ಆರ್ಥಿಕವಾಗಿ ದೃಢವಾಗುವಂತೆ ಮಾಡಿದರೆ ಮಾತ್ರ ಅವು ಅಭಿವೃದ್ಧಿ ಕೆಲಸ ಮಾಡಲಿಕ್ಕೆ ಸಾಧ್ಯವಿದೆ. ಅದನ್ನು ಬಿಟ್ಟು ಕೇವಲ ಪಂಚಾಯತ್ ರಾಜ್ ಕಾನೂನು ಬದಲಾವಣೆ ಮಾಡಿ, ಮಂಡಲ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿ ಮಾಡಿದರೆ ಪ್ರಯೋಜನವಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತೇವೆ ಎಂದು ಹೇಳಿದೆ. ಪಂಚಾಯತ್ ರಾಜ್‌ಗಳಿಗೆ ಹೆಚ್ಚಿನ ಹಣಕಾಸಿನ ನೆರವನ್ನು ಕೊಡಲಿಕ್ಕೆ ಸರ್ಕಾರ ಏನೇನು ಕಾರ್ಯಕ್ರಮ ಮಾಡಿದೆ? ಅವುಗಳಿಗೆ ಹಣಕಾಸಿನ ಗ್ರಾಂಟ್ ನೀಡುತ್ತಿದ್ದಾರೋ ಅಥವಾ ಬೇರೆ ರೀತಿಯಿಂದ ಅವುಗಳು ಟ್ಯಾಕ್ಸ್ ರೂಪದಲ್ಲಿ

ಹಣವನ್ನು ಕ್ರೋಢೀಕರಿಸಲಿಕ್ಕೆ ಸರ್ಕಾರ ಯೋಜನೆ ಮಾಡಿದೆಯೇ? ಎಂಬ ಬಗ್ಗೆ ಯಾವುದನ್ನೂ ಕೂಡ ಸರ್ಕಾರ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. ಈ ರೀತಿ ಮಾಡುವುದರಿಂದ ಗ್ರಾಮೀಣ ಜನತೆಯ ಅಥವಾ ಈ ಗ್ರಾಮ ಪಂಚಾಯಿತಿ ವ್ಯವಸ್ಥೆಯ ಸುಧಾರಣೆಯಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅನುದಾನವನ್ನು ಒದಗಿಸಿ ಅವುಗಳಿಗೆ ಆರ್ಥಿಕ ಬಲವನ್ನು ಕೊಟ್ಟು ಗ್ರಾಮೀಣ ಜನತೆಯ ಅಭಿವೃದ್ಧಿ ಕೆಲಸಗಳನ್ನು ಅವು ಮಾಡುವಂತಾಗಲು ಸಹಾಯ ಮಾಡಬೇಕೆಂದು ಕೋರುತ್ತೇನೆ. ಹೆಚ್ಚಿನ ಅನುದಾನ ಕೊಡಲಿಕ್ಕೆ ಆಗದಿದ್ದರೆ ಕನಿಷ್ಟ ಪಕ್ಷ ಮಂಡಲ ಪಂಚಾಯಿತಿ ವ್ಯವಸ್ಥೆಯನ್ನಾದರೂ ಜಾರಿಗೆ ತಂದರೆ ಸ್ವಲ್ಪ ಮಟ್ಟಿಗೆ ಇದ್ದ ಹಣದಲ್ಲಿಯೇ ಉಳಿತಾಯ ಮಾಡಿ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನಾದರೂ ಮಾಡಬಹುದಾಗಿದೆ. ಒಂದು ವೇಳೆ ಸರ್ಕಾರ ಗ್ರಾಮ ಪಂಚಾಯಿತಿ ಮಾಡುವುದಾದರೆ, ಅವುಗಳಿಗೆ ಹೆಚ್ಚಿನ ಅನುದಾನ ಕೊಟ್ಟು ಅವು ಅಭಿವೃದ್ಧಿ ಕೆಲಸ ಮಾಡಲಿಕ್ಕೆ ಹಚ್ಚಿದರೆ ಮಾತ್ರ ಗ್ರಾಮೀಣ ಜನತೆ ಇದರಿಂದ ಲಾಭ ಪಡೆಯುತ್ತಾರೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಇನ್ನು ಗ್ರಾಮ ಪಂಚಾಯಿತಿಗಳ ಅಧಿಕಾರದ ಬಗ್ಗೆ ಹೇಳುವುದಾದರೆ, ಇರತಕ್ಕಂಥ ಕಾನೂನಿಗೆ ತಿದ್ದುಪಡಿ ಮಾಡಿ ಹೆಚ್ಚಿನ ಅಧಿಕಾರ ಕೊಡುತ್ತೇವೆ ಎಂದು ಸರ್ಕಾರ ಹೇಳಿದೆ. ಈಗಿರುವ ಪಂಚಾಯತ್ ರಾಜ್ ಕಾನೂನಿನ ಅಧಿಕಾರಿಗಳದ್ದೇ ಮೇಲುಗೈಯಾಗಿದೆ. ಜನಪ್ರತಿನಿಧಿಗಳಿಗೆ ಅಲ್ಲಿ ಹೆಚ್ಚಿನ ಅಧಿಕಾರ ಅಥವಾ ನಿರ್ಣಯ ತೆಗೆದುಕೊಳ್ಳತಕ್ಕ ವ್ಯವಸ್ಥೆ ಇಲ್ಲ. ಸರ್ಕಾರ ಅದನ್ನು ಬದಲಾವಣೆ ಮಾಡುತ್ತಿರುವುದು ಸ್ವಾಗತಾರ್ಹವಾದ ವಿಚಾರವಾಗಿದೆ. ಆದಷ್ಟು ಬೇಗೆ ಈ ಒಂದು ಜನಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ಕೊಡತಕ್ಕಂತಹ ಕಾನೂನನ್ನು ಜಾರಿಗೆ ಕೊಡುವುದು ಸೂಕ್ತವೆಂದು ನಾನು ಹೇಳುತ್ತಾ ಅದನ್ನು ಸ್ವಾಗತಿಸುತ್ತೇನೆ. ಇಡೀ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಸಹಾ, ಸಹಕಾರ ಎಂಬ ಶಬ್ದದ ಪ್ರಸ್ತಾಪವೇ ಇಲ್ಲ. ಪ್ರಜಾಪ್ರಭುತ್ವದ ಬುನಾದಿಯಾಗಿರತಕ್ಕ ಸಹಕಾರ ಕ್ಷೇತ್ರ ಇವತ್ತು ಪ್ರಜಾ ಪ್ರಭುತ್ವ ತನ್ನದೇ ಆದಂತಹ ಭದ್ರ ಬುನಾದಿಯನ್ನು ಹೊಂದಬೇಕಾದರೆ ಮಹತ್ವವನ್ನು ಪಡೆಯಬೇಕು. ಇವತ್ತು ಕರ್ನಾಟಕ ರಾಜ್ಯದ ಸಹಕಾರ ಕೇತ್ರ ಹೆಚ್ಚಿನ ಬೆಳವಣಿಗೆಯನ್ನು ಸಾಧಿಸದೇ ಇದ್ದರೂ ಸಹಿತ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ರಾಜ್ಯದ ಸಹಕಾರಿ ಕ್ಷೇತ್ರ ತನ್ನದೇ ಆದಂತಹ ಒಂದು ಸಾಧನೆಯನ್ನು ಈ ರಾಜ್ಯದಲ್ಲಿ ಮಾಡಿದೆ. ಸಹಕಾರ ಸಂಘಗಳ ಬಗ್ಗೆ ಈ ಸರ್ಕಾರದ ಧೋರಣೆಯೇನು? ಈ ಸರ್ಕಾರದವರು ವಿರೋಧ ಪಕ್ಷದಲ್ಲಿದ್ದಾಗ ಸಹಕಾರ ಸಂಘಗಳಿಗೆ ನಾಮಿನೇಷನ್ ಮಾಡುವ ಪದ್ಧತಿಯನ್ನು ವಿರೋಧಿಸಿ ಅದನ್ನು ತೆಗೆದು ಹಾಕಬೇಕೆಂದು ಹೇಳಿದ್ದರು. ಆದರ ಬಗ್ಗೆ ಈಗ ಸರ್ಕಾರದ ನಿಲುವು ಏನು? ಈ ಬಗ್ಗೆ ಇಡೀ ರಾಜ್ಯದ ಜನತೆಗೆ ಸರ್ಕಾರ ತನ್ನ ವಿಚಾರಗಳನ್ನು, ನಿಲುವನ್ನು ಹೇಳಬೇಕಾದುದು ಅತ್ಯಂತ ಅವ್ಯಶ್ಯಕವಾಗಿದೆ. ಸರ್ಕಾರ ಏನನ್ನೂ ಈ ಬಗ್ಗೆ ಹೇಳದಿರುವುದರಿಂದ ಕಾಂಗ್ರೆಸ್ ವಿರೋಧ ಪಕ್ಷದಲ್ಲಿದ್ದಾಗ ನಾಮಿನೇಷನೆ ಮಾಡಕೂಡದು, ಜನರಿಂದ ಆಯ್ಕೆಯಾದವರು ಮಾತ್ರ ಸಹಕಾರಿ ಸಂಸ್ಥೆಗಳಲ್ಲಿ ಆಡಳಿತ ನಡೆಸಬೇಕು ಎಂದು ತಳೆದ ನಿಲುವಿನಲ್ಲಿ ಇವತ್ತು ವಿರೋಧಪಕ್ಷದಿಂದ ಆಡಳಿತ ಪಕ್ಷಕ್ಕೆ ಬಂದ ನಂತರ ಈ ರೀತಿ ನೀತಿ ಏನಾದರೂ ಬದಲಾವಣೆ ಆಗಿದೆಯಾ? ಎನ್ನುವ ಸಂಶಯ ಈ ರಾಜ್ಯದ ಜನತೆಯಲ್ಲಿ ಮೂಡುತ್ತಿದೆ. ಅದಕ್ಕೆ ಮಾನ್ಯ ಸಹಕಾರ ಸಚಿವರು ಮತ್ತು ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಯವರು ಅದನ್ನು ಸ್ಪಷ್ಟೀಕರಣ ಮಾಡಿದರೆ ಈ ರಾಜ್ಯದ ಜನತೆಗೆ ಈ ಸರ್ಕಾರದ ಒಂದು ರೀತಿ ನೀತಿ ಬಗ್ಗೆ ಗೊತ್ತಾಗಬಹುದು ಎನ್ನುವ ವಿಚಾರವನ್ನು ಮುಂದಿಡುತ್ತಿದ್ದೇನೆ. ಇವತ್ತು

ಸಹಕಾರ ಸಂಘ ಸಂಸ್ಥೆಗಳಲ್ಲಿ ಚುನಾಯಿತರೆ ಆಡಳಿತ ನಡೆಸಬೇಕು, ನಾಮಿನೇಷನ್ ಹಾಕುವುದಿಲ್ಲ, ಅವರಿಗೆ ಅಧಿಕಾರ ಕೊಡುವುದಿಲ್ಲ, ಮತದಾನದ ಹಕ್ಕನ್ನೂ ಕೊಡುವುದಿಲ್ಲ ಎನ್ನುವ ಮಾತನ್ನು ತಾವು ಏನು ಪ್ರತಿಪಾದನೆ ಮಾಡಿದ್ದೀರಿ ಅದಕ್ಕೆ ತಾವು ಬದ್ಧರಾಗಿದ್ದೀರಾ ಅಥವಾ ಇಲ್ಲ ಎನ್ನುವುದನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳುತ್ತಿದ್ದೇನೆ. ಈ ಸಹಕಾರಿ ಆಂದೋಲನ, ಕರ್ನಾಟಕದಲ್ಲಿ ಸುಮಾರು 11 ಹೊಸ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸುವುದಕ್ಕೆ, ರೈತ ಬೆಳೆದ ಕಬ್ಬು ಕಾರ್ಖಾನೆ ಇಲ್ಲದೆ ಸುಟ್ಟು, ರೈತನಿಗೆ ಆಗತಕ್ಕಂತಹ ಅನ್ಯಾಯವನ್ನು ತಪ್ಪಿಸುವುದಕ್ಕೆ ಹಿಂದಿನ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಈ 11 ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಕೆಲವೊಂದು ಪ್ರಾರಂಭದ ಹಂತದಲ್ಲಿವೆ, ಕೆಲವು ಪ್ರಾರಂಭವಾಗಿದೆ. ಇದರ ಬಗ್ಗೆ ಸರ್ಕಾರದ ಧೋರಣೆ ಏನು? ಅದನ್ನು ಮುಂದುವರೆಸಿಕೊಂಡು ಹೋಗುತ್ತೀರಿ? ಅಥವಾ ಹಿಂದಿನ ಸರ್ಕಾರ ಹಾಕಿಕೊಂಡ ಕಾರ್ಯಕ್ರಮವನ್ನು ನೀವು ಇಲ್ಲಿಗೇ ನಿಲ್ಲಿಸುತ್ತೀರಾ ಎನ್ನುವ ವಿಚಾರವನ್ನು ಸಹಿತ ಹೇಳಬೇಕು. ಏಕೆಂದರೆ, ಸರ್ಕಾರದವರು ಒಂದೊಂದು ಸಕ್ಕರೆ ಕಾರ್ಖಾನೆಗೆ 72 ಕೋಟಿ ರೂಪಾಯಿಗಳ ಬಂಡವಾಳ ಹೂಡಬೇಕಾಗಿದೆ. ಅದಕ್ಕೆ ಹಿಂದಿನ ಸರ್ಕಾರ 15 ಕೋಟಿ ರೂಪಾಯಿಗಳ ಸರ್ಕಾರದ ಶೇರು ಹಣವನ್ನು ಕೊಡುವುದಕ್ಕೆ ಒಪ್ಪಿದೆ. ಹಾಗೆಯೇ 30 ಕೋಟಿ ರೂಪಾಯಿಗಳಷ್ಟು ಸಾಲಕ್ಕೆ ಗ್ಯಾರಂಟಿ ಕೊಡುವುದಕ್ಕೆ ಒಪ್ಪಿದೆ. ಈ ರೀತಿಯ ಧ್ಯೆಯ-ಧೋರಣೆ ಬಗ್ಗೆ ಇಡೀ ರಾಜ್ಯದ ಕಬ್ಬು ಬೆಳೆಗಾರನಿಗೆ ಸರ್ಕಾರದ ಧೋರಣೆ ಗೊತ್ತಾಗುತ್ತಿಲ್ಲ. ಜನ ಅದರಲ್ಲಿ ಭಾಗವಹಿಸಲು ಹಿಂದು ಮುಂದು ನೋಡುವುದಕ್ಕು ಸಾಧ್ಯ. ಇದಲ್ಲದೆ ನಾವು ಇವತ್ತು ರಾಜ್ಯದಲ್ಲಿ ವಿದ್ಯುತ್ತಿನ ಅಭಾವವನ್ನು ಎದುರಿಸುತ್ತಿದ್ದೇವೆ. ಇದನ್ನುಸಮರ್ಥವಾಗಿ ಪರಿಹರಿಸಲು ಒಂದು ಹೊಸ ಪ್ರಯೋಗವನ್ನು ಮಾಡಲು ಈ ಮಾಡಲು ರಾಜ್ಯದಲ್ಲಿ ತಾವು ಒಂದು ಯೋಜನೆ ಹಾರಿಕೊಂಡಿದ್ದೀರಿ. ಪ್ರತಿಯೊಂದು ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಅಲ್ಲಿ ಬರತಕ್ಕಂತಹ ಕಬ್ಬಿನ ಸಿಪ್ಪೆಯಿಂದ ವಿದ್ಯುತ್ತನ್ನು ಉತ್ಪಾದನೆ ಮಾಡತಕ್ಕಂತಹ ಒಂದು ಹೊಸ ಕಾರ್ಯಕ್ರಮ ಇದರಲ್ಲಿ ಇದೆ. 11.25 ಮೆಗಾವ್ಯಾಟ್ ವಿದ್ಯುತ್ತನ್ನು ಒಂದು ಸಕ್ಕರೆ ಕಾರ್ಖಾನೆ ಉತ್ಪಾದನೆ ಮಾಡುತ್ತಿದೆ. ಇದರಿಂದ ನೂರಾರು ಮೆಗಾವ್ಯಾಟ್ ವಿದ್ಯುತ್ ಸಹಿತ ಉತ್ಪಾದನೆಯಾಗುತ್ತದೆ. ಸ್ವಲ್ಪ ಮಟ್ಟಿಗಾದರೂ ವಿದ್ಯುತ್ತಿನ ಅಭಾವವನ್ನು ಕೊನೆಗಾಣಿಸಬಹುದು. ಗ್ರಾಮೀಣ ಭಾಗದ ನಿರುದ್ಯೋಗಿ ವಿದ್ಯಾವಂತನಿಗೆ ಇದರಿಂದ ಸಹಾಯವಾಗುತ್ತದೆ ಮತ್ತು ಸ್ವಲ್ಪ ಮಟ್ಟಿನ ಉದ್ಯೋಗವಕಾಶ ಸಿಗುತ್ತದೆ. ಕಬ್ಬು ಬೆಳೆದ ರೈತನಿಗೆ ಯೋಗ್ಯ ಬೆಲೆ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಫಿದ್ಯುತ್ತಿನ ಸಮಸ್ಯೆ ಬಗೆಹರಿಸುವ ದೃಷ್ಟಿಯಿಂದ ಸರ್ಕಾರ ಈ ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಹೋಗುವುದು ಸೂಕ್ತವೆಂದು ನಾನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. IIಇನ್ನು ಹಲವಾರು ಕಾರಣಗಳಿಂದ ರಾಜ್ಯದಲ್ಲಿ ಪ್ರಾದೇಶಿಕ ತಾರತಮ್ಯ ಇರುವುದು ನನ್ನ ಸರ್ಕಾರಕ್ಕೆ ಅರಿವು ಇದೆ ಎಂದು ಹೇಳಿದ್ದೀರಿ. ಹಾಗಾದರೆ ಈ ತಾರತಮ್ಯ ಆಗಿದ್ದು ನಿಮಗೆ ಖಚಿತವಾದಮೇಲೆ ಉತ್ತರ ಕರ್ನಾಟಕಕ್ಕೆ ತಾವು ಹಿಂದೆ ವಿರೋಧ ಪಕ್ಷದಲ್ಲಿ ಇದ್ದಾಗ ಹೇಳಿದ್ದು ಅದನ್ನೇ ಮಾನಸ್ಸಿನಲ್ಲಿ ಇಟ್ಟುಕೊಂಡಿದ್ದೀರಿ. ಈ ತಾರತಮ್ಯ ಸರಿಪಡಿಸುವುದಕ್ಕೆ ನಿಮ್ಮ ಕಾರ್ಯಕ್ರಮ ಏನು? ಇದಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಈ ರೀತಿ ತಾರತಮ್ಯಗಳು ಪ್ರತಿಯೊಂದು ರಂಗದಲ್ಲಿ ಆಗಿದೆ ಎಂದು ನಿನ್ನೆ ಮಾನ್ಯ ರಾಜ್ಯಪಾಲರ ಭಾಷಣವನ್ನು ಮೂವ್ ಮಾಡಿದೆ ಸ್ನೇಹಿತರು ಹೇಳಿದರು. ಇಷ್ಟೆಲ್ಲಾ ಹಿಂದುಳಿದ ಪ್ರದೇಶಗಳಿರುವಾಗ ಶಿಕ್ಷಣದಲ್ಲಿ,

ನೀರಾವರಿ ವಿಚಾರದಲ್ಲಿ ಮತ್ತು ಆಸ್ಪತ್ರೆಗಳ ವಿಚಾರದಲ್ಲಿ ಹೀಗೆ ಪ್ರತಿಯೊಂದು ವಿಚಾರದಲ್ಲಿ ಸಹಿತ ಇವತ್ತು ಹಿಂದುಳಿದ ಪ್ರದೇಶಗಳಿರುವುದರಿಂದ ಯಾವ ರೀತಿ ನೀವು ಮುಂದೆ ನಿಮ್ಮ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಮಾಡುತ್ತೀರಿ? ಅಂದು ಸಮಗ್ರ ನವ ಕರ್ನಾಟಕ ರಚನೆಯಾಗಬೇಕಾದರೆ ಹಿರಿಯರಲ್ಲಿ ಯಾವ ವಿಚಾರ ಇತ್ತು ಎಂದರೆ ವಿಶಾಲ ಕರ್ನಾಟಕದ ಸಮಗ್ರ ಅಭಿವೃದ್ಧಿ ಅವರ ಗುರಿಯಾಗಿತ್ತು. ಇವತ್ತು ಈ ತಾರತಮ್ಯ ಆಗಿದೆ ಎಂದು ಸರ್ಕಾರಕ್ಕೆ ಮನಗಂಡಾಗ ಸಹಿತ ಆ ತಾರತಮ್ಯವನ್ನು ಸರಿಪಡಿಸುವುದಕ್ಕೆ ಯಾವುದೇ ಚಿಂತನೆ ಇಲ್ಲ. ಯಾವುದೇ ಕಾರ್ಯಕ್ರಮ ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ಹೊರ ಹೊಮ್ಮುತ್ತಿಲ್ಲ. ಇದು ಉತ್ತರ ಕರ್ನಾಟಕ ಜನತೆಗೆ ನಿರಾಶೆಯನ್ನು ತಂದಿರತ್ತಕ್ಕಂತಹ ಮತ್ತು ಮಾನ್ಯ ಮುಖ್ಯಮಂತ್ರಿಯವರು ಈ ಕಡೆ ನಿಮಗೆ ಮನವರಿಕೆಯಾದ ಮೇಲೆ ಆ ಪ್ರದೇಶವನ್ನು ಅಭಿವೃದ್ಧಿಪಡಿಸುವುದಕ್ಕೆ ಎಲ್ಲ ರೀತಿಯ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡು ಆ ತಾರತಮ್ಯವನ್ನು ಹೋಗಲಾಡಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. IIಇನ್ನು ಹುಬ್ಬಳ್ಳಿ ಧಾರವಾಡದವರು ಅಲ್ಲಿ ಹೈ-ಕೋರ್ಟ್ ಪೀಠವನ್ನು ಸ್ಥಾಪನೆಮಾಡಬೇಕೆಂದು ಅನೇಕ ವರ್ಷಗಳಿಂದ ಕೇಳುತ್ತಿದ್ದಾರೆ. ಮಾನ್ಯ ಸಭಾನಾಯಕರು ಮತ್ತು ಅನೇಕ ಇವತ್ತಿ ಮಂತ್ರಿ ಮಹೋದಯರು ವಿರೋಧ ಪಕ್ಷದಲ್ಲಿದ್ದಾಗ ಹುಬ್ಬಳ್ಳಿ - ಧಾರವಾಡಕ್ಕೆ ಹೈಕೋರ್ಟ್ ಪೀಠ ಸ್ಥಾಪನೆಗೆ ಹೇಳುವುದು ನ್ಯಾಯ ಮತ್ತು ಸೂಕ್ತವಾಗಿದೆ ಎಂದು ಹೇಳಿದ್ದರು. ಇದು ಅವರ ಅನೇಕ ವರ್ಷಗಳ ಬೇಡಿಕೆ. ಮಾನ್ಯ ಕಾನೂನು ಸಚಿವರೂ ಕೂಡ ಅದಕ್ಕೆ ಬೆಂಬಲ ಸೂಚಿಸಿದ್ದರು. ಈಗ ಅಧಿಕಾರ ನಿಮ್ಮ ಕೈಯಲ್ಲಿದೆ. ಅದನ್ನು ಆದರೂ ಮಾಡಿ, ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ಸ್ಥಾಪನೆ ಮಾಡುವುದಕ್ಕೆ ತ್ವರಿತವಾಗಿ ನಿಮ್ಮ ಮಂತ್ರಿಮಂಡಲದಲ್ಲಿ ನಿರ್ಣಯ ತೆಗೆದುಕೊಂಡು ಉತ್ತರ ಕರ್ನಾಟಕದವರು ಬೆಂಗಳೂರಿಗೆ ಬರುವುದನ್ನು ತಪ್ಪಿಸಿ, ಆ ಭಾಗದ ಜನತೆಗೆ ಅತಿ ಸಮೀಪದಲ್ಲಿ ನ್ಯಾಯ ಸಿಗುವಂತೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಈ ಕೃಷಿ ಬಗ್ಗೆ ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ರೈತರಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿದ್ದೀರಿ. ಆ ಕಾರ್ಯಕ್ರಮಗಳ ಬಗ್ಗೆ ಯಾವ ವಿಚಾರದಲ್ಲಿಯೂ, ಯಾವ ಸಮಯದಲ್ಲಿಯೂ ನಿರ್ದಿಷ್ಟವಾದ ಸರ್ಕಾರದ ನಿಲುವು ಇಲ್ಲ. ಇದು ಎಲ್ಲವನ್ನೂ ಮಾಡುವುದಕ್ಕೆ ಹೋಗಿ ಏನನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಎಂದು ಸಂಶಯ ಬರುವ ರೀತಿಯಲ್ಲಿ ಮಾನ್ಯ ರಾಜ್ಯಪಾಲರ ಭಾಷಣವನ್ನು ಈ ಸದನದಲ್ಲಿ ಮಂಡಿಸಿದ್ದಾರೆ. ಕೃಷಿ ಬಗ್ಗೆ ಇವತ್ತು ಯಾವುದೇ ಒಂದು ಕಾರ್ಖಾನೆ ಇರಲಿ, ಯಾವುದೇ ಒಂದು ಉತ್ಪಾದನೆ ಮಾಡತಕ್ಕಂತಹ ಕಾರ್ಖಾನೆ ತನ್ನ ಖರ್ಚುವೆಚ್ಚ, ಬಂಡವಾಳ ಹೂಡಿಕೆ, ಲೆಕ್ಕ ಹಾಕಿಕೊಂಡು ತನ್ನ ಲಾಭವನ್ನು ಸಹಿತ ಲೆಕ್ಕ ಹಾಕಿ, ತಾನು ಉತ್ಪಾದನೆ ಮಾಡುವ ಮಾಲಿಗೆ ಬೆಲೆಯನ್ನು ಕಟ್ಟಿ ಉತ್ಪಾದನೆ ಮಾಡುವವನು ಬೆಲೆ ನಿಗದಿ ಮಾಡುತ್ತಾನೆ. ಆದರೆ ರೈತ ತಾನು ಬೆಳೆದ ಉತ್ಪನ್ನಗಳಿಗೆ ಬೆಲೆ ಕಟ್ಟುವಂತಹ ಹಕ್ಕು ಅವನಿಗೆ ಇಲ್ಲ. ಈ ಬಗ್ಗೆ ಅವನು ಎಪಿಎಮ್‌ಸಿಗೆ ಹೋಗಿ ತನ್ನ ಮಾಲನ್ನು ಇಟ್ಟಾಗ ಅದನ್ನು ಕೊಳ್ಳುವವರು ಹರಾಜಿಗೆ ಕರೆದ ದರಕ್ಕೆ ಅವನು ಕೊಟ್ಟು ಬರಬೇಕಾದ ವ್ಯವಸ್ಥೆ ಇದೆ. ಒಂದೇ ಸಾರಿ ಇದು ಸಾಧ್ಯವಾಗಲಿಕ್ಕಿಲ್ಲ. ರೈತ ಬೆಳೆದ ಮಾಲಿಗೆ ಯೋಗ್ಯ ದರ ಕೊಡತಕ್ಕಂಥದ್ದು ಹಂತಹಂತವಾಗಿ ಪ್ರತಿವರ್ಷ ಆದರೂ ಸಹ ಒಂದು ಯೋಜನೆ ತಯಾರಿಸಿ ರೈತ ಬೆಳೆದ ಬೆಳೆಗಳಿಗೆ ಲಾಭದಾಯಕವಾದ ಬೆಲೆಯನ್ನು ಕೊಡತಕ್ಕಂತಹ ಕಾರ್ಯಕ್ರಮವನ್ನು ನಾಲ್ಕಾರು

ವರ್ಷಗಳಲ್ಲಿ ಸರ್ಕಾರ ಹಾಕಿಕೊಂಡರೆ ರೈತನಿಗೆ ನ್ಯಾಯವಾದ ಬೆಲೆ ಸಿಗುತ್ತದೆ. ಈ ಬಗ್ಗೆ ಸರ್ಕಾರ ಚಿಂತನೆ ಮಾಡಿಲ್ಲ. ಈ ದೃಷ್ಟಿಯಿಂದ ರೈತನಿಗೆ ಯಾವುದೇ ಸಹಾಯ ಸಹಕಾರ ಹೋದರೂ ಸಹಿತ, ಅವನು ಬೆಳೆದ ಬೆಳೆಗೆ ಲಾಭದಾಯಕವಾದ ಬೆಲೆಯನ್ನು ಕೊಡತಕ್ಕಂಥ ಕನಿಷ್ಟ ಕಾರ್ಯಕ್ರಮವನ್ನು ಸಹಿತ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ವಿವರಿಸಿಲ್ಲ. ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತೇನೆ, ಮನೆಗಳನ್ನು ಕಟ್ಟುತ್ತೇವೆ, ಎಷ್ಟು ಮನೆ ಕಟ್ಟುತ್ತೀರಿ? ಕಟ್ಟಿದ ಮನೆಗಳಿಗೆ ರಸ್ತೆ ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲ, ವಿದ್ಯುತ್ತಿನ ವ್ಯವಸ್ಥೆ ಇಲ್ಲ. ಈ ವ್ಯವಸ್ಥೆ ಮಾಡುವುದಕ್ಕೆ ಇದರಲ್ಲಿ ಯಾವುದೇ ಕಾರ್ಯಕ್ರಮ ಇಲ್ಲ. ಈ ಸರ್ಕಾರಕ್ಕೆ ಬಡಜನರ ಬಗ್ಗೆ ಕಳಕಳಿ ಇದ್ದಿದ್ದೇ ಆದರೆ ವಿದ್ಯುತ್ತನ್ನು ಸರಬಾರಾಜು ಮಾಡುವುದಕ್ಕೆ, ಕುಡಿಯವ ನೀರಿನ ಬಗ್ಗೆ, ಬಡವರಿಗೆ ಮನೆಗಳನ್ನು ಕಟ್ಟುವುದಕ್ಕೆ ಏನು ಕಾರ್ಯಕ್ರಮ ಹಾರಿಕೊಂಡಿದ್ದೀರಿ? ಮನೆ ಇಲ್ಲದವರಿಗೆ ಮತ್ತು ನಿವೇಶನ ಇಲ್ಲದವರಿಗೆ ಎಷ್ಟು ಅವಧಿಯಲ್ಲಿ ಈ ಕಾರ್ಯಕ್ರಮ ಮಾಡುತ್ತೀರಿ ಎನ್ನುವುದರ ಬಗ್ಗೆ ಯಾವುದೇ ವಿವರಣೆ ಇಲ್ಲ. ಆಡಳಿತದಲ್ಲಿರತಕ್ಕಂತಹ ಸರ್ಕಾರ ಯಾವುದೇ ಒಂದು ರೈತರ ವಿಚಾರವಿರಲಿ, ಕೂಲಿಕಾರರ ವಿಚಾರ ಇರಲಿ, ಯಾವುದೇ ವಿಚಾರದಲ್ಲಿ ನಿರ್ದಿಷ್ಟವಾದ ಗುರಿಯನ್ನು ಇಟ್ಟುಕೊಂಡಿಲ್ಲ. ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡಿಲ್ಲ ಎಂಬುದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದು ಸ್ಪಷ್ಟವಾಗುತ್ತದೆ. ವಿರೋಧ ಪಕ್ಷದಲ್ಲಿದ್ದಾಗ ಅಧಿಕಾರ ಹಿಡಿಯುವುದಕ್ಕೆ ಏನು ಟೀಕೆ ಮಾಡಿದ್ದರು ಆ ಟೀಕೆ ಅವರಿಗೆ ನೆನಪಿನಲ್ಲಿವೆ. ಅದಕ್ಕಾಗಿ ಎಲ್ಲಾ ಕಾರ್ಯಕ್ರಮಗಳನ್ನು ಮಾಡುತ್ತೇವೆ ಎಂದು ಹೇಳಿ ಅವಶ್ಯಕತೆ ಇರತಕ್ಕ ಕಾರ್ಯಕ್ರಮಗಳನ್ನು ಕೈಬಿಡುವ ಸಾಧ್ಯತೆ ಇದೆ. ನಾನು ಈ ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಎಲ್ಲವನ್ನು ಮಾಡದಿದ್ದರು ಕೆಲವು ಕಾಲ ಕೆಲವು ಕಾರ್ಯಕ್ರಮಗಳನ್ನು ಮುಂದಕ್ಕೆ ಹಾಕಿದರೆ ಆಗುತ್ತದೆ. ಅತ್ಯಂತ ಅವಶ್ಯಕತೆ ಇರತಕ್ಕ ನೀರಾವರಿಯಂಥ ಕಾರ್ಯಕ್ರಮವನ್ನು ನಿರ್ಧಿಷ್ಟವಾದ ವೇಳೆಯಲ್ಲಿ ನಿಗದಿತವಾಗಿ ಸ್ಪಷ್ಟವಾದ ನಿಲುವನ್ನು ಸರ್ಕಾರ ತೆಗೆದುಕೊಂಡು ಇಡೀ. ರಾಜ್ಯದ ರೈತರ ಮತ್ತು ರಾಜ್ಯದ ಹಕ್ಕಿನ ನೀರನ್ನು ಬಳಸಿಕೊಳ್ಳಲು ನಿರ್ಧಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡು ಬೇರೆ ರಾಜ್ಯಗಳಲ್ಲಿ ಮಾಡಿದಂತೆ ಇನ್ನುಳಿದ ಕಾರ್ಯಕ್ರಮಗಳನ್ನು ಒಂದೆರಡು ವರ್ಷಮುಂದೆ ಹಾಕಿದರು ಪರವಾಗಿಲ್ಲ, ರಾಜ್ಯದಲ್ಲಿರುವ ನೀರಿನ ಸಂಪೂರ್ಣ ಹಕ್ಕನ್ನು ಬಳಕೆ ಮಾಡಿ ರಾಜ್ಯದ ಜನರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಂಡು, ಮಾನ್ಯ ರಾಜ್ಯಪಾಲರ ಭಾಷಣಕ್ಕೆ, ರಾಜ್ಯಪಾಲರಿಗೆ ಅಭಿನಂದನೆಗಳನ್ನು ಸಲ್ಲಿಸಬಹುದು, ಆದರೆ ಇಲ್ಲಿ ಇರತಕ್ಕ ಅಂಶಗಳೇನಿದೆ ಅದರ ಬಗ್ಗೆ ಹೇಳುವುದಾದರೆ ಸರ್ಕಾರಕ್ಕೆ ಯಾವುದೇ ಚಿಂತನೆ ಇಲ್ಲ. ವಿರೋಧ ಪಕ್ಷದಲ್ಲಿ ಇದ್ದು ಟೀಕೆಯನ್ನು ಮಾಡುತ್ತೇವೆ ಎಂಬ ಮನೋಭಾವ ಇನ್ನೂ ಇದೆ. ಅದನ್ನು ರಾಜ್ಯದ ಜನತೆ, ಮತದಾರರು ಸಂಪೂರ್ಣವಾದ ಬಹುಮತವನ್ನು ತಮಗೆ ಕೊಟ್ಟಿದ್ದಾರೆ. ಯಾವುದೇ ಸಂಕೋಚ ಇಲ್ಲದೆ ಆಡಳಿತವನ್ನು ನಡೆಸಲು, ರಾಜ್ಯದ ಸರ್ವತೋಮುಖ ಅಭಿವೃದ್ಧಿಯಾಗಲಿ ಕಿಚಡಿ ಸರ್ಕಾರ ಬೇಡ ಎಂಬ ನಿರ್ಣಯವನ್ನು ಮತದಾರರು ಕೊಟ್ಟಿದ್ದಾರೆ. ಅದಕ್ಕೆ ಹಿಂದೆ ಮಾಡಿದಂತೆ 1989-94ರವರೆಗೆ ವರ್ಷಕ್ಕೆ ಒಬ್ಬರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡದಂತೆ ಆಡಳಿತವನ್ನು ಸರಿಯಾಗಿ ನಡೆಸಿಕೊಂಡು ಹೋಗತಕ್ಕ ದೃಢ ಸರ್ಕಾರ ತೀವ್ರವಾಗಿ ನಿರ್ಣಯವನ್ನು ತೆಗೆದುಕೊಳ್ಳುವ ಸರ್ಕಾರ ಇವತ್ತು ಇರಲಿ ಎಂದು ಜನರು ನಿಮಗೆ ಆಶೀರ್ವಾದ ಮಾಡಿದ್ದಾರೆ. ಅದರ ಸದುಪಯೋಗ ಕರ್ನಾಟಕ ಜನರಿಗೆ ಆಗಲಿ, ಆ ಆಸೆಯನ್ನು ರಾಜ್ಯದ

ಜನರು ಇಟ್ಟುಕೊಂಡಿದ್ದಾರೆ. ಆ ದಿಸೆಯಲ್ಲಿ ಇಡೀ ರಾಜ್ಯಕ್ಕೆ ಸಿಗತಕ್ಕಂಥ ನೀರನ್ನು ಬಳಕೆ ಮಾಡಲು ಮೊದಲ ಆದ್ಯತೆಯನ್ನು ಕೊಟ್ಟು ಕಾರ್ಯಕ್ರಮ ಮಾಡುತ್ತೀರಿ ಎಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಂಡು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಿರೋಧವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎನ್.ಎಸ್.ಪಾಟೀಲ್ (ಮುಂಡರಗಿ) ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ನಾನು ಕರ್ನಾಟಕ ರಾಜ್ಯದ ಪ್ರಬುದ್ಧ ಮತದಾರರನ್ನು ಅಭಿನಂದಿಸುತ್ತಿದ್ದೇನೆ. ಯಾರ್ಯಾರಿಗೆ ಯಾವ್ಯಾವ ಶಿಕ್ಷೆಯನ್ನು ಕೊಡಬೇಕೋ ಅದರಂತೆ ಅವರು ಸರಿಯಾದ ಶಿಕ್ಷೆಯನ್ನು ಕೊಟ್ಟಿದ್ದಾರೆ. ಆ ದೃಷ್ಟಿಯಿಂದ ನಾನು ಮತದಾರರನ್ನು ಮೊದಲನೆಯದಾಗಿ ಅಭಿನಂದಿಸುತ್ತಿದ್ದೇನೆ. ಹಾಗೆಯೇ ರಾಜ್ಯದ ನೂತನ ಮುಖ್ಯಮಂತ್ರಿಗಳಾದ ಮಾನ್ಯ ಕೃಷ್ಣರವರನ್ನು ಸಹ ಅಭಿನಂದಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣವನ್ನು ಮಂಡಿಸುವಾಗ ಮಾನ್ಯ ಸಂಜಯ್ಯನಮಠರವರು ಬಹಳ ಚೆನ್ನಾಗಿ ಮಂಡಿಸಿದ್ದಾರೆ. ಉತ್ತರ ಕರ್ನಾಟಕದ ಬಗ್ಗೆ ಸರಿಯಾದ ಬೆಳಕನ್ನೂ ಚೆಲ್ಲಿದ್ದಾರೆ. ಉತ್ತರ ಕರ್ನಾಟಕ ಬಗ್ಗೆ ಮಾನ್ಯ ನಂಜಯ್ಯನಮಠರವರು ಹೇಳಿದ ಮಾತು ಬಹಳ ಸತ್ಯವಾಗಿದೆ. ಆದರೆ ಅವರು ಸ್ವಲ್ಪ ಅಂಕಿಅಂಶಗಳನ್ನು ತೆಗೆದುಕೊಂಡು ಬಂದು ಕಳೆದ ಐದು ವರ್ಷಗಳಿಂದ ಸರ್ಕಾರ ಅದನ್ನು ಕಡಿಮೆ ಮಾಡಲು ಏನು ಪ್ರಯತ್ನ ಮಾಡಿತ್ತು ಅದನ್ನು ಹೇಳಲಿಲ್ಲ. ಅದನ್ನು ಹೇಳಬೇಕಾಗಿತ್ತು. ಇನ್ನು ಶ್ರೀ ಸಭಾಪತಿಯವರು ಮಾತನಾಡುತ್ತಾ ಹಿಂದಿನ ಸರ್ಕಾರದವರು ಮಾಡಿದ ತಪ್ಪನ್ನು ತಿದ್ದಿಕೊಂಡು ಕೆಲಸ ಮಾಡಬೇಕು ಎಂದಷ್ಟೆ ಹೇಳಿರುದು. ಹಿಂದೆ ಏನೇನು ತಪ್ಪಾಗಿತ್ತು ಎಂದು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ನಾವು ಮಾಡಿದಂಥ ದೊಡ್ಡ ತಪ್ಪನ್ನು ತಮ್ಮವರು ಪ್ರಾರಂಭದಲ್ಲೇ ಮಾಡಿಬಿಟ್ಟಿದ್ದಾರೆ. ಮಾನ್ಯ ಖರ್ಗೆಯವರು ವಿರೋಧ ಪಕ್ಷದ ಸಾಲಿನಲ್ಲಿ ಕುಳಿತು 40-50 ಜನ ಮಂತ್ರಿಗಳಾಗಿದ್ದೀರಿ ನಮಗೆ ಬೈದದ್ದೇ ಬೈದದ್ದು ಆಗ ನಾವೆಲ್ಲರೂ ತಲೆತಗ್ಗಿಸಿದ್ದೆವು. ತಾವೂ ಆ ರೀತಿ ಹೇಳಿದ್ದ ಮಾತು ಒಳ್ಳೆಯದಿತ್ತು. ನಾವು ಇವತ್ತೂ ಆ ಮಾತನ್ನು ಅನುಸರಿಸಬೇಕಾಗಿದೆ. ಆದರೆ ದುರ್ದೈವದಿಂದ ಅದನ್ನು ತಾವೇ ಮಾಡಲು ಆಗಲಿಲ್ಲ. ಆಗ ನಾನು ತಮಗೆ ತಾವು ಅಧಿಕಾರಕ್ಕೆ ಬಂದಾಗ ಏನು ಮಾಡುತ್ತೀರ ನೋಡಿ ಎಂದು ಹೇಳಿದ್ದೆ. ನಿಜವಾಗಿ ಆ ಮಾತು ಸತ್ಯವಾಯಿತು. ಇನ್ನೂ ಕೆಲವರನ್ನು ಸಚಿವರನ್ನಾಗಿ ಮಾಡುವ ಸುದ್ದಿ ಇದೆ, ದಯಮಾಡಿ ಆ ರೀತಿ ತೀರ್ಮಾನ ಕೊಳ್ಳಬೇಡಿ. ಜಿಲ್ಲಾಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮಂಡಲ್ ಪಂಚಾಯಿತಿ ವ್ಯವಸ್ಥೆ ಬಂದಮೇಲೆ ಮಂತ್ರಿಗಳ ಸಂಖ್ಯೆ ಇಷ್ಟು ಬೇಕಾಗಿಯೇ ಇಲ್ಲ. ನಾವು ಮಾಡಿದ್ದರೂ ಅದು ತಪ್ಪೆ. ಇವತ್ತು ಜಿಲ್ಲೆಗೆ ಒಬ್ಬರು ಮಂತ್ರಿಗಳು ಸಾಕು. ದಯಮಾಡಿ ಆ ರೀತಿ ಮಾಡಿ. ಯಾರ್ಯಾರು ಏನೇನು ಹೇಳಿದ್ದೀರಿ ದಯಮಾಡಿ ತಾವೇ ಮುಂದಾಗಿ ರಾಜೀನಾಮೆ ಕೊಟ್ಟುಬಿಡಿ. ನಿಮಗೆ ಒಳ್ಳೆಯಾದಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುವುದು ಬೇಡಿ, ರಾಜೀನಾಮೆ ಕೊಟ್ಟು ರಾಷ್ಟ್ರಕ್ಕೆ ಮಾದರಿಯಾಗಿ. ಮುಂದೆ ಬರುವ ಸರ್ಕಾರಕ್ಕೆ ಸಹ ಅದು ಮಾದರಿಯಾಗಬೇಕು. ಹಿಂದೆ ಇದರ ಬಗ್ಗೆ ಮಾತನಾಡಿದ ನಾಯಕರೇ ಮೊದಲು ಆ ಕೆಲಸ ಮಾಡಿದರೆ ಬಹಳ ಸಂತೋಷವಾಗುತ್ತದೆ. ಇಲ್ಲದಿದ್ದರೆ ಮಂತ್ರಿಮಂಡಲದ ಗಾತ್ರವನ್ನು ಕಡಿಮೆ ಮಾಡುವ ಪ್ರಯತ್ನವಾದರೂ ಮಾಡಿ. ಇಲ್ಲಿ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಜೆ.ಹಚ್.ಪಟೇಲರು ಹೇಳಿದ ಮಾತೊಂದು ನೆನಪಾಗುತ್ತದೆ. ಕಾಂಗ್ರೆಸ್, ಬಿ.ಜೆ.ಪಿ, ನಾವು ಎಂದರೆ ಏನು ಎಂದು ಅವರು ದಿನ ಇಲ್ಲಿ ಹೇಳಿದ್ದರು. ಅದೇನೆಂದರೆ. ಕಾಂಗ್ರೆಸ್ ಎಂದರೆ

ಋಣಮೂಲ ಕಾಂಗ್ರೆಸ್,ಬಿ.ಜೆ.ಪಿ. ಎಂದರೆ ಅಣುಮೂಲ, ನಾವು ರಣಮೂಲ. ನಾವಂತೂ ರಣಮೂಲದವರಾಗಿ ಖಾಯಂ ಆಗಿಬಿಟ್ಟಿದ್ದೇವೆ. ಅದಂತೂ ಎಂದಿಗೂ ಬದಲಾವಣೆಯಾಗಲಿಲ್ಲ. ಆದ್ದರಿಂದ ನಾವು ಇಲ್ಲಿ ಬಂದು ಕುಳಿತುಕೊಂಡೆವು. ನಾವು ಯುದ್ಧಮಾಡಿ, ಜಗಳವಾಗಿ ಸೋತು ಇಲ್ಲಿ ಬಂದು ಕುಳಿತುಕೊಂಡೆವು. ತಾವು ಋಣವಮೂಲವಿದ್ದಿರಿ ದುರ್ದೈವದಿಂದ ರಣಮೂಲವಾಗಿಬಿಟ್ಟಿರಿ. ಜನರು ಅವರಿಗೂ ಬುದ್ಧಿ ಕಲಿಸಿದರು, ನಮಗೂ ಬುದ್ಧಿ ಕಲಿಸಿದರು. ಆದರೆ ದುರ್ದೈವದಿಂದ ಅವರೂ ಬುದ್ಧಿ ಕಲಿಯಲಿಲ್ಲ, ನಾವೂ ಕಲಿಯಲಿಲ್ಲ. ಮತ್ತೆ ನಮ್ಮನ್ನು ತಂದು ಇಲ್ಲಿ ಕೂರಿಸಿದ್ದಾರೆ, ಅವರನ್ನು ಮತ್ತೊಮ್ಮೆ ನೋಡೋಣವೆಂದು ಅಧಿಕಾರದಲ್ಲಿ ಕೂರಿಸಿದ್ದಾರೆ. ಈ ಮಧ್ಯದಲ್ಲಿ ಬಿ.ಜೆ.ಪಿ.ಯ ಮಾನ್ಯ ಜಗದೀಶ್ ಶೆಟ್ಟರ್‌ರವರು ವಿರೋಧಪಕ್ಷದ ನಾಯಕರಾಗುವ ಮೊದಲು ಹೊಡೆದಾಡಿ ಬಂದರು. ಹೀಗಾದರೆ ಜನರು ಯಾರನ್ನು ನಂಬಬೇಕು. ನಾವೆಲ್ಲರೂ ನಮ್ಮ ತನವನ್ನು ತಿದ್ದಿಕೊಳ್ಳ ಬೇಕಾಗಿದೆ. ಇಲ್ಲಿ ಯಾರೂ ಹೆಚ್ಚುಕಡಿಮೆಯಾಗಿಲ್ಲ. ನಾವುಗಳು ಈ ತಪ್ಪನ್ನು ತಿದ್ದಿಕೊಳ್ಳದಿದ್ದರೆ ದೇಶಕ್ಕೆ ಅಪಾಯವಾಗುತ್ತದೆ, ಜನರು ಯಾರನ್ನು ನಂಬಬೇಕು ಪ್ರಶ್ನೆ ಬರುತ್ತದೆ. ಅದಕ್ಕಾಗಿ 19 ಮಂದಿ ಸದಸ್ಯರನ್ನು ಜನರು ಸ್ವತಂತ್ರ್ಯ ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡಿ ನೀವೂ ಗುದ್ದಾಡ ಬೇಡಿ ಎಂದು ಆರಿಸಿ ಕಳಿಸಿದ್ದಾರೆ. ತಾವುಗಳು ಮಾತ್ರ ಒಟ್ಟಾಗಿ ಇರಿ. ನಾವು ಬೇಡವೆಂದು ಜನರು ತಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಎಲ್ಲಿಲ್ಲಿ ನಾವು ಬೇಡವಾಗಿದ್ದೇವೆ ಅಲ್ಲಿ ಜನರು ಸ್ವತಂತ್ರ್ಯ ಅಭ್ಯರ್ಥಿಗಳನ್ನು ತಂದಿದ್ದಾರೆ. ಅನಂತರ ಇಲ್ಲಿಗೆ ಆರಿಸಿ ಬಂದವರೆಲ್ಲ

3.20 ಪಿ.ಎಂ.

ಜನಪ್ರಿಯರು, ಸೋತವರೆಲ್ಲ ಜನರ ಪ್ರೀತಿಯನ್ನು ಕಳೆದುಕೊಂಡವರು ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ಬಹುಶ: ಹಿಂದೆ ಸೋತಿದ್ದವರು ಈಗ ಗೆದ್ದು ಬಂದಿದ್ದಾರಲ್ಲ; ಜನಪ್ರಿಯತೆಯ ಮೇಲೆ ಅದು ಹೋಗುವುದಿಲ್ಲ, ಒಂದೊಂದು ಸಲ ಆ ಪಕ್ಷ ಬೇಡವೆಂದರೆ ವ್ಯಕ್ತಿಗಳೂ ಹೋಗಿಬಿಡುತ್ತಾರೆ. ಆ ಪಕ್ಷ ಬೇಡವೆಂದಾಗ, ಸರ್ಕಾರವನ್ನು ಬದಲಾವಣೆ ಮಾಡಬೇಕೆಂದಾಗ ಮಾನ್ಯ ಕೃಷ್ಣ ರವರಂಥವರೂ ಸಹ ಸೋಲತಕ್ಕ ಪ್ರಸಂಗ ಬರುತ್ತದೆ. ಆದ್ದರಿಂದ ಅವರು ಸೋತಕೂಡಲೇ ಜನಪ್ರಿಯತೆಯನ್ನು ಕಳೆದುಕೊಂಡಿದ್ದಾರೆ ಎಂಬ ಮಾತು ಸರಿಯಲ್ಲ. ಒಂದೊಂದು ಸಲ ಜನಪ್ರಿಯತೆ ಇಲ್ಲದಿದ್ದರೂ ಗೆದ್ದು ಬಂದು ಬಿಡುತ್ತಾರೆ. ಒಂದು ಗಾದೆ ಇದೆ, Between two evils, lesser evil- ಅನ್ನು ಜನರು ಹುಡುಕುತ್ತಾರೆ. ಇವತ್ತಿನ ಪರಿಸ್ಥಿತಿ ಈ ರೀತಿ ಆಗಿದೆ. ಆದುದರಿಂದ ದಯವಿಟ್ಟು ನಾನು ಹೇಳುತ್ತೇನೆ ಇದೊಂದನ್ನು ತಿದ್ದುಪಡಿ ಮಾಡಲು ಹೇಳಿಬಿಡಿ. ಮುಂದೆ ನೋಡೋಣ, ನಾವು ಏನೇನು ತಪ್ಪು ಮಾಡಿದ್ದೇವೆ ಅದನ್ನು ಅವರು ಹೇಳಲಿ. ನಮ್ಮ ತಪ್ಪುಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾಗ ನಾವು ಸರಿಯಾದ ಉತ್ತರವನ್ನೂ ಕೊಟ್ಟಿದ್ದೇವೆ. ಆದರೆ ತಾವು ಇಲ್ಲಿ ಕುಳಿತುಕೊಂಡು ಏನು ಮಾತನಾಡಿದ್ದೀರಿ ಅದನ್ನು ತಾವು ಅಧಿಕಾರದಲ್ಲಿ ಕುಳಿತುಕೊಂಡಿರುವಾಗ ನಡೆಸಿ. ತಾವು ಸರಿಯಾಗಿದ್ದನ್ನು ಮಾಡಿದರೆ ನಾವು ಹೊಗಳುತ್ತೇವೆ. ನಾವು ಕೇವಲ ಬೈಯುವ ಕೆಲಸವನ್ನು ಮಾಡುವುದಿಲ್ಲ. ಸುಮ್ಮಸುಮ್ಮನೆ ಟೀಕೆ ಮಾಡಬೇಡಿ, ಧರಣಿ ಮಾಡಬೇಡಿ, ವೇಳೆಯ ಅಪವ್ಯಯ ಮಾಡುವ ಕೆಲಸ ಮಾಡಬೇಡಿ ಎಂದು ನಮ್ಮ ನಾಯಕರಾದ ಮಾನ್ಯ ಜೆ.ಹೆ.ಚ್. ಪಟೇಲರು ಆದೇಶವನ್ನು ಕೊಟ್ಟಿದ್ದಾರೆ. ನಾವು ಖಂಡಿತವಾಗಿ ಆ ರೀತಿ ಮಾಡುವುದಿಲ್ಲ. ತಾವು ಒಳ್ಳೆಯ ಕೆಲಸ ಮಾಡಿದರೆ ಖಂಡಿತವಾಗಿ

ಹೊಗಳುತ್ತೇವೆ, ತಾವು ತಪ್ಪು ಮಾಡಿದರೆ ಅದನ್ನು ತಿದ್ದುವಂಥ ಪ್ರಯತ್ನ ಮಾಡುತ್ತೇವೆ. ಎಲ್ಲಾ ಸರ್ಕಾರ ಹೇಳುವಂತೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇವೆಲ್ಲಾ ಆಗಬೇಕಾದರೆ ಮೂಲತ: ಅರಣ್ಯವನ್ನು ಬೆಳೆಸಬೇಕಾಗಿದೆ. ಅರಣ್ಯದ ಬಗ್ಗೆ ಇದರಲ್ಲಿ ಒಂದು ಮಾತೂ ಇಲ್ಲ. ಅರಣ್ಯವನ್ನು ಬೆಳೆಸಬೇಕಾದರೆ ನಾಳೆಯೊಳಗೆ ಬೆಳೆಸಲು ಆಗುವುದಿಲ್ಲ. ಅದಕ್ಕೆ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ಒಂದು ಗಿಡ ನೆಟ್ಟು ಅರಣ್ಯ ಮಾಡಬೇಕಾದರೆ ಕನಿಷ್ಟ ಅರವತ್ತು ವರ್ಷ ಬೇಕಾಗುತ್ತದೆ. ಅದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನೂ ಸಹ ಹೇಳಿಲ್ಲ. ಅರಣ್ಯ ನಾಶವಾದರೆ ಹಳ್ಳಿಗಾಡಿನಲ್ಲಿ ಕುಡಿಯಲು ನೀರು ಇಲ್ಲ, ಇದು ಹೀಗೆಯೇ ಮುಂದುವರೆದರೆ ಎಂಥ ಪರಿಸ್ಥಿತಿ ಬರುತ್ತದೆಂದರೆ ಬಹುಶ: ಕುಡಿಯಲು ನೀರು ಸಿಗುವುದಿಲ್ಲ. ಹೊಳೆಗಳೆಲ್ಲಾ ಒಣಗುತ್ತಿದೆ, ವಿದ್ಯುತ್ ಇಲ್ಲ. ಡ್ಯಾಂ ಒಣಗುತ್ತದೆ. 'ಪರಿಸರ ಪ್ರಜ್ಞೆ' ಎಂಬ ಪುಸ್ತಕದಲ್ಲಿ ಒಂದು ಮಾತನ್ನು ಹೇಳಿದ್ದಾರೆ; ಅದೇನೆಂದರೆ ಪ್ರತಿ ವರ್ಷ ಇಡೀ ಜಗತ್ತಿನಲ್ಲಿ ಮೂರು ಪರ್‌ಸೆಂಟ್ ಅರಣ್ಯ ನಾಶವಾಗುತ್ತಿದೆಯಂತೆ. ಬಹಳ ವರ್ಷವಿಲ್ಲ, ಇದನ್ನು ಲೆಕ್ಕಾ ಹಾಕಿರಿ, ಇನ್ನು 30 ವರ್ಷ ನಾವು ಇದೇರೀತಿ ಮಾಡ ಹೊರಟರೆ, ಇನ್ನು 30 ವರ್ಷಗಳಲ್ಲಿ ದೇಶದಲ್ಲಿ ಅಲ್ಲ, ಇಡೀ ಜಗತ್ತಿನಲ್ಲಿ ಅರಣ್ಯ ಉಳಿಯುವುದಿಲ್ಲವೆಂದು ಹೇಳುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ 3 ಅಲ್ಲ 6 ಪರ್ಸೆಂಟ್ ಅರಣ್ಯ ನಾಶವಾಗುತ್ತಿದೆ, ಇದರ ಬಗ್ಗೆ ಗಮನವಿಲ್ಲಿ, ಇದರ ಬಗ್ಗೆ ಒಂದು ಮಾತನ್ನೂ ಸಹ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. ದಯವಿಟ್ಟು ಅದರ ಕಡೆ ಗಗಮನವನ್ನು ಕೊಡಿ. ಬಹುಶ: ಇದರಲ್ಲಿ ಹೇಳುತ್ತಾರೆ, ಭೂಮಿ ಮತ್ತು ಸೂರ್ಯನ ನಡುವೆ ಒಜೋನ ಪದರವಿದೆ. ತಮಗೆಲ್ಲಾ ಗೊತ್ತಿರುವಂತೆ ಸೂರ್ಯಾನ ಕಿರಣ ನೇರವಾಗಿ ಭೂಮಿಗೆ ಬರುವುದಿಲ್ಲ. ಅದು ಈಗಾಗಲೇ ತೂತು ಬಿದ್ದು ಎಷ್ಟು ಆಗಲವಾಗಿದೆ ಎಂದರೆ ಏಷ್ಯಾ ಖಂಡದಷ್ಟು ಅಬಗಲವಾಗಿದೆಯಂತೆ. ಹೀಗೆ ನಾವು ಪರಿಸರವನ್ನು ಹಾಳು ಮಾಡುತ್ತಾ ಹೋದರೆ, ಈ ಅರಣ್ಯವನ್ನು ನಾಶ ಮಾಡುತ್ತಾ ಹೋದರೆ ಜೀವರಾಶಿಯು ಉಳಿಯುವುದಿಲ್ಲವೆಂದು ಹೇಳುತ್ತಾರೆ. ಇವತ್ತು ನಾವು ನೋಡುತ್ತಿರುವಂತೆ ಚಳಿಗಾಲವೇ ಇಲ್ಲ, ಎಲ್ಲಾ ಬೇಸಿಗೆ ಕಾಲವೇ ಇದೆ. ಈ ಕಾರಣದಿಂದ ತಾವು ಇವತ್ತು ಅರಣ್ಯಕ್ಕೆ ಹೆಚ್ಚು ಒತ್ತನ್ನು ಕೊಡಬೇಕು.

ಇನ್ನು ಕೃಷಿಯ ಬಗ್ಗೆ ಎಲ್ಲರೂಮಾತನಾಡುತ್ತೇವೆ, ರೈತರ ಮಕ್ಕಳೆಂದು ನಾವೆಲ್ಲ ಹೇಳುತ್ತೇವೆ, ಅದೇನೋ ಮಣ್ಣಿನ ಮಗ ಅನ್ನಬೇಡಿ, ಚಿನ್ನದ ಮಗನೆಂದು ಮಗನೆಂದು ಹುಡುಗಾಟಿಕೆಗೆ ಹೇಳುತ್ತಾ ಚಿನ್ನ ಮಣ್ಣಿನಿಂದ ಬರುತ್ತದೆ, ಆ ಕಾರಣಕ್ಕೆ ಮಣ್ಣಿನ ಮಗನೆಂದರು ಅಷ್ಟೆ, ಚಿನ್ನದ ಮಗನೆಂದರು ಅಷ್ಟೆ. ನಾವು ಕಳೆದ 50 ವರ್ಷಗಳಿಂದ ಕೃಷಿಕರನ್ನು ನಾಶ ಮಾಡಿದ್ದೇವೆ. ಯಾರನ್ನು ದೇಶದ ಬೆನ್ನೆಲುಬು ಈ ಕೃಷಿಕ ಎಂದು ಹೇಳುತ್ತೇವೆ ಅವನ ಬೆನ್ನು ಮೂಳೆಯನ್ನು ಮುರಿದಿದ್ದೇವೆ. ಅವರದು ಇವರದು ಎಂದು ನಾನು ಹೇಳುವುದಿಲ್ಲ, ಎಲ್ಲಾ ಸರ್ಕಾರಗಳ ಹಣೆಬರಹ ಇಷ್ಟಾಗಿದೆ. ಈ ದೇಶದ ಭವಿಷ್ಯವನ್ನು ಬರೆಯುವ ಜನ ಎಲ್ಲಿಯವರೆಗೆ ಹೋಗಿದ್ದಾರೆಂದರೆ, ನಮ್ಮ ಮಾನ್ಯ ವಿಶ್ವನಾಥ ಹಾಗೂ, ಮಾನ್ಯ ಜಯಚಂದ್ರರವರು ಕೂಡ ರೈತರ ಮಕ್ಕಳು; ಎಷ್ಟೋ ಜನ ಜೋಳದ ಮರ ಎನ್ನುವವರು, ರೈತರ ಬಗ್ಗೆ ಬರೆಯುವವರು ಈ ದೇಶದಲ್ಲಿದ್ದಾರೆ. ಇದು ಇವತ್ತಿನ ಪರಿಸ್ಥಿತಿಯ ಘೋರ ದುರಂತ. ರೈತರೆಂದರೆ ಗುರುತಿಲ್ಲ ಹೊಲವೆಂದರೆ ಗುರುತಿಲ್ಲಧ ಬೆಳೆ ಎಂದರೆ ಗುರುತಿಲ್ಲ. ಬಹುಶಃ ದುರ್ದೈವ್ಯವಶಾತ್ ನಾನು

ಹೇಳುತ್ತೇನೆ, ಒಮ್ಮೆ ದೆಹಲಿಯಲ್ಲಿ ಕೃಷಿಮಂತ್ರಿಗಳನ್ನು ಭೇಟಿಯಾಗಿದ್ದೆ. ಅವರು ಏನು ಹೇಳಿದರೆಂದರೆ, ಪಾಟೀಲರೆ, ನಾನೊಬ್ಬ ಕೃಷಿಕರ ಮಗನಾಗಿ ಹೇಳುತ್ತಿದ್ದೇನೆ, ಇಲ್ಲಿ ಎಂತಹವರು ಬಂದಿದ್ದಾರೆಂದರೆ ಜೋಳವೆಂದರೇನು, ಗೋಧಿಯೆಂದರೇನು, ಅದನ್ನು ಹೇಗೆ ಬೆಳೆ ಬೆಳೆಯುತ್ತಾರೆ ಎಂದು ಗೊತ್ತಿಲ್ಲದ ಜನರೇ ಇಲ್ಲಿದ್ದಾರೆ, ಏನುಮಾಡುವುದು ಎಂದು ಹೇಳಿದರು, ಕೇಂದ್ರ ಕೃಷಿ ಮಂತ್ರಿಗಳಾದ ಮಾನ್ಯ ಸೋಂಫಾಲ್‌ರವರು ಹೇಳಿದ ಮಾತನ್ನು ನಾನು ತಮ್ಮ ಮುಂದೆ ಹೇಳುತ್ತಿದ್ದೇನೆ. ಈ ದೃಷ್ಟಿಯಿಂದ ಕೃಷಿಯ ಬಗ್ಗೆ ಹೆಚ್ಚಿನ ಒತ್ತನ್ನು ಕೊಡಿ. ಅದರಲ್ಲೂ ಮಣ್ಣಿನ ರಕ್ಷಣೆಯ ಬಗ್ಗೆ ಹೇಳುವುದಾದರೆ, ಮೊದಲನೆಯದಾಗಿ ರೈತರು ಅರಣ್ಯವನ್ನು ಬೆಳೆಸಬೇಕು, ಅರಣ್ಯ ಬೆಳೆದ ಮೇಲೆ ಮಳೆ ಬರುತ್ತದೆ; ಮಳೆ ಬಂದ ಮೇಲೆ ಮಣ್ಣಿನ ರಕ್ಷಣೆಯನ್ನು ನಾವು ಮಾಡಬೇಕಾಗುತ್ತದೆ. ಆದರೆ ಈಗ ಮಣ್ಣಿನ ರಕ್ಷಣೆಯನ್ನು ಮಾಡುತ್ತಿಲ್ಲ, ಇದು ಅರಣ್ಯದಿಂದ ರಕ್ಷಣೆಯಾಗುತ್ತದೆ. ಇವತ್ತು, ಪರಿಸ್ಥಿತಿ ಏನಾಗಿದೆಯೆಂದರೆ, ಭೂಮಿಯ ಮೇಲ್ಮೈಯೇ ಕೊಚ್ಚಿ ಹೋಗಿಬಿಟ್ಟಿದೆ. 50 ವರ್ಷಗಳಿಂದ ಈ ಕಡೆಗೆ ನಾವು ಲಕ್ಷ್ಯವನ್ನು ಕೊಡುತ್ತಿಲ್ಲ. ಆ ಭೂಮಿಯಲ್ಲಿ ಏನೂಬೆಳೆಯುತ್ತಿಲ್ಲ, ನಾವು ನೂರಾರು ವರ್ಷಗಳಷ್ಟು ಕಷ್ಟಪಟ್ಟರೆ ಮಾತ್ರ ಇವತ್ತು ಆ ಭೂಮಿ ಒಂದು ಹಂತಕ್ಕೆ ಬರುವ ಸ್ಥಿತಿಯಲ್ಲಿದೆ. ಇವತು, ದುರ್ದೈವದಿಂದ ನಾವೇನು ರಸಗೊಬ್ಬರಗಳನ್ನು ಉಪಯೋಗಿಸುತ್ತೇವೆ, ಬಹುಶ: ಆ ರಸಗೊಬ್ಬರವನ್ನು ಉಪಯೋಗಿಸಬಾರದು ಎಂಬ ಕಾಯಿದೆಯನ್ನು ಮಾಡುವ ಕಾಲ ದೂರವಿಲ್ಲ. ಈಗಾಗಲೇ ನಾವು ಸರಿಯಾದ ಎಚ್ಚರಿಕೆಯಿಂದ ರೈತರಿಗೆ ತಿಳುವಳಿಕೆಯನ್ನು ಕೊಡಬೇಕಾಗಿದೆ. ನಾವು ರಸಗೊಬ್ಬರಗಳನ್ನು ಇದೇ ರೀತಿ ಉಪಯೋಗಿಸುತ್ತಾ ಹೋದರೆ ಬಹುಶ: ಭೂಮಿಯು ಬರಡಾಗುತ್ತದೆ. ಆ ರಸಗೊಬ್ಬರವನ್ನು ಉಪಯೋಗಿಸಿಕೊಂಡು ಅವರೆಲ್ಲಾ ಕೃಷಿ ಮಾಡುತ್ತಿದ್ದಾರೆ. ಸುಮ್ಮನೆ ರೈತರನ್ನು ಒಂದು ತಪ್ಪು ದಾರಿಗೆ ಎಳೆದು ಇವತ್ತು ಎಲ್ಲಾ ಭೂಮಿಗಳು ಬರಡಾಗಿದೆ. ಬಹಳ ಕಡೆ ಇವತ್ತು ಬೆಳೆ ಬರುತ್ತಿಲ್ಲ, ನಮ್ಮ ಹಿಂದಿನ ಕಾಲದಲ್ಲಿ ಉಪಯೋಗಿಸುತ್ತಿದ್ದ ಕೊಟ್ಟಿಗೆ ಗೊಬ್ಬರವನ್ನು ಹಾಕುತ್ತಿಲ್ಲ; ಈ ದಿವಸ ಅಲ್ಲಿ ಈ ಬಗ್ಗೆ ರೈತರನ್ನು ತರಬೇತಿ ಮಾಡಬೇಕಾಗಿದೆ. ಇನ್ನೊಂದು ಬಹಳ ಗೊಡ್ಡ ದುರಂತವೆಂದರೆ ಬೆಳೆಗಳಿಗೆ ಈ ಕ್ರಿಮಿನಾಶಕವನ್ನು ಉಪಯೋಗಿಸುತ್ತೇವೆ, ಅದು ಬಹಳ ಭಯಾನಕವಾಗಿದೆ. ಈ ಕ್ರಿಮಿನಾಶಕ ಉಪಯೋಗದ ಪರಿಣಾಮ 'ಲ್ಲಿಯವರೆಗೆ ಬಂದಿದೆ ಎಂದರೆ ಡಿಡಿಟಿಯ ಅಂಶ ಸಮುದ್ರದ ನೀರಿನಲ್ಲಿ ಸಿಕ್ಕಿದೆಯಂತೆ; ಅದು ನಿಷೇಧವಾಗಿದ್ದರೂ ಕೂಡ ಅದರ ಉಪಯೋಗ ಇನ್ನೂ ಸಹ ಬಳಕೆಯಲ್ಲಿದೆ. ಈ ಕ್ರಿಮಿನಾಶಕದ ಉಪಯೋಗ ಎಲ್ಲಿಯವರೆಗೆ ಹೋಗಿದೆ ಎಂದರೆ ನಾವು ಉಪಯೋಗಿಸತಕ್ಕಂತಹ ಆಹಾರದಲ್ಲಿ ಅದರ ಅಂಶ ಎಷ್ಟೇಷ್ಟು ಇದೆ ಎಂದು ಇಲ್ಲಿ ಹೇಳುತ್ತಾರೆ. ಹಾಲಿನಲ್ಲಿ ಶೇಕಡ 0.2, ರಷ್ಟು ಇದೆ, ಕೋಳಿಮೊಟ್ಟೆಯಲ್ಲಿ ಶೇ 0.4 ರಷ್ಟು, ಬೆಣ್ಣೆಯಲ್ಲಿ ಶೇ 0.1 ಗೋದಿಳನಲ್ಲಿ ಶೇಕಡ 0.4, ಕಡ್ಲೆಕಾಯಿ 5 ಪರಸೆಂಟ್, ಕಾಳುಗಳು 5 ಪರ್‌ಸೆಂಟ್, ಕೊಬ್ಬರಿಎಣ್ಣೆ 9 ಪರ್‌ಸೆಂಟ್, ಎಳ್ಳೆಣೆ 10 ಪರ್‌ಸೆಂಟ್ ಇಷ್ಟೊಂದು ಕ್ರಿಮಿನಾಶಕದ ಅಂಶ ನಾವು ತೆಗೆದುಕೊಳ್ಳತಕ್ಕಂತಹ ಆಹಾರದಲ್ಲಿದೆ. ಇವತ್ತು ಇದರಿದ ಯಾರಿಗೆ ಕ್ಯಾನ್ಸರ್ ಬರುತ್ತದೆ, ಯಾರಿಗೆ ಬರುವುದಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ಲೆಕ್ಕವೇ ಇಲ್ಲ, ಪ್ರಾಮಾಣಿಕವಾಗಿ ಇರತಕ್ಕಂತಹ ಮನೆಯಲ್ಲಿರುವ ಹೆಣ್ಣುಮಕ್ಕಳಿಗೂ ಸಹ ಬರುತ್ತದೆ. ಇದು ಇವತ್ತಿನ ದಿವಸ ನಮ್ಮ ಮುಂದೆ ಇರತಕ್ಕಂತಹ ಭಯಾನಕ ಚಿತ್ರ. ಈ ನಿಟ್ಟಿನಲ್ಲಿ ರೈತರಿಗೆ ತಿಳಿವಳಿಕೆಯನ್ನು ಕೊಡುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಈ ಕ್ರಿಮಿನಾಶಕಗಳನ್ನು

ರೈತರು ಉಪಯೋಗಿಸಲು ಯಾವ ರೀತಿ ಮುನ್ನೆಚ್ಚರಿಕೆ ಕೊಡಬೇಕೆಯನ್ನು ನಿಯಮವನ್ನುವ ಹಾಕಿಕೊಂಡಿದ್ದೀರಿ? ಇದನ್ನು ಹಂತಹಂತವಾಗಿ ಕಡಿಮೆ ಮಾಡಬೇಕೆನ್ನುವ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಎನ್ನುವುದನ್ನು ಇಲ್ಲಿ ತಾವು ಹೇಳಬೇಕಾಗುತ್ತದೆ. ಹೀಗೆ ಕ್ರಿಮಿನಾಶಕಗಳ ಬಳಕೆಯನ್ನು ನಿಷೇಧ ಮಾಡಿದಂತಹ ದೇಶಗಳ ಹೆಸರುಗಳನ್ನು ಇಲ್ಲಿ ಹೇಳುತಾರೆ. ಅವರೆಲ್ಲ ಅದರ ಬಳಕೆಯನ್ನು ಬಿಟ್ಟರೂ ಕೂಡ ಇನ್ನು ನಮ್ಮದೇಶನಲ್ಲಿ ಮುಂದುವರಿದೇ ಇದೇ. ಅಮೇರಿಕಾ, ಇಂಗ್ಲೆಂಡ್, ಜರ್ಮನಿ, ಸ್ವೀಡನ್ ಕೆನಡಾ, ಇಟಲಿ, ರಷ್ಯಾ, ನ್ಯೂಜಿಲೆಂಡ್, ಯೂರೋಪ್, ಆಫ್ರೀಕಾ ಇಲ್ಲಿ ಎಲ್ಲಾ ಬಿಹೆಚ್‌ಸಿ, ಡಿಡಿಟಿ ಮುಂತಾದ ಕ್ರಮಿನಾಶಕಗಳ ಉಪಯೋಗವನ್ನು ಬ್ಯಾನ್ ಮಾಡಿದ್ದಾರೆ. ಈ ಎಲ್ಲಾ ಕ್ರಿಮಿನಾಶಕಗಳ್ಳನ್ನು ವಿದೇಶದಲ್ಲಿ ಬ್ಯಾನ್ ಮಾಡಿದ್ದಾರೆ, ನಮ್ಮಲ್ಲಿ ಡಿಡಿಟಿ ಬ್ಯಾನ್ ಮಾಡಿದ್ದಾರೆಂದು ಹೇಳಿದರೂ ದುರ್‌ದೈವವಶಾತ್ ಉಳಿದ್ದೆಲ್ಲವನ್ನು ಹೇರಳವಾಗಿ ಉಪಯೋಗ ಮಾಡುತ್ತಿದ್ದೇವೆ. ಬಹುಶಃ ರೈತರಿಗೆ ಉಪಯೋಗವಾಗುವಂತಹ ಈ ಒಂದು ಕೀಟಗಳು, ಪಕ್ಷಿ ಸಂಕುಲಗಳನ್ನೆಲ್ಲಾ ನಾವು ಹಾಳುಮಾಡಿದ್ದೇವೆ. ನಮ್ಮ ಕಡೆ ಇವತ್ತಿನ ದಿವಸ ಕಾಗೆಗಳು ಕಾಣುತ್ತಿಲ್ಲ. ಹಿಂದೆ ನಾವು ಚಿಕ್ಕವರಿಹಾದ್ದಾಗ ಹೊಲಕ್ಕೆ ಕಾಯುವುದಕ್ಕೆ ಹೋದರೆ ಕಾಗೆಗಳನ್ನು ನೋಡುತ್ತಿದ್ದೇವು, ಇವತ್ತು ಆ ಕಾಗೆಗಳೇ ಇಲ್ಲ. ನಮ್ಮ ಕಡೆ ಈ ಬ್ರಾಹ್ಮಣರು ಕಾಯದಪಿಂಡ ಎಂದು ಮಾಡುತ್ತಿದ್ದಾರೆ. ಅದನ್ನು ಕಾಗೆಯು ತಿಂದ ಮೇಲೆ ನಂತರ ಊಟ ಮಾಡುತ್ತಿದ್ದರು ಇವತ್ತು ಕಾಗೆಗಳು ಅದನ್ನು ತಿನ್ನದೆ ಅವರು ಊಟವನ್ನೇ ಮಾಡುತ್ತಿಲ್ಲ. ಈ ರೀತಿ ಇವತ್ತು ಪ್ರಾಣಿಗಳು, ಪಕ್ಷಿಗಳು ಹೋದವು, ಇವತ್ತು ಅರಣ್ಯದಲ್ಲಿ ನೋಡುವುದಕ್ಕೆ ಸಿಗದಂತಹ ಪ್ರಾಣಿಗಳ ನಾಶವಾಗಿದೆ. ನಾನು ಹಿಂದೆ ಎರಡು ತಿಂಗಳು ಅರಣ್ಯ ಸಚಿವನಾಗಿದ್ದೆ, ಆಗ ಎಲ್ಲಾ ಕಡೆ ಕೇಳಿದೆ 'ಹನಿಯಾ' ಎಂದರೆ ಎನು ಅವರು ಕೇಳುತ್ತಾರೆ. ಆ ಪ್ರಾಣಿ ಯಾವುದು ಎನ್ನುವುದು ಸ್ವಂತಃ ಅರಣ್ಯ ಇಲಾಖೆಯವರಿಗೇ ಗೊತ್ತಿಲ್ಲ, ಹೀಗೆ ಪ್ರಾಣಿಗಳು ನಶಿಸಿಹೋಗಿದೆ. ಈ ಪಕ್ಷಿಗಳಲ್ಲಿ ಬಾವುಲಿಗಳು ಇರುತ್ತವೆ, ಅವು ರಾತ್ರಿಯೆಲ್ಲಾ ಓಡಾಡಿ ರೈತರ ಹೊಲಗಳಲ್ಲಿ ಕೀಟಗಳನ್ನು ತಿನ್ನುತಿದ್ದವು. ಅವನ್ನು ಹೊಡೆದು ಸಾಯಿಸಿ ನಾಶಮಾಡಿದೆವು. ಈ ಬಗ್ಗೆ ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ; ನಮ್ಮ ಹೊಲದಲ್ಲಿ ಜೋಳವನ್ನು ಹಾಕಿದ್ದೆವೆ, ಜೋಳವನ್ನು ಹಾಕಿದ್ದಾಗ ಅದು ತೆನೆಗೆ ಬಂದಿತ್ತು. ಕಾಳುಗಳಿಗೆ ಕೀಟ ಬಿದ್ದಿದ್ದವು. ಈ ಕಾಳುಗಳಿಗೆ ಪುಡಿಯನ್ನು ಹೊಡಿಯುತ್ತಿದ್ದೇವೆ. ಆ ಪುಡಿಯನ್ನು ತಿಂದು ಹಕ್ಕಿಗಳು ಸಾಯುತ್ತಿದ್ದವು. ಆ ಮೇಲೆ ನಾನು ಈ ಪುಡಿಯನ್ನು ಹೊಡೆಯುವುದನ್ನು ಬಿಟ್ಟುಬಿಡಿ ಎಂದು ಹೇಳಿದೆ. ಆ ಹಕ್ಕಿಗಳು ಆ ಕೀಟಗಳನ್ನು ತಿಂದು ಹೋದವು, ಕಾಳನ್ನು ತಿನ್ನಲೇ ಇಲ್ಲ; ಹೀಗೆ ಸೃಷ್ಟಿ ತನ್ನನ್ನು ತಾನೇ ಸೃಷ್ಟಿ ಮಾಡತಕ್ಕಂತಹ ಈ ಒಂದು ವ್ಯವಸ್ಥೆಯನ್ನು ಹಾಳು ಮಾಡಿದೆವು. ಇನ್ನು ಮುಂದೆ ಕರಿನಾಗರ, ಹಾವು ಮುಂತಾದ ಸರ್ಪಗಳನ್ನು ನಾವು ಕಾಣುವುದಕ್ಕೆ ಸಾಧ್ಯವಿಲ್ಲ, ಅವೆಲ್ಲಾ ನಾಶವಾಗಲು ಕಾರಣ ನಾವು ಇವತ್ತು ಸೃಷ್ಟಿಯ ವಿರುದ್ಧ ರೈತರನ್ನು ತಪ್ಪುದಾರಿಗೆ ಎಳೆದೆವು; ಅವು ಇವತ್ತು ದೋಷಯುಕ್ತವಾಗಿದೆ. ಈ ಕಾರಣದಿಂದ ಇದೆಲ್ಲವನ್ನು ಸರಿಪಡಿಸುವುದಕ್ಕೆ ತಮ್ಮ ಕಾರ್ಯಕ್ರಮಗಳೇನು ಎನ್ನುವುದನ್ನು ಈ ದಿವಸ ಹೇಳಬೇಕಾಗುತ್ತದೆ.

ಶ್ರೀ ಡಿ.ಆರ್.ಪಾಟೀಲ್:- ಮಾನ್ಯ ಎಸ್.ಪಾಟೀಲರೆ, ತಾವು ಅಧಿಕಾರದಲ್ಲಿದ್ದಾಗ ಎಲ್ಲಾ ಪರಿಸ್ಥಿತಿಗಳು ಇದ್ದವು, ಇದನ್ನು ಎದುರಿಸುವುದಕ್ಕೆ ತಾತವು ಏನು ಕಾರ್ಯಕ್ರಮವನ್ನು ಹಮ್ಮಿ

ಕೊಂಡಿದ್ದಿರಿ ಎನ್ನುವುದನ್ನು ಸ್ವಲ್ಪ ಹೇಳಿದರೆ ನಮಗೆ ಮಾರ್ಗದರ್ಶನವಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಡಿ.ಆರ್. ಪಾಟೀಲರೆ, ದಯವಿಟ್ಟು ಕೇಳಿ ನಾನು ಹೇಳುತ್ತೇನೆ. ಈ ಬಗ್ಗೆ ಕಾರ್ಯಕ್ರಮವನ್ನು ನಾವು ಒಂದು ವೇಳೆ ಹಾಕಿಕೊಳ್ಳದಿದ್ದರೂ ನೀವು ಹಾಕಿಕೊಳ್ಳಬಾರದು ಒಂದು ಏನೂ ಇಲ್ಲ. ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು, ಇಲ್ಲವೆಂದಲ್ಲ, ಈ ವಿಚಾರದ ಬಗ್ಗೆ ಕೃಷಿ ವಿಶ್ವವಿದ್ಯಾಲಯದಲ್ಲಿ ಒಂದು ವಿಭಾಗವನ್ನು ತೆರೆದ್ದೇವು. ಬಹುಶಃ ನಾವು ಅದನ್ನು ಮಾಡಿದೆವು, ಅದು ಒಮ್ಮೆಲೆ ಆಗತಕ್ಕದ್ದಲ್ಲ, ನಾವಿದ್ದಾಗ ಅರಣ್ಯ ಸಂಬಂಧಿಸಿದ ಬಹಳ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವು. ಅದಕ್ಕೆ ಎಷ್ಟು ಒತ್ತನ್ನು ಕೊಡಬೇಕೋ ಅಷ್ಟು ಕೊಟ್ಟಿಲ್ಲವೆಂಬುದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಅರಣ್ಯಕ್ಕೆ ಸಂಬಂಧಿಸಿದಂತೆ 1983ರಿಂದ ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಿಂದ ಹೆಚ್ಚು ಒತ್ತನ್ನು ಕೊಟ್ಟಿದೆವು. ನಾನು ಅರಣ್ಯ ಮಂತ್ರಿಯಿದ್ದಾಗ ಒಮ್ಮೆ ಅರಣ್ಯಭವನಕ್ಕೆ ಕೂಡ ಹೋಗಿದ್ದೆ. ಅರಣ್ಯಭವನದ ಮೇಲೆ ನಿಂತು ಬೆಂಗಳೂರನ್ನು ನೋಡಿದೆ; ಆಗ ಅದು ಬೆಂಗಳೂರನ್ನು ಅಡಿವಿಯಲ್ಲಿ ಕಟ್ಟಿದ್ದಾರೇನು ಎಂದು ಅನಿಸಿತು. ಇಲ್ಲ ದೇ ಹೋಗಿದ್ದರೆ ಇವತ್ತು ನಾವೆಲ್ಲಾ ಉಸಿರುಕಟ್ಟಿ ಸಾಯುತ್ತಿದ್ದೆವು. ಅದರ ಕೀರ್ತಿ ಬರೀ ನಮಗೆ ಹೋಗಬಾರದು, ಬಹುಶ: ಮಹಾರಾಜರ ಕಾಲದಿಂದಲೂ ಅದನ್ನು ಮಾಡಿಕೊಂಡು ಬಂದಿದ್ದಾರೆ. ದುರ್‌ದೈವವಶಾತ್, ನಾನು ಅರಣ್ಯ ಮಂತ್ರಿಯಾಗಿದ್ದಾಗ ಹೆಚ್.ಡಿ.ಕೋಟೆಗೆ ಹೋದೆ, ಸುಮಾರು 40 ಕಿ.ಮಿ.ದೂರ ನನ್ನ ಕಾರು ತೆಗೆದುಕೊಂಡು ಹೋದೆ. ಮಹಾರಾಜರ ನಂತರ ಹೊಸ ಗಿಡಗಳನ್ನು ಬೆಳೆಸಿದ್ದು ಎಡಬಲಕ್ಕೆ ಕಾಣದೆ ಇದ್ದುದರಿಂದ ಎಲ್ಲರನ್ನು ಬೈದು ಬಂದೆ. ಇವತ್ತು ಎಲ್ಲಾ ಗಿಡಗಳನ್ನು ಕಡಿದಾದ ಮೇಲೆ ಬರಿದಾದ ರಸ್ತೆಯನ್ನು ನಾವು ಕಾಣುತ್ತಿದ್ದೇವೆ. ಇವತ್ತು ನಾವು ಅರಣ್ಯೀಕರಣ ಮಾಡಿಚ್ಚೆಚ್ಚು ಗಿಡಗಳನ್ನು ಬೆಳೆಸದೇ ಇದ್ದರೆ, ಅದರ ಹಿಂದೆ ಇವುಗಳೆಲ್ಲಾ ನಾಶವಾಗುತ್ತವೆ, ಭೂಮಿಯಲ್ಲಿ ನೀರು ಹೋಗುತ್ತದೆ, ಬೆಳೆ ಒಣಗುತ್ತದೆ, ಆಮೇಲೆ ಯಾವುದೂ ಉಳಿಯುವುದಿಲ್ಲ. ಆಗ ನಾವು ಏನು ಮಾಡಬೇಕಾಗುತ್ತದೆ? ಈ ಕಾರಣದಿಂದ ಇವತ್ತು ಅರಣ್ಯೀಕರಣದ ಬಗ್ಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಅದಕ್ಕೆ ಹೆಚ್ಚು ದುಡ್ಡು ಕೊಡಿ. ಒಬ್ಬ ದಕ್ಷ, ಪ್ರಾಮಾಣಿಕ ಹಿರಿಯ ಸಚಿವರಿಗೆ ಆ ಖಾತೆಯನ್ನು ಕೊಟ್ಟಿದ್ದೀರಿ. ಅದರ ಬಗ್ಗೆ ಅವರಿಗೆ ಮನಸ್ಸಿದೆಯೋ, ಇಲ್ಲವೋ, ಅವರಿಗೆ ಬೇರೆ ಖಾತೆ ಬೇಕಾಗಿತ್ತೋ. ಏನೋ, ಅವರು ಇದರಲ್ಲಿ ಏನನ್ನೂ ಹೇಳಿ ಬರೆಸಿಲ್ಲ. ಅವರು ಇದ್ದರೆ ಅವರಿಗೇ ಹೇಳಬೇಕೆಂದು ಮಾಡಿದ್ದೆ. ಇನ್ನೂ ಕೆಲವರಿಗೆ ಅವರ ಖಾತೆಗಳು ಅವರ ಮನಸ್ಸಿಗೆ ಬಂದ ಹಾಗೆ ಕಾಣುವುದಿಲ್ಲ. ಪಕ್ಷಭೇದ ಮರೆತು ನಾನು ಮಾತನಾಡುತ್ತೇನೆ; ದೇಶದ ಮುಂದಿನ ಬಯಾನಕ ಚಿತ್ರದ ದೃಷ್ಟಿಯಿಂದ ಅರಣ್ಯೀಕರಣಕ್ಕೆ ಮೊದಲನೆಯದಾಗಿ ಹೆಚ್ಚು ಒತ್ತು ಕೊಡಬೇಕಾಗಿದೆ. ಇದಕ್ಕೆ ಹೆಚ್ಚು ಒತ್ತು ಕೊಡಿ. ಬಜೆಟ್‌ನಲ್ಲಿ ಹೆಚ್ಚು ದುಡ್ಡು ಕೊಡಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈಗಾಗಲೇ ಅಲ್ಪಸ್ವಲ್ಪ ದುಡ್ಡು ಇಟ್ಟಿದ್ದಾರೆ, ಇನ್ನೂ ಹೆಚ್ಚು ಕೊಡಬೇಕಾಗಿದೆ. ದಯವಿಟ್ಟು ತಾವು ಅರಣ್ಯೀಕರಣದ ಬಗ್ಗೆ ಹೆಚ್ಚಿನ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಅದರಿಂದ ಪರಿಸರ ಉಳಿಯುತ್ತದೆ, ಉಳಿದೆಲ್ಲವೂ ಬರುತ್ತದೆ. ಪರಿಸರದ ಬಗ್ಗೆ ಇದರಲ್ಲಿ ಏನೂ ಹೇಳಿಲ್ಲ. ಪರಿಸರ ಒಷ್ಟು ಹಾಳಾಗಿದೆ ಎಂದರೆ ಮನುಷ್ಯ ಬದುಕಲು ಕಷ್ಟವಿದೆ. ಬೆಂಗಳೂರಿನಲ್ಲಿ ನಾವು ಸುತ್ತಾಡಿ ಬಂದೆವು ಎಂದರೆ ಅದು ತಿಳಿಯುತ್ತದೆ. ಒಬ್ಬನು

ಒಂದು ಪ್ಯಾಕ್ ಸಿಗರೇಟ್ ಸೇದುತ್ತಾನೆ. ಇಲ್ಲಿ ಯಾವುದಕ್ಕೂ ಅಡ್ಡಿಯಿಲ್ಲ. ಈ ಕಾರಣದಿಂದ ಎಲ್ಲರಿಗೂ ಕ್ಯಾನ್ಸರ್ ಬರಲು ಪ್ರಾರಂಭವಾಗಿದೆ. ಈ ರೀತಿಯ ಎಲ್ಲಾ ಅವ್ಯವಸ್ಥೆಯನ್ನು ನಾವು ಮಾಡಿಕೊಂಡು ಆ ಪರಿಸ್ಥಿಯಿಂದ ಹಾಳಾಗಿದ್ದೇವೆ. ಆ ಕಾರಣದಿಂದಾಗಿ ದಯವಿಟ್ಟು ತಾವು ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರಾದೇಶಿಕ ತಾರತಮ್ಯದ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಅದನ್ನು ನಿವಾರಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ ದುರ್ದೈವವೆಂದರೆ ಮೊದಲೇ ಹಾದಿ ತಪ್ಪಿದ್ದಾರೆ. ಉತ್ತರ ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆ ಒಂದನ್ನು ಮಾಡಿ ನ್ಯಾಯ ಹಚ್ಚಿಬಿಡುವುದೆಂದು ಮಾಡಿದ್ದಾರೆ. ನಮ್ಮ ಪಕ್ಷದ ನಾಯಕರು ಹೇಳಿದ ಹಾಗೆ ನಮ್ಮದನ್ನೇ ಅವರು ಹೇಳಿದ್ದಾರೆ. ನಾನು ಏನು ಹೇಳುತ್ತೇನೆ ಎಂದರೆ ತಾವು ದಯವಿಟ್ಟು ಎಲ್ಲಾ ಜಿಲ್ಲೆಗಳ ಸರ್ವೆ ಮಾಡಿಸಿ. ಯಾವ ಜಿಲ್ಲೆ ಅತಿ ಹಿಂದುಳಿದಿದೆ, ಆ ಜಿಲ್ಲೆಯನ್ನು ಸಮಗ್ರ ಅಭಿವೃದ್ಧಿ ಮಾಡಿ. ಬಳ್ಳಾರಿ ಜಿಲ್ಲೆಗಿಂತ ಹೆಚ್ಚು ಹಿಂದುಳಿದಿರುವುದು ನನ್ನ ಮುಂಡರಗಿ ತಾಲ್ಲೂಕು. ಗದಗ್ ಜಿಲ್ಲೆ, ಬೀದರ್ ಜಿಲ್ಲೆ ಇವುಗಳನ್ನೂ ಸರ್ವೆ ಮಾಡಿಸಿ. ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಯನ್ನು ರಾಜಕೀಯವಾಗಿ ಮಾಡುತ್ತಿದ್ದೇವೆ ಎಂದರೆ ನಮ್ಮದೇನೂ ತಕರಾರಿಲ್ಲ, ಆ ಮಾತ್ತು ಬೇರೆ. ಮುಂದೆ ಎಲೆಕ್ಷನ್ ಬರುತ್ತದೆ, ಅದಕ್ಕಾಗಿ ನಾವು ಮಾಡಿದ್ದೇವೆ ಎಂದು ನೀವು ಉತ್ತರ ಕೊಟ್ಟರೆ ಅದಕ್ಕೂ ನಮ್ಮದೇನೂ ತಕರಾರಿಲ್ಲ. ಆದರೆ ನೀವು ಪ್ರಾಮಾಣಿಕರಾಗಿ ಹಿಂದುಳಿದಂಥ ಜಿಲ್ಲೆಗಳನ್ನು ಅಭಿವೃದ್ಧಿ ಮಾಡುತ್ತೇವೆ ಎನ್ನುವ ವಿಚಾರ ತಲೆಯಲ್ಲಿದ್ದರೆ ಯಾವುದೆ ಒಂದು ಜಿಲ್ಲೆಯನ್ನು ತೆಗೆದುಕೊಳ್ಳುವಾಗ, ತಾವು ದಯವಿಟ್ಟು ಅತಿ ಹಿಂದುಳಿದ ಜಿಲ್ಲೆ ಯಾವುದೆಂದು ಸರ್ವೆ ಮಾಡಿಸಿ. ತಾವು ಕೆಲವು ಸೂತ್ರಗಳನ್ನು ಹೇಳಿದ್ದೀರಿ. ಇಂಬ್ಯಾಲೆನ್ಸ್ ಆಗಿದ್ದರೆ ಸರಿ ಮಾಡಸುತ್ತೇವೆ, ಇಂಥ ಸೂತ್ರಗಳನ್ನು ಹೇಳಿದ್ದೀರಿ. ಆ ಸೂತ್ರದ ಪ್ರಕಾರ ಸರ್ವೆ ಮಾಡಿಸಿ; ಆ ಜಿಲ್ಲೆಯನ್ನೇ ತೆಗೆದುಕೊಳ್ಳಿ. ಬೀದರ್ ಬಂದರೆ ಬೀದರನ್ನೇ ತೆಗೆದುಕೊಳ್ಳಿ, ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಯಾವದೋ ಒಂದು ಕಾರಣಕ್ಕಾಗಿ ಒಂದು ಜಿಲ್ಲೆಗೆ ಮೂರು ಸಾವಿರ ಮುನ್ನೂರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿ ದುರ್ದೈವದಿಂದ ಹಾಗೆ ಮಾಡಿದರೆ ಅದರಿಂದ ಖಂಡಿತವಾಗಿ ಮತ್ತಷ್ಟು ಪ್ರಾದೇಶಿಕ ಅಸಮಾನತೆಯಾಗುತ್ತದೆ ಎನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸಂಸದೀಯ ಸಚಿವರಾದ ಚಂದ್ರೇಗೌಡರು, ಉತ್ತರ ಕರ್ನಾಟಕ ಎಂದು ಹೇಳಬೇಡಿ, ಕರ್ನಾಟಕದ ಉತ್ತರ ಭಾಗ ಎಂದು ಹೇಳಿ ಎಂದು ಹೇಳಿದರು. ನಮ್ಮ ಕಡೆ ಒಂದು ಗಾದೆ ಇದೆ. ಅಳಿಯ ಅಲ್ಲ, ಮಗಳ ಗಂಡ ಎಂದು ಹಾಗೆ ಎಲ್ಲವೂ ಒಂದೇ. ನಾವೇನೂ ಬೇರೆ ರಾಜ್ಯವಾಗಬೇಕು ಎನ್ನುವವರಲ್ಲ. ನಾವು ಅದಕ್ಕೆ ವಿರೋಧಿಗಳು . ಈ ರಾಜ್ಯ ಒಡೆಯುವುದಕ್ಕೆ ನಾವು ಖಂಡಿತವಾಗಿ ವಿರೋಧಿಗಳು ಅದು ಸಾಧ್ಯವಿಲ್ಲದ ಮಾತತು. ಕೊಡಗಿನವರು ಇರಬಹುದು, ನಾವಿರಬಹುದು, ನಾವೆಲ್ಲ ಅಖಂಡವಾದ ಕರ್ನಾಟಕ ಕಟ್ಟುವುದಕ್ಕೆ ಹೋರಾಡಿದಂಥ ಜನ. ಇವತ್ತು ಈ ರಾಜ್ಯ ಬದಲಾವಣೆಯಾಗಲು ಸಾಧ್ಯವಿಲ್ಲ. ಆದರೆ ಏನು ತಾಕತಮ್ಯವಾಗಿದೆ ಅದನ್ನು ಸರಿಮಾಡಬೇಕು.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಪಾಟೀಲರು ಕೊಡಗಗು ರಾಜ್ಯ ಒಡೆಯಲು ಹೊರಟಿದ್ದಾರೆ ಎಂದು ಹೇಳಿದರು. ಕೊಡಗಿನಲ್ಲೂ ಅದೇ ಸಮಸ್ಯೆ.

ಕೊಡಗಿನಲ್ಲೂ ಕೂಡ ತಾರತಮ್ಯವಿರುದರಿಂದ ಆ ರೀತಿ ಹೋರಾಟ ಮಾಡುತ್ತೇವೆ. ಅದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್: ನಾನು ಹೇಳಿದ್ದೂ ಅದನ್ನೇ. ಅಲ್ಲೂ ತಾರತಮ್ಯವಾಗಿದೆ ಎನ್ನುವುದರಿಂದ ಅವರ ಕೂಗು ಬಂದಿದೆ ಎಂದು ಹೇಳಿದೆ. ನಾವೆಲ್ಲ ಒಂದುಗೂಡಿದ್ದೇವೆ. ಕನ್ನಡಿಗರೆಲ್ಲ ಏಕ ಆಗಿದ್ದೇವೆ. ಹೊರಗೆ ಹೋದಂಥ ನಮ್ಮ ಕನ್ನಡ ಪ್ರದೇಶಗಳನ್ನು ಹೇಗೆ ತಗೆದುಕೊಳ್ಳುತ್ತೇವೆ ಎನ್ನುವುದನ್ನು ನೀವು ಇದರಲ್ಲಿ ಹೇಳಿಲ್ಲ. ನಮ್ಮ ಬಹಳ ಪ್ರದೇಶಗಳು ಹೊರಗೆ ಹೋಗಿದೆ. ಹೋರಾಟ ಮಾಡಿ ಅದನ್ನೂ ಕೂಡಿಸಬೇಕು, ಒಡೆಯುವಂಥ ಪ್ರಶ್ನೆಯೇ ಅಲ್ಲಿ ಇಲ್ಲ. ಅದು ಕೊಡಗು ಇರಬಹುದು, ಉತ್ತರ ಕರ್ನಾಟಕ ಇರಬಹುದು, ನಾವೆಲ್ಲರೂ ಕರ್ನಾಟಕದ ಜನರು, ಕರ್ನಾಟಕ ಮಾತೆ ಭುವನೇಶ್ವರಿಯ ಮಕ್ಕಳು. ಆದರೆ ಈ ರೀತಿಯಾದ ಅಸಮಾನತೆ ಬಂದಾಗ ಆ ಕೂಗು ಬರುತ್ತದೆ. ಅದು ಬರದ ಹಾಗೆ ತಾವು ನೋಡಿಕೊಳ್ಳಿ. ಮಾನ್ಯ ನಂಜಯ್ಯನಮಠ್‌ರವರು ಇದರ ಬಗ್ಗೆ ಬಹಳ ಚೆನ್ನಾಗಿ ಬೆಳಕು ಚೆಲ್ಲಿದರು. ಈಗ ಬಳ್ಳಾರಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಹೊರಟಿದ್ದೀರಲ್ಲ, ದಯವಿಟ್ಟು ಅದನ್ನು ಹಿಂದಕ್ಕೆ ತೆಗೆದುಕೊಳ್ಳಿ. ಸರ್ವೆ ಮಾಡಿಸಿ, ಅದೇ ಬಳ್ಳಾರಿ ಜಿಲ್ಲೆ ಅತಿ ಹಿಂದುಳಿದದಿರುವ ಪ್ರದೇಶ ಎಂದು ಕಂಡು ಬಂದರೆ ಬಳ್ಳಾರಿಗೇ ಆದ್ಯತೆಯನ್ನು ಕೊಡಿ, ನಾವು ಬೇಡ ಎನ್ನುವುದಿಲ್ಲ. ಇಲ್ಲದಿದ್ದರೆ ಬಳ್ಳಾರಿಗೆ ಕೊಟ್ಟಹಾಗೆ ಎಲ್ಲ ಜಿಲ್ಲೆಗಳಿಗೂ ಕೊಡಿ. ಈ ಪ್ರಾದೇಶಿಕ ತಾರತಮ್ಯಗಳನ್ನು ದಯವಿಟ್ಟು ಸರಿಡಿಸಬೇಕು ಎಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮಹಿಳೆಯರ ಬಗ್ಗೆ ಹೇಳಬೇಕೆಂದರೆ, ಶ್ರೀಮತಿ ಮೋಟಮ್ಮನವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾಗಿದ್ದಾರೆ. ಮಹಿಳೆಯರ ಬಗ್ಗೆ ಇಲ್ಲಿ ಏನು ಹೇಳಿದ್ದೀರಿ ಎಂದರೆ, ತಾವು ಮೊದಲೇ ಒಂದು ದೊಡ್ಡ ತಪ್ಪು ಮಾಡಿಬಿಟ್ಟಿದ್ದೀರಿ; ಅವಸರವಾಯಿತು, ಹೆಣ್ಣುಮಕ್ಕಳಿಗೆ ಅವಕಾಶ ಕೊಡಲು ಆಗಲಿಲ್ಲ ಎಂದು ತಾವೇ ಹೇಳಿಕೊಂಡಿದ್ದೀರಿ. ರಾಜ್ಯದಲ್ಲಿ ಪ್ರತಿಭಾನ್ವಿತ ಮಹಿಳೆಯರು ಇಲ್ಲವೇ?

ಶ್ರೀಮತಿ ರಾಣಿ ಸತೀಶ್: ಅವಸರವಾಯಿತು, ಕೊಡಲಿಲ್ಲ ಎಂದು ಅಲ್ಲ. ಕೊಡುವಾಗ ಅದಕ್ಕೆ ಸರಿಯಾದಂಥ ಮಹತ್ವ ಕೊಟ್ಟು, ಅದು ಸರಿಯಾಗಿ ಅವರಿಗೆ ಸಲ್ಲಬೇಕು ಎನ್ನುವುದು ನಮ್ಮ ಸದುದ್ದೇಶ.

ಶ್ರೀ ಎಸ್.ಎಸ್.ಪಾಟೀಲ್: ಅವಸರವಾಯಿತು, ಎಲ್ಲವನ್ನೂ ನೋಡಲಿಕ್ಕೆ ಆಗಲಿಲ್ಲ ಎಂದೇ ಹೇಳಿರುವುದು. ಪೇಪರ್‌ನವರು ತಪ್ಪು ಬರೆದಿದ್ದರೆ ಅವರನ್ನೆ ಕೇಳೋಣ. ಒಂದೇ ದಿವಸದಲ್ಲಿ ರಾಜ್ಯದ ಎಲ್ಲಾ ಮಾಹಿತಿ ತರಿಸಲು ಆಗಲಿಲ್ಲ, ಆ ಕಾರಣದಿಂದ ಅವಸರದಿಲ್ಲ ಮಾಡಿದ್ದು ಎಂದು ಹೇಳಿದ್ದೀರಿ.

ಶ್ರೀಮತಿ ಮತಿ ರಾಣಿ ಸತೀಶ್: ಮಹಿಳೆಯರು ಇಲ್ಲ ಅಲ್ಲ. ಮಾಹಿತಿಗೆ ನಮಗೆ ಕಾಲಾವಕಾಶ ಕಡಿಮೆಯಾಯಿತು ಎಂದು ಹೇಳಿರುವುದು.

ಶ್ರೀ ಎಸ್.ಎಸ್.ಪಾಟೀಲ್: ದಯವಿಟ್ಟು ಹಾಗೆ ಮಾಡಬೇಡಿ, ಹೆಣ್ಣುಮಕ್ಕಳಿಗೂ ಸಮಾನವಾಗಿ ಅವಕಾಶ ಕೊಡಬೇಕು. ನಾನು ಶ್ರೀಮತಿ ಮೋಟಮ್ಮನವರಿಗೆ ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ

ಸಚಿವರಿಗೆ ಹೇಳುತ್ತೇನೆ, ಮಹಿಳೆಯರಿಗೆ ತಾವು ಮಾಡದಿದ್ದರೂ ಸರಿ, ಮಹಿಳೆಯರೆಲ್ಲಾ ಶಕ್ತರಾಗಿದ್ದಾರೆ, ಅವರು ತಮಗೇನು ಬೇಕೋ ಅದನ್ನು ಮಾಡಿಕೊಳ್ಳುತ್ತಾರೆ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಕನಿಷ್ಠ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಮಹಿಳೆಯರು ಮರ್ಯಾದೆಯಿಂದ ಬಹಿರ್ದೆಸೆಗೆ ಹೋಗುವಂಥ ವ್ಯವಸ್ಥೆ ಮಾಡಲು ಆಗಲಿಲ್ಲ. ಹಳ್ಳಿಗಳಲ್ಲಿ ನಮ್ಮ ಮಹಿಳೆಯರ ಮಾನ-ಮರ್ಯಾದೆ ಹೋಗುತ್ತಿದೆ. ದಯಮಾಡಿ ಅದಕ್ಕೆ ಮೊದಲ ಆದ್ಯತೆ ಕೊಟ್ಟು, ಅದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ. ಐದು ವರ್ಷಗಳಿಂದ ನಾನು ನನ್ನ ಜಿಲ್ಲೆಯಲ್ಲಿ ಪ್ರಯತ್ನ ಪಟ್ಟರೂ ಕೂಡ ಇನ್ನೂ ಕೆಲವು ಭಾಗಗಳಲ್ಲಿ ಅದನ್ನು ಮಾಡಲು ಆಗಿಲ್ಲ. ಅದನ್ನು ಜಿಲ್ಲಾ ಪಂಚಾಯಿತಿಯ ಯೋಜನೆಯಲ್ಲಿ ಹಾಕಿ, ಇಷ್ಟು ಮಾಡೇ ತೀರಬೇಕು ಎಂದರೆ ಮಾತ್ರ ಅದು ಆಗುತ್ತದೆ. ಇದನ್ನು ಹಿಂದೆ ನಾನು ಮಾನ್ಯ ಪ್ರಕಾಶ್‌ರವರಿಗೂ ಹೇಳಿದ್ದೆನು, ಅವರು ಬೇರೆ ಬೇರೆ ಕಾರ್ಯಕ್ರಮ ಹಾಕಿಕೊಂಡರೂ ಮಾಡಲು ಆಗಲಿಲ್ಲ. ಇವತ್ತು ತಾವು ಮಹಿಳೆಯರಿಗೆ ಏನೂ ಮಾಡದಿದ್ದರೂ, ಕನಿಷ್ಠ ಅವರು ಮರ್ಯಾದೆಯಿಂದ ಬಹಿರ್ದೆಸೆಗೆ ಹೋಗುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಅವರಿಗೆ ವಿದ್ಯೆ ಕೊಡುತ್ತೇವೆ ಎಂದು ಹೇಳಿದ್ದೀರಿ, ಅದೆನ್ನೆಲ್ಲಾ ಮಾಡಿ. ಅವುಗಳನ್ನು ಎಷ್ಟರಮಟ್ಟಿಗೆ ಮಾಡುತ್ತೀರೋ ನೋಡೋಣ. ಆದರೆ ತಾವು ದಯವಿಟ್ಟು ಮೊದಲನೇ ಆದ್ಯತೆಯನ್ನು ಇದಕ್ಕೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮಹಿಳೆಯರಿಗೆ ಕೇಂದ್ರ ಸರ್ಕಾರದವರು ಶೇ.33ರಷ್ಟು ಮೀಸಲಾತಿ ಇಡುತ್ತೇವೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಇಲ್ಲಿ ಏನನ್ನೂ ಹೇಳಿಲ್ಲ. ನಾವು ಅದಕ್ಕೆ ಸಹಕಾರ ಕೊಡುತ್ತೇವೆ, ಸಹಾಯ ಮಾಡುತ್ತೇವೆ, ಅದಕ್ಕೆ ನಮ್ಮದು ಇಂಥ ಯೋಜನೆ ಇದೆ ಎಂದು ಹೇಳಬೇಕಲ್ಲ, ಅದನ್ನು ಇವರು ಇಲ್ಲಿ ಹೇಳಿಲ್ಲ. ಅದಕ್ಕೆ ಮನಸ್ಸಿಲ್ಲವೋ ಏನೋ ಕೇಳಿ ನೋಡಿಯಮ್ಮ.

ಶ್ರೀಮತಿ ರಾಣಿ ಸತೀಶ್: ಮಹಿಳೆಯರಿಗೆ ಉನ್ನತ ಶಿಕ್ಷಣವನ್ನು ಸಹ ಉಚಿತವಾಗಿ ಕೊಡಬೇಕು ಎನ್ನುವುದು ನಮ್ಮ ಪ್ರಣಾಳಿಕೆಯಲ್ಲಿ ಇದೆ. ಮೂಲಭೂತವಾಗಿ ಶಿಕ್ಷಣಕ್ಕೆ ಮಾನ್ಯತೆ ಕೊಡತಕ್ಕಂಥ ದೃಷ್ಟಿಯಿಂದ ಮಾಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ಅದನ್ನು ಎಷ್ಟು ಜನರಿಗೆ ಕೊಟ್ಟಿದ್ದೀರಿ ತಾಯಿ. ಇಲ್ಲಿ 33 ಪರ್ಸೆಂಟ್ ರಿಸರ್ವೇಷನ್ ಬಗ್ಗೆ ಹೇಳಿಯೇ ಇಲ್ಲ.

ಶ್ರೀ ಬಿ. ಸೋಮಶೇಖರ್: ಆ ಪ್ರಣಾಳಿಕೆ ರಾಜಕೀಯ ಪಕ್ಷಗಳಿಗಾಯಿತು. ಅದನ್ನು ಸರ್ಕಾರದಿಂದ ಹೇಳಿಲ್ಲ.

ಶ್ರೀ ಮತಿ ರಾಣಿ ಸತೀಶ್: ಅದು ಪ್ರಣಾಳಿಕೆಯಲ್ಲೇ ಇದ್ದಾಗ, ನಾನು ಅದನ್ನು ತರುತ್ತೇವೆ, ಅದನ್ನು ಅಳವಡಿಸುತ್ತೇವೆ ಎನ್ನುವುದೇ ಉದ್ದೇಶ.

ಅಧ್ಯಕ್ಷರು: ನೀವು, ನೀವು ಸದಸ್ಯರೇ ಅಡ್ರಸ್ ಮಾಡಿಕೊಳ್ಳಬೇಡಿ. ಅಧ್ಯಕ್ಷರಿಗೆ ಅಡ್ರಸ್ ಮಾಡಿ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಕ್ಷಮಿಸಬೇಕು. ಇನ್ನು ಕೃಷ್ಣಾ ನದಿಯ ವಿಚಾರ. ಸುದೈವದಿಂದ ಕಣ್ಣೀರು ಬರದವರ ಕೈಗೆ ಖಾತೆ ಬಂದು ಬಿಟ್ಟಿದೆ. ನಮಗೆ ಇದೊಂದು ಸಂತೋಷದ. ಸಂಗತಿ ಏಕೆಂದರೆ ನಮ್ಮವರ ಕೈಗೆ ಖಾತೆ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಮಾತ್ರ ಬಹಳ ಜಾಣ್ಮೆ ತೋರಿಸಿದ್ದಾರೆ. ಈ ಖಾತೆಯ ಮಾನ್ಯ ಸಚಿವರಿಗೆ ಆ ಕಲ್ಪನೆ ಇದೆ, ದಯವಿಟ್ಟು ಅದನ್ನು

ಕಾರ್ಯಗತ ಮಾಡಿ ತೋರಿಸಲಿ ಎಂದು ಅವರಿಗೆ ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಅದು ಅಪ್ಪರ್ ತುಂಗಾ ಯೋಜನೆ ಇರಬಹುದು, ಹುಲಿಗುಡ್ಡ ಯೋಜನೆ ಇರಬಹುದು, ಕೃಷ್ಣಾ ಜಲಭಾಗದಲ್ಲಿ ಬರತಕ್ಕಂಥ ಎಲ್ಲ ಯೋಜನೆಗಳನ್ನು ನಾವು 2000 ಇಸವಿಯೊಳಗೆ ಮುಗಿಸಬೇಕಾಗಿದೆ. ನಾನು ಹೆಸರನ್ನು ಕತೆಗೆದುಕೊಂಡು ಹೇಳುತ್ತೇನೆ, ಕೃಷ್ಣಾ ಯೋಜನೆಯನ್ನು ತೆಗೆದುಕೊಂಡಂಥ ಕೀರ್ತಿ ಮಾನ್ಯ ದೇವೇಗೌಡರಿಗೆ ಹೋಗಬೇಕು. ಅದನ್ನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಸರ್ಕಾರದ ಮೊದಲನೇ ಕ್ಯಾಬಿನೆಟ್‌ನಲ್ಲೇ ಈ ಯೋಜನೆಯನ್ನು ನಾವು ಕೈಗೆತ್ತಿಕೊಳ್ಳಬೇಕು, 2000 ಇಸವಿಯೊಳಗೆ ಮುಗಿಸಬೇಕು ಎಂದು ಬಂದಾಗ ಅದಕ್ಕೆ ಕ್ಯಾಬಿನೆಟ್‌ನಲ್ಲೇ ವಿರೋಧ ಮಾಡಿದರು. ಎಲ್ಲವನ್ನೂ ಅದಕ್ಕೆ ಕೊಟ್ಟು ನಾವು ಎಲ್ಲಿಗೆ ಹೋಗೋಣ ಎಂದು ಹೇಳಿದರು. ಆದರೂ ಇದರ ಬಗ್ಗೆ ಹೋರಾಟ ಮಾಡಿ ಅದನ್ನು ಪ್ರಾರಂಭ ಮಾಡಿದಂಥ ಕೀರ್ತಿ ಮಾನ್ಯ ದೇವೇಗೌಡರಿಗೆ ಹೋಗುತ್ತದೆ. ಅದನ್ನು ಯಾರೂ ಅಲ್ಲಗಳೆಯಲು ಆಗುವುದಿಲ್ಲ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾದ ಕೂಡಲೇ ಅದನ್ನು ಕೈಗೆತ್ತಿಕೊಂಡರು. ಮಾನ್ಯ ಹೆಗಡೆಯವರಿಂದ ಹೊರಗೆ ಹೋದದ್ದೇ ಅದಕ್ಕೆ ದುಡ್ಡು ಕೊಡಿಸಬೇಕು ಎಂದು, ಅದನ್ನು ಮುಗಿಸೇ ತೀರುತ್ತೇವೆ ಎಂದು. ಅವರು ಬಹಳ ಹೋರಾಟ ಮಾಡಿ ಆ ಕೆಲಸ ಪ್ರಾರಂಭ ಮಾಡಿದರು. ಈಗಾಗಲೇ ಅದು ಒಂದು ಒಳ್ಳೆಯ ಹಂತ ತಲುಪಿದೆ. ಅದರಲ್ಲಿ ದೋಷಗಳು ಇಲ್ಲ ಎಂದು ನಾನು ಹೇಳುವುದಿಲ್ಲ. ಅದಕ್ಕೆ ಹೆಚ್ಚು ದುಡ್ಡು ಒದಗಿಸಿರಿ. ಈ ಯೋಜನೆಯನ್ನು ಎಷ್ಟನೇ ಇಸವಿಯಲ್ಲಿ ಮುಗಿಸುತ್ತೇವೆ ಎನ್ನುವುದನ್ನು ಹೇಳಿಲ್ಲ; ತೀವ್ರದಲ್ಲಿ ಅದನ್ನು ಮುಗಿಸುತ್ತೇವೆ ಎಂದು ಹೇಳಿದ್ದೀರಿ. ಅದಕ್ಕೆ ನಮ್ಮವರು ಒಂದು ತಿದ್ದುಪಡಿಕೊಟ್ಟಿದ್ದಾರೆ. ಬಹುಶ: 2004ನೇ ಇಸವಿಯೊಳಗಾಗಿ

3.50 ಪಿ.ಎಂ.

ಮುಗಿಸಬೇಕು ಎಂದು ತಿದ್ದುಪಡಿಯನ್ನು ಮಾಡಿದ್ದಾರೆ. ಖಂಡಿತವಾಗಿ ತಾವು ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಶಿಕ್ಷಣದ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಈ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟೆವು. ಎಲ್ಲಿ ಹೋದರೂ ಕೂಡ 7ನೇ ತರಗತಿವರೆಗಿನ ಶಾಲೆ ಅಲ್ಲಿ 2 ಅಥವಾ 3 ಕೊಠಡಿಗಳು. ಇದ್ದು ಅಲ್ಲಿಗೆ ಒಬ್ಬ ಶಿಕ್ಷರು ಇರುತ್ತಿದ್ದರು. ಈಗ ಕೊಠಡಿಗಳನ್ನು ಸಂಪೂರ್ಣವಾಗಿ ಮಾಡಿದ್ದು ಶಿಕ್ಷಕರನ್ನು ಸಾಕಷ್ಟು ತುಂಬಿದ್ದೇವೆ. ಆದರೆ ದುರ್ದೈವದಿಂದ ಏನಾಗಿದೆ ಎಂದರೆ ಶೇಕಡ 50 ರಿಂದ 70 ರಷ್ಟು ಶಿಕ್ಷಕಿಯರು ಇದ್ದು ಹಳ್ಳಿಗಳಲ್ಲಿ ಅವರು ಇರುವು ಅದಕ್ಕೆ ಸರಿಯಾದ ಜಾಗ, ಮನೆ ಇಲ್ಲ. ಶಿಕ್ಷಕ ಶಿಕ್ಷಕಿಯರು ಹಳ್ಳಿಗಳಲ್ಲಿ ಶಾಲೆಗಳಿಗೆ ಹೋಗಬೇಕು ಎಂದು ಹೇಳುತ್ತೇವೆ, ಆದರೆ ಅವರು ಉಳಿದುಕೊಳ್ಳುವುದಕ್ಕೆ ಅವರಿಗೆ ಅಲ್ಲಿ ಕೊಠಡಿ, ಮನೆ ಇಲ್ಲದಿದ್ದರೆ ಒಬ್ಬೊಬ್ಬರು ಹೆಣ್ಣುಮಕ್ಕಳು ಅಂಥ ಹಳ್ಳಿಗಳಲ್ಲಿ ಹೇಗೆ ಇರಬೇಕು? ನಮ್ಮ ರಾಜ್ಯದಲ್ಲಿ ಬಹಳ ಹಳ್ಳಿಯ ಜನರಿಗೆ ಇರುವುದಕ್ಕೆ ಮನೆಗಳಿಲ್ಲ. ಇನ್ನು ಶಿಕ್ಷಕರಿಗೆ ಮನೆಗಳು ಎಲ್ಲಿಂದ ಸಿಗಬೇಕು? ಅವರಿಗೆ ಮನೆಗಳು ಸಿಗದಿದ್ದಾಗ ಶಿಕ್ಷಕರು ಅಂಥ ಹಳ್ಳಿಗಳ ಶಾಲೆಗಳಲ್ಲಿ ಇರಲಿಕ್ಕೆ ಆಗುವುದಿಲ್ಲ. ಅವರು ಬೇರೆ ಕಡೆಗೆ ಹೋಗುತ್ತಾರೆ. ಬೇರೆ ಕಡೆ ಉಳಿದು ಕೊಂಡು ಬಂದು ಹೋಗಬೇಕಾದರೆ ತೊಂದರೆಯಾಗಿ ತಡವಾದರೆ ಬಸ್ಸು ತಪ್ಪಿಹೋಗಿ

ಹೆಣ್ಣುಮಕ್ಕಳಿಗೆ ಬಹಳಷ್ಟು ಅನಾನುಕೂಲವಾಗುತ್ತದೆ. ಆ ಕಾರಣದಿಂದ ಆದ್ಯತೆ ಮೇರೆಗೆ ಹಂತಹಂತವಾಗಿ ಹುಡ್ಕೋ ಮುಂತಾದ ಕಡೆಯಿಂದ ಸಾಲ ತಂದಾದರೂ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮನೆಗಳನ್ನು ಒದಗಿಸಾವಂಥ ಯೋಜನೆಯನ್ನು ತಮ್ಮ ಸರ್ಕಾರದ ಕಡೆಯಿಂದ ಶೀಘ್ರವಾಗಿ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ 100ಕ್ಕೆ 50 ರಷ್ಟು ಹೆಣ್ಣು ಮಕ್ಕಳನ್ನು ಪ್ರಾಥಮಿಕ ಶಾಲಾ ಶಿಕ್ಷಕಿಯರಾಗಿ ತುಂಬಿದೇವೆ. ಹೆಣ್ಣುಮಕ್ಕಳಿಗೆ ಇಷ್ಟೊಂದು ಆದ್ಯತೆ ಕೊಟ್ಟಿರುವ ಕೀರ್ತಿ ನಮ್ಮ ಸರ್ಕಾರಕ್ಕೆ ಹೋಗುತ್ತದೆ. ಮೆರಿಟ್ ತೆಗೆದುಕೊಂಡರೆ ಶೇಕಡ 70 ರಷ್ಟು ಹೆಣ್ಣುಮಕ್ಕಳು ಬಂದಿದ್ದಾರೆ. ಇದು ಬಹಳ ಸಂತೋಷಪಡತಕ್ಕಂಥ ವಿಚಾರ. ಲಕ್ಷಾಂತರ ಶಿಕ್ಷಕ ಶಿಕ್ಷಕಿಯರನ್ನು ತುಂಬಿದರೂ ಕೂಡ ಯಾವ ಹಂತದಲ್ಲೂ ಭ್ರಷ್ಟಾಚಾರ ಆಗಿಲ್ಲ.

ಇನ್ನು ಆರೋಗ್ಯದ ಬಗ್ಗೆ ಹೇಳುವುದಾದರೆ, ಎಲ್ಲಾ ಹಳ್ಳಿಗಳಲ್ಲಿರುವ ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ಒದಗಿಸಬೇಕೆನ್ನುವ ಉದ್ದೇಶದಿಂದ ಕಾಂಟ್ರಾಕ್ಟ್ ಆಧಾರದ ಮೇಲೆ ತುಂಬುವಂಥ ಪ್ರಯತ್ನವನ್ನು ಬಹಳಷ್ಟು ನಮ್ಮ ಸರ್ಕಾರದಿಂದ ಮಾಡಲಾಯಿತು. ಏನು ಮಾಡಿದರೂ ಹಳ್ಳಿಗಳಿಗೆ ಡಾಕ್ಟರುಗಳು ಹೋಗುವುದಿಲ್ಲ. ನಮ್ಮಲ್ಲಿ ಒಂದು ಹಳ್ಳಿಯ ಆಸ್ಪತ್ರೆಗೆ ಒಬ್ಬ ಡಾಕ್ಟರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಹಾಕಿದರೆ. ಆ ಡಾಕ್ಟರು ಬಂದಕೂಡಲೇ ಬಹಳ ಫ್ರೇಮ್ ಮಾಡಬೇಕು, ಅವರಿಗೆ ಒಂದು ಮನೆ ಕೊಡಬೇಕು ಎಂದು ನಾನು ಆ ಊರಿನವರಿಗೆ ಹೇಳಿದ್ದೆ. ಆ ಡಾಕ್ಟರ್ ಬಂದು ಬಹಳ ಚೆನ್ನಾಗಿದೆ, ನಾನು ಇಲ್ಲಿ ಇರುತ್ತೇನೆ ಎಂದು ಹೇಳಿದರು. ನಂತರ 2 ದಿವಸ ಕಳೆದು ಬರುತ್ತೇನೆಂದು ಹೋದವರು ವಾಪಾಸ್ಸು ಬರಲಿಲ್ಲ. ಹಳ್ಳಿಗಳಲ್ಲಿನ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲದೆ ಆ ಸ್ಥಾನ ಈಗಲೂ ಖಾಲಿ ಇವೆ. ನಾವು ಏನು ಮಾಡಿದರೂ ಆ ಜಾಗ ತುಂಬುವುದಕ್ಕೆ ಆಗುವುದಿಲ್ಲ. ನಾವು ರೆಗ್ಯುಲರ್ ಡಾಕ್ಟರ್ಸ್‌ನ್ನು ತುಂಬುವ ವ್ಯವಸ್ಥೆ ಮಾಡಿದ್ದೆವು, ಎಲೆಕ್ಷನ್ ಡಿಕ್ಲೇರ್ ಆದತಕ್ಷಣ ಆ ಪ್ರಕ್ರಿಯೆ ನಿಂತು ಹೋಯಿತು. ಹಳ್ಳಿಗಾಡಿನಲ್ಲಿ ದವಾಖಾನೆಗಳು ಎಲ್ಲಾ ಇವೆ, ಆದರೆ ಅಲ್ಲಿ ಡಾಕ್ಟರುಗಳು ಇಲ್ಲ. ಆದ್ದರಿಂದ ತೀವ್ರಗತಿಯಲ್ಲಿ ರೆಗ್ಯುಲರ್ ಡಾಕ್ಟರುಗಳನ್ನು ಆಯ್ಕೆ ಮಾಡಿ ಖಾಲಿ ಇರುವ ಎಲ್ಲಾ ಕಡೆ ತುಂಬುವಂಥ ವ್ಯವಸ್ಥೆಯನ್ನು ತ್ವರಿತವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ, ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಕೂಡ ರೈತರಿಂದ ಬೈಸಿಕೊಳ್ಳುವುದು ತಪ್ಪುವುದಿಲ್ಲ. ಏಕೆಂದರೆ ಅದರ ಪರಿಸ್ಥಿತಿ ಅಷ್ಟು ಹದಗೆಟ್ಟಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ವಿದ್ಯುಚ್ಛಕ್ತಿ ವಿತರಣಾ ವ್ಯವಸ್ಥೆಯನ್ನು ಸರಿಪಡಿಸದೆ ಇದೇ ಪರಿಸ್ಥಿತಿ ಇದ್ದರೆ ನಾವು ಹೆಸರು ಕೆಡಿಸಿಕೊಂಡಿದ್ದೇವೋ ಅದೇ ರೀತಿ ನೀವು ಕೂಡ ಹೆಸರು ಕೆಡಿಸಿಕೊಳ್ಳುತ್ತೀರಿ. ರೈತರಂತೂ ತಮ್ಮನ್ನು ನಂಬುವುದಿಲ್ಲ. ಅಲ್ಲಿಯ ವ್ಯವಸ್ಥೆ ಹಾಗಿದೆ. ರೈತರನ್ನು ಹೇಗೆ ಅವರು ಗೋಳಾಡಿಸುತ್ತಾರೆಂದರೆ ಅದು ದೇವರಿಗೇ ಗೊತ್ತು. ಅಲ್ಲಿರತಕ್ಕಂಥ ನೌಕರುದಾರರು ಅಷ್ಟು ಕೆಟ್ಟಾದಗಿ ವರ್ತಿಸುತ್ತಾರೆ. ಒಂದು ಟ್ರಾನ್ಸ್‌ಫಾರ್ಮರ್ ಸುಟ್ಟು ಹೋದರೆ ಅದನ್ನು ಸರಿಪಡಿಸುವುದಕ್ಕೆ ಮೂರ್‍ನಾಲ್ಕು ತಿಂಗಳು ಕಳೆದರೂ ಹೋಗುವುದಿಲ್ಲ. ಸಾಮಾನ್ಯವಾಗಿ ಹಳ್ಳಿಗಳ ಕಡೆ ಟ್ರಾನ್ಸ್‌ಫಾರ್ಮರ್ ಫ್ರೀಕ್ವೆಂಟ್ ಆಗಿ ಹೋಗಿಬಿಡುತ್ತದೆ. ಒಂದು ಕೆಲಸವನ್ನು ಮಾಡಿಸಬೇಕಾದರೆ ಬಹಳಷ್ಟು ಸಲ ಓಡಾಟಬೇಕಾಗುತ್ತದೆ ಅದರಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆಯುತ್ತದೆ. ಇದನ್ನು ಯಾರೂ ಅಲ್ಲಗೆಳೆಯುವುದಕ್ಕೆ ಆಗುವುದಿಲ್ಲ. ಹುಕ್ಕೇರಿಯಲ್ಲಿ ರೈತರದೇ ಆದಂಥ ಒಂ'ದು ಸಹಕರಿ ಸಂಘ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಆ ಸಹಕಾರಿ ಸಂಘಕ್ಕೆ ಭೇಟಿ ಕೊಟ್ಟು ನೋಡಬಹುದು. ಅವರು ಕೆ.ಇ.ಬಿ.ಹೆಚ್ಚು ಉತ್ಪನ್ನ ಕೊಡುತ್ತಾರೆ.

ಒಂದು ಯೂನಿಟ್‌ಗೆ ಕೆ.ಇ.ಬಿ.ಯವರು ಎಷ್ಟು ತೆಗೆದುಕೊಳ್ಳುತ್ತಾರೋ ಅದಕ್ಕಿಂತ ಕಡಿಮೆಗೆ ಆ ಸಹಕಾರಿ ಸಂಘದವರು ಕೊಡುತ್ತಾರೆ. ಅಷ್ಟೇ ಅಲ್ಲ ರೈತರಿಗೆ ಸಂಬಂಧಪಟ್ಟ ಟ್ರಾನ್ಸ್‌ಫಾರ್ಮರ್‌ರೆ ಸುಟ್ಟರೆ ಬೆಳಗಾಗುವುದೊಳಗೆ ಸರಿಪಡಿಸುತ್ತಾರೆ. ರೈತರ ಪಂಪುಸೆಟ್‌ಗೆ ಒಂದು ವಾರದಲ್ಲಿ ಸರ್ವೀಸ್ ಕೊಟ್ಟು ಬಿಡುತ್ತಾರೆ. ಕೆ.ಇ.ಬಿ. ಸರ್ವೀಸ್ ಕೊಡದೆ ಪಂಪುಸೆಟ್ಟುಗಳು ಕೆಲವು ಕಡೆ 6 ವರ್ಷಗಳಿಂದ ಹಾಗೆಯೇ ನಿಂತಿದೆ. ಇದು ಇವತ್ತು ರಾಜ್ಯದಲ್ಲಿರತಕ್ಕಂಥ ಪರಿಸ್ಥಿತಿ, ಆದ್ದರಿಂದ ವಿದ್ಯುಚ್ಛಕ್ತಿ ವಿತರಣೆಯನ್ನು ಸಹಕಾರಿ ಕ್ಷೇತ್ರಕ್ಕೆ ವಹಿಸಿದರೆ ಬಹುಶ: ವಿತರಣೆ ಚೆನ್ನಾಗಿ ಆಗುತ್ತದೆ ಎನ್ನುವುದು ನನ್ನ ಭಾವನೆ. ಈ ವಿದ್ಯುತ್ ಉತ್ಪಾದನೆ ಬಗ್ಗೆ ಹೇಳುವುದು ಬೇಡ. ಈಗಾಗಲೇ ಎಲ್ಲರೂ ಮಾತನಾಡಿದ್ದಾರೆ.

ಶ್ರೀ ಕರಿಯಣ್ಣ (ಬಾಳೆಹೊನ್ನೂರು): ಮಾನ್ಯ ಅಧ್ಯಕ್ಷರೆ, ಆರಾರು ತಿಂಗಳು, ಎಂಟೆಂಟು ತಿಂಗಳ ಕಾಲ ಟ್ರಾನ್ಸ್‌ಫಾರ್ಮರ್ ಬರಲಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಅವರ ಪಕ್ಷ ಐದು ವರ್ಷಗಳ ಕಾಲ ಇಲ್ಲಿ ಸರ್ಕಾರ ನಡೆಸಿದೆ, ಅವರು ಮಂತ್ರಿಗಳಾಗಿದ್ದರು. ಆ ಕೆಲಸ ಏಕೆ ಆಗಿಲ್ಲ, ಇಂಥಿಂಥ ಕಾರಣದಿಂದ ಆಗಿಲ್ಲ, ತಾವು ಈ ತರಹ ಮಾಡಿ ಎಂದು ನಮ್ಮ ಮಾನ್ಯ ನಾಯಕರಿಗೆ ಸಲಹೆ ಕೊಟ್ಟರೆ ಅನಾಕೂಲವಾಗುತ್ತದೆ. ಆ ರೀತಿಯ ಸಲಹೆಯನ್ನು ಕೊಡುವುದು ಬಿಟ್ಟು ಹಿಂದೆ ಮಂತ್ರಿಗಳಾದಂಥ ಅವರೇ ಇಂಥವನ್ನೆಲ್ಲ ಹೇಳುತ್ತಾ ಹೋದರೆ ಹೇಗೆ? ನಾವು ಕಳೇಳಬೇಕಾಗಿರುವುದು ಬಹಳ ಇದೆ. ಇವರು ಭಾಷಣ ಮಾಡುತ್ತಾ ಇದ್ದರೆ ಹೇಗೆ? ಏನು ಮಾಡಬೇಕು ಎನ್ನುವ ಸಲಹೆ ಕೊಟ್ಟರೆ ಸಾಕು.

ಶ್ರೀ ಎಸ್.ಎಸ್.ಪಾಟೀಲ: ಮಾನ್ಯ ಅಧ್ಯಕ್ಷರೆ, ಕೆ.ಇ.ಬಿ.ನೌಕರರನ್ನು ಏನು ಮಾಡಿದರೂ ಸುಧಾರಿಸುವುದಕ್ಕೆ ಆಗುವುದಿಲ್ಲ. ಖಾಸಗೀಕರಣ ಮಾಡುತ್ತೇವೆಂದು ಹೊರಟ ಮೇಲೆ ಅವರು ಒಂದು ಹಂತಕ್ಕೆ ಬಂದಿದ್ದಾರೆ. ಅವರು ಖಂಡಿತವಾಗಿ ಬದಲಾವಣೆ ಆಗುವುದಿಲ್ಲ. ಇದನ್ನು ನಿಮ್ಮ ಅವಧಿಯಲ್ಲಿ ಮತ್ತು ನಮ್ಮ ಅವಧಿಯಲ್ಲಿ ಕೂಡ ನೋಡಿದ್ದೇವೆ. ನೀವು ಮುಂದೆ ಏನು ಮಾಡಿದರೂ ಅವರನ್ನು ಬಗ್ಗಿಸುವುದಕ್ಕೆ ಆಗುವುದಿಲ್ಲ. ಆ ಕಾರಣದಿಂದ ರೈತರು ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ತಾಲ್ಲೂಕಿಗೆ ಒಂದರಂತೆ ಸಹಕಾರಿ ಸಂಸ್ಥೆಯನ್ನು ಕಟ್ಟಿ ಕೊಟ್ಟರೆ ತಮ್ಮ ವ್ಯವಸ್ಥೆಯನ್ನು ತಾವು ಮಾಡಿಕೊಳ್ಳುತ್ತಾರೆ. ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆ, ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ಸರ್ಕಾರದ 600 ಮೇ.ವ್ಯಾ.ನಿಂದ 800 ಮೆ.ವ್ಯಾ.ವರೆಗೆ ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಿದ್ದೇವೆ. ಇನ್ನೂ ಹೆಚ್ಚಿಗೆ ಉತ್ಪಾದನೆ ಮಾಡುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಇವೆಲ್ಲವನ್ನು ಮಾಡಿ ಮುಗಿಸಿದರೆ ಅಲ್ಪಸ್ವಲ್ಪ ಸಮಸ್ಯೆಯಾದರೂ ಬಗೆಹರಿಯುವುದು. ಆದರೆ ಹಳ್ಳಿಗಳಲ್ಲಿ ಇದರ ಸಂಬಂಧಪಟ್ಟ ಹಾಗೆ ವಿದ್ಯುಚ್ಛಕ್ತಿ 100ಕ್ಕೆ 100ರಷ್ಟು ಉತ್ಪಾದನೆ ಆದರೂ ಕೂಡ ಈ ನೌಕರದಾರರ ಕಿರುಕುಳದಿಂದ ಅಲ್ಲಿಯ ರೈತರ ಸಮಸ್ಯ ಬಗೆಹರಿಯುವುದಿಲ್ಲ. ಕೆ.ಇ.ಬಿ.ನೌಕರರು ಯಾವ ಸ್ಥಿತಿಗೆ ತಲುಪಿದ್ದಾರೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಟ್ಟರೆ ತಪ್ಪಾಗಲಾರದು ಎಂದು ನಾನು ಭಾವಿಸಿದ್ದೇನೆ ಸುಮಾರು ವರ್ಷದ ಹಿಂದೆ ಒಬ್ಬ ಲೈನ್‌ಮ್ಯಾನ್ ಒಬ್ಬ ಹುಡುಗನನ್ನು ಕರೆದುಕೊಂಡು ಬಂದು ಕಂಬದ ಮೇಲೆ ಹತ್ತಿಸಿ ಕೆಲಸ ಮಾಡಿಸುತ್ತಿದ್ದ ಮತ್ತು ಈತ ಕೆಳಗಡೆ ಟ್ರಾನ್ಸ್‌ಫಾರ್ಮರ್ ಹತ್ತಿರ ಕುಳಿತಿದ್ದ. ಹುಡುಗ ಮೇಲೆ ಕೆಲಸ ಮಾಡುತ್ತಿದ್ದಾಗ ಲೈನ್‌ಮ್ಯಾನ್ ಫ್ಯೂಜ್ ಹಾಕಿಬಿಟ್ಟ.

ಕರೆಂಟ್ ಶಾಕ್ ಹೊಡೆದು ಹುಡುಗ ಮೇಲಿಂದ ಬಿದ್ದು ಸತ್ತುಹೋದ. ಅವನ ಹೆಣವನ್ನು ಎಲ್ಲರೂ ಹೊತ್ತುಕೊಂಡು ಹೋದರು. ಇದು ಏಕೆ ಆಯಿತೆಂದರೆ 100ಕ್ಕೆ 80ರಷ್ಟು ಲೈನ್‌ಮ್ಯಾನ್‌ಗಳು ಕುಡಿದು ಹೋಗಿ ಕೆಲಸ ಮಾಡುತ್ತಾರೆ. ಆ ವ್ಯಕ್ತಿ ಹುಡುಗನನ್ನು ಕೊಂದ ನಂತರ ಪುನ: ಅವನೇ ಕೇಸು ಹಾಕುವಂಥ ಪ್ರಸಂಗ ಬಂತು. ಈ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ಆಗದಷ್ಟು ಹದಗೆಟ್ಟುಬಿಟ್ಟಿದೆ. ಈ ಬಗ್ಗೆ ರೈತರ ಸಹಕಾರಿ ಸಂಘವನ್ನು ಸ್ಥಾಪನೆ ಮಾಡುವುದಕ್ಕೆ ನಮ್ಮ ಮುಖ್ಯಮಂತ್ರಿಗಳಿಗೆ ಹೇಳಿದೆವು. ನಂತರ ನಮ್ಮ ಆಡಳಿತಾವಧಿ ಮುಗಿಯಿತು. ತಾವು ದಯವಿಟ್ಟು ಈ ಸಹಕಾರಿ ಸಂಘವನ್ನು ಮಾಡಿದರೆ ಖಂಡಿತವಾಗಿ ರೈತರ ದೊಡ್ಡ ಸಮಸ್ಯೆ ಬಗೆಹರಿಯುತ್ತದೆ. ಮತ್ತು ತಮಗೆ, ತಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂದು ಹೇಳಬಯಸುತ್ತೇನೆ. ನಾವು ಈ ಗ್ರಾಮೀಣ ಮಕ್ಕಳಿಗೆ ಶೇಕಡ 10ರಷ್ಟು ಕೃಪಾಂಕ ಕೊಟ್ಟಿದ್ದೇವು. ದುರ್ದೈವವಶಾತ್ ಯಾರೋ ಈ ವಿಚಾರದಲ್ಲಿ ಕೋರ್ಟಿಗೆ ಹೋಗಿ, ಅದು ಸ್ಟೇ ಆಗಿತ್ತು. ನಾವು ಸ್ಟೇ ವೆಕೇಟ್ ಮಾಡಿಸಿದ್ದೇವೆ. ಗ್ರಾಮೀಣ ಮಕ್ಕಳಿಗೆ ಕೃಪಾಂಕ ಕೊಡುವುದರ ಬಗ್ಗೆ ನಮ್ಮ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನೂ ಹೇಳಲಿಲ್ಲ. ಇದನ್ನು ಮುಂದುವರಿಸುತ್ತೀರೋ ಅಥವಾ ಇನ್ನು ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕಾಗುತ್ತದೆ. ಕೃಪಾಂಕ ಕೊಡುವ ಪದ್ಧತಿ ಇಲ್ಲದೇ ಹೋದರೆ ಸರ್ಕಾರಿ ನೌಕರಿಯಲ್ಲಿ ಒಂದೇ ಒಂದು ಉದ್ಯೋಗ ಕೂಡ ಗ್ರಾಮಿಣ ಮಕ್ಕಳಿಗೆ ಸಿಗುವುದಿಲ್ಲ. ಇದನ್ನು ಮಾಡಿದ ಮೇಲೆ 100ಕ್ಕೆ 89ರಷ್ಟು ಗ್ರಾಮಿಣ ಮಕ್ಕಳು ಪ್ರಾಥಮಿಕ ಶಾಲೆ ಉಪಾಧ್ಯಾಯರಾಗಿ ನೌಕರಿಗೆ ಸೇರಿದ್ದಾರೆ. ಇದು ಇಲ್ಲದೇ ಇದ್ದಿದ್ದರೆ ಶೇಕಡ 20 ರಷ್ಟು ಕೂಡ ಗ್ರಾಮೀಣ ಹುಡುಗರಿಗೆ ನೌಕರಿ ಸಿಗುತ್ತಿರಲಿಲ್ಲ. ಈ ಗ್ರಾಮೀಣ ವಿದ್ಯಾರ್ಥಿಗಳಿಗೆ ಕೃಪಾಂಕ ಕೊಡುವ ಪದ್ಧತಿಯನ್ನು ಮೊದಲಬಾರಿಗೆ ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ತಂದಿದ್ದು ಆ ಕೀರ್ತಿ ಅವರಿಗೆ ಸಲ್ಲಬೇಕು. ಅವರ ಕಾಲದಲ್ಲಿ 15 ಪರ್ಸೆಂಟ್ ಇತ್ತು. ನಾನು ಅದನ್ನೇ ಮಾಡಬೇಕೆಂದು ಕ್ಯಾಬಿನೆಟ್‌ನಲ್ಲಿ ಹೋರಾಟ ಮಾಡಿದೆ. ಅದನ್ನು ಕಡೆಗೆ 10 ಪರ್ಸೆಂಟ್‌ಗೆ ತಂದು ನಿಲ್ಲಿಸಿದರು. ಆದ್ದರಿಂದ ಈ ಕೃಪಾಂಕ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವ ದಿಶೆಯಲ್ಲಿ ಕ್ರಮ ಕೈಗೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ, ನಾವು ಬಹಳಷ್ಟು ಮೇಜರ್ ಇರಿಗೇಷನ್ ಮಾಡುವುದಕ್ಕೆ ಹೋಗಿ ನಮ್ಮ ಹಣವೆಲ್ಲ ಮೇಜರ್ ಇರಿಗೇಷನ್‌ಗೆ ಖರ್ಚು ಆಗುತ್ತಿರುವುದರಿಂದ ಮೈನರ್ ಇರಿಗೇಷನ್‌ಗೆ ಬಹಳ ಕಡಿಮೆ ದುಡ್ಡು ಖರ್ಚು ಮಾಡುತ್ತಿದ್ದೇವೆ. ಸಣ್ಣ ನೀರಾವರಿ ಇಲಾಖೆಯನ್ನು ಬಹಳ ಉತ್ಸಾಹಿಗಳಾದ ಒಬ್ಬ ಯುವಕರಿಗೆ ವಹಿಸಿಕೊಟ್ಟಿದ್ದೀರಿ. ದಯಮಾಡಿ ಸಂಪನ್ಮೂಲಗಳನ್ನು ಹೇಗಾದರೂ ಮಾಡಿ ಕ್ರೋಢೀಕರಿಸಿ ಸಣ್ಣ ನೀರಾವರಿಗೆ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಬೇಕೆಂದು ಸಲಹೆ ಮಾಡುತ್ತೇನೆ.

IIಇನ್ನು ಸಹಕಾರಿ ಕ್ಷೇತ್ರದ ಬಗ್ಗೆ ಬಹಳಷ್ಟು ಮಾತನಾಡುವುದಿದೆ. ಈಗಾಗಲೇ ನಮ್ಮ ಮಾನ್ಯ ಶ್ರೀನಿವಾಸಗೌಡರು ಮಾತನಾಡಿದ್ದಾರೆ. ಎಲ್ಲಾ ಇಲಾಖೆಗಳು ಅಭಿವೃದ್ಧಿಯಾಗಬೇಕಾದರೆ ಸಹಕಾರಿ ಇಲಾಖೆಯೂ ಅಭಿವೃದ್ಧಿ ಆಗಬೇಕು. ಆರೋಗ್ಯ ಸಹಕಾರ ಸಂಘಗಳಿವೆ, ಹರಿಜನ-ಗಿರಿಜನ ಸಹಕಾರ ಸಂಘಗಳಿವೆ, ಅಗ್ರಿಕಲ್ಚರ್ ಕ್ರೆಡಿಟ್ ಸೊಸೈಟಿಗಳಿವೆ, ಮಾರ್ಕೆಟಿಂಗ್‌ಸೊಸೈಟಿಗಳಿವೆ. ರೈತರಿಗೆ ಸರಿಯಾದ ಧಾರಣೆ ಕೊಡುತ್ತೇವೆಂದು ಹೇಳುತ್ತಾರೆ. ಖರೀದಿಸುವವರು ಯಾರು?

ಮಾನ್ಯ ಡಿ.ಆರ್..ಪಾಟೀಲರು ಎಲ್ಲರೂ ಎಲ್ಲರೂ ಹೋರಾಟ ಮಾಡಿ, ಮಾರ್ಕೆಟಿಂಗ್ ಆಕ್ಟ್‌ಗೆ ತಿದ್ದುಪಡಿ ತಂದರು. ಅದನ್ನು ಜಾರಿಗೆ ತರಲು ಆಗುವುದಿಲ್ಲ; ಜಾರಿಗೆ ತರಬೇಕಾದರೆ ವ್ಯಾಪರಸ್ಥರು ಖರೀದಿಸಬೇಕಾಗುತ್ತದೆ. ಅವರು ಅದನ್ನು ಮಾಡುವುದಿಲ್ಲ. ಸರ್ಕಾರದವರು ಖರೀದಿಸುರ ವ್ಯವಸ್ಥೆ ಮಾಡಬೇಕಾಗುತ್ತದೆ. ಅದನ್ನು ಮಾಡಬೇಕಾದರೆ ರೈತರಿಗೆ ಯೋಗ್ಯಧಾರಣೆ ಕೊಡಬೇಕಾದರೆ, ಸಹಕಾರಿ ವ್ಯವಸ್ಥೆಯನ್ನು ಬಲಪಡಿಸಬೇಕಾಗುತ್ತದೆ. ಈ ಕಾರಣದಿಂದ ಸಹಕಾರಿ ವ್ಯವಸ್ಥೆಯನ್ನು ಕಳದ 5 ವರ್ಷಗಳಿಂದ ಬಹಳ ಮಟ್ಟಿಗೆ ನಾವು ಸುಧಾರಣೆ ಮಾಡಿದ್ದೇವೆ. ಇಡೀ ರಾಷ್ಟ್ರದಲ್ಲಿ ಮೊದಲು ಸಹಕಾರಿ ನೀತಿ ಜಾರಿಗೆ ತಂದ ಕೀರ್ತಿ ನಮ್ಮ ಸರ್ಕಾರದ್ದಾಗುತ್ತದೆ. ಆಮೇಲೆ, ದುರ್ದೈವವಶತ್ ನನ್ನನ್ನು ಎಲ್ಲರೂ ರಾಜೀನಾಮೆ ಕೇಳಿದರು. ಇವರು ಮಾಡುತ್ತಾರೆಂದು ನಾನು ತಿಳಿದುಕೊಳ್ಳುತ್ತೇನೆ. ಏಕೆಂದರೆ ಈ ಸಹಕಾರಿ ಸಂಘಗಳಿಗೆ ನಾಮಿನೇಷನ್ ಮಾಜತಕ್ಕದ್ದನ್ನು ತೆಗೆಯಬೇಕೆಂದು ಹೊರಟೆ, ಅದು, ಆಗಲಿಲ್ಲ. ನಮ್ಮವರೇ ವಿರೋಧಿಸಿದರು, ವೋಟಿಂಗ್ ರೈಟ್ಸ್ ತೆಗೆದೆವು, ಅದಕ್ಕೂ ಸುಗ್ರೀವಾಜ್ಞೆ ತಂದೆವು. ಅದು ಮುಂದಕ್ಕೆ ಹೋಯಿತು. ವೋಟಿಂಗ್ ರೈಟ್ಸ್ ಹೋಯಿತು. ಮಾನ್ಯ ಮುಖ್ಯಮಂತ್ರಿಗಳು ನಾಮಿನೇಷನ್ ತೆಗೆಯುತ್ತೇವೆಂದು ಏನೋ ಹೇಳಿದ್ದಾರೆ; ತೆಗೆಯಿರಿ ಎಪಿಎಂಸಿ ಕೂಡ ಮಾಡಿದ್ದೇವೆ. ಅದನ್ನೂ ತೆಗೆಯಿರಿ. ಇನ್ನೊಂದನ್ನು ತಾವು ಇದ್ದಾಗ ಮಾಡಿದ್ದೀರಿ. ಮುನಿಸಿಪಾಲಿಟಿಗೆ 5 ಮಂದಿ ಹಾಕಿದ್ದೀರಿ. ಒಳಗೆ ಹೋಗಿ, ಹೊರಗೆ ಬರುವುದಷ್ಟೆ. ಅವರಿಗೆ ವೋಟಿಂಗ್ ರೈಟ್ಸ್ ಇಲ್ಲ. ಏಕೆ ಅವರು ಇರಬೇಕು? ಆ ಕಾರಣದಿಂದ ಅಲ್ಲೆಲ್ಲಾ ನಾಮಕರಣ ಪದ್ಧತಿಯನ್ನು ತೆಗೆದು, ಚುನಾಯಿತ ಪ್ರತಿನಿಧಿಗಳಿಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಕರಿಯಣ್ಣ:- ಅಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರನ್ನು ಅವರ ಪಕ್ಷದವರನ್ನೇ ನೇಮಕ ಮಾಡಿಕೊಂಡಿದ್ದಾರೆ. ಈಗ ನಾಮಿನೇಷನ್ ತೆಗೆದು ಬಿಡಿ ಎಂದು ಹೇಳಿ, ನಾವೇ ಪರ್ಮನೆಂಟಾಗಿ ಇರುತ್ತೇವೆಂದರೆ ಹೇಗೆ? ಇರುವ ಅವಕಾಶವನ್ನು ಉಪಯೋಗಿಸಿಕೊಂಡಿದ್ದಾರೆ. ತೆಗೆಯಿರಿ ಎಂದು ನಮಗೆ ಬುದ್ಧಿ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್:- ಅವರ ಪಾಲಿಸಿ ಏನು ಎಂಬುದರ ಬಗ್ಗೆ ಹೇಳುತ್ತಿದ್ದೇನೆ. ಅವರು ಇಲ್ಲಿ ಕುಳಿತಿದ್ದಾಗ ಹೇಳಿದ ಮಾತನ್ನು ಪಾಲನೆ ಮಾಡುತ್ತಾರೋ, ಇಲ್ಲವೋ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು:- ನೀವು ನೀವೇ ಮಾತನಾಡುವುದಕ್ಕೆ ಹೋಗಬೇಡಿ. ಅಧ್ಯಕ್ಷರ ಕಡೆ ಗಮನ ಕೊಡಿ.

ಶ್ರೀ ಎಸ್.ಎಸ್.ಪಾಟೀಲ್:- ಕೊನೆಯದಾಗಿ ಸರ್ವಜ್ಞನ ವಚನ ಹೇಳುತ್ತೇನೆ.

ಶ್ರೀ ಕೆ.ಎನ್.ಗದ್ದಿ:- ಮಾನ್ಯ ಎಸ್.ಎಸ್.ಪಾಟೀಲರು ತಮ್ಮ ಮಗನ ಹೆಸರಿನಲ್ಲಿ ಎಷ್ಟು ನಾಮಿನೇಷನ್ ಮಾಡಿಕೊಂಡಿದ್ದಾರೆಂದು ಅವರು ಹೊದಲು ಹೇಳಲಿ.

ಶ್ರೀ ಎಸ್.ಎಸ್.ಪಾಟೀಲ್:- ಅದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು:- ನೀವು ನೀವು ಮಾತನಾಡಿಕೊಂಡರೆ ಹೇಗೆ?

(ಗೊಂದಲ)

ಶ್ರೀ ಕರಿಯಣ್ಣ:- ಅದನ್ನು ತೆಗೆಯಿರಿ ಹೇಳುತ್ತಿದ್ದಾರೆ. ನಾವು ಎಲ್ಲಿ ಹೋಗಬೇಕು?

ಶ್ರೀ ಎಸ್.ಎಸ್.ಪಾಟೀಲ್:- ಸರ್ವಜ್ಞನ ವಚನವೆಂದರೆ, ಆಡದೆ ಮಾಡುವವನು ರೂಢಿಯೊಳಗುತ್ತಮನು, ಆಡಿ ಮಾಡುವವನು ಮಧ್ಯಮನು, ಆಡಿಯೂ ಮಾಡದವನು ಅಧಮನು ಸರ್ವಜ್ಞ. ಮಾನ್ಯ ಮುಖ್ಯಮಂತ್ರಿಗಳು ಅಧಮರಾಗುವುದಿಲ್ಲವೆಂಬ ಖಾತ್ರಿ ನನಗಿದೆ. ಹೇಳಿದ್ದನು ಮಾಡಿ ಉತ್ತಮರಾಗಿರಿ ಎಂದು ಅವರನ್ನು ಕೇಳಿಕೊಂಡು, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮತ್ತೊಮ್ಮೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಚುನಾವಣಾ ಪ್ರಸ್ತಾವ

ಶ್ರೀ ಡಿ.ಬಿ.ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ನಾನು ಚುನಾವಣಾ ಪ್ರಸ್ತಾವಗಳನ್ನು ಈ ಸದನದ ಮುಂದಿಡುವುದಕ್ಕೆ ಬಯಸುತ್ತೇನೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 265 (1)ರ ಅನುಸಾರ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 268(1)ರ ಅನುಸಾರ ಅಂದಾಜುಗಳ ಸಮಿತಿಗೆ 18 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 271ರ ಅನುಸಾರ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ 18 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿದಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 272ರ ಹಕ್ಕುಬಾಧ್ಯತಾ ಸಮಿತಿಗೆ 9 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 277ರ ಅನುಸಾರ ಶಾಸನ ರಚನಾ ಸಮಿತಿಗೆ 12 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 281ರ ಅನುಸಾರ ಸರ್ಕಾರಿ ಭರವಸೆಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 283ರ ಅನುಸಾರ ಖಾಸಗಿ ಸದಸ್ಯರ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಗೆ 10 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 288ರ ಅನುಸಾರ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ 12 ಜನ ಸದಸ್ಯರನ್ನು ಚುನಾಯಿಸುವುದು.